ಮಂಗಳವಾರ, ಮಾರ್ಚ್ 22, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 81 | ಪುಟ 14
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಪರೀಕ್ಷೆಗಳು ಯೋಗ್ಯತೆಯ ಮಾಪಕವಲ್ಲ ಎನ್ನುವುದು ಅರಿವಾಗಬೇಕು; ಆಗ ಮಾತ್ರ ಆತ್ಮವಿಶ್ವಾಸದಿಂದ ಎದುರಿಸುವುದು ಸಾಧ್ಯವಾಗುತ್ತದೆ.

ಅನುಭವ ಮಂಟಪ
ಜಾತಿ ಗಣತಿ ನಿರಾಕರಣೆಗೆ ಸಕಾರಣವಿಲ್ಲ

‘ಪಿಟಿಸಿಎಲ್: ಅರ್ಜಿ ಸಲ್ಲಿಕೆಗೆ ಕಾಲಮಿತಿ ಇಲ್ಲ’ 6

‘ನೇಮಕಾತಿ, ಬಡ್ತಿಯಲ್ಲಿ ಪಾರದರ್ಶಕತೆ’ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,292 ▼	17,117 ▼	₹53,070 (ಬೆಂಗಳೂರು)	₹69,700 (ಬೆಂಗಳೂರು)	76.18 ▼

ಶೇ 95ರಷ್ಟು ಅಂಕ ಗಳಿಸಿದವರೂ ನೀಟ್ ಉತ್ತೀರ್ಣರಾಗುತ್ತಿಲ್ಲ: ಮುಖ್ಯಮಂತ್ರಿ ಹೇಳಿಕೆ

ವೈದ್ಯ ಶಿಕ್ಷಣ ಶುಲ್ಕ ಇಳಿಸಲು ಚಿಂತನೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಶುಲ್ಕ ಕಡಿಮೆ ಇದ್ದರೂ, ಖಾಸಗಿ ಕಾಲೇಜುಗಳಲ್ಲಿ ಅಧಿಕ ಶುಲ್ಕ ಇರುವುದರಿಂದ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗಿದೆ. ಹಾಗಾಗಿ ನಮ್ಮಲ್ಲಿ ವೈದ್ಯಕೀಯ ಶಿಕ್ಷಣದ ವೆಚ್ಚವನ್ನು ಕಡಿಮೆ ಮಾಡಲು ಚಿಂತನೆ ನಡೆಸಲಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಶೇ 95 ರಷ್ಟು ಅಂಕ ಗಳಿಸಿದರೂ ನೀಟ್‌ನಲ್ಲಿ ಉತ್ತೀರ್ಣರಾಗುತ್ತಿಲ್ಲ. ಮ್ಯಾನೇಜ್‌ಮೆಂಟ್ ಸೀಟು ಪಡೆಯಲು ದುಬಾರಿ ಹಣ ಕಟ್ಟಬೇಕಾಗುತ್ತದೆ. ಅದಕ್ಕಾಗಿ ವಿದ್ಯಾರ್ಥಿಗಳು ಪರ್ಯಾಯ ಮಾರ್ಗ ಕಂಡುಕೊಂಡು ಬೇರೆ ಬೇರೆ ದೇಶಗಳಿಗೆ ಕಲಿಯಲು ಹೋಗುತ್ತಿದ್ದಾರೆ’ ಎಂದು ಹೇಳಿದರು.

‘ನ್ಯಾಷನಲ್ ಮೆಡಿಕಲ್ ಕೌನ್ಸಿಲ್ (ಎನ್‌ಎಂಸಿ) ಈ ಬಗ್ಗೆ ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ಎನ್‌ಎಂಸಿ ಕೂಡ ಈ ನಿಟ್ಟಿನಲ್ಲಿ ಪುನರ್ ಪರಿಶೀಲನೆ ನಡೆಸುತ್ತಿದೆ. ವೈದ್ಯಕೀಯ ಕಾಲೇಜುಗಳನ್ನು ಎ, ಬಿ, ಸಿ ಎಂದು ಕೆಟಗರಿ ಮಾಡಿ ಶುಲ್ಕ ನಿಗದಿ ಮಾಡಬೇಕಾಗುತ್ತದೆ’ ಎಂದು ಮಾಹಿತಿ ನೀಡಿದರು.

ಉಕ್ರೇನ್‌ನಿಂದ ವಾಪಸ್ಸಾದ ವೈದ್ಯಕೀಯ ವಿದ್ಯಾರ್ಥಿಗಳ ಶಿಕ್ಷಣ ಅಪೂರ್ಣವಾಗಿರುವುದರಿಂದ ಪರ್ಯಾಯ ಕ್ರಮಗಳ ಬಗ್ಗೆ ಕೇಂದ್ರ ಸರ್ಕಾರ ಗಂಭೀರ ಚಿಂತನೆ ನಡೆಸಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಇಲ್ಲಿನ ವೈದ್ಯಕೀಯ ಶಿಕ್ಷಣದ ಪಠ್ಯಕ್ರಮ ಮತ್ತು ಉಕ್ರೇನ್‌ನ ಪಠ್ಯಕ್ರಮ ಒಂದೇ ಅಲ್ಲ. ಕೋರ್ಸ್‌ಗಳು ಬೇರೆ ಬೇರೆ ಇವೆ. ಹಾಗಾಗಿ ಅಲ್ಲಿ ಶಿಕ್ಷಣ ಪೂರ್ಣಗೊಳಿಸಿದರೂ ಇಲ್ಲಿ ಮತ್ತೆ ಪರೀಕ್ಷೆ ಬರೆಯಬೇಕಾಗುತ್ತದೆ. ಈ ಎಲ್ಲದರ ಬಗ್ಗೆ ಕೇಂದ್ರ ಸರ್ಕಾರ ಸರಿಯಾದ ಕ್ರಮ ಕೈಗೊಳ್ಳಲಿದೆ’ ಎಂದು ಹೇಳಿದರು.

ಉಕ್ರೇನ್‌ನಿಂದ ಮರಳಿದವರಿಗೆ 60 ಕಾಲೇಜುಗಳಲ್ಲಿ ಕಲಿಕೆಗೆ ಅವಕಾಶ

ಬೆಂಗಳೂರು: ಯುದ್ಧಪೀಡಿತ ಉಕ್ರೇನ್‌ನಿಂದ ಹಿಂದಿರುಗಿರುವ ವೈದ್ಯಕೀಯ ವಿದ್ಯಾರ್ಥಿಗಳಿಗೆ ರಾಜ್ಯದ 60 ವೈದ್ಯಕೀಯ ಶಿಕ್ಷಣ ಕಾಲೇಜುಗಳಲ್ಲೇ ಕಲಿಕೆ ಮುಂದುವರಿಸಲು ಅವಕಾಶ ನೀಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಈ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವುದಕ್ಕಾಗಿ ಉನ್ನತಮಟ್ಟದ ಸಮಿತಿ ನೇಮಕಕ್ಕೂ ನಿರ್ಧರಿಸಲಾಗಿದೆ.

ಉಕ್ರೇನ್‌ನಿಂದ ಹಿಂದಿರುಗಿರುವ ವಿದ್ಯಾರ್ಥಿಗಳ ಜತೆ ಸೋಮವಾರ ಸಭೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಈ ವಿಷಯ ಪ್ರಕಟಿಸಿದರು.

‘ಉಕ್ರೇನ್‌ನಿಂದ 700 ವೈದ್ಯಕೀಯ ವಿದ್ಯಾರ್ಥಿಗಳು ರಾಜ್ಯಕ್ಕೆ ಹಿಂದಿರುಗಿದ್ದಾರೆ. ಅವರ ಶೈಕ್ಷಣಿಕ ಭವಿಷ್ಯ ರೂಪಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದ್ದರು. ವಿದ್ಯಾರ್ಥಿಗಳ ಜತೆ ಚರ್ಚಿಸಿದ ಬಳಿಕ ತಾತ್ಕಾಲಿಕ ಕ್ರಮವಾಗಿ ಈ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ’ ಎಂದರು.

ರಾಜ್ಯದ 60 ವೈದ್ಯಕೀಯ ಶಿಕ್ಷಣ ಕಾಲೇಜುಗಳಲ್ಲಿ ಈ ವಿದ್ಯಾರ್ಥಿಗಳು ಕಲಿಕೆ ಮುಂದುವರಿಸಲು ಅವಕಾಶ ಕಲ್ಪಿಸಲಾಗುವುದು. ಅವರು ಈಗ ವ್ಯಾಸಂಗ ಮಾಡುತ್ತಿರುವ ತರಗತಿಗಳಲ್ಲೇ ಕಲಿಕೆ ಮುಂದುವರಿಸಬಹುದು. ಆದರೆ, ಈ ವಿದ್ಯಾರ್ಥಿಗಳು ಅಧಿಕೃತವಾಗಿ ಈ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಸಾಧ್ಯವಿಲ್ಲ. ಉಕ್ರೇನ್‌ನಿಂದ ಹಿಂದಿರುಗಿರುವ ವಿದ್ಯಾರ್ಥಿಗಳು ರಾಜ್ಯದ ವೈದ್ಯಕೀಯ ಶಿಕ್ಷಣ ಕಾಲೇಜುಗಳಿಗೆ ಯಾವುದೇ ಶುಲ್ಕವನ್ನೂ ಪಾವತಿಸಬೇಕಿಲ್ಲ ಎಂದು ತಿಳಿಸಿದರು.

6ನೇ ಪುಟ ನೋಡಿ

‘ವಿದ್ಯಾರ್ಥಿಗಳ ಭವಿಷ್ಯದ ಶಿಕ್ಷಣ ಪರಿಶೀಲನೆ’

ನವದೆಹಲಿ: ಉಕ್ರೇನ್‌ನಿಂದ ವಾಪಸಾಗಿರುವ 22,500ಕ್ಕೂ ಅಧಿಕ ವೈದ್ಯಕೀಯ ವಿದ್ಯಾರ್ಥಿಗಳ ಶಿಕ್ಷಣದ ಮುಂದುವರಿಕೆ ಕುರಿತಾದ ವಿಷಯವನ್ನು ಸರ್ಕಾರ ಪರಿಶೀಲಿಸುತ್ತಿದೆ ಎಂದು ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಅವರು ಸೋಮವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದರು.

ಈ ವಿದ್ಯಾರ್ಥಿಗಳ ಭವಿಷ್ಯದ ಶಿಕ್ಷಣಕ್ಕೆ ಸಂಬಂಧಿಸಿದ ಅರ್ಜಿಗಳನ್ನು ಸರ್ಕಾರ ಪರಿಶೀಲಿಸುತ್ತಿದೆ. ಪ್ರಕರಣದ ಎರಡು ಅರ್ಜಿಗಳನ್ನು ಈಗಾಗಲೇ ಇತ್ಯರ್ಥಪಡಿಸಿದೆ ಎಂಬ ಸರ್ಕಾರದ ಹೇಳಿಕೆಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಪೀಠ ದಾಖಲಿಸಿಕೊಂಡಿತು.

ಅರ್ಜಿದಾರರಾದ ವಕೀಲ ವಿಶಾಲ್ ತಿವಾರಿ ಅವರು, ವಾಪಸಾಗಿರುವ ವಿದ್ಯಾರ್ಥಿಗಳಿಗೆ ವೈದ್ಯಕೀಯ ಶಿಕ್ಷಣ ಮುಂದುವರಿಸಲು ಯಾವುದೇ ತೊಡಕಾಗದು ಎಂಬ ಖಾತರಿಯನ್ನು ನೀಡುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿದರು.

ತಿವಾರಿ ಅಲ್ಲದೆ ಉಕ್ರೇನ್‌ನ ಒಡೆಸ್ಸಾದ ನ್ಯಾಷನಲ್ ಮೆಡಿಕಲ್ ಯೂನಿವರ್ಸಿಟಿಯ ವಿದ್ಯಾರ್ಥಿನಿ ಫಾತಿಮಾ ಅಹನಾ ಅವರು, ಉಕ್ರೇನ್‌ನಲ್ಲಿರುವ ಭಾರತೀಯ ವಿದ್ಯಾರ್ಥಿಗಳ ತೆರವು ಕುರಿತು ಸರ್ಕಾರಕ್ಕೆ ಸೂಚನೆ ನೀಡಬೇಕು ಎಂದು ಕೋರಿ ಅರ್ಜಿ ಸಲ್ಲಿಸಿದ್ದರು.

ಅಂತಿಮ ಯಾತ್ರೆ ಯುದ್ಧಪೀಡಿತ ಉಕ್ರೇನ್‌ನಲ್ಲಿ ಮೃತಪಟ್ಟ ನವೀನ್ ಗ್ಯಾನಗೌಡರ ಅವರ ಪಾರ್ಥಿವ ಶರೀರದ ಮೆರವಣಿಗೆ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಚಳಗೇರಿ ಗ್ರಾಮದಲ್ಲಿ ಸೋಮವಾರ ನಡೆಯಿತು –ಪ್ರಜಾವಾಣಿ ಚಿತ್ರ

ಸುದ್ದಿ 5

ಹಲವು ಜಿಲ್ಲೆಗಳಲ್ಲಿ ಅಪಾಯಕಾರಿ ಕಳೆನಾಶಕದ ವ್ಯಾಪಕ ಬಳಕೆ

‘ಗ್ಲೈಕೊ ಫಾಸ್ಫೇಟ್’: ಜೀವ ವೈವಿಧ್ಯಕ್ಕೆ ಕಂಟಕ

● ಎಸ್ ರವಿಪ್ರಕಾಶ್

ಬೆಂಗಳೂರು: ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಕಳೆ ನಾಶಕ್ಕಾಗಿ ಅತ್ಯಂತ ಅಪಾಯಕಾರಿ ‘ಗ್ಲೈಕೊ ಫಾಸ್ಫೇಟ್’ ರಾಸಾಯನಿಕವನ್ನು ವ್ಯಾಪಕ ಪ್ರಮಾಣದಲ್ಲಿ ಬಳಸುತ್ತಿರುವುದರಿಂದ ಅಮೂಲ್ಯ ಜೀವ ವೈವಿಧ್ಯಗಳ ಭಂಡಾರ ನಾಶವಾಗುತ್ತಿದೆ. ಭೂಮಿಯ ಒಡಲು ಮತ್ತು ಅಂತರ್ಜಲ ವಿಷಮಯವಾಗುತ್ತಿದೆ. ಕೃಷಿ ಭೂಮಿ ಬರಡಾಗುತ್ತಿದೆ.

ನೆರೆಯ ಕೇರಳದ ಕೃಷಿಕರು ಕರ್ನಾಟಕದಲ್ಲಿ ಕೃಷಿ ಭೂಮಿಯನ್ನು ಗುತ್ತಿಗೆ ಪಡೆದು ಅಪಾರ ಪ್ರಮಾಣದಲ್ಲಿ ಶುಂಠಿ ಬೆಳೆಯುತ್ತಿರುವ ಪ್ರದೇಶಗಳು ಮತ್ತು ಕೊಡಗಿನ ಕಾಫಿ ಮತ್ತು ಅಡಿಕೆ ಬೆಳೆಯುವ ಪ್ರದೇಶಗಳಲ್ಲಿ ಈ ಸಮಸ್ಯೆ ತಲೆದೋರಿದೆ. ವಿಶೇಷವಾಗಿ ಚಾಮರಾಜನಗರ, ಕೊಡಗು, ಹಾಸನ, ಉತ್ತರ ಕನ್ನಡ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಜಿಲ್ಲೆಗಳಲ್ಲಿ ಈ ರಾಸಾಯನಿಕವನ್ನು ಭಾರೀ ಪ್ರಮಾಣದಲ್ಲಿ ಬಳಸಲಾಗುತ್ತಿದೆ.

‘ಪ್ರಜಾವಾಣಿ’ಗೆ ಈ ಕುರಿತು ಮಾಹಿತಿ ನೀಡಿದ ಪರಿಸರ ಪ್ರೇಮಿಯೂ ಆಗಿರುವ ಹುಣಸೂರಿನ ರೈತ ಸಂಜಯ್, ಹುಣಸೂರು ತಾಲ್ಲೂಕಿನಲ್ಲಿ ಕಳೆದ ಕೆಲವೇ ವರ್ಷಗಳಲ್ಲಿ ಕಳೆನಾಶಕ ರಾಸಾಯನಿಕ ವ್ಯಾಪಕ ಪ್ರಮಾಣದಲ್ಲಿ ಬಳಸಲಾಗುತ್ತಿದೆ. ಕೆಲವೇ ವರ್ಷಗಳ ಹಿಂದೆ ₹5 ಲಕ್ಷದಿಂದ ₹10 ಲಕ್ಷದಷ್ಟು ಗ್ಲೈಕೊ ಫಾಸ್ಫೇಟ್ ಮಾರಾಟವಾಗುತ್ತಿದ್ದದ್ದು ಈಗ ಅದರ ವಹಿವಾಟು ₹8 ಕೋಟಿಗೆ ತಲುಪಿದೆ ಎಂದರು.

ಮನೆ ಮನೆಗಳಲ್ಲಿ ದೊಡ್ಡ ದೊಡ್ಡ ಕ್ಯಾನ್‌ಗಳನ್ನು ರೈತರು ಇಟ್ಟುಕೊಳ್ಳುತ್ತಿದ್ದಾರೆ. ಒಮ್ಮೆ ಇದನ್ನು ಸಿಂಪಡಿಸಿದರೆ ಸಾಕು, ಎಲ್ಲ ಕಳೆಗಳು, ಕೀಟಗಳು ನಾಶವಾಗುತ್ತವೆ. ಇದರಿಂದ ‘ಪ್ರೇರಿತ’ರಾದ ಕೊಡಗಿನ ಕಾಫಿ ತೋಟಗಳ ಮಾಲೀಕರೂ, ಅಡಿಕೆ ಕೃಷಿಕರೂ ಈ ರಾಸಾಯನಿಕವನ್ನು ಬಳಕೆ ಮಾಡಲಾರಂಭಿಸಿದ್ದಾರೆ ಎಂದು ತಿಳಿಸಿದ್ದಾರೆ.

6ನೇ ಪುಟ ನೋಡಿ

ಕೇರಳದಲ್ಲಿ ನಿಷೇಧ, ಕರ್ನಾಟಕದಲ್ಲಿ ಬಳಕೆ!

ಪ್ರಜಾವಾಣಿ ವಿಶೇಷ

ಗ್ಲೈಕೊ ಫಾಸ್ಫೇಟ್ ಬಳಕೆಯನ್ನು ಕೇರಳದಲ್ಲಿ 2019ರಲ್ಲಿ ನಿಷೇಧಿಸಲಾಗಿದೆ. ಕರ್ನಾಟಕದಲ್ಲಿ ಕೃಷಿ ಇಲಾಖೆಯ ಲಂಗುಲಗಾಮು ಇಲ್ಲ. ಹೀಗಾಗಿ ಕೇರಳದ ಶುಂಠಿ ಬೆಳೆಗಾರರು ವ್ಯಾಪಕವಾಗಿ ಈ ರಾಸಾಯನಿಕವನ್ನು ಬಳಸುತ್ತಿದ್ದಾರೆ. ಒಮ್ಮೆ ಒಂದು ಕಡೆ ಜಮೀನಿನಲ್ಲಿ ಶುಂಠಿ ಬೆಳೆದ ಮೇಲೆ ಬಳಿಕ ಅವರು ಮತ್ತೊಂದು ಕಡೆ ಬೆಳೆಯುತ್ತಾರೆ.

- ● ಕೇರಳದ ಶುಂಠಿ ಬೆಳೆಗಾರರ ಸಂಘದ ಅಧಿಕೃತ ಮಾಹಿತಿಯ ಪ್ರಕಾರ 2020-21 ರ ಸಾಲಿನಲ್ಲಿ ಕೇರಳದ ವಯನಾಡು, ಕಣ್ಣೂರು, ಪಾಲಕ್ಕಾಡ್ ಮತ್ತು ಇತರ ಜಿಲ್ಲೆಗಳ 20 ಸಾವಿರಕ್ಕೂ ಹೆಚ್ಚು ರೈತರು ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ 80 ಸಾವಿರಕ್ಕೂ ಹೆಚ್ಚು ಹೆಕ್ಟೇರ್‌ಗಳಲ್ಲಿ ಶುಂಠಿ ಕೃಷಿ ನಡೆಸಿದ್ದರು. ಕೇರಳದ ರೈತರು ಪ್ರತಿ ಎಕರೆ ಭೂಮಿಯನ್ನು ₹3 ಲಕ್ಷದಿಂದ ರಿಂದ ₹7 ಲಕ್ಷದವರೆಗೆ ಗುತ್ತಿಗೆ ಪಡೆದು ಶುಂಠಿ ಬೆಳೆಯುತ್ತಾರೆ. ಒಂದು ಅಂದಾಜಿನ ಪ್ರಕಾರ, 10 ಎಕರೆ ಭೂಮಿಯಲ್ಲಿ ₹60 ಲಕ್ಷದಿಂದ ₹70 ಲಕ್ಷ ಬಂಡವಾಳ ತೊಡಗಿಸುತ್ತಾರೆ. ಇವರು ಕಳೆ ನಾಶಕ್ಕಾಗಿ ಗ್ಲೈಕೊ ಫಾಸ್ಫೇಟ್ ಯಥೇಚ್ಛವಾಗಿ ಬಳಕೆ ಮಾಡುತ್ತಾರೆ.

ಮಾನವ ಮತ್ತು ಜಾನುವಾರುಗಳಿಗೂ ಹಾನಿಕಾರಕ: ಗ್ಲೈಕೊ ಫಾಸ್ಫೇಟ್ ಬಳಕೆಯಿಂದ ಚರ್ಮ, ಕಣ್ಣುಗಳ ಮೇಲೆ ಹಾನಿಯಾಗುವುದಲ್ಲದೇ, ಉಸಿರಾಟಕ್ಕೂ ತೊಂದರೆಯಾಗುತ್ತದೆ. ಯಾವುದೇ ಸಸ್ಯಗಳ ಮೇಲೆ ಇದ್ದ ಈ ರಾಸಾಯನಿಕ ಮೈಗೆ ಸೋಕಿದರೂ ಸಾಕು ಮೈಯುರಿ ಕಾಣಿಸಿಕೊಳ್ಳುತ್ತದೆ. ಇದರ ಅಂಶ ಹೆಚ್ಚು ಪ್ರಮಾಣದಲ್ಲಿ ದೇಹಕ್ಕೆ ಹೋದರೆ ಕ್ಯಾನ್ಸರ್‌ಗೆ ಕಾರಣವಾಗಲೂಬಹುದು ಎಂಬ ವಾದವೂ ಇದೆ.

ರಾಸಾಯನಿಕ ಕೀಟ ನಾಶಕ ಮತ್ತು ಕಳೆ ನಾಶಕ ಬಳಕೆ
(ಮೆಟ್ರಿಕ್ ಟನ್‌ಗಳಲ್ಲಿ)

2016-17	2017-18	2018-19	2019-20	2020-21
1,288	1,502	1,524	1,568	1,930
437	544	544	564	561(ಜೈವಿಕ ಕೀಟನಾಶಕ)

(ಮಾಹಿತಿ: ಭಾರತ ಸರ್ಕಾರ)

ಚೀನಾ: 132 ಜನರಿದ್ದ ವಿಮಾನ ಪತನ

ಬೀಜಿಂಗ್ (ರಾಯಿಟರ್ಸ್): 132 ಮಂದಿ ಪ್ರಯಾಣಿಸುತ್ತಿದ್ದ ಚೀನಾ ಈಸ್ಟರ್ನ್ ಏರ್‌ಲೈನ್ಸ್‌ನ ಬೋಯಿಂಗ್ 737-800 ವಿಮಾನವು ದಕ್ಷಿಣ ಚೀನಾದ ಪರ್ವತ ಪ್ರದೇಶದಲ್ಲಿ ಸೋಮವಾರ ಪತನವಾಗಿದೆ. ವಿಮಾನದಲ್ಲಿ ಇದ್ದವರಲ್ಲಿ ಯಾರೂ ಬದುಕುಳಿದಿರುವ ಸಾಧ್ಯತೆ ಇಲ್ಲ ಎಂದು ಚೀನಾದ ಮಾಧ್ಯಮಗಳು ವರದಿ ಮಾಡಿವೆ. ವಿಮಾನದಲ್ಲಿ ಒಂಬತ್ತು ಮಂದಿ ಸಿಬ್ಬಂದಿ ಇದ್ದರು.

ನೈರುತ್ಯ ಚೀನಾದ ಯುನಾನ್ ಪ್ರಾಂತ್ಯದ ರಾಜಧಾನಿ ಕುನ್‌ಮಿಂಗ್‌ನಿಂದ ಗುವಾಂಗ್‌ಡಾಂಗ್ ಪ್ರಾಂತ್ಯದ ರಾಜಧಾನಿ ಗುವಾಂಗ್‌ಝೌಗೆ ಈ ವಿಮಾನವು ಸಂಚರಿಸುತ್ತಿತ್ತು. ಪತನಕ್ಕೆ ಕಾರಣವೇನು ಎಂಬುದು ತಕ್ಷಣಕ್ಕೆ ಗೊತ್ತಾಗಿಲ್ಲ. ವಿಮಾನವು ಚೂರುಚೂರಾಗಿ ಒಡೆದು ಪರ್ವತದಲ್ಲಿ ಚೆದುರಿ ಹೋಗಿದೆ. ಪತನದ ಸಂದರ್ಭದಲ್ಲಿ ಬೆಂಕಿ ಹೊತ್ತಿಕೊಂಡಿದೆ. ಪರ್ವತದಲ್ಲಿ ಇದ್ದ ಬಿದಿರು ಮೆಳೆ ಬೆಂಕಿಯಲ್ಲಿ ಉರಿದು ಹೋಗಿದೆ.

ಮಧ್ಯಾಹ್ನ 1.11ಕ್ಕೆ ಕುನ್‌ಮಿಂಗ್‌ನಿಂದ ಹೊರಟ ವಿಮಾನ 3.05ಕ್ಕೆ ಗುವಾಂಗ್‌ಝೌ ತಲುಪಬೇಕಿತ್ತು. ಆದರೆ, ವುಝೌ ನಗರದ ಸಮೀಪ ಬಂದಾಗ ಸಂಪರ್ಕ ಕಡಿತಗೊಂಡಿತು ಎಂದು ಚೀನಾ ನಾಗರಿಕ ವಿಮಾನಯಾನ ಪ್ರಾಧಿಕಾರವು ಹೇಳಿದೆ.

10ನೇ ಪುಟ ನೋಡಿ

ಸಗಟು ಡೀಸೆಲ್ ದರ ಏರಿಕೆ

ಸಾರಿಗೆ ಸಂಸ್ಥೆಗಳಿಗೆ ₹2.17 ಕೋಟಿ ಹೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಗಟು ಲೆಕ್ಕದಲ್ಲಿ ಡೀಸೆಲ್ ಖರೀದಿ ದರ ಏರಿಕೆಯಾಗಿರುವುದು ಮೊದಲೇ ಸಂಕಷ್ಟದಲ್ಲಿರುವ ಸಾರಿಗೆ ಸಂಸ್ಥೆಗಳನ್ನು ಇನ್ನಷ್ಟು ಇಕ್ಕಟ್ಟಿಗೆ ಸಿಲುಕಿಸಿದೆ. ಇದರಿಂದಾಗಿ ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಎನ್‌ಡಬ್ಲ್ಯುಕೆಆರ್‌ಟಿಸಿ, ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಗಳಿಗೆ ದಿನಕ್ಕೆ ₹2.17 ಕೋಟಿ ಹೆಚ್ಚುವರಿ ಹೊರೆ ಆಗಲಿದೆ.

ಪ್ರತಿನಿತ್ಯ ಕೆಎಸ್‌ಆರ್‌ಟಿಸಿಗೆ 5.30 ಲಕ್ಷ ಲೀಟರ್, ಬಿಎಂಟಿಸಿಗೆ 2.06 ಲಕ್ಷ ಲೀಟರ್, ಎನ್‌ಡಬ್ಲ್ಯುಕೆಆರ್‌ಟಿಸಿಗೆ 2.82 ಲಕ್ಷ ಲೀಟರ್ ಮತ್ತು ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಗೆ 2.50 ಲಕ್ಷ ಲೀಟರ್ ಡೀಸೆಲ್ ಬೇಕಾಗುತ್ತದೆ.

ಕೆಎಸ್‌ಆರ್‌ಟಿಸಿ ನಿತ್ಯದ ವರಮಾನ ₹7 ಕೋಟಿ ಇದ್ದರೆ ಡೀಸೆಲ್‌ಗೇ ₹5 ಕೋಟಿ ಖರ್ಚಾಗುತ್ತಿತ್ತು. ಈಗ ಹೆಚ್ಚುವರಿಯಾಗಿ ₹86.60 ಲಕ್ಷ ಹೊರೆ ಆಗಿದೆ. ಬಿಎಂಟಿಸಿ ನಿತ್ಯದ ವರಮಾನ ₹3.10 ಕೋಟಿ ಇದ್ದರೆ ಡೀಸೆಲ್‌ಗೆ ₹2.10 ಕೋಟಿ ಖರ್ಚಾಗುತ್ತಿತ್ತು. ಈಗ ₹35 ಲಕ್ಷ ಹೆಚ್ಚುವರಿಯಾಗಿ ಸೇರಿಕೊಂಡಿದೆ. ಎನ್‌ಡಬ್ಲ್ಯುಕೆಆರ್‌ಟಿಸಿಗೆ ₹48.97 ಲಕ್ಷ ಮತ್ತು ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಗೆ ₹43.41 ಲಕ್ಷ ಹೆಚ್ಚುವರಿ ಡೀಸೆಲ್ ವೆಚ್ಚ ಹೊರೆಯಾಗಿದೆ.

ಈ ನಷ್ಟದಿಂದ ಪಾರು ಮಾಡಲು ಕೋರಿ ನಾಲ್ಕೂ ಸಾರಿಗೆ ಸಂಸ್ಥೆಗಳು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿವೆ. ಆದರೂ, ಪ್ರಯಾಣ ದರ ಹೆಚ್ಚಳ ಮಾಡುವ ಸಾಧ್ಯತೆಗಳಿಲ್ಲ.

‘ಡೀಸೆಲ್ ಖರೀದಿ ದರದ ಹೊರೆ ಸಾರಿಗೆ ಸಂಸ್ಥೆಗಳಿಗೆ ಹೆಚ್ಚಾಗಿದ್ದು, ತಮಿಳುನಾಡಿನಲ್ಲಿ ಈ ಹೆಚ್ಚುವರಿ ಮೊತ್ತವನ್ನು ಅಲ್ಲಿನ ಸರ್ಕಾರ ಸಹಾಯಧನದ ರೂಪದಲ್ಲಿ ಸಾರಿಗೆ ಸಂಸ್ಥೆಗೆ ನೀಡುತ್ತಿದೆ. ಅದೇ ರೀತಿಯ ನೆರವು ನೀಡಬೇಕು ಎಂದು ನಾವೂ ಕೇಳಿದ್ದೇವೆ. ಸರ್ಕಾರದ ಮಟ್ಟದಲ್ಲಿ ಪರಿಶೀಲನೆ ಹಂತದಲ್ಲಿದೆ. ಟಿಕೆಟ್ ದರ ಹೆಚ್ಚಳ ಮಾಡಿ ಆ ಹೊರೆಯನ್ನು ಪ್ರಯಾಣಿಕರ ಮೇಲೆ ವರ್ಗಾಯಿಸುವ ಆಲೋಚನೆ ಇಲ್ಲ’ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ.ಕಳಸದ ಸ್ಪಷ್ಟಪಡಿಸಿದರು.

18 ವರ್ಷ ಮೇಲ್ಪಟ್ಟವರಿಗೂ ಬೂಸ್ಟರ್ ಡೋಸ್



ನವದೆಹಲಿ(ಪಿಟಿಐ): 18 ವರ್ಷ ದಾಟಿದ ದೇಶದ ಎಲ್ಲಾ ವಯಸ್ಕರಿಗೂ ಬೂಸ್ಟರ್ ಡೋಸ್ ಪಡೆಯಲು ಅವಕಾಶ ಕಲ್ಪಿಸುವ ಬಗ್ಗೆ ಕೇಂದ್ರ ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಮೂಲಗಳು ತಿಳಿಸಿವೆ. ವಿಶ್ವದ ಕೆಲವು ದೇಶಗಳಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಳವಾಗುತ್ತಿದೆ. ಜತೆಗೆ, ಬೂಸ್ಟರ್ ಡೋಸ್ ಲಸಿಕೆ ಪಡೆಯದೆ ವಿದೇಶಗಳಿಗೆ ಪ್ರಯಾಣಿಸಲು ಕಷ್ಟವಾಗುತ್ತಿರುವುದರಿಂದ ಈ ಚಿಂತನೆ ನಡೆದಿದೆ ಎಂದು ತಿಳಿದುಬಂದಿದೆ.

2ನೇ ಡೋಸ್ ಲಸಿಕೆ ಪಡೆದ 9 ತಿಂಗಳಿನಿಂದ 39 ವಾರ ಪೂರ್ಣಗೊಂಡವರಿಗೆ ಆದ್ಯತೆ ಮೇರೆಗೆ ಬೂಸ್ಟರ್ ಡೋಸ್ ನೀಡಲಾಗುತ್ತದೆ.

ದೇಶದಲ್ಲಿ ಸದ್ಯ 181 ಕೋಟಿ ಡೋಸ್ ಕೋವಿಡ್ ಲಸಿಕೆ ನೀಡಲಾಗಿದ್ದು, ಇದರಲ್ಲಿ 2 ಕೋಟಿಗೂ ಹೆಚ್ಚು ಬೂಸ್ಟರ್ ಡೋಸ್‌ಗಳಾಗಿವೆ. ಪ್ರಸ್ತುತ ಭಾರತದಲ್ಲಿ ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಯಕರ್ತರು ಮತ್ತು 60 ವರ್ಷ ಮೇಲ್ಪಟ್ಟವರಿಗೆ ಮಾತ್ರ ಕೋವಿಡ್ ಲಸಿಕೆಯ ಬೂಸ್ಟರ್ ಡೋಸ್ ನೀಡಲಾಗುತ್ತಿದೆ.

18 ವರ್ಷದವರಿಗೂ ಬೂಸ್ಟರ್ ಡೋಸ್ ಲಸಿಕೆ ಉಚಿತವಾಗಿ ನೀಡಬೇಕೆ ಎಂಬ ಬಗ್ಗೆ ಸರ್ಕಾರವು ಚರ್ಚಿಸುತ್ತಿದೆ. ಜತೆಗೆ ಎಲ್ಲ ವಯಸ್ಕರಿಗೂ ಬೂಸ್ಟರ್ ಡೋಸ್ ಲಸಿಕೆ ಪಡೆಯಲು ಅವಕಾಶ ನೀಡಬೇಕು ಎಂದು ಸಂಸದರೂ ಸಹ ಒತ್ತಾಯಿಸಿದ್ದಾಗಿ ತಿಳಿದುಬಂದಿದೆ.

ಮುಖ್ಯಮಂತ್ರಿ ಸ್ಥಾನ: ಸಾವಂತ್, ಧಾಮಿಗೆ ಮತ್ತೆ ಅವಕಾಶ

ಪುಷ್ಕರ್ ಧಾಮಿ

ಪ್ರಮೋದ್ ಸಾವಂತ್

ನವದೆಹಲಿ/ಪಣಜಿ/ಡೆಹ್ರಾಡೂನ್ (ಪಿಟಿಐ): ಗೋವಾ ಮುಖ್ಯಮಂತ್ರಿಯಾಗಿ ಪ್ರಮೋದ್ ಸಾವಂತ್, ಉತ್ತರಾಖಂಡ ಮುಖ್ಯಮಂತ್ರಿಯಾಗಿ ಪುಷ್ಕರ್ ಧಾಮಿ ಅವರನ್ನು ಎರಡನೇ ಅವಧಿಗೆ ಮುಂದುವರಿಸಲು ಬಿಜೆಪಿ ನಿರ್ಧರಿಸಿದೆ.

ಪಣಜಿಯಲ್ಲಿ ಸೋಮವಾರ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಪ್ರಮೋದ್ ಸಾವಂತ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಸಾವಂತ್ ಅವರ ಆಯ್ಕೆ ಕುರಿತಂತೆ ಶಾಸಕ ವಿಶ್ವಜಿತ್ ರಾಣೆ ಅವರು ಮಂಡಿಸಿದ ಪ್ರಸ್ತಾವಕ್ಕೆ ಶಾಸಕಾಂಗ ಪಕ್ಷದ ಸಭೆ ಒಮ್ಮತ ವ್ಯಕ್ತಪಡಿಸಿತು ಎಂದು ಪಕ್ಷದ ಕೇಂದ್ರೀಯ ವೀಕ್ಷಕ ನರೇಂದ್ರ ಸಿಂಗ್ ತೋಮರ್ ಹೇಳಿದರು. ಪಕ್ಷದ ನಾಯಕರಾದ ದೇವೇಂದ್ರ ಫಡಣವೀಸ್, ಎಲ್. ಮುರುಗನ್, ಸಿ.ಟಿ. ರವಿ, ಸದಾನಂದ ಶೇಟ್ ತಾನಾವಡೆ ಅವರು ಸಭೆಯಲ್ಲಿ ಉಪಸ್ಥಿತರಿದ್ದರು.

11ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ


ಆರೋಗ್ಯವೇ ಭಾಗ್ಯ ಅನ್ರೀ.. ಆರೋಗ್ಯ ಇಲಾಖೆಯಲ್ಲಿರ್ಬೇಕು.. ಆ ಮಹಾಭಾಗ್ಯ ಸಿಗ್ಬೇಕಿದ್ರೆ!

ಬಿಬಿಎಂಪಿ ಕಸ ಸಾಗಣೆ ಲಾರಿ ಗುದ್ದಿ ಬಾಲಕಿ ಸಾವು

ಬೆಂಗಳೂರು: ಹೆಬ್ಬಾಳ ಬಸ್ ನಿಲ್ದಾಣ ಎದುರಿನ ಮುಖ್ಯರಸ್ತೆಯಲ್ಲಿ ಬಿಬಿಎಂಪಿಯ ಕಸ ಸಾಗಣೆ ಲಾರಿ (ಕಾಂಪ್ಯಾಕ್ಟರ್) ಡಿಕ್ಕಿ ಹೊಡೆದು ಭಾನುವಾರ ಸಂಭವಿಸಿದ ಅಪಘಾತದಲ್ಲಿ ಬಾಲಕಿ ಅಕ್ಷಯಾ (14) ಸ್ಥಳದಲ್ಲೇ ಮೃತಪಟ್ಟಿದ್ದಾಳೆ.

3A

ಒಳ ಪುಟ
ಬಸ್ ದುರಂತ: ವಿದ್ಯಾರ್ಥಿಗಳ ಭವಿಷ್ಯ ಅತಂತ್ರ 5

ಯುದ್ಧ: ಫಲಿಸದ 5ನೇ ಸುತ್ತಿನ ಮಾತುಕತೆ 11

SDJ GOLD
ಕೆಲಸಕ್ಕೆ Telecallers ಬೇಕಾಗಿದ್ದಾರೆ
Computer knowledge ಇರಬೇಕು.
ಸಂಬಳ 15000 ಸಿಗುತ್ತದೆ.
ಉಳಿದುಕೊಳ್ಳಲು ಸ್ಥಳ ಇರುತ್ತದೆ.
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣವನ್ನು ಕಟ್ಟಿ ಬಿಡಿಸಿ ಉಳಿದ ಹಣವನ್ನು ಕೊಡುತ್ತೇವೆ.
9813870702
8884666264

ಸುದರ್ಶನ್ ಜ್ಯುವೆಲರ್ಸ್
ಚಿನ್ನ ◆ ಬೆಳ್ಳಿ ◆ ಚಿನ್ನದ ಆಭರಣಗಳು
916 Hallmark Gold Rate
₹ 4735 /-gm
ಬೆಳ್ಳಿ ₹ 64,000/-
ಚಿಕ್ಕಪೇಟೆ: 41300355

MARUTI SUZUKI ARENA
2 500 000 THRILL SEEKERS.
1 LIMITLESS LEGACY.
SWIFT
BELIMITLESS
ಐಡಲ್ ಸ್ಟಾರ್ಟ್ ಸ್ಟಾಪ್ ಜೊತೆಗೆ ನೆಕ್ಸ್ಟ್ ಜೆನ್ K ಸೀರಿಸ್
ಸ್ಮಾರ್ಟ್‌ಪ್ಲೇ ಸ್ಟುಡಿಯೋ
ಕ್ರೂಸ್ ಕಂಟ್ರೋಲ್
ಆಟೋ-ಗಿಯರ್ ಶಿಫ್ಟ್
SWIFT SAVE UP TO ₹38 000*
SWIFT

E-BOOK TODAY AT WWW.MARUTISUZUKI.COM OR VISIT YOUR NEAREST MARUTI SUZUKI DEALERSHIP.

MARUTI SUZUKI AUTHORISED DEALERS: BENGALURU: KATARIA: KANAKAPURA ROAD, PH: 78990 40000. MANDOVI: BASAVANAGUDI, COX TOWN, BASAVESHWARA NAGAR, YELAHANKA, MALUR, KOLAR, GOURIBIDNUR, PH: 97400 30077. PRATHAM: HSR LAYOUT, BELLANDHUR, ANEKAL, MAGADI, CHINTAMANI, MULBAGAL, DODDABALLAPUR, SARJAPUR VILLAGE, PH: PH: 9591991199. RNS MOTORS: YESHWANTHPUR, BOMMANAHALLI, NELAMANGALA, PH: 9538965804. SURAKSHAA CAR CARE: ELECTRONICS CITY, KORAMANGALA, BANGARPET, ATTIBELLE, SRINIVASAPURA, HAROHALLI PH: 8884442299. VARUN MOTORS: MALLESHWARAM, HEBBAL, 78991 00200. BIMAL: ITPL ROAD, YELAHANKA, BANASHANKARI, VARTHUR, OLD AIRPORT ROAD, HOSKOTE, CHIKKABALLAPUR, DEVANAHALLI, BAGEPALLI, SIDLAGHATTA, VIJAYPURA, H CROSS, BUDIGERE, GUDIBANDA, HESARGHATTA PH: 080-30693069. KALYANI: MYSORE ROAD, BANNERGHATTA ROAD, NAGARBHAVI, BANASWADI, LALBAGH, RAMANAGARAM, CHANNAPATNA, KANAKPURA, BANNERGATTA, BIDADI: 95909 90011. TUMKUR: SAKETH: TUMKUR, CHITRADURGA, TIPTUR, KUNIGAL, GUBBI, HOSADURGA, CHALLAKERE, PH: 9980211099.

*Offer includes consumer offer, exchange bonus and corporate offer (wherever applicable) on selected models/ variants. Above mentioned savings amount is the value of maximum savings on selected models. Terms and conditions apply. The terms and conditions are subject to change without any prior notice. For more details, please contact your nearest ARENA dealership. Accessories and features shown in the pictures may not be part of the standard equipment and may vary according to the variant. Images are for illustration purpose only. Colors shown may vary from actual body colors due to printing on paper. Black Glass Shade on the vehicle is due to the lighting effect. Offers vary across variants. Maruti Suzuki India Limited reserves the right to discontinue offers without notice. Above offers are valid till 31st March, 2022.

ಮಂಗಳವಾರದ ಉಷ್ಣಾಂಶ
33° ಗರಿಷ್ಠ 22° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡ ಕವಿದ ವಾತಾವರಣ. ಕೆಲವೆಡೆ ಸಾಧಾರಣ ಮಳೆ ಆಗುವ ಸಾಧ್ಯತೆ.

ಮುನ್ಸೂಚನೆ	ಬುಧವಾರ	ಗುರುವಾರ	ಶುಕ್ರವಾರ
	33° 21°	34° 21°	35° 21°

ಸೂರ್ಯೋದಯ: 6: 23 ಸೂರ್ಯಾಸ್ತ : 6:31 ಚಂದ್ರೋದಯ: ರಾ. 8:32 ಚಂದ್ರಾಸ್ತ: ಬೆ. 9:26

ಸೋಮವಾರದ ಹವಾಮಾನ : ಗರಿಷ್ಠ 33° ಕನಿಷ್ಠ 21°

IN THE HIGH COURT OF KARNATAKA AT BENGALURU

[Substituted Service of Notice to the Respondent Nos. 1 & 2, By Way Of Paper Publication Vide Court Order Dated: 23/02/2022

CMP No. 325 / 2021
C/w CMP No.317/2021
CMP No. 318/2021, CMP NO.319/2021
IN CMP No.325/2021

Petitioner/s : M/s CERA SANITARYWARE LIMITED Represented by Jagadeesan Marimuthu -V/s-
Respondent/s : Mrs. PUSHPA TODI and another

To, Respondent/s:
1) Mrs. PUSHPA TODI
W/o (Late) Mr. Lallan Kumar Todi, R/at : Divyashree 77, Place - Yemlur, Villa #EW09, Behind Old Airport, Bengaluru-560037.
2) MR. PIYUSH TODI
S/o (Late) Mr. Lallan Kumar Todi, R/at : Divyashree 77, Place - Yemlur, Villa #EW09, Behind Old Airport, Bengaluru-560037.
And Also having office at :
#201, 216, 1st Floor, Shree Complex, #73, St. John's Road, Bengaluru-560042.
...Respondent/s

Whereas the above named Petitioner has filed a CMP on this Court Under Sec.11(5) of the Arbitration and Conciliation Act, 1996, as in the copy annexed hereunto.

Emergent Notice is hereby given to you to appear in this court in person or through and Advocate duly instructed or through some one authorized by law to act for you, in this matter on **30/03/2022 at 10.30 A.M.** or on any subsequent date to which the Case may be posted for hearing in case you intend to contest the Petition. If you fail to appear, the petition will be dealt with, heard and decided in your absence.

Given under my hand and the seal of this court, this the **23rd day of February 2022.**

BY ORDER OF THE COURT
Assistant Registrar

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

IN THE HIGH COURT OF KARNATAKA AT BENGALURU

[Substituted Service of Notice to the Respondent Nos. 1 & 2, By Way Of Paper Publication Vide Court Order Dated: 23/02/2022

CMP No. 319 / 2021
C/w CMP No.317/2021
CMP No. 318/2021, CMP NO.325/2021
IN CMP No.319/2021

Petitioner/s : M/s CERA SANITARYWARE LIMITED Represented by Jagadeesan Marimuthu -V/s-
Respondent/s : Mr. PIYUSH TODI and another

To, Respondent/s:
MR. PIYUSH TODI S/o (Late) Mr. L.K.Todi, Aged about 41 years, R/at : Divyashree 77, Place - Yemlur, Villa #EW09, Behind Old Airport, Bengaluru-560037.
And Also having office at :
#201, 216, 1st Floor, Shree Complex, #73, St. John's Road, Bengaluru-560042.
...Respondent/s

Whereas the above named Petitioner has filed a CMP on this Court Under Sec.11(5) of the Arbitration and Conciliation Act, 1996, as in the copy annexed hereunto.

Emergent Notice is hereby given to you to appear in this court in person or through and Advocate duly instructed or through some one authorized by law to act for you, in this matter on **30/03/2022 at 10.30 A.M.** or on any subsequent date to which the Case may be posted for hearing in case you intend to contest the Petition. If you fail to appear, the petition will be dealt with, heard and decided in your absence.

Given under my hand and the seal of this court, this the **23rd day of February 2022.**

BY ORDER OF THE COURT
Assistant Registrar

ಹವಾಮಾನ ಉಪಕರಣಗಳ ಪ್ರದರ್ಶನ ನಾಳೆ

ಬೆಂಗಳೂರು: ಹವಾಮಾನ ಇಲಾಖೆಯು 'ವಿಶ್ವ ಹವಾಮಾನ ದಿನ'ದ ಅಂಗವಾಗಿ ಹವಾಮಾನ ಉಪಕರಣಗಳ ಪ್ರದರ್ಶನವನ್ನು ಬುಧವಾರ ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ಅರಮನೆ ರಸ್ತೆಯಲ್ಲಿರುವ ಹವಾಮಾನ ಕೇಂದ್ರದಲ್ಲಿ ಆಯೋಜಿಸಿದೆ.

'ವಿಪತ್ತು ಮುನ್ನೆಚ್ಚರಿಕೆ, ಕ್ರಮ ಹಾಗೂ ಜಲಮಾಪನಶಾಸ್ತ್ರ, ಹವಾಮಾನ ಮಾಹಿತಿ' ವಿಷಯ ಕುರಿತು ಈ ವರ್ಷದ ಹವಾಮಾನ ದಿನ ಆಚರಿಸಲಾಗುತ್ತಿದೆ. ಸಾರ್ವಜನಿಕರಿಗೆ ಉಚಿತ ಪ್ರವೇಶ ಇರಲಿದೆ.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಸಿಎಸ್ಐಆರ್ ಸೆಂಟರ್ ಫಾರ್ ಮ್ಯಾಥಮೆಟಿಕಲ್ ಮಾಡಲಿಂಗ್ ಆ್ಯಂಡ್ ಕಂಪ್ಯೂಟರ್ ಸಿಮ್ಯುಲೇಷನ್‌ನ ವಿಜ್ಞಾನಿ ಕೃಷ್ಣ ಚಂದ್ರಗೌಡ ಭಾಗವಹಿಸಲಿದ್ದಾರೆ. ಬೆಂಗಳೂರು ಹವಾಮಾನ ಕೇಂದ್ರದ ಗೀತಾ ಅಗ್ನಿಹೋತ್ರಿ, ರಾಜವೇಲ್, ಅಮಲ್ ಕಾರ್ತಿಕೇಯನ್, ಸದಾನಂದ ಅಡಿಗ ಮಾತನಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಏ.11ಕ್ಕೆ ನಗರ ವಿ.ವಿ. ಘಟಿಕೋತ್ಸವ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಪ್ರಥಮ ವಾರ್ಷಿಕ ಘಟಿಕೋತ್ಸವವು ಏ.11ರಂದು ಬೆಳಿಗ್ಗೆ 11.30ಕ್ಕೆ ನಗರದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಜರುಗಲಿದೆ.ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧ್ಯಕ್ಷತೆ ವಹಿಸಲಿದ್ದಾರೆ. ಬಾಹ್ಯಾಕಾಶ ವಿಜ್ಞಾನಿ ಡಾ. ಕೆ. ಕಸ್ತೂರಿರಂಗನ್ ಅವರು ಘಟಿಕೋತ್ಸವ ಭಾಷಣ ಮಾಡಲಿದ್ದಾರೆ.

ಹಳಗನ್ನಡ ತರಗತಿ

ಬೆಂಗಳೂರು: ಬಿಎಂಶ್ರೀ ಪ್ರತಿಷ್ಠಾನವು ಏ.13ರಿಂದ ಹಳಗನ್ನಡ ತರಗತಿಗಳನ್ನು ಆರಂಭಿಸಲಿದೆ. 'ನಾಗಚಂದ್ರನ ಪಂಪ ರಾಮಾಯಣ ಸಂಗ್ರಹದ ಸಮಗ್ರ ಅಧ್ಯಯನ' ಪತ್ಯ ವಿಷಯವಾಗಿ ಆರು ತಿಂಗಳು ನಡೆಯಲಿರುವ ತರಗತಿಗಳಲ್ಲಿ ಕನ್ನಡ ವಿದ್ವಾಂಸರು ಬೋಧನೆ ಮಾಡಲಿದ್ದಾರೆ. ದೂರವಾಣಿ ಸಂಖ್ಯೆ 080-26615877 ಅಥವಾ ಇ-ಮೇಲ್ bmsritrust@gmail.com ಮೂಲಕ ಏ.10ರೊಳಗೆ ಹೆಸರು ನೋಂದಾಯಿಸಿಕೊಳ್ಳುವಂತೆ ಪ್ರಕಟಣೆ ತಿಳಿಸಿದೆ.

PUBLIC NOTICE

Our client intends to transact with the Schedule Property below mentioned.

Any person/s claiming to have any right, title and interest in the Schedule Property and/or any part thereof, is required to intimate the same, together with true copies of all documentary evidence/ proof in support thereof, to the undersigned, at the address given below, **within 07 (Seven)** days from the date of publication of this notice, failing which, our Certificate of Title will be issued without any reference to any such claim and the same, if any, shall be considered as waived and/or abandoned.

Schedule Property

All that piece and parcel of **converted lands** situated at Kaggalipura Village, Uttarahalli Hobli, Bengaluru South Taluk, Bengaluru District in the below mentioned survey numbers:

1. Survey No. 166/1, Measuring 2 Acres 09 Guntas excluding 02 Guntas of Kharab Land, and bounded on
East by: Land in Sy.No. 166/2;
West by: Land in Sy.No. 150 and Canal / Nala / Kaluve
North by: Road;
South by: Land in Sy.Nos. 167/4 and 167/1

2. Survey No. 166/2, Measuring 2 Acres 04 Guntas, and bounded on:
East by: Land in Sy.No. 165;
West by: Land in Sy.No. 166/1
North by: Road;
South by: Land in Sy.No. 167/1.

3. Survey No. 167/1, Measuring 34 Guntas, and bounded on:
East by: Portions of Sy.No. 171;
West by: Land in Sy.No. 167/4;
North by: Land in Sy.Nos. 166/1 & 166/2;
South by: Land in Sy.No. 167/2.

4. Survey No. 167/2, Measuring 26 Guntas, and bounded on:
East by: Portions of Sy.No. 171;
West by: Land in Sy.No. 167/3;
North by: Land in Sy.No. 167/1;
South by: Land in Sy.Nos. 168/1 & 168/2.

5. Survey No. 167/3, Measuring 25 Guntas, and bounded on:
East by: Land in Sy.No. 167/2;
West by: Land in Sy.No. 151;
North by: Land in Sy.No. 167/4;
South by: Land in Sy.No. 168/1.

All that piece and parcel of **agricultural land** bearing Survey No. 171/3, measuring 1 Acre 27 Guntas situated at Kaggalipura Village, Uttarahalli Hobli, Bengaluru South Taluk, Bengaluru District and bounded on:
East by: Kanakapura Road;
West by: Land in Sy.Nos. 167/1 and 167/2;
North by: Land in Sy.No. 165 and remaining portions of Sy. No.171;
South by: Portions of Sy. No.171.

Sowmya & Associates
Solicitors and Advocates
No.183, 5th Main,
8th Cross, Bull Temple Road,
NR Colony, Bangalore - 560 019

ರೈಲು ಗಾಲಿ ಕಾರ್ಖಾನೆ

ಯಲಹಂಕ, ಬೆಂಗಳೂರು – 560 064
ವೆಬ್‌ಸೈಟ್: www.rwf.indianrailways.gov.in

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯುಎಫ್/ಡಬ್ಲ್ಯು/21–22/20 ದಿನಾಂಕ: 19.03.2022

ಇ–ಟೆಂಡರ್: ಭಾರತದ ರಾಷ್ಟ್ರಪತಿಯವರ ಪರವಾಗಿ ಉಪ ಮುಖ್ಯ ಇಂಜಿನಿಯರ್ ಇವರು ಆನ್‌ಲೈನ್ ವೆಬ್‌ಸೈಟ್ http://www.ireps.gov.in (Works) ಮೂಲಕ ಕೆಳಗೆ ತಿಳಿಸಿರುವ ಕಾಮಗಾರಿಗಳಿಗೆ ಎಲೆಕ್ಟ್ರಾನಿಕ್ಸ್ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಟೆಂಡರ್ ಸಂ. / ವಿವರಣೆ	ಅಂದಾಜು ಮೌಲ್ಯ ರೂ. ಗಳಲ್ಲಿ
1	ಡಬ್ಲ್ಯು.496/ಆರ್‌ಡಬ್ಲ್ಯುಎಫ್/ವೈಎನ್‌ಕೆ/986 – ರೈಗಾಕಾ ಹಳೆಯ ಮತ್ತು ಹೊಸ ಪಿಸಿ ಬೇ ನಲ್ಲಿ ಆರ್‌ಸಿಸಿ / ಪಿಎಸ್‌ಸಿ ಕಟ್ಟಡಗಳಿಗೆ ಇಂಟರ್‌ಪೆನೆಟ್ರೇಟಿಂಗ್ ಪಾಲಿಮರ್ ನೆಟ್‌ವರ್ಕ್ ಕೋಟಿಂಗ್ ಸಿಸ್ಟಮ್ (IPNet) ಬಳಸಿಕೊಂಡು ರಕ್ಷಣಾತ್ಮಕ ಲೇಪನವನ್ನು ಒದಗಿಸುವುದು.	8122000.00
2	ಡಬ್ಲ್ಯು.496/ಆರ್‌ಡಬ್ಲ್ಯುಎಫ್/ವೈಎನ್‌ಕೆ/987 – **ಉಪ ಕಾಮಗಾರಿ–1:** ರೈಗಾಕಾ ಆವರಣದ ಒಳಗೆ ವಾರ್ಡ್–21/ಜಿಎಸ್‌ಡಿಗೆ ಹತ್ತಿಕೊಂಡಿರುವ ಅಸ್ತಿತ್ವದಲ್ಲಿರುವ ಗೋಡೌನ್ ಬದಲಿಗೆ ಇಎಂಎಂಎಸ್ ಎದುರುಗಡೆ ಸ್ಟೋರ್ಸ್ ಶೆಡ್‌ನ ನಿರ್ಮಾಣ. **ಉಪ ಕಾಮಗಾರಿ–2:** ರೈಗಾಕಾ ಕಾರ್ಖಾನೆ ಆವರಣದೊಳಗೆ ಹೊಸ ನೀರು ಸರಬರಾಜು ಮಾರ್ಗವನ್ನು ಒದಗಿಸುವುದು.	5297756.39
	ಕೊನೆಯ ದಿನಾಂಕ & ಸಮಯ: 18/04/2022, 11.00 ಗಂಟೆಗೆ	

ಈ ಟೆಂಡರ್ ಸೂಚನೆಯನ್ನು ನಮ್ಮ ವೆಬ್‌ಸೈಟ್– www.rwf.indianrailways.gov.in ನಲ್ಲಿ ವೀಕ್ಷಿಸಬಹುದು.

ಉಪ ಮುಖ್ಯ ಇಂಜಿನಿಯರ್

केन्द्रीय विद्यालय संगठन

18 संस्थागत क्षेत्र, शहीद जीत सिंह मार्ग, नई दिल्ली–110016

KENDRIYA VIDYALAYA SANGATHAN (HQ)
18, INSTITUTIONAL AREA, SHAHEED JEET SINGH MARG, NEW DELHI-110016

Extension Notice for Admission: 2022-23

The last date for Online Registration for Admission to Class I in Kendriya Vidyalayas for the Academic Year 2022-23 has been extended upto **11.04.2022 (Monday) 07:00 pm.** Accordingly, the Online Registration, which has commenced on 28.02.2022, will now close at **07:00 pm on 11.04.2022.** The other contents of the said admission notice 2022-23 will remain unchanged.

केन्द्रीय विद्यालय संगठन

18 संस्थागत क्षेत्र, शहीद जीत सिंह मार्ग, नई दिल्ली–110016

KENDRIYA VIDYALAYA SANGATHAN (HQ)
18, INSTITUTIONAL AREA, SHAHEED JEET SINGH MARG, NEW DELHI-110016

प्रवेश सम्बन्धी विस्तारण सूचना 2022-23

शैक्षणिक सत्र 2022-23 के लिए केंद्रीय विद्यालयों में कक्षा 1 में प्रवेश के लिए ऑनलाइन पंजीकरण की अंतिम तिथि **11.04.2022** तक बढ़ाई जाती है| तदनुसार, केंद्रीय विद्यालयों में कक्षा 1 में प्रवेश के लिए ऑनलाइन पंजीकरण, जो दिनांक 28.02.2022 को शुरू हुआ था, अब **11.04.2022 सांय 07:00 बजे** तक किया जा सकेगा। प्रवेश सूचना 2022-23 की अन्य दिशा-निर्देश यथावत रहेंगें |

ಭಾರತೀಯ ಸ್ಟೇಟ್ ಬ್ಯಾಂಕ್

ಒತ್ತಡಗ್ರಸ್ತ ಆಸ್ತಿಗಳ ನಿರ್ವಹಣಾ ಶಾಖೆ (ಎಸ್ಎಎಂಬಿ-II), ಹೈದರಾಬಾದ್

ಅಧಿಕೃತ ಅಧಿಕಾರಿಗಳ ವಿವರ :
ಹೆಸರು : ಶ್ರೀ ಬಿ. ವಿ. ರಂಗಧಾಮ್,
ಸಹಾಯಕ ಮಹಾ ಪ್ರಬಂಧಕರು
E-mail ID: sbi.18359@sbi.co.in
ಮೊಬೈಲ್ : 9010443800/9010618880

ಶಾಖೆಯ ವಿಳಾಸ : ಡಿ. ನಂ. 3-4-1013/ಎ
1ನೇ ಮಹಡಿ, CAC, TSRTC ಬಸ್ ನಿಲ್ದಾಣ
ಕಾಚಿಗುಡ, ಹೈದರಾಬಾದ್,
E-mail ID: sbi.18359@sbi.co.in

ಅಪೆಂಡಿಕ್ಸ್ - IV ಎ

[ನಿಯಮ 8(6) ಮತ್ತು 9(1)ರ ನಿಬಂಧನೆಯ ಅನ್ವಯ]

ಸ್ಥಿರಾಸ್ತಿಯ ಮಾರಾಟಕ್ಕಾಗಿ ಮಾರಾಟ ಸೂಚನೆ

ಸೆಕ್ಯುರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002 ಮತ್ತು ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ನಿಯಮ 8(6) ಮತ್ತು 9(1)ರ ನಿಬಂಧನೆಗಳನ್ನು ಓದಿಕೊಂಡಂತೆ ಇದರ ಅನ್ವಯ ಸ್ಥಿರಾಸ್ತಿಯ (ಚರಾಸ್ತಿಗಳು ಏನಾದರೂ ಇದ್ದಲ್ಲಿ ಅದನ್ನು ಹೊರತುಪಡಿಸಿ) ಇ-ಹರಾಜು ಮಾರಾಟ ಸೂಚನೆ

ನಿರ್ದಿಷ್ಟವಾಗಿ ಸಾಲಗಾರರಿಗೆ/ಜಾಮೀನುದಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರ್‌ರಾದ ಭಾರತೀಯ ಸ್ಟೇಟ್ ಬ್ಯಾಂಕ್, ಇವರಿಗೆ ಅಡಮಾನ/ ಚಾರ್ಜ್ ಮಾಡಿರುವ ಈ ಕೆಳಗೆ ವಿವರಿಸಿರುವ ಆಸ್ತಿಗಳನ್ನು ಬ್ಯಾಂಕಿನ ಅಧಿಕೃತ ಅಧಿಕಾರಿಯವರು ರಚನಾತ್ಮಕವಾಗಿ ಸ್ವಾಧೀನ್ಯಕ್ಕೆ ಪಡೆದುಕೊಂಡಿದ್ದು ಅದನ್ನು 'ಎಲ್ಲಿ ಹೇಗಿದೆಯೊ ಹಾಗೆ' ಮತ್ತು 'ಎಲ್ಲಿ ಏನಿದೆಯೋ ಹಾಗೆ' ಮತ್ತು 'ಅಲ್ಲಿ ಏನಿದೆಯೋ ಹಾಗೆ ' ಆಧಾರದ ಮೇಲೆ ಭಾರತೀಯ ಸ್ಟೇಟ್ ಬ್ಯಾಂಕ್, ಇವರಿಗೆ ಸಾಲಗಾರರು/ಅಡಮಾನುದಾರರಾದ **ಮೆ।। ಕೋಸ್ಟಲ್ ಪ್ರಾಜೆಕ್ಟ್ಸ್ ಲಿಮಿಟೆಡ್**, ಪ್ರತಿನಿಧಿಸುವವರು ಇದರ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎಸ್. ಸುರೇಂದ್ರ, S/o ಎಸ್. ಪಾಪಯ್ಯ, ನೋಂದಾಯಿತ ಕಚೇರಿ: 237, 2ನೇ ಮಹಡಿ, ಬಾಪೂಜಿ ನಗರ, ಭುಬನೇಶ್ವರ್– 751 009 ಮತ್ತೊಂದು ವಿಳಾಸ: **ಮೆ।। ಕೋಸ್ಟಲ್ ಪ್ರಾಜೆಕ್ಟ್ಸ್ ಲಿಮಿಟೆಡ್**, ಪ್ರತಿನಿಧಿಸುವವರು ಇದರ ವ್ಯವಸ್ಥಾಪಕ ನಿರ್ದೇಶಕರಾದ **ಶ್ರೀ ಎಸ್. ಸುರೇಂದ್ರ** S/o ಎಸ್. ಪಾಪಯ್ಯ, ಪ್ಲಾಟ್ ನಂ. 304–ಒ, ಫಿಲಂ ನಗರ, ಜೂಬ್ಲಿ ಹಿಲ್ಸ್, ಹೈದರಾಬಾದ್ – 500 033, ಮತ್ತು **ಜಾಮೀನುದಾರರಾದ** , 1) ಶ್ರೀ ಎಸ್. ಸುರೇಂದ್ರ, S/o ಎಸ್. ಪಾಪಯ್ಯ, 2) **ಶ್ರೀ ಜಿ. ಹರಿಹರ ರಾವ್**, 3) **ಶ್ರೀ ಕೆ. ವಿ. ಜಯಪ್ರಕಾಶ್** S/o ಶ್ರೀ ಕೆ. ವಿಶ್ವನಾಥ ಶೆಟ್ಟಿ, 4) **ಮೆ. ಗ್ರಾಂಡ್ಯೂರ್ ಪವರ್ ಪ್ರಾಜೆಕ್ಟ್ಸ್ ಪ್ರೈ. ಲಿ., 5) ಮೆ।। ಕೆಬ್ಬಿ ಹೈಡ್ರೊ ಪವರ್ ಪ್ರೈ. ಲಿ., 6) ಮೆ।। ಬಡಾವೊ ಹೈಡ್ರೊ ಪವರ್ ಪ್ರೈ. ಲಿ., 7) ಕೋಸ್ಟಲ್ ಟ್ರಾನ್ಸೇಷನಲ್ ವೆಂಚರ್ಸ್(ಸಿವೈ) ಲಿಮಿಟೆಡ್, 8) ಮೆ।। ನೇಪಾಳ್‌ಜಲಬಿದ್ಯುತ್‌ಪ್ರವರ್ಧನ್ ತಥಾ ಬಿಕಾಸ್ ಲಿಮಿಟೆಡ್, 9) ಮೆ।। ಪಾರಾ ಹೈಡ್ರೊ ಪವರ್ ಪ್ರೈ. ಲಿ.**, ಇವರಿಂದ ಬರಬೇಕಾದ ಬಾಕಿ ಮೊತ್ತ ರೂ.2402,36,19,384/- (ರೂಪಾಯಿ ಎರಡು ಸಾವಿರದ ನಾಲ್ಕು ನೂರ ಎರಡು ಕೋಟಿ ಮೂವತ್ತಾರು ಲಕ್ಷದ ಹತ್ತೊಂಬತ್ತು ಸಾವಿರದ ಮುನ್ನೂರ ಎಂಬತ್ತ ನಾಲ್ಕು ಮಾತ್ರ) ದಿನಾಂಕ 30.09.2021 ರಂತೆ ಮತ್ತು ದಿನಾಂಕ .01.10.2021ರಿಂದ ಒಪ್ಪಂದದ ದರದಲ್ಲಿ ಬಡ್ಡಿ+ಸಾಂದರ್ಭಿಕ ಖರ್ಚು, ವೆಚ್ಚ ಇತ್ಯಾದಿಗಳ ವಸೂಲಿಗಾಗಿ ದಿನಾಂಕ **08.04.2022** ರಂದು ಮಾರಾಟ ಮಾಡಲಾಗುವುದು.

ಸೂಚನೆ : ಶ್ರೀ ಕೆ.ವಿ. ಜಯಪ್ರಕಾಶ್ ಇವರ ಬಾಕಿಯನ್ನು ರೂ.164.06 ಕೋಟಿ + ದಿನಾಂಕ 26.06.2014ರಿಂದ ಬಡ್ಡಿ ಮತ್ತು ಖರ್ಚು ಹಾಗೂ ಇತರ ವೆಚ್ಚಗಳಿಗೆ ಮಿತಿಗೊಳಿಸಲಾಗಿದೆ.

ಆಸ್ತಿಗಳ ವಿವರ

Property ID No. : SBIN200005380534

ಲಾಟ್ ನಂ. 1 : ವಾರ್ಡ್ ನಂ. 12, ಯಲಹಂಕ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತಾತ್ಮಕ ಕಾನೂನು ವ್ಯಾಪ್ತಿ) , ಸರ್ವೆ ನಂ. 153ರಲ್ಲಿರುವ 5 ಎಕರೆ 10ಗುಂಟೆ ಅಳತೆಯ ಜಮೀನು ಶ್ರೀ ಕೆ .ವಿ. ಜಯಪ್ರಕಾಶ್‌ರವರ ಹೆಸರಿಗೆ ಕ್ರಯ ಪತ್ರ ದಿನಾಂಕ 12.05.2005 ದಾಖಲೆ ನಂ. 3168/2005–06ರಂತೆ ನೋಂದಣಿಯಾಗಿದ್ದು ಈ ಆಸ್ತಿಯ ಚಕ್ಕುಬಂದಿ: ಉತ್ತರಕ್ಕೆ : ಸರ್ವೆ ನಂ. 152/5ರಲ್ಲಿರುವ ಜಮೀನು, ದಕ್ಷಿಣಕ್ಕೆ : ಸರ್ವೆ ನಂ. 153ರಲ್ಲಿರುವ ಉಳಿದ ಜಮೀನು, ಪೂರ್ವಕ್ಕೆ: ಸರ್ವೆ ನಂ. 152/7 ಮತ್ತು 152/6 ರಲ್ಲಿರುವ ಜಮೀನು, ಪಶ್ಚಿಮಕ್ಕೆ : ಅಲ್ಲಾಳಸಂದ್ರ ರಸ್ತೆ (ಓಣಿ).

ಲಾಟ್ ನಂ. 2 ವಾರ್ಡ್ ನಂ. 12, ಯಲಹಂಕ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತಾತ್ಮಕ ಕಾನೂನು ವ್ಯಾಪ್ತಿ) ,ಸರ್ವೆ ನಂ. 152/1ಬಿ, 152/2ಎ, 152/2ಬಿ, 152/3ಎ, 152/3ಬಿ, 152/4ಎ, 152/4ಬಿ, 152/5ಎ, 152/5ಬಿ, 152/6ಎ, 152/6ಬಿ, 152/7ಎ, 152/7ಬಿ, 152/10ಎ ಮತ್ತು 152/10ಬಿ ರಲ್ಲಿರುವ ಒಟ್ಟು 8ಎಕರೆ 28 ಗುಂಟೆ ಅಳತೆಯ ಜಮೀನು ಶ್ರೀ ಕೆ .ವಿ. ಜಯಪ್ರಕಾಶ್‌ರವರ ಹೆಸರಿಗೆ ಕ್ರಯ ಪತ್ರ ದಿನಾಂಕ 29.12.2005 ದಾಖಲೆ ನಂ. 9356/2005–06ರಂತೆ ನೋಂದಣಿಯಾಗಿದ್ದು ಈ ಆಸ್ತಿಯ ಚಕ್ಕುಬಂದಿ: ಉತ್ತರಕ್ಕೆ: ಪೊಲೀಸ್ ಕ್ವಾರ್ಟರ್ಸ್ ಮತ್ತು ಸರ್ವೆ ನಂ. 152/1ಎ, ದಕ್ಷಿಣಕ್ಕೆ ಸರ್ವೆ ನಂ. 153 ಮತ್ತು ಅಲ್ಲಸಂದ್ರ ಗಡಿ, ಪೂರ್ವಕ್ಕೆ: ಸರ್ವೆ ನಂ. 152/8 ಮತ್ತು 152/9 ಪಶ್ಚಿಮಕ್ಕೆ : ಅಲ್ಲಸಂದ್ರ ಓಣಿ ಮತ್ತು ಎಲ್‌ಬಿಎಸ್ ನಗರ ಸರ್ವೆ ನಂ. 153.

ಕ್ರ. ಸಂ.	ಮಾರಾಟಕ್ಕಿರುವ ಆಸ್ತಿ	ಆಸ್ತಿಯ ಇ-ಹರಾಜಿನ ದಿನಾಂಕ ಮತ್ತು ಸಮಯ	ಮೀಸಲು ಬೆಲೆ (ಈ ಮೊತ್ತಕ್ಕಿಂತ ಕಡಿಮೆ ಬೆಲೆಗೆ ಆಸ್ತಿಯನ್ನು ಮಾರಾಟ ಮಾಡಲಾಗುವುದಿಲ್ಲ (ರೂ.ಗಳಲ್ಲಿ)	ಮುಂಗಡ ಠೇವಣಿ (ಇಎಂಡಿ) (ರೂ.ಗಳಲ್ಲಿ)	ಬಿಡ್ ಗುಣಾಂಕ (ರೂ.ಗಳಲ್ಲಿ)
1	ಲಾಟ್ ನಂ. 1 ಮತ್ತು 2 ಒಟ್ಟಿಗೆ	08.04.2022 ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.00 ಗಂಟೆ	135,00,00,000/-	13,50,00,000/-	50,00,000/-

ಬಿಡ್ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : 07.04.2022 ಸಂಜೆ 5.00 ಗಂಟೆವರೆಗೆ
ಆಸ್ತಿಗಳನ್ನು ವೀಕ್ಷಿಸಲು ಕೊನೆಯ ದಿನಾಂಕ ಮತ್ತು ಸಮಯ : ಮುಂಚಿತವಾಗಿ ಸಮಯವನ್ನು ನಿಗದಿಪಡಿಸಿಕೊಂಡು ದಿನಾಂಕ 07.04.2022ರವರೆಗೆ ಯಾವುದೇ ದಿನದಂದು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 4.00 ಗಂಟೆವರೆಗೆ

ಇಎಂಡಿ ಪಾವತಿ	ಆಸಕ್ತ ಖರೀದಿದಾರರು ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು INDIAN BANKS AUCTION PROPERTIES INFORMATION (IBAPI) PORTAL (https:/ www. mstcecommerce.com/auctionhome/ibapi/index.jsp) ನ https://ibapi. ನಲ್ಲಿ ನೊಂದಾಯಿಸಿಕೊಳ್ಳಬೇಕು. ಬಿಡ್ಡರ್‌ಗಳ ನೊಂದಣಿಗೆ ಕನಿಷ್ಟ ಮೂರು ಕೆಲಸದ ದಿನಗಳು ಬೇಕಾಗುವುದರಿಂದ ಬಿಡ್ಡರ್‌ಗಳು ಹರಾಜು ಮಾರಾಟದ ಮೊದಲು ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕು. ಸಂಭಾವ್ಯ ಬಿಡ್ಡರ್‌ಗಳು ಇಎಂಡಿ ಮೊತ್ತವನ್ನು IBAPI ಪೋರ್ಟಲ್‌ನ IBAPI wallet ಗೆ ಅವರ ಬ್ಯಾಂಕ್ ಖಾತೆಯ ಮೂಲಕ ಪಾವತಿಸಬೇಕು.

ಆಸ್ತಿಯ ವೀಕ್ಷಣೆಗೆ ಮತ್ತು ಇತರ ಸ್ಪಷ್ಟೀಕರಣಕ್ಕೆ ಆಸಕ್ತ ಖರೀದಿದಾರರು ಅಧಿಕೃತ ಅಧಿಕಾರಿಯವರನ್ನು ಫೋನ್ ಮುಖಾಂತರ ಸಂಪರ್ಕಿಸಬಹುದು ಅಥವಾ ಬ್ಯಾಂಕಿನ ಅನುಮೋದಿತ ಸೇವಾ ಪೂರೈಕೆದಾರರಾದ **ಮೆ. ಗುಡ್‌ವಿಲ್ ಅಸೋಸಿಯೇಟ್ಸ್, ಸೆಲ್ ನಂ. 9949901281 ಅಥವಾ 9886728350 ಇವರನ್ನು ಸಂಪರ್ಕಿಸಬಹುದು.**

ಸೂಚನೆ : ಈ ನೋಟೀಸು ಸದರಿ ಸಾಲದ ಸಾಲಗಾರರಿಗೆ / ಜಾಮೀನುದಾರರಿಗೆ ಒಂದು ವೇಳೆ ಇ–ಹರಾಜು ಮಾರಾಟದ ದಿನಾಂಕದ ಮೊದಲು ನೀಡಬೇಕಾಗಿರುವ ಬಾಕಿ ಮೊತ್ತವನ್ನು ಪೂರ್ತಿಯಾಗಿ ಪಾವತಿಸದಿದ್ದಲ್ಲಿ ಮೇಲೆ ಸೂಚಿಸಿರುವ ಆಸ್ತಿಯನ್ನು ಮೇಲ್ಕಂಡ ದಿನಾಂಕದಂದು ಇ–ಹರಾಜು ಮಾರಾಟ ಮಾಡುವ ನೋಟೀಸು ಸಹ ಆಗಿರುತ್ತದೆ.

ಹರಾಜು ಮಾರಾಟದ ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ ಸೆಕ್ಯೂರ್ಡ್ ಕ್ರೆಡಿಟರ್ ಆದ ಭಾರತೀಯ ಸ್ಟೇಟ್ ಬ್ಯಾಂಕ್ ರವರ ವೆಬ್‌ಸೈಟ್‌ನಲ್ಲಿ ನೀಡಿರುವ ಲಿಂಕ್‌ಗಳಲ್ಲಿ (a) "http://www.sbi.co.in" (b) https://ibapi.in ನಲ್ಲಿ ವೀಕ್ಷಿಸಬಹುದು

ಸೂಚನೆ : ಉಪಭೋಗದ ಹಕ್ಕುಗಳಿಗಾಗಿ ಬ್ಯಾಂಕ್ ಒ.ಎಸ್. ನಂ. 5937/2021ನಲ್ಲಿ 11ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ಜಡ್ಜ್, ನ್ಯಾಯಾಲಯ, ಬೆಂಗಳೂರು ಇವರ ಮುಂದೆ ಸಲ್ಲಿಸಿರುವ ಅರ್ಜಿಯ ವಿಚಾರಣೆಯು ಬಾಕಿ ಇರುತ್ತದೆ.

ದಿನಾಂಕ : 21.03.2022
ಸ್ಥಳ : ಹೈದರಾಬಾದ್

ಸಹಿ/–
ಅಧಿಕೃತ ಅಧಿಕಾರಿ

12x22

'ಜನ ಪರ್ಯಾಯ ಬಜೆಟ್ ಅಧಿವೇಶನ' ಕಾರ್ಯಕ್ರಮ

ಎಂಎಸ್‌ಪಿ ಜಾರಿಗೆ ಆಗ್ರಹಿಸಿ ಏಪ್ರಿಲ್‌ನಲ್ಲಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಸಂಯುಕ್ತ ಕಿಸಾನ್ ಮೋರ್ಚಾದ ನಾಯಕ ಯೋಗೇಂದ್ರ ಯಾದವ್ ಅವರು ನಗಾರಿ ಬಾರಿಸುವ ಮೂಲಕ ಸಮಾವೇಶ ಉದ್ಘಾಟಿಸಿದರು. (ಎಡದಿಂದ) ರೈತ ಮುಖಂಡ ಬಡಗಲಪುರ ನಾಗೇಂದ್ರ, ಸಂಯುಕ್ತ ಕಿಸಾನ್ ಮೋರ್ಚಾ ನಾಯಕಿ ಕವಿತಾ ಕುರಗುಂಟಿ, ರೈತ ಮುಖಂಡರಾದ ಜೆ.ಸಿ.ಬಯ್ಯಾರೆಡ್ಡಿ, ಎಚ್.ವಿ.ದಿವಾಕರ್, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಮಿತಿ ಅಧ್ಯಕ್ಷೆ ದೇವಿ ಹಾಗೂ ಎಐಟಿಯುಸಿಯ ಕೆ.ವಿ.ಭಟ್ ಇದ್ದಾರೆ –ಪ್ರಜಾವಾಣಿ ಚಿತ್ರ

ಬೆಂಗಳೂರು:'ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಜಾರಿ ಸಂಬಂಧ ಸಮಿತಿ ರಚಿಸುವುದಾಗಿ ಹೇಳಿದ್ದ ಕೇಂದ್ರ ಸರ್ಕಾರ ಅದನ್ನು ಮರೆತಿದೆ. ಎಂಎಸ್‌ಪಿ ನಮ್ಮ ಹಕ್ಕು. ಅದರ ಅನುಷ್ಠಾನಕ್ಕೆ ಒತ್ತಾಯಿಸಿ ಏಪ್ರಿಲ್ 11 ರಿಂದ 17ರ ವರೆಗೆ ದೇಶದಾದ್ಯಂತ ಪ್ರತಿಭಟನೆ ನಡೆಸುತ್ತೇವೆ' ಎಂದು ಸಂಯುಕ್ತ ಕಿಸಾನ್ ಮೋರ್ಚಾ ನಾಯಕ ಯೋಗೇಂದ್ರ ಯಾದವ್ ತಿಳಿಸಿದರು.

ಸಂಯುಕ್ತ ಹೋರಾಟ–ಕರ್ನಾಟಕ ಹಮ್ಮಿಕೊಂಡಿದ್ದ 'ಜನ ಪರ್ಯಾಯ ಬಜೆಟ್ ಅಧಿವೇಶನ' ಕಾರ್ಯಕ್ರಮ ಉದ್ಘಾಟಿಸಿ ಸೋಮವಾರ ಮಾತನಾಡಿದರು.

'ಎಂಎಸ್‌ಪಿ ಹಿಂದೆಯೂ ಇತ್ತು, ಈಗಲೂ ಇದೆ, ಮುಂದೆಯೂ ಇರಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳುತ್ತಿದ್ದಾರೆ. ಹಾಗಾದರೆ ಅದು ಎಲ್ಲಿದೆ. ಕರ್ನಾಟಕದ ಮಾರುಕಟ್ಟೆಯಲ್ಲಿ ರಾಗಿ ಹಾಗೂ ಭತ್ತದ ಬೆಲೆ ಎಷ್ಟಿದೆ ಎಂಬುದು ಮೋದಿಯವರಿಗೆ ಗೊತ್ತಿದೆಯೇ' ಎಂದು ಪ್ರಶ್ನಿಸಿದರು. 'ಸಣ್ಣ ಮತ್ತು ಅತಿ ಸಣ್ಣ ರೈತರು ನೆಮ್ಮದಿಯ ಬದುಕು ನಡೆಸಬೇಕು. ಅದಕ್ಕೆ ಪೂರಕ ವಾತಾವರಣ ಸೃಷ್ಟಿಸುವ ಅಗತ್ಯವಿದೆ. ಸಂಘಟನೆಗಳು ಕೇವಲ ಆರ್ಥಿಕ ವಾದಕ್ಕೆ ಕಟ್ಟುಬೀಳದೆ, ಭವಿಷ್ಯ ರೂಪಿಸಲು ಅಗತ್ಯವಿರುವ ಪರ್ಯಾಯ ಕಣ್ನೋಟ ಬೆಳೆಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

> **ರಾಜ್ಯ ಸರ್ಕಾರ ರೈತರ ತಾಳ್ಮೆ ಪರೀಕ್ಷಿಸಬಾರದು. ಬಸವರಾಜ ಬೊಮ್ಮಾಯಿ ಅವರು ಕೃಷಿ, ಎಪಿಎಂಸಿ ತಿದ್ದುಪಡಿ, ಗೋ ಹತ್ಯೆ ನಿಷೇಧದಂತಹ ಕಾಯ್ದೆಗಳನ್ನು ರದ್ದುಮಾಡಬೇಕು**
>
> **ಕವಿತಾ ಕುರಗುಂಟಿ,**
> ಸಂಯುಕ್ತ ಕಿಸಾನ್ ಮೋರ್ಚಾ ನಾಯಕಿ

'ದೆಹಲಿಯ ರೈತ ಚಳವಳಿ ದೇಶದ ರೈತರಲ್ಲಿ ಸ್ವಾಭಿಮಾನ ಬೆಳೆಸಿದೆ. ಒಗ್ಗಟ್ಟು ಮೂಡಿಸಿದೆ. ಇದನ್ನು ಕಾಪಾಡಿಕೊಂಡು ಹೋಗ ಬೇಕು. ರಾಜಕೀಯ ಅಧಿಕಾರವು ರೈತರ ಬಹು ದೊಡ್ಡ ಅಸ್ತ್ರ. ಅದನ್ನು ಹೇಗೆ ಚಲಾಯಿಸಬೇಕು ಎಂಬುದನ್ನು ಎಲ್ಲರೂ ಕಲಿಯಬೇಕು. ರೈತ ಚಳವಳಿ ಮೂಲಕ ನಾವು ಸಾಧಿಸಿರುವ ಯಶಸ್ಸು ರಾಜಕೀಯ ಪಕ್ಷಗಳಿಗೆ ಪಾಠವಾಗಿದೆ' ಎಂದರು.

'ಕೆಲ ಸ್ನೇಹಿತರು ನಮ್ಮ ಸಲಹೆ ಧಿಕ್ಕರಿಸಿ ಪಂಜಾಬ್ ಹಾಗೂ ಉತ್ತರ ಪ್ರದೇಶ ಚುನಾವಣೆಗಳಲ್ಲಿ ಸ್ಪರ್ಧಿಸಿ ಸೋತಿದ್ದಾರೆ. ಶಾಸಕ, ಮುಖ್ಯಮಂತ್ರಿಯ ಆಯ್ಕೆಯಷ್ಟೇ ನಮ್ಮ ಗುರಿಯಾಗಬಾರದು. 2024ರಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ರೈತರ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಚುನಾವಣೆ ಎದುರಿಸುವಂತಾಗಬೇಕು. ಆ ರೀತಿ ದೇಶದ ರಾಜಕೀಯವನ್ನು ರೈತರು ಪ್ರಭಾವಿಸಬೇಕು' ಎಂದು ಹೇಳಿದರು.

ಪ್ರಮುಖ ಬೇಡಿಕೆಗಳು

- ಉದ್ಯೋಗ ಭದ್ರತೆ ಹಾಗೂ ಕನಿಷ್ಠ ₹21 ಸಾವಿರ ವೇತನ ಸಾರ್ವತ್ರಿಕಗೊಳಿಸಬೇಕು
- ಮಹಿಳೆಯರು ಹಾಗೂ ದಲಿತರ ಮೇಲಿನ ದೌರ್ಜನ್ಯ ತಡೆಗಟ್ಟಬೇಕು
- ಎಸ್.ಸಿ.ಪಿ–ಟಿ.ಎಸ್.ಪಿ.ಅಭಿವೃದ್ಧಿ ನಿಧಿಯ ದುರ್ಬಳಕೆ ತಡೆಯಬೇಕು
- ಸರ್ಕಾರಿ ಹಾಗೂ ಅರಣ್ಯ ಭೂಮಿಯಲ್ಲಿ ಉಳುಮೆ ಅಥವಾ ವಾಸವಿರುವ ಬಡವರಿಗೆ ಭೂಮಿ ಅಥವಾ ವಸತಿ ಮಂಜೂರು ಮಾಡಬೇಕು
- ವಿದ್ಯಾರ್ಥಿ ವಿರೋಧಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಹಿಂಪಡೆಯಬೇಕು
- ಉದ್ಯೋಗ ಸೃಷ್ಟಿ ಕುರಿತ ಸಮಗ್ರ ಯೋಜನೆ ಜಾರಿಗೊಳಿಸಬೇಕು

ಮಳೆಯಲ್ಲೇ ಧರಣಿ ಮುಂದುವರಿಸಿದ ಸ್ವಾಮೀಜಿ

ಬೆಂಗಳೂರು: 'ವಾಲ್ಮೀಕಿ ಸಮುದಾಯಕ್ಕೆ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಶೇ 7.5ರಷ್ಟು ಮೀಸಲಾತಿ ನೀಡಬೇಕು' ಎಂದು ಆಗ್ರಹಿಸಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಅವರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ಮಳೆಯಲ್ಲೂ ಮುಂದುವರಿಸಿದ್ದಾರೆ.

'ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ವರದಿಯ ಶಿಫಾರಸುಗಳನ್ನು ಜಾರಿಗೆ ತರಬೇಕು' ಎಂಬುದು ಸೇರಿದಂತೆ ಹಲವು ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಸ್ವಾಮೀಜಿಯವರು ಸ್ವಾತಂತ್ರ್ಯ ಉದ್ಯಾನದಲ್ಲಿ 40 ದಿನಗಳಿಂದ ಸತ್ಯಾಗ್ರಹ ನಡೆಸುತ್ತಿದ್ದಾರೆ.

ನಗರದಲ್ಲಿ ಕೆಲದಿನಗಳಿಂದ ಮಳೆ ಸುರಿಯುತ್ತಿದ್ದು, ಉದ್ಯಾನದ ಸ್ಥಳ ಬಿಟ್ಟು ಸ್ವಾಮೀಜಿ ಕದಲಿಲ್ಲ. ಹನಿ ಹನಿ ಸೋರುತ್ತಿರುವ ಪೆಂಡಾಲ್ ಒಳಗೆಯೇ ಕುಳಿತಿದ್ದಾರೆ. 'ಸಮುದಾಯಕ್ಕೆ ನ್ಯಾಯ ಸಿಗುವವರೆಗೂ ಸತ್ಯಾಗ್ರಹ ಕೈಬಿಡುವುದಿಲ್ಲ' ಎಂದು ಸ್ವಾಮೀಜಿ ಪಟ್ಟು ಹಿಡಿದಿದ್ದಾರೆ.

ಮಳೆಯಲ್ಲಿ ಸ್ವಾಮೀಜಿ ನಡೆ ಸುತ್ತಿರುವ ಸತ್ಯಾಗ್ರಹದ ವಿಡಿಯೊವನ್ನು ಭಕ್ತರೊಬ್ಬರು ಚಿತ್ರೀಕರಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿಯಬಿಟ್ಟಿದ್ದಾರೆ.

ವಿಡಿಯೊ ಹಂಚಿಕೊಂಡಿರುವ ವಾಲ್ಮೀಕಿ ಸಮುದಾಯದ ಮುಖಂಡರು, 'ಬಿಸಿಲು ಮಳೆಯಲ್ಲಿ ಸ್ವಾಮೀಜಿ ಧರಣಿ ಕುಳಿತಿದ್ದಾರೆ. 40 ದಿನ ವಾದರೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸ್ವಾಮೀಜಿ ಬಳಿ ಬಂದು ಬೇಡಿಕೆ ಆಲಿಸಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

'ಕನ್ನಡ ಶಾಸನಗಳು' ಸಂಪುಟವನ್ನು (ಎಡದಿಂದ ಐದನೆಯವರು) ಎಚ್.ಎಸ್.ಶಿವಪ್ರಕಾಶ್ ಅವರು ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಿದರು. (ಎಡದಿಂದ) ಎನ್‌ಎಂಕೆಆರ್‌ವಿ ಕಾಲೇಜಿನ ಪ್ರಾಂಶುಪಾಲರಾದ ಸ್ನೇಹಲತಾ ನಾಡಿಗೇರ್, ಶ್ರೀನಿವಾಸ್ ಐತಾಳ್, ಎಚ್.ಎಸ್.ಗೋಪಾಲರಾವ್, ರವಿ ಕೋರಿಶೆಟ್ಟರ್, ಷ.ಶೆಟ್ಟರ್ ಅವರ ಪತ್ನಿ ಪ್ರೇಮಲತಾ ಶೆಟ್ಟರ್, ಪ್ರೊ.ಶಾರದಾ ಶ್ರೀನಿವಾಸನ್, ಪ್ರಿಯಾ ರವಿಶಂಕರ್, 'ಸುರಗಿ' ಕನ್ನಡ ವಿಭಾಗದ ಮುಖ್ಯಸ್ಥೆ ಸಂಧ್ಯಾ ಹೆಗಡೆ ಇದ್ದಾರೆ

ಇತಿಹಾಸ ರಚನೆಗೆ ಕಾವ್ಯ ರೂಪ ನೀಡಿದ ಷ.ಶೆಟ್ಟರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲಿಪಿಯ ಬಗ್ಗೆ ಜನರಿಗೆ ಹೆಚ್ಚಿನ ಮಾಹಿತಿ ಇರಲಿಲ್ಲ. ಇತಿಹಾಸಕಾರ ದಿವಂಗತ ಷ.ಶೆಟ್ಟರ್ ಅವರ ಪುಸ್ತಕಗಳು ಲಿಪಿಯ ಕುರಿತು ಜನರಲ್ಲಿ ಆಸಕ್ತಿ ಹೆಚ್ಚಿಸಿವೆ. ಇತಿಹಾಸ ರಚನೆಯ ನಿಯಮ ಅನುಸರಿಸಿ, ಅದಕ್ಕೆ ಕಾವ್ಯ ರೂಪ ನೀಡಿದವರು ಶೆಟ್ಟರ್' ಎಂದು ಕವಿ ಎಚ್.ಎಸ್.ಶಿವಪ್ರಕಾಶ್ ಹೇಳಿದರು.

ಅಭಿನವ ಸಂಸ್ಥೆ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ ಹಾಗೂ ಎನ್‌ಎಂಕೆಆರ್‌ವಿ ಮಹಿಳಾ ಕಾಲೇಜಿನ ಕನ್ನಡ ವಿಭಾಗಗಳ ಸಹಯೋಗದಲ್ಲಿ ಸೋಮವಾರ ಆಯೋಜಿಸಿದ್ದ ಇತಿಹಾಸಕಾರ ದಿವಂಗತ ಷ.ಶೆಟ್ಟರ್ ಅವರ 'ಮೊದಲ ಸಹಸ್ರಮಾನದ ಕನ್ನಡ ಶಾಸನಗಳು' ಸಂಪುಟಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಶೆಟ್ಟರ್ ಅವರು ರಚಿಸಿದ ಅನೇಕ ಪುಸ್ತಕಗಳು ಉನ್ನತ ಶಿಕ್ಷಣ ಮತ್ತು ಸಂಶೋಧನೆಗೆ ಸೀಮಿತವಾಗದೆ, ಜನರ ಕೌತುಕದ ಪ್ರಶ್ನೆಗಳಿಗೂ ಉತ್ತರಿಸುವಂತಿವೆ.' ಎಂದು ಹೇಳಿದರು.

'ಪದಗಳನ್ನು ಓದುವ ಬದಲು ಪದಾರ್ಥಗಳನ್ನು ಹುಡುಕಿ ಜನರಿಗೆ ತಲುಪಿಸುವ ಕೆಲಸವನ್ನು ಇತಿಹಾಸಕಾರ ಮಾಡುತ್ತಾನೆ. ಶೆಟ್ಟರ್ ಅದೇ ಸಾಲಿನಲ್ಲಿ ಬರುವ ಉತ್ತಮ ಶೋಧಕ. ಅಸತ್ಯದ ನಡುವೆ ಅಡಗಿರುವ ಸತ್ಯವನ್ನು ಹೊರತೆಗೆದು, ಸಮಾಜವನ್ನು ಬೆರಗುಗೊಳಿಸುವಲ್ಲಿ ಅವರು ಸದಾ ಮುಂದೆ ಇದ್ದರು. ಶಾಸನಗಳ ವಿಷಯವನ್ನು ಸಾಮಾನ್ಯರೂ ಓದುವಂತೆ ಮಾಡಿದ ಅವರ ಕೆಲಸ ಮಹತ್ವದ್ದು' ಎಂದು ಶ್ಲಾಘಿಸಿದರು.

ಇತಿಹಾಸಕಾರ ಎಚ್.ಎಸ್.ಗೋಪಾಲರಾವ್, 'ಶೆಟ್ಟರ್ ಅವರು ಶಾಸನ, ಹಳಗನ್ನಡ ಮತ್ತು ಹೊಸಗನ್ನಡಗಳಿಗೆ ಒಂದು ಕೊಂಡಿ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಅವರ ಕೆಲಸಗಳು ಶಾಸನಗಳನ್ನು ನೋಡುವ ದೃಷ್ಟಿಕೋನವನ್ನೇ ಬದಲಿಸಿವೆ' ಎಂದರು.

ಆರೋಗ್ಯ ಸಚಿವ ಸುಧಾಕರ್ ರಾಜೀನಾಮೆಗೆ ಎಎಪಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಆರೋಗ್ಯ ಇಲಾಖೆಯಲ್ಲಿ ನಿರಂತರವಾಗಿ ಭ್ರಷ್ಟಾಚಾರ ನಡೆಯುತ್ತಿದ್ದು, ಆರೋಗ್ಯ ಸಚಿವ ಕೆ.ಸುಧಾಕರ್ ಕೂಡಲೇ ರಾಜೀನಾಮೆ ನೀಡಬೇಕು. ಭ್ರಷ್ಟಾಚಾರದ ತನಿಖೆಗೆ ರಾಜ್ಯಪಾಲರು ಆದೇಶ ಮಾಡಬೇಕು' ಎಂದು ಆಮ್ ಆದ್ಮಿ ಪಕ್ಷ (ಎಎಪಿ) ಆಗ್ರಹಿಸಿದೆ.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಪಿ ಕಾನೂನು ಘಟಕದ ಅಧ್ಯಕ್ಷ ನಂಜಪ್ಪ ಕಾಳೇಗೌಡ, 'ಆರೋಗ್ಯ ಇಲಾಖೆಯ ವೈದ್ಯರು, ಅರೆ ವೈದ್ಯಕೀಯ ಸಿಬ್ಬಂದಿ ನೇಮಕಾತಿ, ಬಡ್ತಿ ಹಾಗೂ ವರ್ಗಾವಣೆಯಲ್ಲಿ ಭ್ರಷ್ಟಾಚಾರ ಅವ್ಯಾಹತವಾಗಿ ನಡೆಯುತ್ತಿದೆ. ವೈದ್ಯಕೀಯ ಮಹಾವಿದ್ಯಾಲಯ, ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಸೇವೆ ಪಡೆಯಲು ರೋಗಿಗಳು ಲಂಚ ನೀಡಬೇಕಾಗಿದೆ' ಎಂದು ಆರೋಪಿಸಿದರು.

'ಕೋವಿಡ್ ಸಂದರ್ಭದಲ್ಲಿ ವೈದ್ಯಕೀಯ ಉಪಕರಣ ಹಾಗೂ ಔಷಧಿ ಖರೀದಿಯಲ್ಲಿ ಭಾರೀ ಅಕ್ರಮ ನಡೆದಿದೆ ಎಂದು ಆರೋಪಿಸಿ ಸಾರ್ವಭೌಮ ಬಗಲಿ ಅವರು ಲೋಕಾಯುಕ್ತಕ್ಕೆ ದೂರು ನೀಡಿದ್ದಾರೆ. ಆದರೆ ಈ ಬಗ್ಗೆ ತನಿಖೆ ನಡೆಯ ದಿರುವುದು ದುರದೃಷ್ಟಕರ. ಈ ಗಂಭೀರ ವಿಚಾರದ ಬಗ್ಗೆ ತನಿಖೆ ನಡೆದರೆ, ಆರೋಗ್ಯ ಇಲಾಖೆಯ ಕೋಟ್ಯಂತರ ರೂಪಾಯಿ ಅವ್ಯವಹಾರ ಬಯಲಾಗುತ್ತದೆ' ಎಂದರು.

ಕಾರ್ಮಿಕ ಘಟಕದ ಅಧ್ಯಕ್ಷ ರವಿಶಂಕರ್, 'ಸಚಿವ ಸುಧಾಕರ್ ಹಾಗೂ ಅಧಿಕಾರಿಗಳ ಹಣದ ದಾಹದಿಂದ ರೋಗಿಗಳು ಜೀವ ಕಳೆದುಕೊಳ್ಳುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆಯಿಂದ ರೋಗಿಯ ಶವ ಹೊರಗೊಯ್ಯಲೂ ಲಂಚ ನೀಡಬೇಕು. ಆರೋಗ್ಯ ಇಲಾಖೆಯ ಟೆಂಡರ್ ಪ್ರಕ್ರಿಯೆಗಳಲ್ಲಿ ನಿಯಮಗಳನ್ನು ಗಾಳಿಗೆ ತೂರಲಾಗುತ್ತಿದೆ. ಆದರೆ, ಯಾರ ವಿರುದ್ಧವೂ ತನಿಖೆ ನಡೆಯುತ್ತಿಲ್ಲ. ಭ್ರಷ್ಟ ಸಚಿವರಿಂದಾಗಿ ಇಡೀ ಇಲಾಖೆಯೇ ಭ್ರಷ್ಟವಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

Our Client is desirous of purchasing the property, from Smt. Sudha, wife of late Sri V. Venkatesh and her children Smt. Rashmi and Smt. Radha. Smt. Sudha has represented to our Client that, (i) originally the Schedule Property was purchased by Poojari Venkatashamappa, son of Poojari Venkatappa under a Sale Deed dated 03/05/1966 (registered as Document No.368/66-77, Book I, Volume 957, at Pages 83 to 85, in office of the Sub registrar, Devanahalli), (ii) after the death of Sri Poojari Venkatashamappa and his wife Smt. Chikka Akkamma, the Schedule Property devolved upon their children Sri V. Venkatesh and Smt. Gowramma, wife of late Sri N. Krishnamurthy, and (iii) that Smt. Sudha is the daughter of the aforesaid Smt. Gowramma, wife of Sri N. Krishnamurthy, (iv) after the demise Smt. Gowramma, Smt. Sudha (being her only child) has succeeded fully to Smt. Gowramma's share in the Schedule Property, and (v) after the demise of Sri V. Venkatesh, Smt. Sudha along with her two daughters aforesaid have succeeded his share in the Schedule Property.

Any person/s asserting any right/s, in respect of the Schedule Property or any part thereof in any manner whatsoever or has any objection/s to such sale in favour of our Client, is hereby called upon to notify the undersigned in writing, within 10 days of this Public Notice. If no such written objections/claims are received, our Client shall proceed and will conclude the sale transaction, without entertaining any future claims.

SCHEDULE

All that piece and parcel of the dry agricultural land bearing Survey No.5/1, measuring 19 (nineteen) guntas, situated at Karahalli Amanikere Village, Kundana Hobli, Devanahalli Taluk, Bangalore Rural District and bounded as follows:
On the **EAST** : By Nandi Hills Road;
WEST : By Property bearing Survey No.6; **NORTH** :By Property bearing Survey No.4; and
SOUTH : By Property bearing Survey No.5/3.

M/s. **Sundaraswamy & Ramdas,**
Advocates,
No.24, Keshava Nivas, Kalidasa Road,
Gandhinagar, Bangalore – 560 009.
Ph: 22263838, 22380809 & 22251764
E-mail: admin@sundaraswamy.com
Bangalore,
Date: 21/03/2022

JOB OPPORTUNITIES

Graphic Designers

WANTED DTP Operator/ Graphic Designer Corel Draw, Illustrator & Photoshop for a Pvt Limited Company in around Rajajinagar Contact: 23307910/ 9108458798

Part-Time Jobs

REPUTED MNC Company Will Provide Work From Home, Earn 30 to 35K Malleswaram 7019215243/ 9886641282

Wanted

WANTED FEMALE Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085

BUSINESS

Business to Business

Finance

PRE-OWNED CAR
SHOWROOM HUB. MEGA PRE OWNED CAR SHOWROOM TO BE CONSTRUCTED ON 10 LANE MYSORE EXPRESS HIGHWAY 22 KMS BEFORE MYSORE AT A MOST SUITABLE LOCATION WITH EXIT, UNDER PASS AND RE-ENTRY FACILITY NEEDS INVESTER.PERSONS IN CAR SALES BUSINESS ALSO PREFFERED. ANNUAL EXPECTED TURN OVER 100CRORES. PROJECT WITH NEW CONCEPT. CONTACT OWNER 7676770503/ 9741019028

Business Offers

Finance

WANTED BUSINESS
Partner Non Veg Hotel 10 Lakhs Investment Monthly Income 2 Lakhs: 9606701007/ 8892501007

NRI'S INVESTMENT
And Finance
availableOn
LowInterest Against
properties, Lands,
Building, sites,
Flats,converted Lands,
Agriculture Lands Also
Towards Businesses
call 7411265189

PERSONAL

Change of Name

I, SHWETHA KASULA W/o. Chidananda B.A. R/a #428, 43rd Cross, 2nd Main, 8th Block Jayanagar, Bangalore-560082 Have Changed My Name to SHWETHA KASULA NAGARAJU vide Affidavit Dated: 21.03.2022 Before Notary Mahesha, J.J. Bengaluru.

I, CHETHANA Kumar W/o Kumar Bakthavatchalu R/at No. 1145/B, Giridhari, 1st Cross, BDA Extn, Layout, HAL 3rd Stage, New Thippasandra Post, Bangalore- 560075, have changed my minor daughter's name from SUNAINA KUMAR To SAI SUNAIENA vide affidavit dated: 21/3/2022 Before Notary K.V. Bachi Reddy Bangalore.

CHANGE OF NAME
I, R. Revanth Raju
S/o Mr.V.Thimmaraju, R/a 19, Mukhyaprana, 2nd Cross, Behind Twin Tower, Shathivana, Kodigehalli Cross, Bangalore North, Sahakara Nagar, Bangalore-560 092.
have Changed My Name from **Revanth Raju to R. Revanth Raju** vide affidavit dated 22-02-2022 sworn before Advocate and Notary L. Shankaranarayana, Bangalore

I, Mangalamary Spouse of No.2564077, Rank: SEP, Name: K. Murthy R/at. #209, 8th cross, Ramamurthynagar, Doorvaninagar- 560016 have changed my name from MANGALA MARRY to MANGALA MARY vide affidavit dated 11/01/2022 before notary Rajanna. S.M., Bengaluru.

I, SILVESTER PAUL, residing at No. 36, 1st main road, 2nd stage, Gowthampuram, Halasuru, Bangalore-560008, have changed my name to NAVEEN BABU .G, vide affidavit dated 21.03.2022 before Notary A.R. Muneer Ahmed, Bangalore. Henceforth I shall be known as NAVEEN BABU .G for all purposes.

I, KANUKURTHI RUKMINI BHAVANA,residing at 88, ITI Layout, MSR Nagar, Mathikere, Bangalore-560054 have changed my name from KANUKURTHI RUKMINI BHAVANA to BHAVANA KANUKURTHI,vide affidavit dated 16/03/2022 sworn before Kundan Babu.M., Notary, Bangalore.

I, RAJESH KUMAR GARG s/o Amarnath Garg Residing at 101: Garg Mansion, Site No.9, Ozone Urbana, Kannamangala, Devanahalli Taluk, Bangalore Rural District -562110 declare that my name in my passport is wrongly mentioned as RAJESH KUMAR AMARNATH GARG but my correct name is RAJESH KUMAR GARG as in my Aadhar Card Vide affidavit dated 19-03-2022 sworn before Notary Jehangir Shariff, Bangalore.

DH DECCAN HERALD
SELL, RENT, BUY PROPERTY
THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER
BOOK YOUR CLASSIFIEDS ADS ONLINE
WWW.DHCLASSIFIEDS.COM
ಪ್ರಜಾವಾಣಿ ಕ್ಲಾಸಿಫೈಡ್ಸ್
FOR MORE INFORMATION
CONTACT 9880856233 | 9886213331
Email: santhoshkumar@deccanherald.co.in

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಮುಖ್ಯಮಂತ್ರಿಯಿಂದ ‘ಗ್ರಾಮ ಡಿಜಿ ವಿಕಸನ–2022’ ಉದ್ಘಾಟನೆ

‘340 ಹೊಸ ಗ್ರಂಥಾಲಯ ಮಂಜೂರು’

ಪ್ರಜಾವಾಣಿ ವಾರ್ತೆ

ಬೆಂಗಳೂರಿನಲ್ಲಿ ಸೋಮವಾರ ‘ಗ್ರಾಮ ಡಿಜಿ ವಿಕಸನ–2022’ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು. ಸಚಿವ ಆನಂದ್ ಸಿಂಗ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಕೆ.ಎಸ್. ಈಶ್ವರಪ್ಪ, ಸಿ.ಸಿ. ಪಾಟೀಲ್ ಇದ್ದರು.

ಬೆಂಗಳೂರು: ‘ರಾಜ್ಯದಲ್ಲಿ 340 ಹೊಸ ಗ್ರಂಥಾಲಯಗಳನ್ನು ಸ್ಥಾಪಿಸಲಾಗುವುದು. ಈ ಬಗ್ಗೆ ಮಂಜೂರಾತಿ ಆದೇಶವನ್ನು ಶೀಘ್ರವೇ ಹೊರಡಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಶಿಕ್ಷಣ ಫೌಂಡೇಶನ್, ಡೆಲ್ ಇಂಟರ್‌ನ್ಯಾಷನಲ್ ಸರ್ವಿಸಸ್ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಂಯುಕ್ತಾಶ್ರಯದಲ್ಲಿ ಸೋಮವಾರ ನಡೆದ ‘ಗ್ರಾಮ ಡಿಜಿ ವಿಕಸನ-2022’ ಉದ್ಘಾಟಿಸಿ ಅವರು ಮಾತನಾಡಿದರು.

‘ಹೊಸ ತಾಲ್ಲೂಕುಗಳಲ್ಲಿಯೂ ಹೊಸ ಗ್ರಾಮ ಪಂಚಾಯಿತಿಗಳ ರಚನೆಯಾಗಬೇಕಾಗಿದೆ. ಅವುಗಳನ್ನು ಇದೇ ವರ್ಷ ಆರಂಭಿಸಲಾಗುವುದು. ಇದೇ ವರ್ಷದಲ್ಲಿ 3,409 ಗ್ರಂಥಾಲಯಗಳ ಡಿಜಿಟಲೀಕರಣಕ್ಕೂ ಕ್ರಮಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

‘ನವ ಕರ್ನಾಟಕದಿಂದ ನವ ಭಾರತ ನಿರ್ಮಾಣವಾಗಬೇಕಿದೆ. ಗ್ರಾಮೀಣ ಕರ್ನಾಟಕ ತನ್ನ ಸಂಪನ್ಮೂಲಗಳನ್ನು ಸದುಪಯೋಗಪಡಿಸಿಕೊಂಡರೆ ರಾಜ್ಯವು ಮತ್ತಷ್ಟು ಪ್ರಗತಿ ಸಾಧಿಸಬಹುದು. ಗ್ರಾಮೀಣಾಭಿವೃದ್ಧಿ ಇಲಾಖೆ ಗುರಿಗಿಂತ ಹೆಚ್ಚಿನ ಸಾಧನೆ ಮಾಡಿ ದಾಖಲೆ ನಿರ್ಮಿಸಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

‘ಕರ್ನಾಟಕ ಸರ್ಕಾರವು ಶಿಕ್ಷಣ ಫೌಂಡೇಷನ್‌ನೊಂದಿಗೆ ಕೈಜೋಡಿಸಿ ಕಾರ್ಯನಿರ್ವಹಿಸಲು ಸಿದ್ಧವಿದೆ. ಗ್ರಾಮ ಪಂಚಾಯಿತಿಗಳು, ಗ್ರಂಥಾಲಯಗಳ ಆಧುನೀಕರಣ ಮಾಡುವುದರಿಂದ ಪ್ರತಿ ಗ್ರಾಮವನ್ನು ಸಂಪರ್ಕಿಸಲು ಸಾಧ್ಯವಿದೆ. ಇದರಿಂದ, ದೊಡ್ಡ ಬದಲಾವಣೆಯನ್ನು ತರಬಹುದಾಗಿದೆ’ ಎಂದರು.

ಜ್ಞಾನದ ಮೂಲಕ ವ್ಯಕ್ತಿತ್ವ ವಿಕಸನ : ‘ಗ್ರಾಮೀಣ ಭಾಗದ ಜನತೆಗಾಗಿ ಪ್ರತಿಯೊಂದು ಗ್ರಾಮಪಂಚಾಯತಿ ಗ್ರಂಥಾಲಯಗಳನ್ನು ಡಿಜಿಟಲೀಕರಣ ಮಾಡಲಾಗಿದೆ. ಡಿಜಿಟಲ್ ಗ್ರಂಥಾಲಯಗಳಲ್ಲಿ ಯಾವ ರೀತಿಯ ವಿಷಯಗಳು ಮಕ್ಕಳಿಗೆ ಲಭ್ಯವಾಗಬೇಕು ಎನ್ನುವ ಬಗ್ಗೆ ಸ್ಪಷ್ಟತೆ ಇರಬೇಕು’ ಎಂದು ತಿಳಿಸಿದರು.

‘ಗ್ರಾಮೀಣ ಮಟ್ಟದಲ್ಲಿಯೂ ಡಿಜಿಟಲೀಕರಣಗೊಳಿಸುವ ಸರ್ಕಾರದ ನಿರ್ಣಯವನ್ನು ಕಾರ್ಯರೂಪಕ್ಕೆ ತರಲಾಗಿದೆ. ‘ಗ್ರಾಮ ಡಿಜಿ ವಿಕಸನ’ ಯೋಜನೆಯು ಭದ್ರ ಭವಿಷ್ಯವನ್ನು ನಿರ್ಮಿಸುವ ಕಾರ್ಯಕ್ರಮವಾಗಿದೆ. ಗ್ರಾಮೀಣ ಜನರಿಗೆ ಶಿಕ್ಷಣ, ಉದ್ಯೋಗ ಮತ್ತು ಸಬಲೀಕರಣ, ಡಿಜಿಟಲೀಕರಣದ ಜ್ಞಾನ ನೀಡುವ ಗುರಿಯನ್ನು ಈ ತಂತ್ರಾಂಶ ವಾಹಿನಿಯ ಮೂಲಕ ಸಾಧಿಸಲಾಗುವುದು’ ಎಂದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ, ಸಚಿವರಾದ ಸಿ.ಸಿ. ಪಾಟೀಲ, ಆನಂದ್ ಸಿಂಗ್ ಇದ್ದರು.

ಕೇಂದ್ರೀಯ ವಿ.ವಿ. ಪದವಿ ಕೋರ್ಸ್‌ಗೆ ಪ್ರವೇಶ: ಸಿಯುಇಟಿ ಅಂಕವೇ ಆಧಾರ

ನವದೆಹಲಿ (ಪಿಟಿಐ): ಕೇಂದ್ರೀಯ ವಿಶ್ವವಿದ್ಯಾಲಯಗಳು ಪದವಿ ಕೋರ್ಸ್‌ಗಳಿಗೆ ಪ್ರವೇಶ ಕಲ್ಪಿಸಲು 12ನೇ ತರಗತಿ ಅಂಕಗಳಿಗೆ ಬದಲಾಗಿ ಕೇಂದ್ರೀಯ ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆಯ (ಸಿಯುಇಟಿ) ಅಂಕಗಳನ್ನೇ ಪರಿಗಣಿಸಬೇಕು ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಅಧ್ಯಕ್ಷ ಎಂ.ಜಗದೀಶ್ ಕುಮಾರ್ ಸೂಚಿಸಿದ್ದಾರೆ.

ಸಿಯುಇಟಿ ಪರೀಕ್ಷೆಯು ಬಹುತೇಕ ಜುಲೈ ಮೊದಲ ವಾರ ನಡೆಯಲಿದೆ ಎಂದು ಅವರು ತಿಳಿಸಿದ್ದಾರೆ. ನಂತರ ಯುಜಿಸಿ, ‘ಪದವಿ ಕೋರ್ಸ್ ಪ್ರವೇಶದ ಸಿಯುಇಟಿ ಅರ್ಜಿ ಸ್ವೀಕಾರ ಪ್ರಕ್ರಿಯೆಯು ಏಪ್ರಿಲ್ ಮೊದಲ ವಾರ ಆರಂಭವಾಗಲಿದೆ’ ಎಂದು ಹೇಳಿಕೆ ನೀಡಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ವಧು ಬೇಕಾಗಿದೆ
ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ, 42 ಸಾವಿರ ಸಂಬಳವಿರುವ ಒಕ್ಕಲಿಗ ಗೌಡ ಪಂಗಡಕ್ಕೆ ಸೇರಿರುವ ಹುಡುಗನಿಗೆ ಮದುವೆಯಾಗಲು ತಂದೆ ತಾಯಿ ಇಲ್ಲದ ಅಥವಾ ಯಾರು ಇಲ್ಲದ ಅನಾಥಳಾಗಿರುವ ವಧು ಇದ್ದರೆ
ನೇರವಾಗಿ ಸಂಪರ್ಕಿಸಿ
76764 38399
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

Premium
RMD
PAN MASALA
ಉನ್ನತ ಜನರು, ಉನ್ನತ ಅಭಿರುಚಿ®
premium
ऊँचे लोग, ऊँची पसंद
RMD PAN MASALA
NO TOBACCO, NO NICOTINE
Formulation by Rasiklal Manikchand Dhariwal
ಎಲ್ಲಕ್ಕಿಂತ ಅದ್ಭುತ ಎಲ್ಲಕ್ಕಿಂತ ಅಮೂಲ್ಯ
Tiger/KAN

ಸೂತ್ರೀಕರಣ ನಿರ್ಮಿತಿ : ರಸಿಕ್‌ಲಾಲ್ ಮಾಣಿಕ್‌ಚಂದ್ ಧಾರಿವಾಲ್
MRP ₹8 - 2g. | MRP ₹13 - 3.5g.
ಶಾಸನೀಯ ಎಚ್ಚರಿಕೆ : ಪಾನ್ ಮಸಾಲಾ ಸೇವನೆ ಆರೋಗ್ಯಕ್ಕೆ ಹಾನಿಕರ. ಅಪ್ರಾಪ್ತ ವಯಸ್ಕರಿಗೆ ಪ್ರತಿಬಂಧಿತ
NO TOBACCO, NO NICOTINE

ನಗರದಲ್ಲಿ ಇಂದು

‘ಮಕ್ಕಳ ಶಿಕ್ಷಣದ ಮೇಲೆ ಕೋವಿಡ್ ಬಿಕ್ಕಟ್ಟಿನ ಪರಿಣಾಮ’ ಕುರಿತು ಸಾರ್ವಜನಿಕ ಅಹವಾಲು ಸ್ವೀಕಾರ: ಆಯೋಜನೆ–ಆ್ಯಕ್ಷನ್ ಏಯ್ಡ್ ಅಸೋಸಿಯೇಷನ್ ಮತ್ತು ಸ್ಲಂ ಮಹಿಳಾ ಸಂಘಟನೆ, ಸ್ಥಳ–ಎಸ್‌ಸಿಎಂ ಹೌಸ್, ಮಿಷನ್ ರಸ್ತೆ, ಸಂಪಂಗಿರಾಮ ನಗರ, ಬೆಳಿಗ್ಗೆ 11

ಪೌರಾಣಿಕ ರಂಗೋತ್ಸವ: ‘ಶ್ರೀಕೃಷ್ಣ ವಿಜಯ’ ನಾಟಕ ಪ್ರದರ್ಶನ, ಅಧ್ಯಕ್ಷತೆ–ಎಂ.ಆಂಜನಪ್ಪ, ಅತಿಥಿಗಳು–ವೆಂಕಟೇಶ್, ಪಿ.ಪ್ರಕಾಶ್‌ಗೌಡ, ಕೃಷ್ಣಯ್ಯ, ರಮೇಶ್ ಎಂ.ಗೌಡ, ಆಯೋಜನೆ–ಕರ್ನಾಟಕ ರಂಗಸಂಗೀತ ಪರಿಷತ್ತು, ಸ್ಥಳ–ರವೀಂದ್ರ ಕಲಾಕ್ಷೇತ್ರ, ಮಧ್ಯಾಹ್ನ 3

ರಂಗ ಮಿಲನೋತ್ಸವ: ‘ಚದುರಂಗ ಮತ್ತು ಕತ್ತೆ’ ನಾಟಕ ಪ್ರದರ್ಶನ, ನಿರ್ದೇಶನ–ಅಭಿಮನ್ಯು ಭೂಪತಿ, ತಂಡ–ಪಂಚಮುಖಿ ನಟರ ಸಮೂಹ, ಆಯೋಜನೆ–ಅಂತರಂಗ, ಸ್ಥಳ–ಸೇವಾ ಸದನ, ಮಲ್ಲೇಶ್ವರ, ಸಂಜೆ 6.30

ಅಭಿಮನ್ಯು ಭೂಪತಿ

ಸರ್ಕಾರಿ ಶಾಲೆಯಲ್ಲಿ ಸುಸಜ್ಜಿತ ಕಂಪ್ಯೂಟರ್ ಲ್ಯಾಬ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಗಂಗಾನಗರ ಸರ್ಕಾರಿ ಕನ್ನಡ ಮಾದರಿ ಶಾಲೆಯಲ್ಲಿ ಇತ್ತೀಚೆಗೆ ಸುಸಜ್ಜಿತ ಕಂಪ್ಯೂಟರ್ ಲ್ಯಾಬ್ ಉದ್ಘಾಟಿಸಲಾಯಿತು.

ಖಾಸಗಿ ಶಾಲೆಗಳನ್ನು ಮೀರಿಸುವ ರೀತಿಯಲ್ಲಿ ಈ ಸರ್ಕಾರಿ ಶಾಲೆಯಲ್ಲಿ ವಿದ್ಯುನ್ಮಾನ ಮತ್ತು ತಂತ್ರಜ್ಞಾನ ಆಧಾರಿತ ಶಿಕ್ಷಣವನ್ನು ನೀಡಲು ಈ ಕಂಪ್ಯೂಟರ್ ಲ್ಯಾಬ್ ಉತ್ತಮ ಸಾಧನವಾಗಲಿದೆ ಎಂದು ಮುಖ್ಯ ಶಿಕ್ಷಕಿ ಎಂ.ಎಚ್. ದೀಪಾ ಹೇಳಿದರು.

ಸ್ಮಿತ್ ಡಿಟೆಕ್ಷನ್ ಇಂಡಿಯಾ ಮತ್ತು ಜಾನ್ ಕ್ರೇನ್ ಕಂಪನಿಯವರು ಈ ಲ್ಯಾಬ್‌ನ ಎಲ್ಲ ಸಾಧನಗಳನ್ನು ಶಾಲೆಗೆ ಕೊಡುಗೆಯಾಗಿ ನೀಡಿದ್ದಾರೆ. ₹11.5 ಲಕ್ಷಕ್ಕೂ ಹೆಚ್ಚು ಮೌಲ್ಯದ ಕಂಪ್ಯೂಟರ್‌ಗಳನ್ನು ನೀಡಲಾಗಿದೆ. ಅಗಸ್ತ್ಯ ಇಂಟರ್‌ನ್ಯಾಷನಲ್ ಫೌಂಡೇಷನ್ ಸಹಯೋಗದಲ್ಲಿ ಕಂಪನಿಯು ಈ ಸೌಲಭ್ಯ ಒದಗಿಸಿದೆ.

ಜಾನ್ ಕ್ರೇನ್ ಕಂಪನಿಯ ಮಾನವ ಸಂಪನ್ಮೂಲ ವಿಭಾಗದ ವ್ಯವಸ್ಥಾಪಕ ಅನಿಲ್‌ಕುಮಾರ್, ಸ್ಮಿತ್ ಡಿಟೆಕ್ಷನ್ ಇಂಡಿಯಾ ನೇಮಕಾತಿ ವಿಭಾಗದ ಮುಖ್ಯಸ್ಥರಾದ ಮೀರಾ ಕಿರಣ್ ಹಾಗೂ ಎಐಎಫ್‌ನ ಪ್ರಾದೇಶಿಕ ವ್ಯವಸ್ಥಾಪಕ ದಿಲೀಪ್ ಕುಮಾರ್ ಮತ್ತು ಉತ್ತರ ವಲಯ–3 ಕ್ಷೇತ್ರ ಶಿಕ್ಷಣಾಧಿಕಾರಿ ಡಿ.ಕೃಷ್ಣ ಮತ್ತು ಶಾಲಾ ಬೋಧಕ ವೃಂದ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

ಅಗಸ್ತ್ಯ ಇಂಟರ್‌ನ್ಯಾಷನಲ್ ಫೌಂಡೇಷನ್ ಸಹಯೋಗದಲ್ಲಿ ಸ್ಮಿತ್ ಡಿಟೆಕ್ಷನ್ ಇಂಡಿಯಾ ಮತ್ತು ಜಾನ್ ಕ್ರೇನ್ ಕಂಪನಿಯು ಗಂಗಾನಗರದ ಸರ್ಕಾರಿ ಕನ್ನಡ ಮಾದರಿ ಶಾಲೆಗೆ ಕೊಡುಗೆಯಾಗಿ ನೀಡಿರುವ ಕಂಪ್ಯೂಟರ್ ಲ್ಯಾಬ್

ಅರ್ಜಿ ಆಹ್ವಾನ

ಬೆಂಗಳೂರು: ರೋಟರಿ ಕ್ಲಬ್ ಆಫ್ ಬೆಂಗಳೂರು ಕಂಟೋನ್ಮೆಂಟ್ ಮತ್ತು ಪ್ರಮುಖ ರಿಯಲ್ ಎಸ್ಟೇಟ್ ಡೆವಲಪರ್ ‘ಕಾನ್ಸೆಪ್ಟ್ ಎಂಬಿಯೆನ್ಸ್’ ಕಂಪನಿಯು ‘ಚಾಂಪಿಯನ್ಸ್ ಆಫ್ ಚೇಂಜ್’ ಪ್ರಶಸ್ತಿ ನೀಡುವುದಾಗಿ ಘೋಷಿಸಿವೆ.

ಈ ಪ್ರಶಸ್ತಿಗೆ ಹೆಸರು ನೋಂದಾಯಿಸುವಂತೆ ಸೂಚಿಸಲಾಗಿದೆ. ಯುವ ಸಾಧಕರ ಈ ಪ್ರಶಸ್ತಿಯು ಕರ್ನಾಟಕದಲ್ಲಿನ ಸೇವೆ ಮತ್ತು ಶ್ಲಾಘನೀಯ ಕೆಲಸಕ್ಕಾಗಿ ಯುವಕರನ್ನು ಪುರಸ್ಕರಿಸುವ ಅಭಿಯಾನವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ರೋಗ ತಡೆಗಟ್ಟುವಿಕೆ ಮತ್ತು ಚಿಕಿತ್ಸೆ, ನೈರ್ಮಲ್ಯ ಮತ್ತು ಸ್ವಚ್ಛತೆ, ಶಾಂತಿ ಮತ್ತು ಸಂಘರ್ಷ ಪರಿಹಾರ ಹಾಗೂ ಮುನ್ನೆಚ್ಚರಿಕೆ, ಮೂಲಭೂತ ಶಿಕ್ಷಣ ಮತ್ತು ಸಾಕ್ಷರತೆ, ತಾಯಿ ಮತ್ತು ಮಕ್ಕಳ ಆರೋಗ್ಯ, ಬೆಳೆಯುತ್ತಿರುವ ಸ್ಥಳೀಯ ಆರ್ಥಿಕತೆಗಳು, ಪರಿಸರ ರಕ್ಷಣೆಯ ಕ್ಷೇತ್ರಗಳಲ್ಲಿ ಶ್ರಮಿಸಿದ ವ್ಯಕ್ತಿಗಳನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗುವುದು.

ಪುರುಷ ಮತ್ತು ಮಹಿಳಾ ವಿಭಾಗದಲ್ಲಿ ಆಯ್ಕೆಯಾದ ವ್ಯಕ್ತಿಗಳಿಗೆ ಮೇ 14ರಂದು ಪ್ರಶಸ್ತಿ ನೀಡಲಾಗುವುದು. ಪ್ರಶಸ್ತಿಯು ₹1 ಲಕ್ಷ ನಗದು ಬಹುಮಾನವನ್ನು ಒಳಗೊಂಡಿದೆ. ಅರ್ಜಿ ಸಲ್ಲಿಸಲು ಮತ್ತು ನಾಮನಿರ್ದೇಶನಕ್ಕೆ https://yaa.rotary-bc.org ವೆಬ್‌ಸೈಟ್ ವೀಕ್ಷಿಸಬಹುದು. ಇಮೇಲ್ : yaa@rotary-bc.org. ಮೊಬೈಲ್ ಸಂಖ್ಯೆ: 9845322676 (ವಿನೋದ್ ಜಾನ್), 9845390193 (ಮುಕೇಶ್ ಸಿಂಗ್)

‘ಹಿಜಾಬ್ ತೀರ್ಪು: ಮುಸ್ಲಿಂ ವಿದ್ಯಾರ್ಥಿಗಳ ಭವಿಷ್ಯಕ್ಕೆ ಧಕ್ಕೆ’

ಬೆಂಗಳೂರು: ‘ಹಿಜಾಬ್ ವಿಚಾರವಾಗಿ ಹೈಕೋರ್ಟ್ ನೀಡಿರುವ ತೀರ್ಪು ಅಸಾಂವಿಧಾನಿಕ. ಇದು ಮುಸ್ಲಿಂ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ’ ಎಂದು ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾದ ರಾಜ್ಯ ಘಟಕದ ಉಪಾಧ್ಯಕ್ಷ ರೋಷನ್ ನವಾಝ್ ಕಳವಳ ವ್ಯಕ್ತಪಡಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,‘ಇಸ್ಲಾಂನಲ್ಲಿ ಕಡ್ಡಾಯಗೊಳಿಸಿದ ಶಿರವಸ್ತ್ರ ಇಸ್ಲಾಂನ ಕಡ್ಡಾಯ ಆಚರಣೆಯೇ ಅಲ್ಲ ಎಂದು ತೀರ್ಪು ನೀಡುವ ಮೂಲಕ ಮುಸ್ಲಿಂ ಸಮುದಾಯಕ್ಕೆ ಆಘಾತ ನೀಡಿದೆ’ ಎಂದರು. ‘ನ್ಯಾಯದ ನಿರೀಕ್ಷೆಯಲ್ಲಿದ್ದ ರಾಜ್ಯದ ಮುಸ್ಲಿಂ ವಿದ್ಯಾರ್ಥಿನಿಯರಿಗೆ ಹೈಕೋರ್ಟ್ ತೀರ್ಪು ಬೇಸರ ಉಂಟು ಮಾಡಿದೆ. ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುವ ಬದಲಾಗಿ ಸರ್ಕಾರದ ಆದೇಶಗಳನ್ನು ಹೈಕೋರ್ಟ್ ಎತ್ತಿ ಹಿಡಿದಿರುವುದು ದುರದೃಷ್ಟಕರ’ ಎಂದರು.

ಬೆಂಗಳೂರು ಜಿಲ್ಲಾ ಘಟಕದ ಅಧ್ಯಕ್ಷ ಆಕಿಬ್,‘ಸಮವಸ್ತ್ರ ನಿಗದಿಪಡಿಸಿದ ಶಾಲೆ, ಪದವಿ ಪೂರ್ವ ಕಾಲೇಜುಗಳಿಗೆ ಮಾತ್ರ ನಿಯಮ ಅನ್ವಯವೆಂದು ಉಲ್ಲೇಖಿಸಲಾಗಿದೆ. ಆದರೆ ಇದನ್ನೇ ಅಸ್ತ್ರವಾಗಿಸಿಕೊಂಡು ರಾಜ್ಯದ ಬಹುತೇಕ ಪದವಿ ಕಾಲೇಜುಗಳಲ್ಲೂ ಶಿರವಸ್ತ್ರ ನಿಷೇಧ ಮಾಡಿ, ತರಗತಿಗೆ ಹಾಗೂ ಪರೀಕ್ಷೆಗಳಿಗೆ ಪ್ರವೇಶ ನಿರಾಕರಿಸಲಾಗುತ್ತಿದೆ’ ಎಂದು ದೂರಿದರು.

‘ಖಾರ’ವಾದ ಮೆಣಸಿನಕಾಯಿ ದರ

ಬೆಂಗಳೂರು: ಹಸಿ ಮೆಣಸಿನಕಾಯಿ ದರ ಒಂದು ತಿಂಗಳಿನಿಂದ ನಿರಂತರವಾಗಿ ಏರಿದ್ದು, ಪ್ರತಿ ಕೆ.ಜಿ ದರ ₹100ಕ್ಕಿಂತ ಜಾಸ್ತಿಯೇ ಇದೆ. ಮಾರುಕಟ್ಟೆಗಳಿಗೆ ಆವಕ ತಗ್ಗಿರುವುದರಿಂದ ಯುಗಾದಿ ವೇಳೆಗೆ ದರ ಮತ್ತಷ್ಟು ಏರಲಿದೆ.

ರಾಜ್ಯದಲ್ಲಿ ಬೆಳೆಯಲಾಗಿದ್ದ ಮೆಣಸಿನಕಾಯಿ ಬೆಳೆ ಕಳೆದ ವರ್ಷ ಸುರಿದ ಅಕಾಲಿಕ ಮಳೆಯಿಂದಾಗಿ ಭಾರಿ ಹಾನಿಗೆ ತುತ್ತಾಗಿತ್ತು. ಇದರಿಂದ ಮಾರುಕಟ್ಟೆಗಳಲ್ಲಿ ಗುಣಮಟ್ಟದ ಮೆಣಸಿನಕಾಯಿಗೆ ಕೊರತೆ ಉಂಟಾಯಿತು.

ಮಳೆ ತಗ್ಗಿದ ನಂತರ ಮತ್ತೆ ಬೆಳೆದಿರುವ ಮೆಣಸಿನಕಾಯಿ ಮಾರುಕಟ್ಟೆಗೆ ಬರುವುದು ತಡವಾಗಿರುವುದಿಂದ ಆವಕ ಪ್ರಮಾಣ ಈಗಲೂ ಕಡಿಮೆ ಇದೆ. ಇದರಿಂದ ತಿಂಗಳಿನಿಂದ ಬೆಲೆಯೂ ನಿರಂತರವಾಗಿ ಹೆಚ್ಚಳ ಕಂಡಿದೆ. ಸದ್ಯ ಕೆ.ಜಿ.ಗೆ ₹120ರಿಂದ ₹140ರವರೆಗೆ ಸೋಮವಾರ ಮಾರಾಟವಾಗಿದೆ.

ಕಳೆದ ತಿಂಗಳಲ್ಲಿ ಕೆ.ಜಿ.ಗೆ ₹40ರಿಂದ ₹50ರಂತೆ ಮಾರಾಟವಾಗುತ್ತಿದ್ದ ಮೆಣಸಿನಕಾಯಿ, ಶಿವರಾತ್ರಿ ವೇಳೆಗೆ ಕೆ.ಜಿಗೆ ₹80ರಂತೆ ಮಾರಾಟವಾಯಿತು. ಬಳಿಕವೂ ದರ ಹೆಚ್ಚುತ್ತಲೇ ಇದ್ದು, ಸೋಮವಾರ ಸಗಟು ದರ ₹100, ಹಾಪ್‌ಕಾಮ್ಸ್ ದರ ₹130 ಹಾಗೂ ಚಿಲ್ಲರೆ ದರ ₹140 ಇದೆ.

ನಿಂಬೆಯೂ ತುಟ್ಟಿ: ‘ಯುಗಾದಿ ವೇಳೆಗೆ ದರ ಮತ್ತಷ್ಟು ಹೆಚ್ಚಳವಾಗುವ ಸಾಧ್ಯತೆ ಇದೆ. ನಿಂಬೆ ಹಣ್ಣಿನ ದರವೂ ತುಸು ಏರಿದ್ದು, ಪ್ರತಿ ನಿಂಬೆ ₹8ರಿಂದ ₹10ರವರೆಗೆ ಮಾರಾಟವಾಗುತ್ತಿದೆ. ಸಾಮಾನ್ಯ ತರಕಾರಿ ದರಗಳೆಲ್ಲ ಕಡಿಮೆಯೇ ಇದೆ. ’ ಎಂದು ಹೇಳಿದರು.

ಹಿಜಾಬ್: ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಜಾಬ್ ತೀರ್ಪು ವಿರೋಧಿಸಿ ಕರ್ನಾಟಕ ಬಂದ್‌ಗೆ ಕರೆ ನೀಡಿದ್ದ ಸಂಘಟನೆಗಳ ವಿರುದ್ಧ ಸ್ವಯಂ ಪ್ರೇರಿತ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಿಕೊಳ್ಳುವಂತೆ ಹೈಕೋರ್ಟ್ ರಿಜಿಸ್ಟ್ರಾರ್ ಅವರಿಗೆ ಮನವಿ ಮಾಡಲಾಗಿದೆ.

ಈ ಸಂಬಂಧ ಹೈಕೋರ್ಟ್ ವಕೀಲ ಎನ್.ಪಿ.ಅಮೃತೇಶ್ ಮನವಿ ಸಲ್ಲಿಸಿದ್ದು, ಬಂದ್‌ಗೆ ಕರೆ ನೀಡಿದ್ದರು ಎನ್ನಲಾದ ಕರ್ನಾಟಕ ವಿದ್ಯಾರ್ಥಿ ಸಂಘಟನೆ (ಕೆವಿಎಸ್), ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಸೇಷನ್ ಆಫ್ ಇಂಡಿಯಾ, ಸ್ಟೂಡೆಂಟ್ ಕ್ರಿಶ್ಚಿಯನ್ ಮೂವ್‌ಮೆಂಟ್ ಆಫ್ ಇಂಡಿಯಾ (ಎಸ್‌ಸಿಎಂಐ), ದಲಿತ ವಿದ್ಯಾರ್ಥಿ ಪರಿಷತ್, ಕಲೆಕ್ಟೀವ್, ಬೆಂಗಳೂರು, ಗರ್ಲ್ಸ್ ಇಸ್ಲಾಮಿಕ್ ಆರ್ಗನೈಸೇಷನ್, ಇಮಾರತ್ ಎ ಶರಿಯಾದ ಸಗೀರ್ ಅಹ್ಮದ್ ರಶ್ದಿ ಮತ್ತು ಇತರೆ ಸಂಘಟನೆಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ.

‘ಹಿಜಾಬ್ ವಿವಾದಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ಮೂವರು ಸದಸ್ಯರನ್ನು ಒಳಗೊಂಡ ವಿಸ್ತೃತ ನ್ಯಾಯಪೀಠದ ತೀರ್ಪನ್ನು ಖಂಡಿಸಲಾಗಿದೆ. ನಿಜಕ್ಕೂ ಇದು ಆಘಾತಕಾರಿ. ತೀರ್ಪು ವಿರೋಧಿಸಿ ಬಂದ್‌ಗೆ ಕರೆ ಕೊಟ್ಟಿದ್ದವರು ಸಾಮಾಜಿಕ ಜಾಲತಾಣದಲ್ಲಿಯೂ ವಿರೋಧ ವ್ಯಕ್ತಪಡಿಸಿದ್ದಾರೆ. ಇದು ನ್ಯಾಯಾಂಗ ನಿಂದನೆ ಕಾಯ್ದೆ–1971ರ ಕಲಂ 2 (ಸಿ) ಅಡಿಯಲ್ಲಿ ನ್ಯಾಯಾಂಗ ನಿಂದನೆಯಾಗಿದ್ದು ಇವರ ವಿರುದ್ಧ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ಕ್ರಮ ಕೈಗೊಳ್ಳಬೇಕು’ ಎಂದು ಅಮೃತೇಶ್ ಮನವಿ ಮಾಡಿದ್ದಾರೆ.

ವಕೀಲರ ಸಂಘದ ಖಂಡನೆ

ಹಿಜಾಬ್ ತೀರ್ಪು ನೀಡಿರುವ ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ, ನ್ಯಾಯಮೂರ್ತಿಗಳಾದ ಕೃಷ್ಣ ಎಸ್.ದೀಕ್ಷಿತ್ ಹಾಗೂ ಜೈಬುನ್ನೀಸಾ ಮೊಹಿಯುದ್ದೀನ್ ಖಾಜಿ ಅವರಿಗೆ ಮದುರೈನ ಕೆಲ ಸಂಘಟನೆಗಳು ಜೀವ ಬೆದರಿಕೆ ಒಡ್ಡಿರುವುದನ್ನು ಬೆಂಗಳೂರು ವಕೀಲರ ಸಂಘ ತೀವ್ರವಾಗಿ ಖಂಡಿಸಿದೆ.

ಹೈಕೋರ್ಟ್‌ನ ವಕೀಲರ ಸಭಾಂಗಣದಲ್ಲಿ ಸೋಮವಾರ ಕರೆದಿದ್ದ ಸರ್ವ ಸದಸ್ಯರ ತುರ್ತು ಸಭೆಯಲ್ಲಿ ಈ ಕುರಿತಂತೆ ಖಂಡನಾ ನಿರ್ಣಯ ಕೈಗೊಳ್ಳಲಾಗಿದ್ದು, ಇಂತಹ ಬೆದರಿಕೆಗಳ ವಿರುದ್ಧ ಇದೇ 23ರಂದು ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ. ನ್ಯಾಯಾಂಗದ ರಕ್ಷಣೆಗಾಗಿ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ಸೂಕ್ತ ಕ್ರಮ ಕೈಗೊಳ್ಳಲು ಮುಂದಾಗಬೇಕು ಎಂದು ಮನವಿ ಸಲ್ಲಿಸಲು ಸಭೆ ನಿರ್ಧರಿಸಿದೆ.

‘ಪರಿಶ್ರಮ ನೀಟ್’ ಅಕಾಡೆಮಿ

ಬೆಂಗಳೂರು: ರಾಜ್ಯದ ಪ್ರಮುಖ ನೀಟ್ ತರಬೇತಿ ಅಕಾಡೆಮಿ ‘ಪರಿಶ್ರಮ’ ಅಕಾಡೆಮಿಯು ರಾಜಾಜಿನಗರದಲ್ಲಿ ತರಬೇತಿ ಆರಂಭಿಸಲಿದೆ.

ಮುಂದಿನ ಶೈಕ್ಷಣಿಕ ವರ್ಷದಿಂದ ಪಿಯುಸಿ ಪ್ರಥಮ ಮತ್ತು ದ್ವಿತೀಯ ಮತ್ತು ನೀಟ್, ಸಿಇಟಿ, ಜೆಇಇ ತರಗತಿಗಳನ್ನು ಪ್ರಾರಂಭಿಸಲಿದೆ. ಆಸಕ್ತ ಅಭ್ಯರ್ಥಿಗಳು 080– 45912222 ಸಂಪರ್ಕಿಸಬಹುದು ಅಥವಾ www.parishramaneetacademy.com ವೆಬ್‌ಸೈಟ್ ವೀಕ್ಷಿಸಬಹುದು.

ಪ್ರಜಾವಾಣಿ
ಜನಸ್ಪಂದನ
ಸಿಟಿಜನ್ಸ್ ಫಾರ್ ಚೇಂಜ್
ನೀವು ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ನಿವಾಸಿಯೇ?
ನಿಮ್ಮ ಸಮಸ್ಯೆಗಳಿಗೆ ದನಿ ನೀಡಲು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಆಯೋಜಿಸಿರುವ ಜನಸ್ಪಂಧನ ಕಾರ್ಯಕ್ರಮದಲ್ಲಿ ಭಾಗವಹಿಸಿ.
ನಿಮ್ಮ ಅಹವಾಲು ಆಲಿಸಲಿದ್ದಾರೆ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಂ. ಸತೀಶ್ ರೆಡ್ಡಿ ಅವರೊಂದಿಗೆ ಬಿಬಿಎಂಪಿ, ಜಲಮಂಡಳಿ, ಬೆಸ್ಕಾಂ, ಪೊಲೀಸ್ ಹಾಗೂ ಇನ್ನಿತರ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದು, ನಿಮ್ಮ ನೋವಿಗೆ ಕಿವಿಯಾಗಲಿದ್ದಾರೆ ನಿಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಿ.
ಶ್ರೀ ಎಂ.ಸತೀಶ್ ರೆಡ್ಡಿ
- ಟ್ರಾಫಿಕ್
- ಕಸ ವಿಲೇವಾರಿ
- ನೀರು ಸರಬರಾಜು
- ರಸ್ತೆ ಗುಂಡಿಗಳು
ಕಾರ್ಯಕ್ರಮದ ದಿನಾಂಕ – 26/03/2022, ಶನಿವಾರ
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ
(ನೋಂದಣಿ: ಬೆಳಿಗ್ಗೆ 9ರಿಂದ, ಪ್ರವೇಶ ಉಚಿತ)
ಸ್ಥಳ: ಗಣೇಶ ದೇವಸ್ಥಾನ ಮೈದಾನ
186, ಪುಟ್ಟೇನಹಳ್ಳಿ ರೋಡ್, ಕೆ ಆರ್ ಲೇಔಟ್,
ಜೆ ಪಿ ನಗರ 6ನೇ ಹಂತ, ಬೆಂಗಳೂರು 78.
ಸಂಪರ್ಕಕ್ಕೆ:
94485 28998

www.margadarsi.com
RAMOJI GROUP
MARGADARSI CHIT FUND PRIVATE LIMITED 59 YEARS OF TRUST
1962ರಲ್ಲಿ ಸ್ಥಾಪಿತವಾಗಿದೆ
60 ಲಕ್ಷಕ್ಕಿಂತ ಹೆಚ್ಚು ಚಂದಾದಾರರಿಗೆ ಸೇವೆ ಮಾಡಲಾಗಿದೆ
ವಾರ್ಷಿಕ ಟರ್ನೋವರ್ ₹8585 ಕೋಟಿ
108 ಶಾಖೆಗಳು
ಹೆಲೋ ಮಾರ್ಗದರ್ಶಿ.
ಅನಿಶ್ಚಿತತೆಗೆ ಗುಡ್‌ಬೈ.

ನಿಮ್ಮದೇ ಆದ ರೀಟೈಲ್ ವ್ಯಾಪಾರ ನಿರ್ವಹಿಸುವುದು ಅದ್ಭುತ. ಆದರೆ ಈ ಹಿಂದೆ ನಾವು ನೋಡಿದಂತೆ, ಜೀವನದಲ್ಲಿ ಕೆಲವೊಂದು ಸಮಯಗಳಲ್ಲಿ ಅಸ್ಥಿರತೆಗಳು ಬರುವುದು ಸಹಜ. ಆದ್ದರಿಂದಲೇ ನಿಮ್ಮನ್ನು ಆರ್ಥಿಕವಾಗಿ ಸುಸ್ಥಿರವಾಗಿರಿಸಲು ಮಾರ್ಗದರ್ಶಿ ಚಿಟ್‌ಫಂಡ್‌ಗೆ ಚಂದಾದಾರರಾಗುವುದು ಬುದ್ಧಿವಂತಿಕೆಯ ಲಕ್ಷಣ. ಯಾಕೆಂದರೆ ಮಾರ್ಗದರ್ಶಿ ನೀವು ಉಳಿತಾಯ ಮಾಡಿ, ಡಿವಿಡೆಂಡ್ಸ್‌ನ ಗಳಿಸುವುದರ ಜೊತೆಗೆ, ಅತ್ಯಂತ ಕಷ್ಟದ ಸಮಯದಲ್ಲಿ ವೆಚ್ಚವನ್ನು ಪೂರೈಸಲು ನಿಮಗೆ ಸಹಾಯ ಮಾಡಲು ಒಂದು ದೊಡ್ಡ ಮೊತ್ತವನ್ನು ಹಿಂತೆಗೆದುಕೊಳ್ಳುವ ಆಯ್ಕೆಯನ್ನು ನಿಮಗೆ ನೀಡುತ್ತದೆ. ಆದ್ದರಿಂದ ಇಂದೇ ಮಾರ್ಗದರ್ಶಿಯಲ್ಲಿ ಉಳಿತಾಯ ಮಾಡಿ ಮತ್ತು ಅನಿಶ್ಚಿತತೆಗೆ ಗುಡ್‌ಬೈ ಹೇಳಿ.
ಮಾರ್ಗದರ್ಶಿ
ಚಿಟ್ಸ್ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್
ಮಾರ್ಗದರ್ಶಿಯೊಂದಿಗೆ ನೀವು ಯೋಜಿಸಿದಾಗ ಜೀವನ ಸರಳ
ಕರೆಮಾಡಿ 1800 425 7373 (ದರ ರಹಿತ) | ಅಥವಾ 56263ಗೆ<MARG>ಎಸ್‌ಎಂಎಸ್ ಮಾಡಿ | ರಿಜಿಸ್ಟರ್ಡ್ ಆಫೀಸ್: ನಂ.ಎಸ್-801-802, ಮಣಿಪಾಲ್ ಸೆಂಟರ್, ನಂ.47, ಡಿಕೆನ್ಸನ್ ರೋಡ್, ಬೆಂಗಳೂರು - 560 042 | ಫೋನ್ : 080-25322939
ಬೆಂಗಳೂರು: ಗಾಂಧಿ ನಗರ 09844413443/080-22384676 | ಜಯನಗರ 09886895472/080-22457994/22457374 | ಇಂದಿರಾ ನಗರ 07022032210/080-25203738/25211048
ಬಸವೇಶ್ವರ ನಗರ 09886895462/080-23118228, 23148783 | ಬಿಟಿಎಂ ಲೇಔಟ್ 09448732683/080-26687374/26687375 | ಆರ್ ಟಿ ನಗರ ಮುಖ್ಯ ರಸ್ತೆ 09945888381/080-23534949/22744685
ಮಾರತಹಳ್ಳಿ 07022032211/080-25401305 | ಬನಶಂಕರಿ 07022032209/080-26796804/0682 | ಪೀಣ್ಯ 09886538427/080-28392044/32217105
ಹೆಚ್ ಎಸ್ ಆರ್ ಲೇಔಟ್ 09945023103/07079851436/07019781964 | ಬಳ್ಳಾರಿ : 07022032202/08392-279819/267990 | ಹೊಸಪೇಟೆ: 09242979114/08394-222552/325445
ಮೈಸೂರು: 09845171673/0821-3296387 | ರಾಯಚೂರು: 07022032204/08532-229516 | ಹುಬ್ಬಳ್ಳಿ: 07022032207/0836-2356211/2354149 | ದಾವಣಗೆರೆ: 09972071664/08192-251461/237700 | ಶಿವಮೊಗ್ಗ: 09886359387/08182-224644/228233 | ಮಂಗಳೂರು: 09632341559/0824-2442142/2447742 | ಹಾಸನ: 09964224000/08172-233576/233252
ತುಮಕೂರು : 09741250207/0816-2255103/104/3203810 | ಬೆಳಗಾವಿ: 09902670469/0831-2431687

ಕೆಳಸೇತುವೆಯಲ್ಲಿ ನಿಂತಿತ್ತು ನೀರು • ಮುಖ್ಯರಸ್ತೆ ದಾಟುವಾಗ ದುರ್ಘಟನೆ • ಮೂವರಿಗೆ ಗಾಯ • ಕಾರು, ಬೈಕ್ ಜಪ್ತಿ

ಬಿಬಿಎಂಪಿ ಕಸ ಸಾಗಣೆ ಲಾರಿ ಗುದ್ದಿ ಬಾಲಕಿ ಸಾವು

ಪ್ರಜಾವಾಣಿ ವಾರ್ತೆ

ಹೆಬ್ಬಾಳ ಬಸ್ ನಿಲ್ದಾಣ ಬಳಿಯ ಕೆಳಸೇತುವೆಯಲ್ಲಿ ಸೋಮವಾರ ನಿಂತಿದ್ದ ನೀರಿನಲ್ಲಿ ನಡೆದುಕೊಂಡು ಹೋಗಲು ಪಾದಚಾರಿಗಳು ಕಷ್ಟಪಟ್ಟರು – ಪ್ರಜಾವಾಣಿ ಚಿತ್ರ

‘ಕೆಳಸೇತುವೆಯಲ್ಲಿ ಹೆಚ್ಚು ನೀರಿರಲಿಲ್ಲ’

‘ಪ್ರಜಾವಾಣಿ’ ಜೊತೆ ಮಾತನಾಡಿದ ಮುಖ್ಯ ಆಯುಕ್ತ ಗೌರವ್ ಗುಪ್ತ, ‘ಪಾದಚಾರಿ ಕೆಳಸೇತುವೆಯಲ್ಲಿ ನೀರು ನಿಂತಿದ್ದರಿಂದ ಬಾಲಕಿ ರಸ್ತೆ ದಾಟಲು ಹೋಗಿ ಮೃತಪಟ್ಟಿದ್ದಾಳೆಂದು ಕೆಲವರು ಹೇಳುತ್ತಿದ್ದಾರೆ. ಸ್ಥಳ ಪರಿಶೀಲನೆ ನಡೆಸಿದಾಗ, ಕೆಳಸೇತುವೆಯಲ್ಲಿ ಹೆಚ್ಚು ನೀರು ಇರಲಿಲ್ಲ. ಈ ಆರೋಪದ ಬಗ್ಗೆಯೂ ಪರಿಶೀಲನೆ ನಡೆಸಲಾಗುವುದು’ ಎಂದಿದ್ದಾರೆ.

‘ಸದಾ ವಾಹನ ದಟ್ಟಣೆಯಿಂದ ಕೂಡಿರುವ ಮುಖ್ಯರಸ್ತೆ ಇದು. ಪಾದಚಾರಿಗಳು ರಸ್ತೆ ದಾಟುವುದಕ್ಕೆ ಇಲ್ಲಿ ಅವಕಾಶ ಇಲ್ಲ. ದುರ್ಘಟನೆ ನಡೆದ ಸ್ಥಳದ ಸಮೀಪದಲ್ಲೇ ಪಾದಚಾರಿಗಳ ಓಡಾಟಕ್ಕೆ ಕೆಳಸೇತುವೆ ಹಾಗೂ ಸುಸಜ್ಜಿತ ಸ್ಕೈವಾಕ್ ಇದೆ. ಆದರೂ ಬಾಲಕಿಯ ಜೀವಹಾನಿ ದುರದರಷ್ಟಕರ’ ಎಂದರು.

‘ಪಾದಚಾರಿಗಳು ರಸ್ತೆ ದಾಟಬಾರದೆಂದು ಮೂರೂವರೆ ಅಡಿ ಎತ್ತರದ ವಿಭಜಕ ಹಾಕಲಾಗಿದೆ. ಬಾಲಕಿ ಹಾಗೂ ಮತ್ತೊಬ್ಬರು, ರಸ್ತೆ ದಾಟಲು ಹೋಗಿದ್ದರು. ಒಬ್ಬರು ಪಾರಾದರು. ಬಾಲಕಿ ದಾಟಲು ಆಗಲಿಲ್ಲ’ ಎಂದೂ ಹೇಳಿದರು. ‘ಇಂತಹ ಘಟನೆ ಮರುಕಳಿಸದಂತೆ ತಡೆಯಲು ಅಗತ್ಯ ಕ್ರಮ ಕೈಗೊಳ್ಳಲಿದ್ದೇವೆ’ ಎಂದೂ ಅವರು ತಿಳಿಸಿದರು.

ಬೆಂಗಳೂರು: ಹೆಬ್ಬಾಳ ಬಸ್ ನಿಲ್ದಾಣ ಎದುರಿನ ಮುಖ್ಯರಸ್ತೆಯಲ್ಲಿ ಬಿಬಿಎಂಪಿಯ ಕಸ ಸಾಗಣೆ ಲಾರಿ (ಕಾಂಪ್ಯಾಕ್ಟರ್) ಡಿಕ್ಕಿ ಹೊಡೆದು ಭಾನುವಾರ ಸಂಭವಿಸಿದ ಅಪಘಾತದಲ್ಲಿ ಬಾಲಕಿ ಅಕ್ಷಯಾ (14) ಸ್ಥಳದಲ್ಲೇ ಮೃತಪಟ್ಟಿದ್ದಾಳೆ.

‘ಹೆಬ್ಬಾಳ ನಿವಾಸಿ ಅಕ್ಷಯಾ, ಸದಾಶಿವನಗರ ಬಳಿಯ ಶಾಲೆಯೊಂದರಲ್ಲಿ 9ನೇ ತರಗತಿಯ ವಿದ್ಯಾರ್ಥಿನಿ. ಶಾಲೆ ಮುಗಿಸಿ ಮನೆಗೆ ಮರಳುತ್ತಿದ್ದಾಗ ಈ ಅವಘಡ ಸಂಭವಿಸಿದೆ. ಅಪಘಾತದಲ್ಲಿ ಸೌಮ್ಯಾ, ಸಂಧ್ಯಾ ಹಾಗೂ ವಿಕಾಸ್ ಎಂಬುವರು ಗಾಯಗೊಂಡಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮೃತ ಅಕ್ಷಯಾ, ಬಿಎಂಟಿಸಿ ಚಾಲಕ ಮತ್ತು ನಿರ್ವಾಹಕ ನರಸಿಂಹಮೂರ್ತಿ –ಗೀತಾ ದಂಪತಿಯ ಪುತ್ರಿ. ಬಾಲಕಿಯ ತಾಯಿ ನೀಡಿರುವ ದೂರು ಆಧರಿಸಿ ಆರ್‌.ಟಿ.ನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕಸ ಸಾಗಿಸುವ ವಾಹನವನ್ನು ಜಪ್ತಿ ಮಾಡಿ, ಚಾಲಕನನ್ನು ವಶಕ್ಕೆ ಪಡೆದು ತನಿಖೆ ಮುಂದುವರಿಸಲಾಗಿದೆ’ ಎಂದೂ ತಿಳಿಸಿವೆ.

ರಸ್ತೆ ದಾಟುವಾಗ ಅವಘಡ: ‘ಶಾಲೆ ಮುಗಿದ ಬಳಿಕ ಅಕ್ಷಯಾ, ಬಸ್ಸಿನಲ್ಲಿ ಹೆಬ್ಬಾಳ ನಿಲ್ದಾಣಕ್ಕೆ ಬಂದಿದ್ದಳು. ಮನೆಗೆ ಹೋಗಲೆಂದು ಮುಖ್ಯರಸ್ತೆ ದಾಟುತ್ತಿದ್ದಳು. ರಸ್ತೆ ವಿಭಜಕ ಹತ್ತಿ ಇಳಿಯಲು ಮುಂದಾಗಿದ್ದಳು. ಅದೇ ಸಂದರ್ಭದಲ್ಲೇ ಅತೀ ವೇಗವಾಗಿ ಬಂದ ಬಿಬಿಎಂಪಿಯ ಲಾರಿ, ಅಕ್ಷಯಾಗೆ ಗುದ್ದಿತ್ತು. ನಂತರ, ಕಾರು ಹಾಗೂ ಬೈಕ್‌ಗೂ ವಾಹನವು ಡಿಕ್ಕಿ ಹೊಡೆದಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅಪಘಾತದಿಂದಾಗಿ ಅಕ್ಷಯಾ, ರಸ್ತೆಯಲ್ಲೇ ಹಾರಿ ಬಿದ್ದಿದ್ದಳು. ತೀವ್ರ ಗಾಯಗೊಂಡು ಆಕೆ ಸ್ಥಳದಲ್ಲೇ ಮೃತಪಟ್ಟಿದ್ದಾಳೆ. ಆಕೆಯ ಹಿಂದೆಯೇ ರಸ್ತೆ ದಾಟುತ್ತಿದ್ದ ಸೌಮ್ಯಾ ಹಾಗೂ ಬಾಲಕಿ ಸಂಧ್ಯಾಗೂ ಗಾಯವಾಗಿದೆ. ಸೌಮ್ಯಾ ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ. ಬೈಕ್ ಸವಾರ ವಿಕಾಸ್ ಸಹ ಆಸ್ಪತ್ರೆಯಲ್ಲಿದ್ದಾರೆ’ ಎಂದೂ ತಿಳಿಸಿವೆ.

ಬಿಬಿಎಂಪಿ ವಿರುದ್ಧ ಆಕ್ರೋಶ: ‘ಹೆಬ್ಬಾಳ ಬಸ್ ನಿಲ್ದಾಣ ಎದುರು ಪಾದಚಾರಿಗಳು ರಸ್ತೆ ದಾಟಲು, ಕೆಳಸೇತುವೆ ನಿರ್ಮಿಸಲಾಗಿದೆ. ಭಾನುವಾರ ಮಳೆಯಿಂದಾಗಿ ಕೆಳಸೇತುವೆಯಲ್ಲಿ ನೀರು ನಿಂತಿತ್ತು. ಅದರ ತೆರವಿಗೆ ಕ್ರಮ ಕೈಗೊಂಡಿಲ್ಲ. ಇದುವೇ ಬಾಲಕಿ ಸಾವಿಗೆ ಕಾರಣ’ ಎಂದು ಸ್ಥಳೀಯರು ಬಿಬಿಎಂಪಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

‘ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆ ಇದಾಗಿದ್ದು, ನಿತ್ಯವೂ ವಾಹನಗಳ ಓಡಾಟ ಹೆಚ್ಚಿರುತ್ತದೆ. ಪಾದಚಾರಿಗಳು ರಸ್ತೆಯ ಒಂದು ಬದಿಯಿಂದ ಮತ್ತೊಂದು ಬದಿಗೆ ಹೋಗಲೆಂದು ಕೆಳಸೇತುವೆ ನಿರ್ಮಿಸಲಾಗಿದೆ. ಇಲ್ಲಿ ನೀರು ನಿಂತಿದ್ದರಿಂದ, ದಾಟಲು ಸಾಧ್ಯವಾಗಿರಲಿಲ್ಲ. ಹೀಗಾಗಿ, ಅಕ್ಷಯಾ ಮುಖ್ಯರಸ್ತೆ ದಾಟಿ ಮನೆಗೆ ಹೋಗಲು ಮುಂದಾಗಿದ್ದಳು’ ಎಂದು ಸ್ಥಳೀಯರು ತಿಳಿಸಿದರು.

‘ನೀರು ನಿಂತು ಪಾದಚಾರಿಗಳ ಓಡಾಟಕ್ಕೆ ತೊಂದರೆಯಾದ ಬಗ್ಗೆ ಬಿಬಿಎಂಪಿ ಸಹಾಯವಾಣಿಗೆ ದೂರು ನೀಡಲಾಗಿತ್ತು. ಯಾರೊಬ್ಬರು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಲಿಲ್ಲ. ಅಧಿಕಾರಿಗಳ ಬೇಜವಾಬ್ದಾರಿಯಿಂದಲೇ ಇದೀಗ ಅಪಘಾತವಾಗಿದೆ’ ಎಂದೂ ದೂರಿದರು.

ಪೈಲಟ್ ಆಗುವ ಕನಸು ಹೊತ್ತಿದ್ದ ಅಕ್ಷಯಾ

ಅಕ್ಷಯಾ

ತುಮಕೂರು ಜಿಲ್ಲೆಯ ಮಧುಗಿರಿಯ ನರಸಿಂಹಮೂರ್ತಿ, ಬಿಎಂಟಿಸಿಯಲ್ಲಿ ಕೆಲಸಕ್ಕೆ ಸೇರಿ ಜೀವನ ಕಟ್ಟಿಕೊಂಡಿದ್ದರು. ಪತ್ನಿ ಹಾಗೂ ಇಬ್ಬರು ಹೆಣ್ಣು ಮಕ್ಕಳ ಜೊತೆ ಹೆಬ್ಬಾಳದಲ್ಲಿ ವಾಸವಿದ್ದರು. ದೊಡ್ಡ ಮಗಳು ಅಕ್ಷಯಾ ಅಪಘಾತದಲ್ಲಿ ಮೃತಪಟ್ಟಿರುವುದರಿಂದ ಇಡೀ ಕುಟುಂಬ ಕಂಗಾಲಾಗಿದೆ.

ಮೃತದೇಹ ಇರಿಸಿದ್ದ ಯಲಹಂಕದ ಸರ್ಕಾರಿ ಆಸ್ಪತ್ರೆಗೆ ಬಂದಿದ್ದ ಕುಟುಂಬಸ್ಥರು, ಅಕ್ಷಯಾಳನ್ನು ನೆನೆದು ಕಣ್ಣೀರಿಟ್ಟರು.

ಸುದ್ದಿಗಾರರ ಜೊತೆ ಮಾತನಾಡಿದ ನರಸಿಂಹಮೂರ್ತಿ, ‘ಮಗಳು ಅಕ್ಷಯಾ, ಓದಿನಲ್ಲಿ ಜಾಣೆಯಾಗಿದ್ದಳು. ಪೈಲಟ್ ಆಗುವ ಕನಸು ಹೊತ್ತಿದ್ದಳು. ಈಗ ವಿಮಾನವಿಲ್ಲದೇ ಹಾರಿ ಹೋದಳು’ ಎಂದು ಬಿಕ್ಕಿ ಬಿಕ್ಕಿ ಅತ್ತರು. ‘ನನಗೆ ಎಷ್ಟೇ ಕಷ್ಟ ಇದ್ದರೂ ಮಕ್ಕಳಿಗೆ ಹೇಳಿರಲಿಲ್ಲ. ಇಬ್ಬರೂ ಮಕ್ಕಳನ್ನು ಚೆನ್ನಾಗಿ ಓದಿಸುವ ಆಸೆ ಇತ್ತು. ಅಕ್ಷಯಾ ಸಹ ನನ್ನ ಕಷ್ಟ ಅರ್ಥ ಮಾಡಿಕೊಂಡು ಓದುತ್ತಿದ್ದಳು. ₹ 100 ಕೊಟ್ಟರೆ ವಾರಗಟ್ಟಲೇ ಜೊತೆಯಲ್ಲಿಟ್ಟುಕೊಳ್ಳುತ್ತಿದ್ದಳು. ಆಕೆಯನ್ನು ಕಳೆದುಕೊಂಡು, ಜೀವನವೇ ಬೇಡವೆನಿಸುತ್ತಿದೆ’ ಎಂದೂ ಕಣ್ಣೀರಿಟ್ಟರು.

‘₹ 2 ಲಕ್ಷ ಪರಿಹಾರ’

ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಶಾಸಕ ಭೈರತಿ ಸುರೇಶ್, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಅಪಘಾತ ಸ್ಥಳ ಹಾಗೂ ಯಲಹಂಕ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿದರು.

ಕುಟುಂಬದವರಿಗೆ ಸಾಂತ್ವನ ಹೇಳಿದ ಭೈರತಿ ಸುರೇಶ್, ‘ಅಪಘಾತದ ಬಗ್ಗೆ ಬಿಬಿಎಂಪಿ ಮುಖ್ಯ ಆಯುಕ್ತರು ತನಿಖೆಗೆ ಸೂಚನೆ ನೀಡಿದ್ದಾರೆ. ವರದಿ ಆಧರಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಿದ್ದಾರೆ’ ಎಂದರು. ಬಾಲಕಿಯ ತಂದೆಗೆ, ₹ 2 ಲಕ್ಷ ಪರಿಹಾರ ನೀಡಿದರು.

‘ಬಿಬಿಎಂಪಿಯನ್ನು ಮೊದಲು ಸ್ವಚ್ಛಗೊಳಿಸಿ’

ಬೆಂಗಳೂರು: ನಗರದ ಗೌರವ ಮತ್ತು ಪ್ರತಿಷ್ಠೆಯನ್ನು ಹಾಳು ಮಾಡುತ್ತಿರುವ ಭ್ರಷ್ಟ ಅಧಿಕಾರಿಗಳನ್ನು ಬಿಬಿಎಂಪಿಯಿಂದ ಹೊರಹಾಕಿ ಮೊದಲು ಪಾಲಿಕೆಯನ್ನು ಸ್ವಚ್ಛಗೊಳಿಸಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ಕಸ ಸಾಗಣೆಯ ಲಾರಿ ಹರಿದು ಶಾಲಾ ಬಾಲಕಿ ಮೃತಪಟ್ಟಿರುವ ಘಟನೆ ಕುರಿತು ಸೋಮವಾರ ಸರಣಿ ಟ್ವೀಟ್ ಮಾಡಿರುವ ಅವರು, ‘ಬಾಳಿ, ಬದುಕಬೇಕಿದ್ದ ಬಾಲಕಿ ಹೆಬ್ಬಾಳದ ಮೇಲುಸೇತುವೆ ಬಳಿ ಸಂಭವಿಸಿದ ಅಪಘಾತದಲ್ಲಿ ಮೃತಪಟ್ಟಿದ್ದಾಳೆ. ಬಿಬಿಎಂಪಿ ಆಡಳಿತದ ಬೇಜವಾಬ್ದಾರಿ, ನಿರ್ಲಕ್ಷ್ಯ, ಅಸಮರ್ಪಕ ಕಸ ವಿಲೇವಾರಿ, ರಸ್ತೆ ಮತ್ತು ಚರಂಡಿಗಳ ನಿರ್ವಹಣೆಯಲ್ಲಿನ ಲೋಪದಿಂದ ಜನರ ಜೀವಕ್ಕೆ ಬೆಲೆಯೇ ಇಲ್ಲದಂತಾಗಿದೆ’ ಎಂದಿದ್ದಾರೆ.

ಭಾನುವಾರ ಸುರಿದ ಮಳೆಯಿಂದ ಹೆಬ್ಬಾಳ ಫ್ಲೈ ಓವರ್ ಬಳಿಯ ಕೆಳಸೇತುವೆಯಲ್ಲಿ ನೀರು ತುಂಬಿತ್ತು. ಹೀಗಾಗಿ ಮಕ್ಕಳು ಅಂಡರ್ ಪಾಸ್‌ನಲ್ಲಿ ಹೋಗದೇ ರಸ್ತೆ ದಾಟುತ್ತಿದ್ದರು. ದುರ್ಘಟನೆಗೆ ಬಿಬಿಎಂಪಿ ಆಡಳಿತವೇ ಹೊಣೆ ಎಂದು ಹೇಳಿದ್ದಾರೆ.

ಹೈಕೋರ್ಟ್ ಛೀಮಾರಿ ಹಾಕಿದ್ದರೂ, ಎಂಜಿನಿಯರ್‌ಗಳನ್ನು ಜೈಲಿಗೆ ಅಟ್ಟುವುದಾಗಿ ಎಚ್ಚರಿಕೆ ನೀಡಿದ್ದರೂ ಎಮ್ಮೆ ಚರ್ಮದ ಪಾಲಿಕೆ ಪಾಠ ಕಲಿತಿಲ್ಲ. ಬಿಬಿಎಂಪಿ ಆಟಗಳಿಗೆ ಸೀಟಿ ಹೊಡೆಯುತ್ತಾ, ಅಲ್ಲಿನ ಅದಕ್ಷ ಅಧಿಕಾರಿಗಳನ್ನು ಪೊರೆದು ಪೋಷಣೆ ಮಾಡುತ್ತಿರುವ ಸರ್ಕಾರಕ್ಕೆ ಆತ್ಮಸಾಕ್ಷಿ ಎನ್ನುವುದೇ ಇಲ್ಲವಾಗಿದೆ. ಬಿಬಿಎಂಪಿಯಿಂದಲೇ ಬೆಂಗಳೂರಿನ ಸ್ವಚ್ಛತೆ ಆರಂಭವಾಗಬೇಕು ಎಂದು ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸುದ್ದಿ 2 ನಿಮಿಷ

ಸುಪ್ರೀಂ ಕೋರ್ಟ್ ಮೊರೆ ಹೋದ ವೇಣುಗೋಪಾಲ್

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ ಕುಲಪತಿ ಹುದ್ದೆಗೆ ನೇಮಕಗೊಂಡಿರುವುದನ್ನು ಹೈಕೋರ್ಟ್ ವಿಭಾಗೀಯ ಪೀಠ ರದ್ದುಪಡಿಸಿದ್ದು, ಇದನ್ನು ಪ್ರಶ್ನಿಸಿ ಡಾ.ಕೆ.ಆರ್. ವೇಣುಗೋಪಾಲ್ ಅವರು ಸೋಮವಾರ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ.

ಡಾ. ಸಂಗಮೇಶ್ ಪಾಟೀಲ, ಕರ್ನಾಟಕ ಸರ್ಕಾರ, ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಕುಲಾಧಿಪತಿ ಅವರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಸರ್ಕಾರದ ಪರವಾಗಿ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಬೆಂಗಳೂರು ವಿ.ವಿಯ ಪರವಾಗಿ ಕುಲಸಚಿವರು ಮತ್ತು ಕುಲಾಧಿಪತಿಯಾಗಿರುವ ರಾಜ್ಯಪಾಲರನ್ನು ಪ್ರತಿವಾದಿಗಳು ಎಂದು ಅರ್ಜಿಯಲ್ಲಿ ನಮೂದಿಸಲಾಗಿದೆ. ಗೋಪಾಲ್ ಝಾ ಅವರು ವೇಣುಗೋಪಾಲ್ ಅವರ ಪರ ವಕೀಲರಾಗಿದ್ದಾರೆ.

ಡಾ. ಸಂಗಮೇಶ್ ಪಾಟೀಲ ಅವರು ಕೆ.ಆರ್. ವೇಣುಗೋಪಾಲ್ ಅವರ ನೇಮಕಾತಿಯನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು.

ಹೊಸ ಕುಲಪತಿ ನೇಮಕಕ್ಕೆ ಆಗ್ರಹ: ಕುಲಪತಿ ಹುದ್ದೆಯ ನೇಮಕಾತಿ ಗೊಂದಲಗಳಿಂದಾಗಿ ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆ ಮೇಲೆ ಪರಿಣಾಮ ಬೀರಿದೆ. ಆದ್ದರಿಂದ ಹೊಸ ಕುಲಪತಿಯನ್ನು ಶೀಘ್ರ ನೇಮಕ ಮಾಡಬೇಕು ಎಂದು ಸಿಂಡಿಕೇಟ್ ಸದಸ್ಯ ಡಾ.ಎಚ್. ಸುಧಾಕರ್ ಒತ್ತಾಯಿಸಿದ್ದಾರೆ.

ಏ.8ಕ್ಕೆ ವಿಶ್ವವಿದ್ಯಾಲಯದ ಘಟಿಕೋತ್ಸವ ಇದೆ. ಜತೆಗೆ, ನ್ಯಾಕ್ ತಂಡವೂ ವಿಶ್ವವಿದ್ಯಾಲಯಕ್ಕೆ ಶೀಘ್ರ ಭೇಟಿ ನೀಡಲಿದೆ. ಹೀಗಾಗಿ, ಪರ್ಯಾಯ ವ್ಯವಸ್ಥೆ ಮಾಡಬೇಕು ಎಂದಿದ್ದಾರೆ.

‘ಚೆಕ್ ಬೌನ್ಸ್–ಮಧ್ಯಂತರ ಪರಿಹಾರ ಕಡ್ಡಾಯವಲ್ಲ’

ಬೆಂಗಳೂರು: ‘ಚೆಕ್ ಬೌನ್ಸ್ ಪ್ರಕರಣಗಳಲ್ಲಿ ಮಧ್ಯಂತರ ಪರಿಹಾರ ಪಾವತಿಗೆ ಆದೇಶಿಸುವುದು ಕಡ್ಡಾಯವಲ್ಲ. ಒಂದೊಮ್ಮೆ ಮಧ್ಯಂತರ ಪರಿಹಾರ ಪಾವತಿಗೆ ಆದೇಶಿಸಲು ಮುಂದಾದರೆ, ಅದಕ್ಕೆ ಸೂಕ್ತ ಕಾರಣ ಉಲ್ಲೇಖಿಸಬೇಕಾಗುತ್ತದೆ’ ಎಂದು ಹೈಕೋರ್ಟ್ ತೀರ್ಪು ನೀಡಿದೆ.

‘ಈ ಸಂಬಂಧ ಯಲಬುರ್ಗಾ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಹೊರಡಿಸಿದ್ದ ಆದೇಶ ರದ್ದುಪಡಿಸಬೇಕು’ ಎಂದು ಕೋರಿ ಕೊಪ್ಪಳದ ಕುಷ್ಟಗಿ ನಿವಾಸಿ ವಿಜಯಾ ಎಂಬುವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ, ಅರ್ಜಿದಾರರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಮತ್ತು ಆಸ್ತಿ ಹರಾಜಿಗೆ ಕೊಪ್ಪಳ ಮುನ್ಸಿಪಲ್ ಆಯುಕ್ತರು 2022ರ ಜನವರಿ 10ರಂದು ಹೊರಡಿಸಿದ ಸಾರ್ವಜನಿಕ ಪ್ರಕಟಣೆಯನ್ನು ರದ್ದುಪಡಿಸಿದೆ.

‘ಚೆಕ್ ಬೌನ್ಸ್ ಪ್ರಕರಣದಲ್ಲಿ ದೂರುದಾರರಿಗೆ (ಸಾಲ ನೀಡಿದವರು) ಮಧ್ಯಂತರ ಪರಿಹಾರ ಪಾವತಿಸುವಂತೆ ಆರೋಪಿಗೆ (ಸಾಲ ಪಡೆದವರು) ಆದೇಶಿಸುವ ವಿವೇಚನಾ ಅಧಿಕಾರವನ್ನು ಮ್ಯಾಜಿಸ್ಟ್ರೇಟ್ ಕೋರ್ಟ್ ಹೊಂದಿದೆ. ಆದರೆ, ಮಧ್ಯಂತರ ಪರಿಹಾರ ಪಾವತಿಗೆ ಆದೇಶಿಸುವುದು ಕಡ್ಡಾಯವೇನಲ್ಲ’ ಎಂದು ನ್ಯಾಯಪೀಠ ತೀರ್ಪಿನಲ್ಲಿ ವಿವರಿಸಿದೆ.

‘ಗಣರಾಜ್ಯೋತ್ಸವ ದಿನದಂದು ರಾಯಚೂರಿನಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಭಾವಚಿತ್ರಕ್ಕೆ ಅವಮಾನ ಮಾಡಿರುವ ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ಅವರನ್ನು ಸೇವೆಯಿಂದ ವಜಾ ಮಾಡಬೇಕು’ ಎಂದು ಒತ್ತಾಯಿಸಿ ಭಾರತೀಯ ದಲಿತ ಸಂಘರ್ಷ ಸಮಿತಿ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಡಿಕೆಶಿ ಬಂಧನ ವೇಳೆ ಬಂದ್: ಹೊಸ ಪ್ರಮಾಣಪತ್ರ ಸಲ್ಲಿಸಲು ನಿರ್ದೇಶನ

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಬೆಂಗಳೂರು: ಅಕ್ರಮ ಹಣ ವರ್ಗಾವಣೆ ಆರೋಪದಡಿ 2019ರಲ್ಲಿ ಶಾಸಕ ಡಿ.ಕೆ.ಶಿವಕುಮಾರ್ ಅವರನ್ನು ಬಂಧಿಸಿದ್ದನ್ನು ಖಂಡಿಸಿ ರಾಮನಗರ, ಕನಕಪುರ ತಾಲ್ಲೂಕಿನಲ್ಲಿ ನಡೆದ ಬಂದ್ ವೇಳೆ ಉಂಟಾದ ಆಸ್ತಿಪಾಸ್ತಿ ನಷ್ಟಕ್ಕೆ ಸಂಬಂಧಿಸಿದಂತೆ ಸರ್ಕಾರ ಸಲ್ಲಿಸಿದ ಪ್ರಮಾಣ ಪತ್ರವನ್ನು ಹೈಕೋರ್ಟ್ ತಿರಸ್ಕರಿಸಿದೆ.

ಈ ಕುರಿತಂತೆ ರವಿಕುಮಾರ್ ಕಂಚನಹಳ್ಳಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, ‘ಗಲಭೆ ಪ್ರಕರಣಗಳಲ್ಲಿ ಬಂದ್ ಕರೆ ಕೊಟ್ಟವರಿಂದ ನಷ್ಟ ವಸೂಲಿಗೆ ಸಂಬಂಧಿಸಿದಂತೆ 2020ರ ಫೆಬ್ರುವರಿ 25ರಂದು ಹೈಕೋರ್ಟ್ ನೀಡಿದ್ದ ಆದೇಶ ಪಾಲನೆಯಾಗಿಲ್ಲ’ ಎಂಬ ಆಕ್ಷೇಪಣೆಗೆ ಸಂಬಂಧಿಸಿದಂತೆ ಪ್ರಮಾಣಪತ್ರ ಸಲ್ಲಿಸಿದರು. ‘ಆದರೆ, ಆಸ್ತಿಪಾಸ್ತಿ ನಷ್ಟದ ಅಂದಾಜಿಸಲು ನೇಮಿಸಲಾದ ಕ್ಲೇಮು ಕಮಿಷನರ್ ಅವರಿಗೆ ಕೆಲಸ ನಿರ್ವಹಿಸಲು ಮೂಲ ಸೌಕರ್ಯ ಕಲ್ಪಿಸಿಲ್ಲ’ ಎಂದು ನ್ಯಾಯಪೀಠ ಬೇಸರ ವ್ಯಕ್ತಪಡಿಸಿತು.

‘ಪ್ರಮಾಣಪತ್ರದಲ್ಲಿನ ವಿವರಗಳು ಸಮರ್ಪಕವಾಗಿಲ್ಲ’ ಎಂದ ನ್ಯಾಯಪೀಠ, ಏಪ್ರಿಲ್ 14ರೊಳಗೆ ಬೇರೆ ಪ್ರಮಾಣಪತ್ರ ಸಲ್ಲಿಸಿ’ ಎಂದು ವಿಚಾರಣೆ ಮುಂದೂಡಿದೆ.

ಚನ್ನಪಟ್ಟಣ, ಕನಕಪುರ ಸೇರಿದಂತೆ ರಾಮನಗರ ಜಿಲ್ಲೆಯಲ್ಲಿ ನಡೆದ ವಿವಿಧ ಪ್ರತಿಭಟನೆಗಳಲ್ಲಿ ಉಂಟಾದ ಸಾರ್ವಜನಿಕ ಆಸ್ತಿ-ಪಾಸ್ತಿ ನಷ್ಟದ ಪ್ರಮಾಣ ಅಂದಾಜಿಸಲು ಜಿಲ್ಲಾ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ಸಿ.ಆರ್.ಬೆನಕನಹಳ್ಳಿ ಅವರನ್ನು ಕ್ಲೇಮು ಕಮೀಷನರ್ ಆಗಿ ನೇಮಿಸಲಾಗಿದೆ.

ಮುಸ್ಲಿಮರು ಕಾಮುಕರು: ಕಲ್ಲಡ್ಕ ಪ್ರಭಾಕರ್ ಭಟ್

ಪ್ರಜಾವಾಣಿ ವಾರ್ತೆ

ಸಾಗರ: ‘ಮುಸ್ಲಿಂ ಸಮುದಾಯದವರಿಗೆ ಪ್ರೀತಿ, ಪ್ರೇಮದ ವಿಷಯ ಗೊತ್ತಿಲ್ಲ. ಮುಸ್ಲಿಮರು ಎಂದರೆ ಕಾಮುಕರೆ. ಅವರು ಬೇರೆ ಧರ್ಮದವರನ್ನು ಮದುವೆಯಾಗುವುದೇ ಇಸ್ಲಾಂಗೆ ಮತಾಂತರ ಮಾಡುವುದಕ್ಕಾಗಿ’ ಎಂದು ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್ ಹೇಳಿದ್ದಾರೆ.

ಇಲ್ಲಿನ ಗಾಂಧಿ ಮೈದಾನದಲ್ಲಿ ವಿಶ್ವ ಹಿಂದೂ ಪರಿಷತ್, ಬಜರಂಗ ದಳ ಶಿವಾಜಿ ಜಯಂತಿ ಆಚರಣೆ ಅಂಗವಾಗಿ ಸೋಮವಾರ ಏರ್ಪಡಿಸಿದ್ದ ಹಿಂದೂ ಸಾಮ್ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಈ ಹೇಳಿಕೆ ನೀಡಿದ್ದಾರೆ.

ಭಾರತದಲ್ಲಿರುವ ಯಾವುದೇ ಮಸೀದಿ ಅಥವಾ ಚರ್ಚ್ ಆಯಾ ಧರ್ಮದವರಿಗೆ ಸೇರಿದ್ದಲ್ಲ. ಅದೆಲ್ಲವೂ ಈ ನೆಲದ ಸ್ವತ್ತು ಆಗಿದೆ. ಆದಾಗ್ಯೂ ಕೆಲವು ರಾಜಕೀಯ ಪಕ್ಷಗಳಿಗೆ ಈ ಸತ್ಯವನ್ನು ಹೇಳಿದ ಧೈರ್ಯವಿಲ್ಲ. ಮುಸ್ಲಿಮರು ಬಿಜೆಪಿಗೆ ಮತ ನೀಡದೇ ಇದ್ದರೂ ಆ ಪಕ್ಷಕ್ಕೆ ಅಲ್ಪಸಂಖ್ಯಾತ ಘಟಕ ಎಂದು ಇರುವುದಾದರೂ ಏಕೆ ಎಂದರು.

ಭಾರತದ ಧ್ವಜ ಕೇಸರಿ ಬಣ್ಣದ್ದೇ ಆಗಿರಬೇಕು ಎಂಬ ಪ್ರಸ್ತಾಪ ಇಂದಿನದ್ದಲ್ಲ. ಸ್ವಾತಂತ್ರ್ಯ ಬಂದ ಸಂದರ್ಭದಲ್ಲೆ ಆ ಪ್ರಸ್ತಾಪವಿತ್ತು. ಈ ದೇಶವೇ ಕೇಸರಿ ಆಗಿರುವಾಗ ಕೇಸರೀಕರಣ ಮಾಡುವ ಪ್ರಶ್ನೆ ಎಲ್ಲಿಂದ ಉದ್ಭವವಾಗುತ್ತದೆ ಎಂದು ಕೇಳಿದರು.

ಎಸಿಬಿ ಹೆಸರಿನಲ್ಲಿ ಹಣ ವಸೂಲಿ: ‘ದಲ್ಲಾಳಿ’ ಬಂಧನ

ಬೆಂಗಳೂರು: ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಹೆಸರಿನಲ್ಲಿ ₹ 10 ಲಕ್ಷ ವಸೂಲಿ ಮಾಡಿದ್ದ ಪ್ರಕರಣದ ಮತ್ತೊಬ್ಬ ಆರೋಪಿ ವಿಜಯ್‌ಕುಮಾರ್ ಅವರನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಎಸಿಬಿ ತನಿಖೆಯಲ್ಲಿ ಅನುಕೂಲ ಮಾಡಿಕೊಟ್ಟು ಆರೋಪಮುಕ್ತಗೊಳಿಸುವ ಆಮಿಷವೊಡ್ಡಿ ಬಿಡಿಎ ಸಹಾಯಕ ಎಂಜಿನಿಯರ್ ಅರವಿಂದ್ ಅವರಿಂದ ₹ 10 ಲಕ್ಷ ವಸೂಲಿ ಮಾಡಲಾಗಿತ್ತು. ಈ ಪ್ರಕರಣದಲ್ಲಿ ಪ್ರವೀಣ್, ಚೇತನ್ ಹಾಗೂ ಮನೋಜ್‌ಕುಮಾರ್ ಎಂಬುವರನ್ನು ಇತ್ತೀಚೆಗೆ ಬಂಧಿಸಲಾಗಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪ್ರಕರಣದ ಪ್ರಮುಖ ಆರೋಪಿ ಎನ್ನಲಾದ ವಿಜಯ್‌ಕುಮಾರ್, ಪ್ರಕರಣ ದಾಖಲಾಗುತ್ತಿದ್ದಂತೆಯೇ ತಲೆಮರೆಸಿಕೊಂಡಿದ್ದರು. ಇತ್ತೀಚೆಗೆ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾರೆ’ ಎಂದೂ ತಿಳಿಸಿವೆ.

‘ವಿಜಯ್‌ಕುಮಾರ್, ರಿಯಲ್ ಎಸ್ಟೇಟ್ ಹಾಗೂ ಸರ್ಕಾರಿ ದಾಖಲೆ ಸಿದ್ಧಪಡಿಸುವ ದಲ್ಲಾಳಿ. ಬಿಡಿಎ ಸೇರಿದಂತೆ ಸರ್ಕಾರಿ ಕಚೇರಿಗಳಲ್ಲೇ ಹೆಚ್ಚು ಸಮಯ ಕಳೆಯುತ್ತಿದ್ದರು. ಕೆಲ ಅಧಿಕಾರಿಗಳ ಜೊತೆಯಲ್ಲೂ ಒಡನಾಟ ಹೊಂದಿದ್ದ ಮಾಹಿತಿ ಇದೆ.’

‘ಎಚ್‌ಎಸ್‌ಆರ್ ಲೇಔಟ್‌ನ ಬಿಡಿಎ ಕಚೇರಿ ಮೇಲೆ 2021ರ ನವೆಂಬರ್ 19ರಂದು ಎಸಿಬಿ ಅಧಿಕಾರಿಗಳು ದಾಳಿ ಮಾಡಿದ್ದರು. ಭ್ರಷ್ಟಾಚಾರ ಆರೋಪದಡಿ ಪ್ರಕರಣ ದಾಖಲಿಸಿಕೊಂಡಿದ್ದರು. ಅದೇ ಕಚೇರಿಯ ಸಹಾಯಕ ಎಂಜಿನಿಯರ್ ಅರವಿಂದ್ ಸಹ ಆರೋಪಿಯಾಗಿದ್ದರು’ ಎಂದೂ ಮೂಲಗಳು ಹೇಳಿವೆ.

‘ಅರವಿಂದ್ ಅವರನ್ನು ಸಂಪರ್ಕಿಸಿದ್ದ ಆರೋಪಿಗಳು, ‘ಎಸಿಬಿ ಅಧಿಕಾರಿಗಳು ನಮಗೆ ಪರಿಚಯ. ಅವರ ಮೂಲಕ ನಿಮ್ಮನ್ನು ಆರೋಪಮುಕ್ತಗೊಳಿಸಲಾಗುವುದು. ಅದಕ್ಕೆ ₹ 10 ಲಕ್ಷ ಖರ್ಚಾಗುತ್ತದೆ’ ಎಂದಿದ್ದರು. ಅದನ್ನು ನಂಬಿದ್ದ ಅರವಿಂದ್, ಸದಾಶಿವನಗರದ ಹೋಟೆಲೊಂದರಲ್ಲಿ ಆರೋಪಿಗಳಿಗೆ ಹಣ ಕೊಟ್ಟಿದ್ದರು. ಅದಾದ ನಂತರ, ಆರೋಪಿಗಳು ನಾಪತ್ತೆಯಾಗಿದ್ದರು’ ಎಂದೂ ಮೂಲಗಳು ಹೇಳಿವೆ.

ಅಪರಾಧ: ಆನ್‌ಲೈನ್‌ನಲ್ಲಿ ದೂರು ಸ್ವೀಕಾರ

ಪ್ರಜಾವಾಣಿ ವಾರ್ತೆ

ಆನ್‌ಲೈನ್ ಗೇಮ್: ಪ್ರಕರಣ ರದ್ದು

ಬೆಂಗಳೂರು: ಡ್ರೀಮ್–11 ಗೇಮಿಂಗ್ ಆ್ಯಪ್ ಸಂಸ್ಥಾಪಕರ ವಿರುದ್ಧ ನಗರದ ಅನ್ನಪೂರ್ಣೇಶ್ವರಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಕುರಿತಂತೆ ಮುಂಬೈನ್ ಭವಿತ್ ಶೇಠ್ ಹಾಗೂ ಹರ್ಷ ಜೈನ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

‘ಆನ್‌ಲೈನ್ ಜೂಜು ನಿಷೇಧಿಸಿ ಕರ್ನಾಟಕ ಪೊಲೀಸ್ ಕಾಯ್ದೆ-1963ಕ್ಕೆ ತರಲಾಗಿದ್ದ ತಿದ್ದುಪಡಿಯನ್ನು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ವಿಭಾಗೀಯ ನ್ಯಾಯಪೀಠ ರದ್ದುಪಡಿಸಿರುವ ಕಾರಣ ಅರ್ಜಿದಾರರ ವಿರುದ್ಧ ಅನ್ನಪೂರ್ಣೇಶ್ವರಿ ಠಾಣೆಯಲ್ಲಿ ದಾಖಲಾಗಿರುವ ದೂರನ್ನು ರದ್ದುಗೊಳಿಸಲಾಗುತ್ತಿದೆ’ ಎಂದು ನ್ಯಾಯಪೀಠ ತೀರ್ಪಿನಲ್ಲಿ ತಿಳಿಸಿದೆ.

ರಾಜ್ಯ ಸರ್ಕಾರವು ಕರ್ನಾಟಕ ಪೊಲೀಸ್ (ತಿದ್ದುಪಡಿ) ಕಾಯ್ದೆ–2021ರ ಅನುಷ್ಠಾನಗೊಳಿಸುವ ಮೂಲಕ ಆನ್ ಲೈನ್ ಗೇಮ್ ನಿಷೇಧಿಸಿತ್ತು. ಈ ಹಿನ್ನೆಲೆಯಲ್ಲಿ ಅರ್ಜಿದಾರರ ವಿರುದ್ಧ ಅನ್ನಪೂರ್ಣೇಶ್ವರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಬೆಂಗಳೂರು: ಕಳೆದುಹೋದ ವಸ್ತುಗಳ ಬಗ್ಗೆ ದೂರು ಸ್ವೀಕರಿಸಲು ‘ಇ- ಲಾಸ್ಟ್’ ವ್ಯವಸ್ಥೆ ಜಾರಿಗೊಳಿಸಿ ಯಶಸ್ವಿಯಾಗಿರುವ ಪೊಲೀಸ್ ಇಲಾಖೆ, ಅಪರಾಧ ಕೃತ್ಯಗಳ ದೂರು ದಾಖಲಿಸಲು ಹಾಗೂ ಎಫ್‌ಐಆರ್ ಪ್ರತಿ ಪಡೆಯಲು ಹೊಸ ಆನ್‌ಲೈನ್ ವ್ಯವಸ್ಥೆ ರೂಪಿಸಲು ಸಿದ್ಧತೆ ನಡೆಸಿದೆ.

ಮೊಬೈಲ್, ಸಿಮ್ ಕಾರ್ಡ್, ಪ್ಯಾನ್ ಕಾರ್ಡ್, ಆಧಾರ್, ಚುನಾವಣಾ ಗುರುತಿನ ಚೀಟಿ ಸೇರಿದಂತೆ ಇತರೆ ದಾಖಲೆಗಳು ಕಳೆದುಹೋದರೆ, ‘ಇ-ಲಾಸ್ಟ್’ ಆ್ಯಪ್ ಮೂಲಕ ದೂರು ದಾಖಲಿಸಿ ಸ್ವೀಕೃತಿ ಪತ್ರ ಪಡೆಯುವ ಸೌಲಭ್ಯವಿದೆ. ಇತರೆ ಅಪರಾಧ ಕೃತ್ಯಗಳು ಸಂಭವಿಸಿದಾಗ ಮಾತ್ರ ಖುದ್ದು ಠಾಣೆಗೆ ಹಾಜರಾಗಿ ದೂರು ದಾಖಲಿಸಬೇಕಿದ್ದು, ಇದರಿಂದ ಜನರು ತೊಂದರೆ ಅನುಭವಿಸುತ್ತಿದ್ದಾರೆ. ಸಮಯವೂ ವ್ಯರ್ಥವಾಗುತ್ತಿದೆ.

ಇದಕ್ಕೆ ಪರಿಹಾರ ಕಂಡುಕೊಳ್ಳಲು ಮುಂದಾಗಿರುವ ಪೊಲೀಸ್ ಇಲಾಖೆ, ವಾಹನ ಕಳವು, ಮನೆಗಳಲ್ಲಿ ಕಳ್ಳತನ ಹಾಗೂ ವ್ಯಕ್ತಿಗಳ ನಾಪತ್ತೆ ಪ್ರಕರಣಗಳ ಬಗ್ಗೆ ಆನ್‌ಲೈನ್‌ನಲ್ಲಿ ದೂರು ದಾಖಲಿಸುವ ಹಾಗೂ ಎಫ್‌ಐಆರ್ ಪ್ರತಿ ಪಡೆಯುವ ವ್ಯವಸ್ಥೆ ರೂಪಿಸುತ್ತಿದೆ. ಇದು ಜಾರಿಗೆ ಬಂದರೆ, ಠಾಣೆಗೆ ಅಲೆಯುವುದು ತಪ್ಪಲಿದೆ.

‘ಪೊಲೀಸ್ ಇಲಾಖೆಯ ಜಾಲತಾಣದ (https://ksp.karnataka.gov.in) ಮೂಲಕ ಆನ್‌ಲೈನ್ ವ್ಯವಸ್ಥೆ ಜಾರಿಗೆ ತರಲು ಅಧಿಕಾರಿಗಳು ತಯಾರಿ ನಡೆಸುತ್ತಿದ್ದಾರೆ. ಸಾರ್ವಜನಿಕರು, ಅಪರಾಧ ಕೃತ್ಯಗಳ ಬಗ್ಗೆ ದೂರು ನೀಡುವಾಗ ತಮ್ಮ ಹೆಸರು, ಮನೆ ವಿಳಾಸ, ಅಪರಾಧ ಕೃತ್ಯದ ವಿವರ ಹಾಗೂ ಆಧಾರ್ ಸಂಖ್ಯೆ ನಮೂದಿಸುವ ಆಯ್ಕೆಗಳು ಇರಲಿವೆ. ದೂರು ಸಲ್ಲಿಸುತ್ತಿದ್ದಂತೆಯೇ, ಸಂಬಂಧಪಟ್ಟ ಠಾಣೆಗೆ ಮಾಹಿತಿ ಹೋಗಲಿದೆ. ನಂತರ, ಎಫ್‌ಐಆರ್ ದಾಖಲಿಸಿಕೊಂಡು ಪೊಲೀಸರು ತನಿಖೆ ಆರಂಭಿಸಲಿದ್ದಾರೆ. ಜೊತೆಗೆ, ಆನ್‌ಲೈನ್‌ನಲ್ಲೇ ದೂರುದಾರರಿಗೆ ಎಫ್‌ಐಆರ್ ಸಿಗಲಿದೆ’ ಎಂದು ಪೊಲೀಸ್ ಇಲಾಖೆ ಮೂಲಗಳು ಹೇಳಿವೆ.

‘ತಂತ್ರಜ್ಞಾನದ ಮೂಲಕ ಸಾರ್ವಜನಿಕರಿಗೆ ಸೇವೆ ನೀಡಲು ಪ್ರಯತ್ನಿಸಲಾಗುತ್ತಿದೆ. ದೆಹಲಿ ಹಾಗೂ ತೆಲಂಗಾಣ ರಾಜ್ಯದಲ್ಲಿರುವ ಆನ್‌ಲೈನ್ ದೂರು ಸ್ವೀಕಾರ ವ್ಯವಸ್ಥೆ ಬಗ್ಗೆ ಅಧ್ಯಯನ ನಡೆಸಲಾಗುತ್ತಿದೆ. ಅದೇ ಮಾದರಿಯಲ್ಲೇ ರಾಜ್ಯದಲ್ಲೂ ವ್ಯವಸ್ಥೆ ರೂಪಿಸಲು ಚರ್ಚೆ ನಡೆಸಲಾಗುತ್ತಿದೆ’ ಎಂದು ರಾಜ್ಯ ಅಪರಾಧ ದಾಖಲೆಗಳ ಘಟಕದ (ಎಸ್‌ಸಿಆರ್‌ಬಿ) ಎಡಿಜಿಪಿ ಉಮೇಶ್ ಕುಮಾರ್ ತಿಳಿಸಿದರು.

‘ಜಿ–23’ ಗುಂಪಿನ ಸದಸ್ಯರಿಗೆ ಪಕ್ಷದಲ್ಲಿ ಪ್ರಮುಖ ಸ್ಥಾನ?

ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷಕ್ಕೆ ಸಮಗ್ರ ನಾಯಕತ್ವ ಅಗತ್ಯ ಎಂಬ ಜಿ–23 ಗಂಪಿನ ಬೇಡಿಕೆಯ ಹಿಂದೆಯೇ, ಪಕ್ಷದ ನೀತಿ, ನಿರ್ಣಾಯಕ ಸಮಿತಿಗಳಲ್ಲಿ ಈ ಗುಂಪಿನ ಕೆಲ ನಾಯಕರು ಸ್ಥಾನ ಪಡೆಯುವ ಸಂಭವವಿದೆ.

ಐದು ರಾಜ್ಯಗಳ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಹಿನ್ನಡೆಯಾದ ಹಿಂದೆಯೇ ಜಿ–23 ಗುಂಪಿನ ನಾಯಕರು, ಪಕ್ಷದ ನಾಯಕರಾದ ಸೋನಿಯಾಗಾಂಧಿ, ರಾಹುಲ್ ಗಾಂಧಿ ಅವರ ವಿರುದ್ಧ ಹರಿಹಾಯ್ದಿದ್ದರು.

ಪಕ್ಷದ ಮೂಲಗಳ ಪ್ರಕಾರ, ನಾಯಕತ್ವದ ವಿರುದ್ಧ ಅಸಮಾಧಾನ ಹೊರಹಾಕಿರುವ ಈ ಗುಂಪಿನ ಸದಸ್ಯರು, ಪಕ್ಷದ ಕೆಲ ಆಯಕಟ್ಟಿನ ಸ್ಥಾನಗಳಿಂದ ರಾಹುಲ್ ಗಾಂಧಿ ನಿಷ್ಠರನ್ನು ಪದಚ್ಯುತಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ. ಮುಖ್ಯವಾಗಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಪಕ್ಷದ ವಕ್ತಾರ ರಣದೀಪ್ ಸುರ್ಜೇವಾಲ, ಪ್ರಧಾನ ಕಾರ್ಯದರ್ಶಿ ಅಜಯ್ ಮಾಕೆನ್ ಅವರನ್ನು ಗುರಿಯಾಗಿಸಿದ್ದಾರೆ.

ಭಿನ್ನಮತೀಯರನ್ನು ಶಾಂತಗೊಳಿಸಲು ಇವರಲ್ಲಿ ಒಂದಿಬ್ಬರನ್ನು ಬದಲಿಸುವ ಸಂಭವವಿದೆ ಎಂದು ಮೂಲಗಳು ತಿಳಿಸಿವೆ. ಪಕ್ಷ ಬಲಪಡಿಸಬೇಕು ಮತ್ತು ಸಮಗ್ರ ನಾಯಕತ್ವ ಇರಬೇಕು ಎಂಬ ಬೇಡಿಕೆ ಹಿನ್ನೆಲೆಯಲ್ಲಿ ಸಂಧಾನ ಮಾರ್ಗ ಹುಡುಕಲು ಕಾಂಗ್ರೆಸ್ ನಾಯಕತ್ವ ಚಿಂತನೆ ನಡೆದಿದೆ.

2024ರ ಚುನಾವಣೆಯಲ್ಲಿ ಬಿಜೆಪಿ ಎದುರಿಸಲು ಕೆಲ ಸಮಾನ ಮನಸ್ಕ ಪಕ್ಷಗಳ ಜೊತೆಗೆ ಚರ್ಚೆ ನಡೆಸಬೇಕು ಎಂದು ಈ ಗುಂಪು ಆಗ್ರಹಿಸಿದೆ.

ಲಾರಿ ಕೆಳಗೆ ಮಲಗಿದ್ದ ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವೇಕನಗರದಲ್ಲಿ ಭಾನುವಾರ ಅಪಘಾತ ಸಂಭವಿಸಿದ್ದು, ಲಾರಿ ಕೆಳಗೆ ಮಲಗಿದ್ದ ಇಮ್ಯಾನ್ಯುವೆಲ್ (40) ಎಂಬುವರು ಮೃತಪಟ್ಟಿದ್ದಾರೆ.

‘ಎಲ್‌.ಆರ್. ನಗರದ ನಿವಾಸಿ ಇಮ್ಯಾನುಯಲ್, ಲಾರಿ ಚಕ್ರ ಮೈ ಮೇಲೆ ಹರಿದು ಮೃತಪಟ್ಟಿದ್ದಾರೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಅಶೋಕನಗರ ಸಂಚಾರ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

‘ಭಾನುವಾರ ಸಂಜೆ ನಗರದಲ್ಲಿ ಮಳೆ ಸುರಿಯುತ್ತಿತ್ತು. ಕ್ರೇನ್ ಸಾಗಿಸುತ್ತಿದ್ದ ಲಾರಿಯನ್ನು ವಿವೇಕನಗರದ 4ನೇ ಮುಖ್ಯರಸ್ತೆಯ ಪಕ್ಕದಲ್ಲಿ ನಿಲ್ಲಿಸಲಾಗಿತ್ತು. ಚಾಲಕ ಬೇರೆಡೆ ಹೋಗಿದ್ದರು. ಅದೇ ವೇಳೆಯೇ ಇಮ್ಯಾನುಯಲ್, ಮಳೆಯಿಂದ ರಕ್ಷಣೆ ಪಡೆಯಲು ಲಾರಿ ಕೆಳಗೆ ಹೋಗಿ, ಅಲ್ಲಿಯೇ ಮಲಗಿದ್ದರು.’

‘ರಾತ್ರಿ 11 ಗಂಟೆಗೆ ಚಾಲಕ ಲಾರಿ ಬಳಿ ಬಂದಿದ್ದರು. ಕೆಳಗೆ ಮಲಗಿದ್ದ ಇಮ್ಯಾನ್ಯುವೆಲ್ ಅವರನ್ನು ಗಮನಿಸಿರಲಿಲ್ಲ. ಲಾರಿ ಹತ್ತಿ, ಮುಂದಕ್ಕೆ ಚಲಾಯಿಸಿದ್ದರು. ಇದೇ ಸಂದರ್ಭದಲ್ಲೇ ಲಾರಿ ಚಕ್ರ ಇಮ್ಯಾನುಯಲ್ ಮೈ ಮೇಲೆ ಹರದಿತ್ತು. ತೀವ್ರ ಗಾಯಗೊಂಡು ಅವರು ಮೃತಪಟ್ಟರು. ಅಪಘಾತ ಸಂಬಂಧ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ’ ಎಂದೂ ಮೂಲಗಳು ತಿಳಿಸಿವೆ.

ಸುಲಿಗೆ, ಬೈಕ್ ಕಳವು: ನಾಲ್ವರ ಬಂಧನ

ಬೆಂಗಳೂರು: ಸುಲಿಗೆ ಹಾಗೂ ಬೈಕ್ ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದ ನಾಲ್ವರು ಆರೋಪಿಗಳನ್ನು ಸಂಪಿಗೆಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಸುಲಿಗೆ ಹಾಗೂ ಬೈಕ್ ಕಳವು ಸಂಬಂಧ ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದವು. ತನಿಖೆ ಕೈಗೊಂಡು ನಾಲ್ವರನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

₹ 2.15 ಲಕ್ಷ ಮೌಲ್ಯದ ಚಿನ್ನದ ಸರ, ಆಟೊ ಜಪ್ತಿ: ‘ಅಮರಜ್ಯೋತಿ ಬಡಾವಣೆಯ ಮುಖ್ಯರಸ್ತೆಯಲ್ಲಿ ಮಾ. 5ರಂದು ರಾತ್ರಿ ವ್ಯಕ್ತಿಯೊಬ್ಬರ ಚಿನ್ನದ ಸರವನ್ನು ಸುಲಿಗೆ ಮಾಡಲಾಗಿತ್ತು. ಈ ಪ್ರಕರಣದಲ್ಲಿ ಆರೋಪಿಗಳಾದ ಶಿವಾಜಿ ನಗರದ ಮಹಮ್ಮದ್ ಅಬ್ರಾಜ್ (24) ಹಾಗೂ ಥಣಿಸಂದ್ರದ ಸೈಯದ್ ಅಬ್ರಾಜ್ (24) ಎಂಬುವರನ್ನು ಬಂಧಿಸಲಾಗಿದೆ’ ಎಂದು ಅಧಿಕಾರಿ ತಿಳಿಸಿದರು.

‘ಅಪರಾಧ ಹಿನ್ನೆಲೆಯುಳ್ಳ ಆರೋಪಿಗಳು, ಕೊತ್ತನೂರು ಹಾಗೂ ವಿಮಾನ ನಿಲ್ದಾಣ ಠಾಣೆ ವ್ಯಾಪ್ತಿಯಲ್ಲೂ ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ. ಆರೋಪಿಗಳಿಂದ ₹ 2.15 ಲಕ್ಷ ಮೌಲ್ಯದ ಚಿನ್ನದ ಸರ, ಮೊಬೈಲ್, ಆಟೊ ಜಪ್ತಿ ಮಾಡಲಾಗಿದೆ’ ಎಂದರು.

ಮೂರು ಬೈಕ್ ಜಪ್ತಿ: ‘ಅಗ್ರಹಾರ ಬಡಾವಣೆಯ ಮನೆಯೊಂದರ ಮುಂದೆ ನಿಲ್ಲಿಸಿದ್ದ ರಾಯಲ್ ಎನ್‌ಫೀಲ್ಡ್ ಬೈಕ್ ಫೆ. 28ರಂದು ಕಳ್ಳತನವಾಗಿತ್ತು.

ಆರೋಪಿಗಳಾದ ಕೆ.ಜಿ. ಹಳ್ಳಿ ವಿನೋಬಾ ನಗರದ ಶೇಖ್ ಮುದಾಸೀರ್ ಅಹಮ್ಮದ್ (33) ಹಾಗೂ ಶಿವಾಜಿನಗರದ ಬ್ರಾಡ್‌ವೇ ರಸ್ತೆಯ ಸೈಯದ್ ನಾಜೀಮ್ ಅಲಿಯಾಸ್ ಡ್ಯಾನಿ (25) ಎಂಬುವರನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ಭಾರತಿನಗರ, ಶಿವಾಜಿನಗರ, ಕಮರ್ಷಿಯಲ್ ಸ್ಟ್ರೀಟ್, ಕಬ್ಬನ್ ಪಾರ್ಕ್, ಉಪ್ಪಾರಪೇಟೆ, ಮಾರತ್ತಹಳ್ಳಿ ಹಾಗೂ ಶೇಷಾದ್ರಿಪುರ ಠಾಣೆಗಳ ವ್ಯಾಪ್ತಿಯಲ್ಲೂ ಆರೋಪಿಗಳು ಕೃತ್ಯ ಎಸಗಿದ್ದರು. ಇವರಿಂದ ₹ 2.37 ಲಕ್ಷ ಮೌಲ್ಯದ ಮೂರು ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ’ ಎಂದೂ ಹೇಳಿದರು.

ಪತ್ರಕರ್ತ ಸುಧೀಂದ್ರ ಕುಲಕರ್ಣಿ ಅಭಿಪ್ರಾಯ

‘ಬಿಜೆಪಿ ಸೋಲಿಸಲು ಇತರ ಪಕ್ಷಗಳು ಒಗ್ಗೂಡಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಂಬರುವ ಲೋಕಸಭೆ ಹಾಗೂ ರಾಜ್ಯ ವಿಧಾನಸಭೆ ಚುನಾವಣೆಗಳಲ್ಲಿ ಬಿಜೆಪಿಯನ್ನು ಸೋಲಿಸಿ ಪರ್ಯಾಯ ಸರ್ಕಾರ ರಚಿಸಬೇಕಾದ ಅಗತ್ಯವಿದೆ. ಇದಕ್ಕಾಗಿ ಇತರ ಎಲ್ಲಾ ಪಕ್ಷಗಳು ಒಗ್ಗೂಡಬೇಕು. ಜನರ ನಡುವೆ ಹೋಗಿ ಕೆಲಸ ಮಾಡಬೇಕು’ ಎಂದು ಪತ್ರಕರ್ತ ಸುಧೀಂದ್ರ ಕುಲಕರ್ಣಿ ಅಭಿಪ್ರಾಯಪಟ್ಟರು.

ಜನಶಕ್ತಿ ಮೀಡಿಯಾ ಹಾಗೂ ಸಮನ್ವಯ ತಂಡದ ಸಹಯೋಗದಲ್ಲಿ ಆಯೋಜಿಸಲಾಗಿದ್ದ ‘ಪಂಚ ರಾಜ್ಯಗಳ ಚುನಾವಣಾ ಫಲಿತಾಂಶ:ಮುಂದೇನು?’ ಕುರಿತ ವಿಶ್ಲೇಷಣೆ ಕಾರ್ಯಕ್ರಮದಲ್ಲಿ ಸೋಮವಾರ ಅವರು ಮಾತನಾಡಿದರು.

‘ಬಿಜೆಪಿಯು 2024ರ ಲೋಕಸಭಾ ಚುನಾವಣೆಯಲ್ಲೂ ಗೆಲುವು ದಾಖಲಿಸಿ ಮತ್ತೊಂದು ಅವಧಿಗೆ ಅಧಿಕಾರಕ್ಕೇರುವ ಕನಸು ಕಾಣುತ್ತಿದೆ. ಆ ಪಕ್ಷವನ್ನು ಅಧಿಕಾರದಿಂದ ದೂರ ಇಡಲು ಕಾಂಗ್ರೆಸ್, ಡಿಎಂಕೆ, ಸಮಾಜವಾದಿ ಪಕ್ಷ, ಆಮ್ ಆದ್ಮಿ ಪಾರ್ಟಿ ಒಗ್ಗೂಡಿ ಕೆಲಸ ಮಾಡಬೇಕು’ ಎಂದರು.

‘ಬಿಜೆಪಿಯು ಹಿಂದುತ್ವದ ಕಾರ್ಯಸೂಚಿಯನ್ನು ಮುನ್ನೆಲೆಗೆ ತಂದು ಉತ್ತರಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಗೆಲುವು ದಾಖಲಿಸಿದೆ. 2024ರಲ್ಲೂ ಅವರು ಇದೇ ಮಾದರಿ ಇಟ್ಟುಕೊಂಡು ಚುನಾವಣೆ ಎದುರಿಸುವ ಸಾಧ್ಯತೆ ಇದೆ. ಅಸಾದುದ್ದೀನ್ ಓವೈಸಿ ಹಾಗೂ ಬಹುಜನ ಸಮಾಜ ಪಕ್ಷದವರು (ಬಿಎಸ್‌ಪಿ) ಬಿಜೆಪಿ ಪರ ಕೆಲಸ ಮಾಡಿದ್ದಾರೆ. ಹೀಗಾಗಿ ಹೆಚ್ಚುವರಿಯಾಗಿ 65 ಸ್ಥಾನ ಗೆಲ್ಲಲು ಬಿಜೆಪಿಗೆ ಸಾಧ್ಯವಾಗಿದೆ’ ಎಂದು ವಿಶ್ಲೇಷಿಸಿದರು.

‘ಉತ್ತರ ಪ್ರದೇಶ ಚುನಾವಣೆಗೆ ಸಮಾಜವಾದಿ ಪಕ್ಷ (ಎಸ್‌ಪಿ) ಸೂಕ್ತ ಸಿದ್ಧತೆ ಮಾಡಿಕೊಂಡಿರಲಿಲ್ಲ. ಇದು ಕೂಡ ಬಿಜೆಪಿಗೆ ವರವಾಯಿತು’ ಎಂದರು.



ಪತ್ರಕರ್ತ ಸುಧೀಂದ್ರ ಕುಲಕರ್ಣಿ (ಮಧ್ಯ) ಮಾತನಾಡಿದರು. (ಎಡದಿಂದ) ಸಮನ್ವಯ ತಂಡದ ಸದಸ್ಯ ಸುಭಾಷ್ ಚಂದ್ರ, ಜನಶಕ್ತಿ ಮೀಡಿಯಾ ಸಂಚಾಲಕ ಗುರುರಾಜ್ ದೇಸಾಯಿ, ಜೆ.ಡಿ.ಯು ರಾಜ್ಯ ಘಟಕದ ಅಧ್ಯಕ್ಷ ಮಹಿಮ ಪಟೇಲ್ ಹಾಗೂ ಚಿಂತಕ ಸಿದ್ದನಗೌಡ ಪಾಟೀಲ ಇದ್ದರು– ಪ್ರಜಾವಾಣಿ ಚಿತ್ರ

ಭರದಿಂದ ಸಾಗಿದೆ ಕಾಂಕ್ರೀಟ್ ಕಂಬಗಳ ನಿರ್ಮಾಣ ● ಮಣ್ಣು ಗುಣಮಟ್ಟ ಪರೀಕ್ಷೆ ● ಭೂಸ್ವಾಧೀನ ಬಹುತೇಕ ಪೂರ್ಣ

ವಿಮಾನ ನಿಲ್ದಾಣ ಮೆಟ್ರೊ: ಕಾಮಗಾರಿ ಚುರುಕು

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮೆಟ್ರೊ ರೈಲು ಸಂಪರ್ಕ ಕಲ್ಪಿಸುವ ಎತ್ತರಿಸಿದ ಮಾರ್ಗದ ಕಾಮಗಾರಿ ಆರಂಭವಾಗಿದ್ದು, ಕಾಂಕ್ರೀಟ್ ಕಂಬಗಳ ನಿರ್ಮಾಣ ಕೆಲಸ ಭರದಿಂದ ಸಾಗಿದೆ.

ಕೆ.ಆರ್.ಪುರ–ಹೆಬ್ಬಾಳ ಮಾರ್ಗದ ಮೂಲಕ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ 36.44 ಕಿಲೋ ಮೀಟರ್ ಉದ್ದದ ಮಾರ್ಗದ (2ಬಿ) ಸಿವಿಲ್ ಕಾಮಗಾರಿಯನ್ನು ಮೂರು ಪ್ಯಾಕೇಜ್‌ಗಳಾಗಿ ವಿಂಗಡಿಸಲಾಗಿದೆ. ಮೂರು ಪ್ಯಾಕೇಜ್‌ಗಳ ಗುತ್ತಿಗೆಯನ್ನು ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪನಿ (ಎನ್‌ಸಿಸಿ) ಪಡೆದುಕೊಂಡಿದೆ. ಈ ಮಾರ್ಗದ ವಯಡಕ್ಟ್ ಮತ್ತು ನಿಲ್ದಾಣಗಳಿಗೆ ಅಗತ್ಯ ಇರುವ 2.23 ಲಕ್ಷ ಚದರ ಮೀಟರ್ ಜಾಗದ ಪೈಕಿ 2.15 ಲಕ್ಷ ಚದರ ಮೀಟರ್ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದೆ. ಬಾಕಿ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಕೆ.ಆರ್.ಪುರದಿಂದ ಹೆಬ್ಬಾಳ ತನಕದ ಕಾಮಗಾರಿ ಇನ್ನೂ ಆರಂಭವಾಗಿಲ್ಲ. ಆದರೆ, ಹೆಬ್ಬಾಳದಿಂದ ವಿಮಾನ ನಿಲ್ದಾಣದ ತನಕ ಅಲ್ಲಲ್ಲಿ ಕಾಮಗಾರಿ ಆರಂಭವಾಗಿದೆ. ಹೆಬ್ಬಾಳದಿಂದ ಯಲಹಂಕ ತನಕ ಮಣ್ಣು ಪರೀಕ್ಷೆ ಕಾರ್ಯ ನಡೆಯುತ್ತಿದ್ದರೆ, ಯಲಹಂಕದಿಂದ ಮುಂದಕ್ಕೆ ವಿಮಾನ ನಿಲ್ದಾಣದ ತನಕ ಪಿಲ್ಲರ್ ನಿರ್ಮಾಣ ಕಾಮಗಾರಿ ಬಿರುಸಿನಿಂದ ಆರಂಭವಾಗಿದೆ.

ಹೆದ್ದಾರಿ ಮತ್ತು ಪೂರ್ವ ಬದಿಯ ಸರ್ವೀಸ್ ರಸ್ತೆ ನಡುವಿನ ಜಾಗದಲ್ಲಿ ಮೆಟ್ರೊ ರೈಲಿನ ಮಾರ್ಗಕ್ಕೆ ಕಾಂಕ್ರೀಟ್ ಕಂಬಗಳ ನಿರ್ಮಾಣವಾಗುತ್ತಿವೆ. ಹೆದ್ದಾರಿಯ ಸಂಚಾರಕ್ಕೆ ಯಾವುದೇ ತೊಡಕಾಗಿಲ್ಲ. ಪೂರ್ವ ಬದಿಯ ಸರ್ವೀಸ್ ರಸ್ತೆಯಲ್ಲೂ ಸಂಚಾರಕ್ಕೆ ಅಷ್ಟೇನೂ ತೊಡಕಾಗಿಲ್ಲ.

‘ಮೆಟ್ರೊ ರೈಲು ಮಾರ್ಗದ ಕಾಮಗಾರಿ ಸರ್ವೀಸ್ ರಸ್ತೆ ಮತ್ತು ಹೆದ್ದಾರಿ ನಡುವಿನ ಖಾಲಿ ಜಾಗದಲ್ಲಿ ನಡೆಯುತ್ತಿರುವುದರಿಂದ ಸಂಚಾರಕ್ಕೆ ಯಾವುದೇ ತೊಂದರೆಯಾಗಿಲ್ಲ. ಕಾಮಗಾರಿ ಪ್ರಗತಿಯಲ್ಲಿ ಇರುವುದರಿಂದ ಸರ್ವೀಸ್ ರಸ್ತೆಯಲ್ಲಿ ವಾಹನಗಳು ನಿಧಾನವಾಗಿ ಚಲಿಸಬೇಕಾಗುತ್ತದೆ’ ಎಂದು ಸ್ಥಳೀಯರು ಹೇಳುತ್ತಾರೆ.

‘ಕೆ.ಆರ್.ಪುರದಿಂದ ಹೆಬ್ಬಾಳ ತನಕದ ಕಾಮಗಾರಿ ಆರಂಭಕ್ಕೂ ಸಿದ್ಧತೆ ಮಾಡಿಕೊಳ್ಳಲಾಗಿದೆ. ಮರಗಳನ್ನು ಸ್ಥಳಾಂತರ ಮಾಡುವ ಕಾಮಗಾರಿ ಬಾಕಿ ಇರುವುದರಿಂದ ಮೆಟ್ರೊ ರೈಲು ಮಾರ್ಗದ ಕಾಮಗಾರಿ ಆರಂಭವಾಗಿಲ್ಲ’ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಅಧಿಕಾರಿಗಳು ಹೇಳುತ್ತಾರೆ.

ವಿಮಾನ ನಿಲ್ದಾಣದ ಎರಡನೇ ಟರ್ಮಿನಲ್ ಕಾಮಗಾರಿ ಪೂರ್ಣಗೊಂಡಿದ್ದು, ಉದ್ಘಾಟನೆಗೆ ಸಿದ್ಧವಾಗಿದೆ. ಅದು ಉದ್ಘಾಟನೆಯಾದರೆ ವಿಮಾನ ನಿಲ್ದಾಣ ಸಿಬ್ಬಂದಿ ಮತ್ತು ಪ್ರಯಾಣಿಕರ ಸಂಖ್ಯೆ ದುಪ್ಪಟ್ಟಾಗುವ ನಿರೀಕ್ಷೆ ನಿರೀಕ್ಷೆ ಇದ್ದು, ರಸ್ತೆ ಮಾರ್ಗದ ಮೇಲೆ ಒತ್ತಡ ಎರಡು ಪಟ್ಟು ಜಾಸ್ತಿಯಾಗಲಿದೆ ಎಂದು ಅಂದಾಜಿಸಲಾಗಿದೆ.

ಮೆಟ್ರೊ ರೈಲು ಮಾರ್ಗ ಮತ್ತು ಉಪನಗರ ರೈಲು ಮಾರ್ಗಗಳು ಈ ಒತ್ತಡ ಕಡಿಮೆ ಮಾಡಲಿವೆ. ಮೆಟ್ರೊ ರೈಲು ಮಾರ್ಗ ಬೆಂಗಳೂರು ಪೂರ್ವ ಪ್ರದೇಶದ ಅದರಲ್ಲೂ ಐ.ಟಿ ಹಬ್ ಪ್ರಯಾಣಿಕರಿಗೆ ಹೆಚ್ಚು ಅನುಕೂಲ ಕಲ್ಪಿಸಲಿದೆ.

ವಿಮಾನ ನಿಲ್ದಾಣ ಮೆಟ್ರೊ ರೈಲು ಮಾರ್ಗದಲ್ಲಿ ಕಾಮಗಾರಿ ಆರಂಭಿಸಿರುವುದು –ಪ್ರಜಾವಾಣಿ ಚಿತ್ರಗಳು/ಅನೂಪ್ ರಾಘ ಟಿ.

‘ಗಡುವಿಗೆ ಮುನ್ನವೇ ಕಾಮಗಾರಿ ಪೂರ್ಣ’

ಅಂಜುಂ ಪರ್ವೇಜ್

‘ಯೋಜನೆಗೆ ಅನುಮತಿ ನೀಡುವಾಗ 2026ರೊಳಗೆ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಗಡುವು ನಿಗದಿ ಮಾಡಲಾಗಿದೆ. ಆದರೆ, ಅದಕ್ಕಿಂತ ಒಂದು ವರ್ಷ ಮುನ್ನವೇ, ಅಂದರೆ, 2025ರಲ್ಲೇ ಕಾಮಗಾರಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ’ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ತಿಳಿಸಿದರು.

‘ಒಂದು ತಿಂಗಳಿಂದ ಕಾಮಗಾರಿ ನಡೆಯುತ್ತಿದೆ. ಸದ್ಯ 15 ಯಂತ್ರಗಳು ಕೆಲಸದಲ್ಲಿ ತೊಡಗಿವೆ. ಇನ್ನೂ 10 ಯಂತ್ರಗಳನ್ನು ತಂದು ಕಾಮಗಾರಿ ನಿರ್ವಹಿಸಲು ಸೂಚನೆ ನೀಡಲಾಗಿದೆ. ಕೆ.ಆರ್. ಪುರದಿಂದ ಹೆಬ್ಬಾಳ ತನಕದ ಮಾರ್ಗದಲ್ಲಿ ಮರಗಳನ್ನು ಸ್ಥಳಾಂತರಿಸುವ ಕೆಲಸ ನಡೆಯಬೇಕಿದೆ. ಆದ್ದರಿಂದ ಅಲ್ಲಿ ಕಾಮಗಾರಿ ಆರಂಭವಾಗಿಲ್ಲ. ಹೆಬ್ಬಾಳದಿಂದ ವಿಮಾನ ನಿಲ್ದಾಣದ ತನಕ ಮರ ಸ್ಥಳಾಂತರ ಮಾಡುವ ಅಗತ್ಯ ಇಲ್ಲ. ಖಾಲಿ ಇರುವುದರಿಂದ ಕಾಮಗಾರಿ ಆರಂಭವಾಗಿದ್ದು, ತ್ವರಿತಗತಿಯಲ್ಲಿ ಕೈಗೊಳ್ಳಲು ಅನುಕೂಲ ಆಗಲಿದೆ’ ಎಂದರು.



ವಿಮಾನ ನಿಲ್ದಾಣ ಮಾರ್ಗದಲ್ಲಿ ಪಿಲ್ಲರ್ ನಿರ್ಮಾಣ ಕಾಮಗಾರಿ ನಡೆಯುತ್ತಿರುವ ದೃಶ್ಯ

ವಾಯುನೆಲೆ ಬಳಿ ನೆಲದಡಿ ಮಾರ್ಗ

ವಿಮಾನ ನಿಲ್ದಾಣ ಮಾರ್ಗ ನಿರ್ಮಾಣಕ್ಕೆ ಅಗತ್ಯ ಇರುವ ಎಲ್ಲಾ ರೀತಿಯ ಅನುಮತಿಗಳನ್ನೂ ಬಿಎಂಆರ್‌ಸಿಎಲ್ ಪಡೆದುಕೊಂಡಿದೆ. ಕೆ.ಆರ್.ಪುರದಿಂದ ವಿಮಾನ ನಿಲ್ದಾಣದ ತನಕವೂ ಎತ್ತರಿಸಿದ ಮಾರ್ಗ ಆಗಿದ್ದರೂ, ಯಲಹಂಕ ವಾಯುನೆಲೆಯ ಪಕ್ಕದಲ್ಲಿ ಮಾತ್ರ ನೆಲದಡಿಯಲ್ಲಿ ಮೆಟ್ರೊ ರೈಲು ಮಾರ್ಗ ಇರಲಿದೆ.

ಹೆಬ್ಬಾಳದಿಂದ ವಿಮಾನ ನಿಲ್ದಾಣದ ತನಕ ಹೆದ್ದಾರಿ ಪಕ್ಕದಲ್ಲಿ ಎಲ್ಲೆಡೆ ಸರ್ವೀಸ್ ರಸ್ತೆ ಇದೆ. ಎರಡೂ ಬದಿಯಲ್ಲಿ ವಾಯು ನೆಲೆ ಜಾಗ ಇರುವೆಡೆ ಮಾತ್ರ ಸರ್ವೀಸ್ ರಸ್ತೆ ಇಲ್ಲ. ವಿಮಾನಗಳು ಹಾರಾಟ ಆರಂಭಿಸುವ ಜಾಗ ಆಗಿರುವುದರಿಂದ ಇಲ್ಲಿ ಎತ್ತರಿಸಿದ ಮೆಟ್ರೊ ರೈಲು ಮಾರ್ಗಕ್ಕೂ ಅನುಮತಿ ದೊರೆತಿಲ್ಲ.

ಎತ್ತರಿಸಿದ ರೈಲು ಮಾರ್ಗ ನಿರ್ಮಾಣವಾದರೆ ವಾಯು ನೆಲೆಯಲ್ಲಿನ ವಿಮಾನಗಳ ಕಾರ್ಯಾಚರಣೆ ತೊಡಕಾಗಲಿದೆ ಎಂಬ ಕಾರಣಕ್ಕೆ ಅನುಮತಿ ದೊರಕಿಲ್ಲ. ಆ ಜಾಗದಲ್ಲಿ ಮಾತ್ರ ನೆಲದೊಳಗೆ ರೈಲು ಮಾರ್ಗ ಮಾಡಿಕೊಳ್ಳಲು ಬಿಎಂಆರ್‌ಸಿಎಲ್ ಉದ್ದೇಶಿಸಿದೆ. ನೆಲದೊಳಗೆ ರೈಲು ಮಾರ್ಗ ಮಾತ್ರ ನಿರ್ಮಾಣವಾಗಲಿದ್ದು, ನಿಲ್ದಾಣಗಳು ಇರುವುದಿಲ್ಲ. ಸುರಂಗ ಮಾರ್ಗದ ಮಾದರಿಯಲ್ಲಿ ಆಳಕ್ಕೆ ಹೋಗುವುದಿಲ್ಲ. ವಿಮಾನ ಹಾರಾಟಕ್ಕೆ ತೊಂದರೆ ಆಗದಂತೆ ನೆಲದೊಳಗೆ ಮಾರ್ಗವನ್ನು ಕೊಂಡೊಯ್ಯಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಸ್ಪಷ್ಟಪಡಿಸಿದರು.

‘ವಿಮಾನ ನಿಲ್ದಾಣದ ಆವರಣದಲ್ಲೇ ಎರಡು ಮೆಟ್ರೊ ನಿಲ್ದಾಣಗಳು ನಿರ್ಮಾಣ ಆಗಲಿವೆ. ಅದಕ್ಕೆ ಬೇಕಿರುವ ಎಲ್ಲಾ ಅನುಮತಿಗಳು ದೊರೆತಿವೆ’ ಎಂದು ಅವರು ಹೇಳಿದರು.

ರಾಗಿ ಖರೀದಿ ಸ್ಥಗಿತ: ಸದನದಲ್ಲಿ ಕಾಂಗ್ರೆಸ್ ಸದಸ್ಯ ಡಾ.ಎಚ್.ಡಿ.ರಂಗನಾಥ್ ಟೀಕೆ

‘ರೈತರನ್ನು ಸಂಕಷ್ಟಕ್ಕೆ ದೂಡಿದ ಸರ್ಕಾರ’

ವಿಧಾನ ಮಂಡಲದಲ್ಲಿ

ಬೆಂಗಳೂರು: ‘ರೈತರ ಆದಾಯವನ್ನು ದ್ವಿಗುಣಗೊಳಿಸುವ ಭರವಸೆ ನೀಡಿ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಆದರೆ, ಬೆಂಬಲ ಬೆಲೆಯಡಿ ರಾಗಿ ಖರೀದಿಯನ್ನು ಸ್ಥಗಿತಗೊಳಿಸುವ ಮೂಲಕ ಸರ್ಕಾರ ರೈತರನ್ನು ಸಂಕಷ್ಟಕ್ಕೆ ಸಿಲುಕಿಸಿದೆ’ ಎಂದು ಕಾಂಗ್ರೆಸ್ ಸದಸ್ಯ ಡಾ.ಎಚ್.ಡಿ.ರಂಗನಾಥ್ ಟೀಕಿಸಿದರು.

ವಿಧಾನಸಭೆಯಲ್ಲಿ ಅನುದಾನ ಬೇಡಿಕೆ ಮೇಲಿನ ಚರ್ಚೆಯಲ್ಲಿ ಸೋಮವಾರ ಮಾತನಾಡಿದ ಅವರು, ‘ಈ ರಾಜ್ಯದಲ್ಲಿ 19 ಲಕ್ಷ ಟನ್ ರಾಗಿ ಬೆಳೆಯಲಾಗುತ್ತಿದೆ. ಸರ್ಕಾರ ಬೆಂಬಲ ಬೆಲೆ ನೀಡಿ ರಾಗಿ ಖರೀದಿಸಲಿದೆ ಎಂದು ರೈತರು ಭರವಸೆ ಇಟ್ಟುಕೊಂಡಿದ್ದಾರೆ. ರಾಗಿ ಖರೀದಿಗೆ ಸರ್ಕಾರ ಇನ್ನಾದರೂ ಕ್ರಮ ಕೈಗೊಳ್ಳಬೇಕು’ ಎಂದು ಅವರು ಒತ್ತಾಯಿಸಿದರು.

‘ದೇಶದ ಮಾನವ ಅಭಿವೃದ್ಧಿ ಸೂಚ್ಯಂಕದ ಪ್ರಕಾರ ರೈತ ಕುಟುಂಬದ ತಲಾ ವರಮಾನ ವರ್ಷಕ್ಕೆ ₹ 96 ಸಾವಿರ ಮಾತ್ರ. ಅಂದರೆ ಇಡೀ ಕುಟುಂಬಕ್ಕೆ ತಿಂಗಳಿಗೆ ₹ 8 ಸಾವಿರವೂ ಸಿಗುತ್ತಿಲ್ಲ. ಕೃಷಿಕರ ₹ 100 ದುಡಿಮೆಯಲ್ಲಿ ಕೃಷಿ ಕೂಲಿ ವಚ್ಚ ಶೇ 20 ದಾಟಬಾರದು. ಆದರೆ, ಪ್ರಸ್ತುತ ಕೃಷಿಕರು ಕೂಲಿ ನೀಡುವುದಕ್ಕಾಗಿ ಶೇ 43 ರಷ್ಟು ಮೊತ್ತವನ್ನು ವಿನಿಯೋಗಿಸುವ ಪರಿಸ್ಥಿತಿ ಇದೆ. ದೇಶದಲ್ಲಿ ರೈತರ ಸಾಲ ₹ 18 ಲಕ್ಷ ಕೋಟಿಗೆ ಹೆಚ್ಚಾಗಿದೆ. ಇದು ಶ್ರೇಯಸ್ಕರವಲ್ಲ’ ಎಂದರು.

‘ನಾಲ್ಕು ತಿಂಗಳಲ್ಲಿ 400 ಪಶುವೈದ್ಯಾಧಿಕಾರಿಗಳ ನೇಮಕ’

ಪ್ರಭು ಚವ್ಹಾಣ್

ಬೆಂಗಳೂರು: ‘ರಾಜ್ಯದಲ್ಲಿ 400 ಪಶು ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮಕೈಗೊಳ್ಳಲಾಗಿದೆ. ನೇಮಕಾತಿ ಪ್ರಕ್ರಿಯೆಯು ನಾಲ್ಕು ತಿಂಗಳ ಒಳಗೆ ಪೂರ್ಣಗೊಳ್ಳಲಿದೆ’ ಎಂದು ಪಶುಸಂಗೋಪನಾ ಸಚಿವ ಪ್ರಭು ಬಿ.ಚವ್ಹಾಣ್ ತಿಳಿಸಿದರು.

ವಿಧಾನಸಭೆಯಲ್ಲಿ ಸೋಮವಾರ ಬಿಜೆಪಿಯ ಲಾಲಾಜಿ ಆರ್.ಮೆಂಡನ್ ಅವರ ಪ್ರಶ್ನೆಗೆ ಅವರು ಉತ್ತರಿಸಿದರು.

ಕಾಂಗ್ರೆಸ್‌ನ ಪ್ರಿಯಾಂಕ್ ಖರ್ಗೆ, ‘ಈ ನೇಮಕಾತಿಯಲ್ಲಿ ಕಲ್ಯಾಣ ಕರ್ನಾಟಕ ವೃಂದಕ್ಕೆ ಅಗತ್ಯ ಸಂಖ್ಯೆಯಷ್ಟು ಹುದ್ದೆ ಮೀಸಲಿಟ್ಟಿಲ್ಲ. ಈ ಪ್ರಕರಣದ ವಿಚಾರಣೆ ಹೈಕೋರ್ಟ್‌ನ ಕಲಬುರಗಿ ಪೀಠದಲ್ಲಿ ನಡೆಯುತ್ತಿದೆ’ ಎಂದು ಗಮನ ಸೆಳೆದರು.

ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ‘ನೇಮಕಾತಿ ತಡ ಆಗಬಾರದು. ನೇಮಕಾತಿ ಪಟ್ಟಿ ಸಿದ್ಧವಾದ ಬಳಿಕವೂ ನೀವು ಅವರಿಗೆ ಆದೇಶ ನೀಡುವುದು ಯಾವಾಗ. ಈ ಪ್ರಕ್ರಿಯೆ ಯಾವಾಗ ಪೂರ್ಣಗೊಳ್ಳುತ್ತದೆ ಎಂದು ಸ್ಪಷ್ಟಪಡಿಸಬೇಕು.’ ಎಂದು ಪ್ರಶ್ನಿಸಿದರು.

‘ನಾಲ್ಕು ವರ್ಷಗಳಿಂದ ಪಶುವೈದ್ಯಾಧಿಕಾರಿಗಳ ನೇಮಕ ಆಗಿರಲಿಲ್ಲ. ಈಗ ಈ ಪ್ರಕ್ರಿಯೆಗೆ ಚಾಲನೆ ನೀಡಿದ್ದೇವೆ. ಎಲ್ಲ ಪ್ರಕ್ರಿಯೆಯನ್ನೂ ಕಾನೂನಿನ ಚೌಕಟ್ಟಿನಲ್ಲಿ ಪೂರ್ಣಗೊಳಿಸಿ ಮೂರು– ನಾಲ್ಕು ತಿಂಗಳ ಒಳಗೆ ನೇಮಕಾತಿ ಆದೇಶವನ್ನೂ ನೀಡಲಿದ್ದೇವೆ’ ಎಂದು ಸಚಿವರು ಭರವಸೆ ನೀಡಿದರು.

‘ಮೇಕೆದಾಟು ಯೋಜನೆಗೆ ತಕ್ಷಣ ಪರಿಸರ ಅನುಮತಿ ನೀಡಬೇಕು’

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: ‘ಮೇಕೆದಾಟು ಯೋಜನೆಗೆ ಕೇಂದ್ರ ಸರ್ಕಾರ ತಕ್ಷಣ ಪರಿಸರ ಅನುಮತಿ ನೀಡಬೇಕು. ರಾಜ್ಯದ ಪಾಲಿನ ನೀರು, ವ್ಯರ್ಥವಾಗಿ ತಮಿಳುನಾಡಿಗೆ ಹೋಗುತ್ತಿದೆ. ಅದನ್ನು ಬಳಸಿಕೊಳ್ಳಲು ಅವಕಾಶ ನೀಡಬೇಕು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ಮೇಕೆದಾಟು ಯೋಜನೆಗೆ ಬಜೆಟ್‌ನಲ್ಲಿ ರಾಜ್ಯ ಸರ್ಕಾರ ಹಣ ಮೀಸಲಿಟ್ಟಿರುವುದಕ್ಕೆ ತಮಿಳುನಾಡು ಸರ್ಕಾರ ವಿರೋಧ ವ್ಯಕ್ತಪಡಿಸಿದೆ. ಆ ಬೆನ್ನಲ್ಲೆ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ ಅವರು, ‘ಈ ಯೋಜನೆಯ ವಿಷಯದಲ್ಲಿ ತಮಿಳುನಾಡು ಮತ್ತು ಕರ್ನಾಟಕದ ನಡುವೆ ವಿವಾದವೇ ಇಲ್ಲ. ಈಗಾಗಲೇ ಈ ವಿಚಾರ ಸುಪ್ರೀಂ ಕೋರ್ಟ್‌ನಲ್ಲಿ ಇತ್ಯರ್ಥವಾಗಿದೆ. ಕೇಂದ್ರ ಸರ್ಕಾರ ಇಚ್ಛಾಶಕ್ತಿ ಮತ್ತು ಒಕ್ಕೂಟ ಧರ್ಮದ ಪಾಲಿಸಬೇಕು’ ಎಂದು ಆಗ್ರಹಿಸಿದ್ದಾರೆ.

‘ಕಾವೇರಿ ನೀರು ಹಂಚಿಕೆಗೆ ಸಂಬಂಧಿಸಿದಂತೆ 2018ರ ಫೆಬ್ರುವರಿ 16ರಂದು ಸುಪ್ರೀಂ ಕೋರ್ಟ್ ಅಂತಿಮ ತೀರ್ಪು ನೀಡಿದೆ. ಒಂದು ಸಾಮಾನ್ಯ ವರ್ಷದಲ್ಲಿ 177.25 ಟಿಎಂಸಿ ಅಡಿ ನೀರು ತಮಿಳುನಾಡಿಗೆ ಬಿಡುವಂತೆ ಆದೇಶ ಮಾಡಿದೆ. ಇದರ ನಿರ್ವಹಣೆಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಅಸ್ತಿತ್ವದಲ್ಲಿದೆ. ಇಷ್ಟು ಪ್ರಮಾಣದ ನೀರು ಪಡೆಯುವುದು ಮಾತ್ರ ತಮಿಳುನಾಡಿಗಿರುವ ಹಕ್ಕು. ಈ ತೀರ್ಪು ಬಂದ ಮೇಲೆ ಸುಮಾರು 400 ಟಿಎಂಸಿ ಅಡಿಗೂ ಹೆಚ್ಚು ನೀರು ಹೆಚ್ಚುವರಿಯಾಗಿ ತಮಿಳುನಾಡಿಗೆ ಹರಿದು ಹೋಗಿದೆ’ ಎಂದೂ ಅವರು ಹೇಳಿದ್ದಾರೆ.

‘ತಮಿಳುನಾಡಿನ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಅಣ್ಣಾಮಲೈ ಮೇಕೆದಾಟು ಯೋಜನೆ ಜಾರಿ ಆಗಬಾರದು ಎಂದು ಧರಣಿ ಕುಳಿತಿದ್ದರು. ಬಿಜೆಪಿಯವರು ತಮ್ಮ ಮತ ಕ್ರೋಢೀಕರಣಕ್ಕಾಗಿ ಪರಿಸರ ಅನುಮತಿ ನೀಡದೆ ನಾಟಕವಾಡುತ್ತಿದೆ. ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಬಿಜೆಪಿಯ ಡಬ್ಬಲ್ ಎಂಜಿನ್ ಸರ್ಕಾರವಿದೆ. ಕೂಡಲೇ ಅನುಮತಿ ತೆಗೆದುಕೊಳ್ಳದಿದ್ದರೆ ಕೇಂದ್ರ ಸರ್ಕಾರ ರಾಜ್ಯಕ್ಕೆ ಅನ್ಯಾಯ ಮಾಡುತ್ತಿದೆ, ರಾಜ್ಯದ ಬಿಜೆಪಿ ಸರ್ಕಾರ ಸುಳ್ಳು ಹೇಳುತ್ತಿದೆ ಎಂಬ ತೀರ್ಮಾನಕ್ಕೆ ನಾವು ಬರಬೇಕಾಗುತ್ತದೆ’ ಎಂದೂ ಸಿದ್ದರಾಮಯ್ಯ ತಿಳಿಸಿದ್ದಾರೆ.

ಆರ್‌ಟಿಇ ಬಲಪಡಿಸಲು ಅರವಿಂದ ಬೆಲ್ಲದ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜದಲ್ಲಿ ಉಳ್ಳವರು ಮತ್ತು ಇಲ್ಲದವರ ನಡುವಿನ ಕಂದಕವನ್ನು ತಗ್ಗಿಸಲು ಶಿಕ್ಷಣ ಹಕ್ಕು (ಆರ್‌ಟಿಇ) ಕಾಯ್ದೆಯನ್ನು ಮತ್ತಷ್ಟು ಬಲಪಡಿಸಬೇಕು ಎಂದು ಬಿಜೆಪಿಯ ಅರವಿಂದ ಬೆಲ್ಲದ ಆಗ್ರಹಿಸಿದರು.

ವಿಧಾನಸಭೆಯಲ್ಲಿ ಸೋಮವಾರ ಇಲಾಖಾವಾರು ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ಆರ್‌ಟಿಇ ಕಾಯ್ದೆ ಒಂದು ಅತ್ಯುತ್ತಮವಾದ ಕಾನೂನು. ದೇಶದಲ್ಲಿ ಮೀಸಲಾತಿ ಬಳಿಕ ಜನರಿಗೆ ಲಭಿಸಿದ ಮಹತ್ವಪೂರ್ಣವಾದ ಕಾನೂನು. ಈ ಕಾನೂನನ್ನು ದುರ್ಬಲಗೊಳಿಸುವ ಪ್ರಯತ್ನ ಸಲ್ಲದು’ ಎಂದರು.

ಶ್ರೀಮಂತರ ಮಕ್ಕಳು ಕಲಿಯುವ ಶಾಲೆಗಳಲ್ಲೇ ಬಡವರ ಮಕ್ಕಳೂ ಕಲಿಯಲು ಆರ್‌ಟಿಇ ಕಾಯ್ದೆಯಿಂದ ಸಾಧ್ಯ. ಆದರೆ, ಆಯಾ ವಾರ್ಡ್‌ಗಳಲ್ಲಿ ಸರ್ಕಾರಿ ಶಾಲೆಗಳಿದ್ದರೆ ಅರ್ಜಿ ಸಲ್ಲಿಸುವಂತಿಲ್ಲ ಎಂಬ ತಿದ್ದುಪಡಿಯಿಂದ ಈ ಕಾಯ್ದೆಯ ಮೂಲ ಆಶಯಕ್ಕೆ ಹಿನ್ನಡೆಯಾಗಿದೆ. ತಕ್ಷಣವೇ ಈ ತಿದ್ದುಪಡಿಯನ್ನು ರದ್ದುಗೊಳಿಸಿ ಮೂಲ ಸ್ವರೂಪದಲ್ಲೇ ಕಾಯ್ದೆಯನ್ನು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ತಾರತಮ್ಯ ನಿವಾರಣೆಗೆ ಆಗ್ರಹ: ಕಾಂಗ್ರೆಸ್‌ನ ಬಸನಗೌಡ ದದ್ದಲ್ ಮಾತ ನಾಡಿ, ‘ಈ ಬಾರಿ ಬಿಜೆಪಿಯ ಶಾಸಕರ ಕ್ಷೇತ್ರಗಳಿಗಷ್ಟೇ ಅನುದಾನ ಹಂಚಿಕೆ ಮಾಡಲಾಗಿದೆ. ಈ ರೀತಿಯ ತಾರತಮ್ಯ ಮಾಡಿದರೆ ವಿರೋಧ ಪಕ್ಷಗಳ ಸದಸ್ಯರು ಪ್ರತಿನಿಧಿಸುವ ಕ್ಷೇತ್ರಗಳ ಜನರು ಯಾರನ್ನು ಕೇಳಬೇಕು’ ಎಂದು ಪ್ರಶ್ನಿಸಿದರು. ‘ಶಾಸಕರ ಶಿಫಾರಸು ಆಧರಿಸಿ ಅನುದಾನ ಬಿಡುಗಡೆ ಮಾಡುವ ಪದ್ಧತಿ ಈವರೆಗೂ ಇತ್ತು. ಈಗ ಬಿಜೆಪಿ ಕಾರ್ಯಕರ್ತರ ಶಿಫಾರಸು ಪಡೆದು ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಇದು ಕೆಟ್ಟ ಸಂಪ್ರದಾಯಕ್ಕೆ ನಾಂದಿ ಹಾಡಿದಂತಾಗುತ್ತದೆ. ತಕ್ಷಣ ಇದಕ್ಕೆ ಕಡಿವಾಣ ಹಾಕಬೇಕು’ ಎಂದು ಆಗ್ರಹಿಸಿದರು.

‘ಮನೆ ಬಾಗಿಲಿಗೆ ಯೋಜನೆ ತನ್ನಿ’: ಜೆಡಿಎಸ್‌ನ ಡಾ.ಕೆ. ಅನ್ನದಾನಿ ಮಾತನಾಡಿ, ‘ಕಂದಾಯ ದಾಖಲೆಗಳನ್ನು ಮನೆ ಬಾಗಿಲಿಗೆ ತಲುಪಿಸುವ ಯೋಜನೆಯನ್ನು ಸರ್ಕಾರ ಆರಂಭಿಸಿದೆ. ಅದೇ ಮಾದರಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಎಲ್ಲ ಯೋಜನೆಗಳನ್ನೂ ಜನರ ಮನೆ ಬಾಗಿಲಿಗೆ ತಲುಪಿಸಿ’ ಎಂದು ಒತ್ತಾಯಿಸಿದರು.

ಸಚಿವರ ಗೈರಿಗೆ ಸಿದ್ದರಾಮಯ್ಯ ಆಕ್ಷೇಪ

ವಿಧಾನಸಭೆಯಲ್ಲಿ ಇಲಾಖಾವಾರು ಬೇಡಿಕೆಗಳ ಮೇಲಿನ ಚರ್ಚೆ ನಡೆಯುತ್ತಿದ್ದಾಗ ಸಚಿವರ ಸಾಲಿನಲ್ಲಿ ವಿ. ಸುನೀಲ್ ಕುಮಾರ್ ಮಾತ್ರ ಇದ್ದರು. ಸಚಿವರು ಸದನಕ್ಕೆ ಗೈರಾಗಿರುವುದಕ್ಕೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

‘ಇದು ಬಜೆಟ್ ಅಧಿವೇಶನ. ಸಚಿವರು ಉತ್ತರ ಕೊಡುವವರು. ಅವರಿಗೆ ಗಂಭೀರತೆ ಬೇಕು. ಆ ಕಡೆ ಬಿ.ಎಸ್. ಯಡಿಯೂರಪ್ಪ ಮಾತ್ರ ಜವಾಬ್ದಾರಿಯಿಂದ ಕೇಳಿಸಿಕೊಳ್ಳುತ್ತಿದ್ದಾರೆ. ಅವರನ್ನೇ ಮುಂದೆ ಕರೆದು ಕೂರಿಸಿ’ ಎಂದರು. ಅಷ್ಟರಲ್ಲೇ ಆರ್. ಅಶೋಕ, ಎಸ್. ಅಂಗಾರ, ಬೈರತಿ ಬಸವರಾಜ, ಎಸ್‌.ಟಿ. ಸೋಮಶೇಖರ್, ಆರಗ ಜ್ಞಾನೇಂದ್ರ ಸದನಕ್ಕೆ ಬಂದರು. ಕಲಾಪಕ್ಕೆ ಗೈರಾಗದಂತೆ ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಸಚಿವರಿಗೆ ತಾಕೀತು ಮಾಡಿದರು.

ಕೇಂದ್ರದ ಕಾರ್ಮಿಕ ಸಂಹಿತೆಗೆ ನಿಯಮ ಕರಡು ಸಿದ್ಧ: ಸಚಿವ ಶಿವರಾಮ ಹೆಬ್ಬಾರ್

‘ಕಾರ್ಮಿಕರ ಕಲ್ಯಾಣಕ್ಕಾಗಿ ಕೇಂದ್ರ ಸರ್ಕಾರ ರೂಪಿಸಿರುವ ನಾಲ್ಕು ಕಾರ್ಮಿಕ ಸಂಹಿತೆಗಳಿಗೆ ಅಗತ್ಯ ನಿಯಮಗಳನ್ನು ರಚಿಸಿದ ಕರಡು ಸಿದ್ಧಗೊಂಡಿದ್ದು, ಸದನದ ಅನುಮೋದನೆಗೆ ಶೀಘ್ರದಲ್ಲಿ ಮಂಡಿಸಲಾಗುವುದು’ ಎಂದು ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಅರವಿಂದಕುಮಾರ ಅರಳಿ ಅವರು ಕಾರ್ಮಿಕರಿಗೆ ಕನಿಷ್ಠ ವೇತನ ಮತ್ತು ಮೂಲಸೌಕರ್ಯಗಳು ಸಿಗುತ್ತಿಲ್ಲ ವಿಷಯ ಪ್ರಸ್ತಾಪಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಸಚಿವರು, ‘ಪ್ರಸ್ತುತ ಕಾರ್ಮಿಕರಿಗೆ ಸಂಬಂಧಿಸಿದ 29 ಕಾಯ್ದೆಗಳು ಜಾರಿಯಲ್ಲಿವೆ. ಇವುಗಳ ಬದಲಿಗೆ ವೇತನ ಸಂಹಿತೆ, ಕೈಗಾರಿಕಾ ಸಂಹಿತೆ, ಸಾಮಾಜಿಕ ಭದ್ರತಾ ಸಂಹಿತೆ ಮತ್ತು ವೃತ್ತಿ ಸುರಕ್ಷತೆ, ಆರೋಗ್ಯ ಹಾಗೂ ಸೇವಾ ಷರತ್ತುಗಳ ಸಂಹಿತೆ ಎಂಬ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಕೇಂದ್ರ ಸರ್ಕಾರ ತರಲು ಉದ್ದೇಶಿಸಿದೆ. 17 ರಾಜ್ಯಗಳು ಈಗಾಗಲೇ ಈ ಕಾರ್ಮಿಕ ಸಂಹಿತೆಗಳನ್ನು ಒಪ್ಪಿವೆ. ಈ ಸಂಹಿತೆಗಳಿಂದ ಕಾರ್ಮಿಕರ ಶ್ರೇಯೋಭಿವೃದ್ಧಿಗೆ ಅನುಕೂಲ ಆಗಲಿದೆ. ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಇರುವಂತೆ ವಾಹನ ಚಾಲಕರ ಕಲ್ಯಾಣ ಮಂಡಳಿ ಸ್ಥಾಪಿಸಲು ಕೂಡಾ ಉದ್ದೇಶಿಸಲಾಗಿದೆ’ ಎಂದು ತಿಳಿಸಿದರು.

ಹುಣ್ಣಿಮೆಯಂದು ಕೈವಾರ ತಾತಯ್ಯ ಜಯಂತಿ



ವಿ. ಸುನೀಲ್ ಕುಮಾರ್

ಬೆಂಗಳೂರು: ‘ಕೈವಾರದ ಯೋಗಿ ನಾರೇಯಣ ತಾತಯ್ಯ ಅವರ ಜಯಂತ್ಯುತ್ಸವವನ್ನು ಮುಂದಿನ ವರ್ಷದಿಂದ ಫಲ್ಗುಣ ಮಾಸದ ಹುಣ್ಣಿಮೆಯಂದೇ ಆಚರಿಸಲಾಗುವುದು’ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ. ಸುನೀಲ್ ಕುಮಾರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ ಅವರು ಈ ಬಗ್ಗೆ ಪ್ರಸ್ತಾಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ‘ಬಜೆಟ್‌ನಲ್ಲಿ ಮುಖ್ಯಮಂತ್ರಿ ಅವರು ಕೈವಾರ ತಾತಯ್ಯ ಜಯಂತಿಯನ್ನು ಮಾರ್ಚ್ 27ರಂದು ಆಚರಿಸುವು ದಾಗಿ ಪ್ರಕಟಿಸಿದರು. ಆದರೆ, ಸಮುದಾಯದ ಮುಖಂಡರು ಈ ದಿನಾಂಕವನ್ನು ಮಾರ್ಚ್ 18ಕ್ಕೆ ಬದಲಾಯಿಸಬೇಕು ಎಂದು ಕೋರಿದ್ದಾರೆ. ಈಗಾಗಲೇ ತಡವಾಗಿರುವುದರಿಂದ ಈ ವರ್ಷ ಮಾತ್ರ ಮಾರ್ಚ್ 27ರಂದು ಜಯಂತಿ ಆಚರಿಸಲಾಗುವುದು. ಮುಂದಿನ ವರ್ಷದಿಂದ ಹುಣ್ಣಿಮೆಯಂದೇ ಆಚರಿಸಲಾಗುವುದು’ ಎಂದು ತಿಳಿಸಿದರು.

‘6 ತಿಂಗಳಲ್ಲಿ ನೀಗಲಿದೆ ಭೂಮಾಪಕರ ಕೊರತೆ’

ಬೆಂಗಳೂರು:‘ಅವಶ್ಯಕತೆಗೆ ಅನುಗುಣವಾಗಿ 3 ಸಾವಿರ ‘ಪರವಾನಗಿ ಭೂ ಮಾಪಕರ’ನ್ನು ನೇಮಕ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ. ಭೂಮಾಪಕರ ಕೊರತೆಯು ಇನ್ನು ಆರು ತಿಂಗಳುಗಳ ಒಳಗೆ ನೀಗಲಿದೆ’ ಎಂದು ಕಂದಾಯ ಸಚಿವ ಆರ್.ಅಶೋಕ ವಿಧಾನಸಭೆಯಲ್ಲಿ ತಿಳಿಸಿದರು.

ಕಾಂಗ್ರೆಸ್‌ನ ಡಾ.ಯತೀಂದ್ರ ಸಿದ್ದರಾಮಯ್ಯ ಅವರ ಪ್ರಶ್ನೆಗೆ ಸೋಮವಾರ ಉತ್ತರಿಸಿದ ಸಚಿವರು, ‘ಭೂಮಾಪನ ನಡೆಸುವಂತೆ ಕೋರಿ ಸಲ್ಲಿಕೆಯಾಗಿ ರುವ ಅರ್ಜಿಗಳ ವಿಲೇವಾರಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಬಾಕಿ ಇರುವ ತಾಲ್ಲೂಕುಗಳಿಗೆ ಬೇರೆ ತಾಲ್ಲೂಕುಗಳಿಂದ ಭೂಮಾಪಕರನ್ನು ನಿಯೋಜಿಸಲಿದ್ದೇವೆ ಎಂದು ತಿಳಿಸಿದರು.

ಬಿಜೆಪಿ ಸದಸ್ಯ ಕುಮಾರ್ ಬಂಗಾರಪ್ಪ, ‘ಇನಾಂ ರದ್ದತಿ ಅರ್ಜಿಗಳು ಹೆಚ್ಚಿನ ಪ್ರಮಾಣದಲ್ಲಿ ಬಾಕಿ ಇರುವ ಕಡೆಗೆ ಹೆಚ್ಚಿನ ಸಂಖ್ಯೆಯಲ್ಲಿ ಭೂಮಾಪಕರನ್ನು ಒದಗಿಸಬೇಕು’ ಎಂದು ಕೋರಿದರು.

‘ಆಹಾರ ಕಲಬೆರಕೆ ತಡೆಗೆ ಮೂರು ಲ್ಯಾಬ್ ಶೀಘ್ರ’

ಆಹಾರ ಪದಾರ್ಥಗಳ ಕಲಬೆರಕೆ ತಡೆಯುವ ನಿಟ್ಟಿನಲ್ಲಿ ಇನ್ನು ಮೂರು ತಿಂಗಳಲ್ಲಿ ಬೆಂಗಳೂರು, ಮೈಸೂರು ಮತ್ತು ಬೆಳಗಾವಿಯಲ್ಲಿ ರಾಷ್ಟ್ರೀಯ ಮಾನ್ಯತಾ ಮಂಡಳಿಯಿಂದ (ಎನ್‌ಎಬಿಎಲ್) ಮಾನ್ಯತೆ ಪಡೆದ ಪ್ರಯೋಗಾಲಯಗಳು (ಲ್ಯಾಬ್) ಆರಂಭವಾಗಲಿವೆ ಎಂದು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಸೋಮವಾರ ಕಾಂಗ್ರೆಸ್‌ನ ಡಾ.ಡಿ. ತಿಮ್ಮಯ್ಯ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಎನ್‌ಎಬಿಎಲ್ ಮಾನ್ಯತೆ ಇಲ್ಲದ ಕಾರಣ ಈ ನಾಲ್ಕು ವಿಭಾಗೀಯ ಆಹಾರ ಪ್ರಯೋಗಾಲಯಗಳನ್ನು 2020ರ ಡಿಸೆಂಬರ್‌ನಲ್ಲಿ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ರದ್ದು ಪಡಿಸಿತ್ತು. ಕಲಬುರಗಿಯ ಪ್ರಯೋಗಾಲಯ ಆರಂಭವಾಗಲು ಸಾಕಷ್ಟು ಸಮಯ ಬೇಕಾಗುತ್ತದೆ’ ಎಂದು ವಿವರಿಸಿದರು.

ನಗರದ ಅವೆನ್ಯೂ ರಸ್ತೆಯಲ್ಲಿ ಸೋಮವಾರ ಸುರಿವ ಮಳೆಯಲ್ಲೇ ಸಾರ್ವಜನಿಕರು ನಡೆದುಕೊಂಡು ಹೋದರು – ಪ್ರಜಾವಾಣಿ ಚಿತ್ರಗಳು

ಸದಾಶಿವನಗರದಲ್ಲಿ ಧರೆಗುರುಳಿದ ಮರ

ಸತತ ಮೂರನೇ ದಿನವೂ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಎರಡು ದಿನಗಳಿಂದ ಆಗಾಗ ಬಿಡುವು ಕೊಡುತ್ತಾ ಮಳೆ ಸುರಿಯುತ್ತಿದ್ದು, ಸೋಮವಾರವೂ ಹಲವೆಡೆ ಬಿರುಸಿನ ಮಳೆ ಆಯಿತು.

ಭಾನುವಾರ ರಾತ್ರಿಯೂ ಬಹುತೇಕ ಪ್ರದೇಶಗಳಲ್ಲಿ ಮಳೆಯಾಗಿತ್ತು. ಗಾಳಿಯೂ ಜೋರಾಗಿ ಬೀಸಿತ್ತು. ಸದಾಶಿವನಗರದಲ್ಲಿ ಮರವೊಂದು ಉರುಳಿ ಬಿದ್ದಿತ್ತು. ಬಿಬಿಎಂಪಿ ಸಿಬ್ಬಂದಿ ಮರವನ್ನು ತೆರವುಗೊಳಿಸಿದರು. ಚರಂಡಿಯಲ್ಲಿ ಕಸ ಕಡ್ಡಿ ಕಟ್ಟಿಕೊಂಡಿದ್ದರಿಂದ ಕೆಲವೆಡೆ ರಸ್ತೆಯಲ್ಲೇ ನೀರು ಹರಿಯಿತು.

ಸೋಮವಾರ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಬಿಸಿಲಿನ ತಾಪ ಹೆಚ್ಚಿತ್ತು. ಮಧ್ಯಾಹ್ನದ ನಂತರ ಮೋಡ ಕವಿದ ವಾತಾವರಣ ಉಂಟಾಗಿ, ತಂಪು ಗಾಳಿ ಬೀಸಲಾರಂಭಿಸಿತ್ತು. ಮಧ್ಯಾಹ್ನ 3 ಗಂಟೆ ಸುಮಾರಿಗೆ ಹಲವೆಡೆ ತುಂತುರು ಮಳೆ ಸುರಿಯಿತು.

ರಸ್ತೆಯಲ್ಲಿ ಹೊರಟಿದ್ದ ಪಾದಚಾರಿಗಳು, ಅಕ್ಕ–ಪಕ್ಕದ ಅಂಗಡಿಗಳಲ್ಲಿ ಆಶ್ರಯ ಪಡೆದರು. ಬೈಕ್ ಸವಾರರು, ಕೆಳಸೇತುವೆ ಹಾಗೂ ಮರಗಳ ಕೆಳಗೆ ನಿಂತುಕೊಂಡಿದ್ದರು. ಕೆಲವರು, ಸುರಿಯುವ ಮಳೆಯಲ್ಲೇ ನಡೆದುಕೊಂಡು ಹೋದರು.

ಶಾಲಾ– ಕಾಲೇಜು ಮುಗಿಸಿ ಮನೆಗೆ ಹೊರಟಿದ್ದ ವಿದ್ಯಾರ್ಥಿಗಳು, ಮಳೆಯಲ್ಲೇ ಹೆಜ್ಜೆ ಹಾಕಿದರು. ಕೆಲವರು ಮಳೆಯಲ್ಲಿ ಕುಣಿದು ಸಂಭ್ರಮಿಸಿದರು.

ಕೆಲರಸ್ತೆಗಳಲ್ಲಿ ಜನರು, ತಲೆ ಮೇಲೆ ಬಟ್ಟೆ ಹಾಗೂ ಪ್ಲಾಸ್ಟಿಕ್ ಹೊತ್ತುಕೊಂಡು ಸಾಗಿದ್ದು ಕಂಡುಬಂತು. ಕೆಲವೆಡೆ ಮಹಿಳೆಯರು, ಸೀರೆ ಸೆರಗನ್ನು ಮಕ್ಕಳಿಗೆ ಹೊದಿಸಿ ಮುಂದೆ ಸಾಗಿದರು. ರಾಜರಾಜೇಶ್ವರಿನಗರ, ನಾಯಂಡ ನಹಳ್ಳಿ, ದೀಪಾಂಜಲಿನಗರ, ಚಾಮರಾಜಪೇಟೆ, ವಿಜಯನಗರ, ರಾಜಾಜಿನಗರ, ಯಶವಂತಪುರ, ಪೀಣ್ಯ, ಜಾಲಹಳ್ಳಿ, ಲಗ್ಗೆರೆ, ಮಲ್ಲೇಶ್ವರ, ಶೇಷಾದ್ರಿಪುರ, ಶಿವಾಜಿನಗರ, ಮೆಜೆಸ್ಟಿಕ್, ಗಾಂಧಿನಗರ, ಚಿಕ್ಕಪೇಟೆ, ಕಲಾಸಿಪಾಳ್ಯ, ಸಿಟಿ ಮಾರ್ಕೆಟ್, ಜಯನಗರ, ಬಸವನಗುಡಿ, ಬನಶಂಕರಿ, ಹನುಮಂತನಗರ ಗಿರಿನಗರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಉತ್ತಮ ಮಳೆ ಆಯಿತು.

ಹರಿಯುವ ನೀರಿನಲ್ಲೇ ಸಂಚಾರ: ರೆಸಿಡೆನ್ಸಿ ರಸ್ತೆ, ಅವೆನ್ಯೂ ರಸ್ತೆ, ಕೆಂಪೇಗೌಡ ರಸ್ತೆ, ಮೆಜೆಸ್ಟಿಕ್, ಶೇಷಾದ್ರಿಪುರ, ಮಲ್ಲೇಶ್ವರ ಸಂಪಿಗೆ ರಸ್ತೆ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ನೀರು ಹರಿಯಿತು. ಅದರಲ್ಲೇ ವಾಹನಗಳು ಸಂಚರಿಸಿದವು.

ನಗರದ ಹಲವೆಡೆ ಕಾಮಗಾರಿ ನಡೆಯುತ್ತಿದ್ದು, ಅದಕ್ಕಾಗಿ ರಸ್ತೆ ಅಗೆಯಲಾಗಿದೆ. ಅಲ್ಲಲ್ಲ ನೀರು ನಿಂತು ಸಮಸ್ಯೆ ಆಯಿತು.

ಅನುಮಾನ, ಭ್ರಷ್ಟಾಚಾರಕ್ಕೆ ಅವಕಾಶ ಇಲ್ಲದಂತೆ ಪ್ರಕ್ರಿಯೆ • ವರ್ಗಾವಣೆಯಲ್ಲಿ ಲಂಚದ ವ್ಯವಹಾರ ನಡೆದಿಲ್ಲ

‘ನೇಮಕಾತಿ, ಬಡ್ತಿಯಲ್ಲಿ ಪಾರದರ್ಶಕತೆ’

ಪ್ರಜಾವಾಣಿ ವಾರ್ತೆ

ಡಾ.ಕೆ. ಸುಧಾಕರ್

ಬೆಂಗಳೂರು: ‘ಆರೋಗ್ಯ ಮತ್ತು ವೈದ್ಯಕೀಯ ಇಲಾಖೆಯಲ್ಲಿ ನೇಮಕಾತಿ, ಬಡ್ತಿ, ವರ್ಗಾವಣೆಯಲ್ಲಿ ಅನುಮಾನ, ಭ್ರಷ್ಟಾಚಾರಕ್ಕೆ ಅವಕಾಶ ಇಲ್ಲದಂತೆ ಪಾರದರ್ಶಕತೆ ಕಾಯ್ದುಕೊಳ್ಳಲಾಗಿದೆ. ನಾನು ಈ ಇಲಾಖೆಗಳ ಸಚಿವನಾಗಿ 17 ತಿಂಗಳ ಅವಧಿಯಲ್ಲಿ ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಿದ್ದೇನೆ’ ಎಂದು ಆರೋಗ್ಯ ಮತ್ತು ವೈದ್ಯಕೀಯ ಸಚಿವ ಡಾ.ಕೆ. ಸುಧಾಕರ್ ಹೇಳಿದ್ದಾರೆ.

‘ಆರೋಗ್ಯ'ಕ್ಕೆ ಲಂಚದ 'ವೈರಸ್' ಶೀರ್ಷಿಕೆಯಲ್ಲಿ ‘ಪ್ರಜಾವಾಣಿ’ಯಲ್ಲಿ ಮಾರ್ಚ್ 21ರಂದು ಪ್ರಕಟವಾದ ವಿಶೇಷ ವರದಿ ಸತ್ಯಕ್ಕೆ ದೂರವಾಗಿದೆ. ಅಲ್ಲದೆ, ರಾಜಕೀಯ ಪ್ರೇರಿತವಾಗಿರುವ ಅನುಮಾನ ಮೂಡಿಸಿದೆ’ ಎಂದಿದ್ದಾರೆ.

‘ವೈದ್ಯರು, ತಜ್ಞ ವೈದ್ಯರು ಮತ್ತು ಇತರ ಸಿಬ್ಬಂದಿಯ ವಿಶೇಷ ನೇರ ನೇಮಕಕ್ಕೆ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ಐದು ಪ್ರತ್ಯೇಕ ಉನ್ನತಾಧಿಕಾರ ಸಮಿತಿಗಳನ್ನು ರಚಿಸಲಾಗಿತ್ತು. ಆ ಸಮಿತಿಗಳು ಮೆರಿಟ್ ಮತ್ತು ಮೀಸಲು ಅನ್ನೇ ಮಾನದಂಡವಾಗಿ ಇಟ್ಟುಕೊಂಡು ದಾಖಲೆ ಅವಧಿಯಲ್ಲಿ ಆಯ್ಕೆ ಪಟ್ಟಿ ಪ್ರಕಟಿಸಿವೆ. ಕರ್ತವ್ಯಕ್ಕೆ ಹಾಜರಾಗದವರ ಬದಲಿಗೆ ಕಾದಿರಿಸಿದ ಪಟ್ಟಿಯಲ್ಲಿ ಇದ್ದವರಿಗೆ ನೇಮಕ ಆದೇಶ ನೀಡಲಾಗಿದೆ. ವೈದ್ಯಕೀಯ ಕಾಲೇಜು ನೇಮಕಗಳಿಗೆ ಡೀನ್‌ಗಳ ನೇತೃತ್ವದಲ್ಲಿ ಆಯ್ಕೆ ಸಮಿತಿ ರಚಿಸಲಾಗಿದ್ದು, ಅದರಲ್ಲಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಒಬ್ಬ ಪ್ರತಿನಿಧಿ, ಡಿಎಂಇ ಮತ್ತು ಪ್ರಧಾನ ಕಾರ್ಯದರ್ಶಿ ಅವರ ಪ್ರತಿನಿಧಿ ಸದಸ್ಯರಾಗಿರುತ್ತಾರೆ. ಈ ಸಮಿತಿಯು ಇಲಾಖೆ ನಿಗದಿಪಡಿಸಿರುವ ಮಾನದಂಡ ಮತ್ತು ನಿಯಮಗಳ ಅನ್ವಯ ಮೆರಿಟ್ ಆಧಾರದಲ್ಲಿ ಆಯ್ಕೆ ಪಟ್ಟಿ ಸಿದ್ಧಪಡಿಸಿದೆ. ಈ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆಯೂ ಯಾವುದೇ ಆಕ್ಷೇಪ ಬಂದಿಲ್ಲ’ ಎಂದಿದ್ದಾರೆ.

‘ಸಾಮಾನ್ಯ ವರ್ಗಾವಣೆ ಪ್ರಕ್ರಿಯೆ‘

ಆರೋಗ್ಯ ಇಲಾಖೆಯ ಆಯುಕ್ತರ ಹುದ್ದೆಯ ಬಗ್ಗೆ ವರದಿಯಲ್ಲಿರುವ ಅಂಶ ಸತ್ಯಕ್ಕೆ ದೂರವಾದುದು. ಬಿಬಿಎಂಪಿಯಲ್ಲಿ ಎರಡು ವರ್ಷ ಕರ್ತವ್ಯ ನಿರ್ವಹಿಸಿದ ಬಳಿಕ, ಸಾಮಾನ್ಯ ವರ್ಗಾವಣೆ ಪ್ರಕ್ರಿಯೆಯ ಭಾಗವಾಗಿ ಮುಖ್ಯಮಂತ್ರಿ ಮತ್ತು ಮುಖ್ಯ ಕಾರ್ಯದರ್ಶಿ ನನ್ನನ್ನು ಆಯುಕ್ತ ಹುದ್ದೆಗೆ ವರ್ಗಾವಣೆ ಮಾಡಿದ್ದಾರೆ.

ರಂದೀಪ್, ಆಯುಕ್ತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

‘ಜ್ಯೇಷ್ಠತೆಯ ಆಧಾರದಲ್ಲಿ ನೇಮಕ’

ಆರೋಗ್ಯ ಇಲಾಖೆಯ ನಿರ್ದೇಶಕ ಹುದ್ದೆಗೆ ನನ್ನ ನೇಮಕದ ಬಗ್ಗೆ ಮಾಡಿರುವ ಆರೋಪದಲ್ಲಿ ಹುರುಳಿಲ್ಲ. ಸಂಪೂರ್ಣವಾಗಿ ಜ್ಯೇಷ್ಠತೆ ಆಧಾರದಲ್ಲಿ ನನ್ನ ನೇಮಕ ಆಗಿದೆ. ಹಿರಿಯ ವೈದ್ಯೆಯಾಗಿದ್ದು, ಈ ಕಾರಣಕ್ಕೆ ಹುದ್ದೆಗೆ ಅರ್ಹತೆ ಪಡೆದಿದ್ದೆ. ಇಲಾಖಾ ಪದೋನ್ನತಿ ಸಮಿತಿ (ಡಿಪಿಸಿ) ನನ್ನ ನೇಮಕಕ್ಕೆ ಮಂಜೂರಾತಿ ನೀಡಿದ್ದು, ತಕ್ಷಣವೇ ಸಚಿವರ ಕಚೇರಿ ಅನುಮೋದನೆ ನೀಡಿದೆ.

ಡಾ. ಇಂದುಮತಿ, ನಿರ್ದೇಶಕಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

‘ವರ್ಗಾವಣೆಗೆ ಸಂಬಂಧಿಸಿದಂತೆ ದೂರುಗಳು ಬಂದ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡಲು ಸೂಚಿಸಲಾಗಿದೆ. ಕೆಲವು ತುರ್ತು ಪ್ರಕರಣಗಳಲ್ಲಿ ವರ್ಗಾವಣೆ ಪ್ರಸ್ತಾವನೆಗಳನ್ನು ಮುಖ್ಯಮಂತ್ರಿಯ ಆದೇಶಕ್ಕೆ ಕಡತ ರವಾನಿಸಲಾಗಿದೆ. ವರ್ಗಾವಣೆಯಲ್ಲಿ ಅಕ್ರಮ ನಡೆದಿರುವ ಬಗ್ಗೆ ಯಾವುದೇ ದೂರು ಸಕ್ಷಮ ಪ್ರಾಧಿಕಾರಗಳಲ್ಲಿ ದಾಖಲಾಗಿಲ್ಲ. ಒಟ್ಟಾರೆ ಎರಡೂ ಇಲಾಖೆಗಳಲ್ಲಿ ನಡೆದಿರುವ ವರ್ಗಾವಣೆಯಲ್ಲಿ ಯಾವುದೇ ಲಂಚ ನಡೆದಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತೇನೆ’ ಎಂದಿದ್ದಾರೆ.

‘ಇಲಾಖಾ ಮುಂಬಡ್ತಿ ಸಮಿತಿಗಳು ಅಭ್ಯರ್ಥಿಗಳ ಅರ್ಹತೆ ಮತ್ತು ಮಾನದಂಡಗಳ ಆಧಾರದ ಮೇಲೆ ಸಭೆ ನಡೆಸಿ ದಾಖಲೆಗಳನ್ನು ಪರಿಶೀಲಿಸಿ ನೀಡುವ ಶಿಫಾರಸು ಅನ್ವಯ ಬಡ್ತಿ ನೀಡಲಾಗುತ್ತದೆ. ಒಂದು ವೇಳೆ ಯಾರಿಗಾದರೂ ಅನ್ಯಾಯ ಆಗಿದ್ದಲ್ಲಿ ದೂರು ನೀಡಲು ಅವಕಾಶಗಳಿವೆ. ಒಂದೇ ಒಂದು ದೂರು ದಾಖಲಾಗಿಲ್ಲ’ ಎಂದೂ ತಿಳಿಸಿದ್ದಾರೆ.

‘ಔಷಧ ಮತ್ತು ವೈದ್ಯಕೀಯ ಉಪಕರಣ ಖರೀದಿ ಹಿರಿಯ ಐಎಎಸ್ ಅಧಿಕಾರಿಗಳ ಉಸ್ತುವಾರಿಯಲ್ಲಿ ನಡೆಯುತ್ತದೆ. ಈ ಕಡತ ಸಚಿವರ ಬಳಿ ಬರುವುದೇ ಇಲ್ಲ. ಕೋವಿಡ್ ಸಂದರ್ಭದಲ್ಲಿ ಕೋವಿಡ್ ಟಾಸ್ಕ್ ಫೋರ್ಸ್ ಕಮಿಟಿ ಮತ್ತು ಸಚಿವ ಸಂಪುಟದ ಅನುಮೋದನೆ ಮೇರೆಗೆ ನಡೆದಿವೆ. ನಾನಾ ಹಂತಗಳಲ್ಲಿ ಪರಿಶೀಲನೆ, ಅನುಮೋದನೆಗಳ ಬಳಿಕವಷ್ಟೇ ಕಾಮಗಾರಿಗೆ ಅನುಮತಿ ನೀಡಲಾಗುತ್ತದೆ. ಮಾಜಿ ಶಾಸಕರೊಬ್ಬರು ದೂರು ದಾಖಲಿಸಿದಾಕ್ಷಣ ಅವಲ್ಲವೂ ಆಧಾರಸಹಿತ ಎಂದು ಭಾವಿಸಬೇಕೆ’ ಎಂದೂ ಪ್ರಶ್ನಿಸಿದ್ದಾರೆ.

ಆನ್‌ಲೈನ್‌ನಲ್ಲೇ ಪಾಠ-ಸವಾಲಿನಲ್ಲಿ ಯಶಸ್ಸು

19 ಚಿನ್ನದ ಪದಕ, 2 ಬಹುಮಾನ ಪಡೆಯಲಿರುವ ಜಿ.ಎಂ.ಭಾವನಾ

• ಕೆ.ಓಂಕಾರ ಮೂರ್ತಿ

ಜಿ.ಎಂ.ಭಾವನಾ

ಮುಖ್ಯಾಂಶಗಳು

- ಐಎಎಸ್ ಅಧಿಕಾರಿ ಆಗುವ ಗುರಿ
- ಓದಿಗಾಗಿ ಮೈಸೂರಿಗೆ ಸ್ಥಳಾಂತರ

ಮೈಸೂರು: ‘ಕೋವಿಡ್‌ನಿಂದಾಗಿ ನಾಲ್ಕು ಸೆಮಿಸ್ಟರ್‌ಗಳಲ್ಲಿ ಮೂರು ಸೆಮಿಸ್ಟರ್ ಆನ್‌ಲೈನ್‌ನಲ್ಲೇ ಪಾಠ ಕೇಳಬೇಕಾಯಿತು. ನಗರದಲ್ಲಿದ್ದರೂ ಒಮ್ಮೊಮ್ಮೆ ನೆಟ್‌ವರ್ಕ್ ಸಿಗದೆ ಕಷ್ಟವಾಗುತಿತ್ತು. ಬೇರೆ ಆಯ್ಕೆಯೇ ಇರಲಿಲ್ಲ. ಉಳಿದವರಿಗಿಂತ ಹೆಚ್ಚು ಶ್ರಮ ಹಾಕಿ ಓದಿದೆ. ಮನೆಯಲ್ಲಿ ಅಪ್ಪ-ಅಮ್ಮ ಯಾವುದೇ ಕೆಲಸ ನೀಡದ್ದು ನೆರವಾಯಿತು’

–ಮೈಸೂರು ವಿಶ್ವವಿದ್ಯಾಲ ಯವು ಮಂಗಳವಾರ ಇಲ್ಲಿ ಆಯೋಜಿಸಿರುವ 102ನೇ ಘಟಿಕೋತ್ಸವದಲ್ಲಿ 19 ಚಿನ್ನ ಪದಕ ಹಾಗೂ 2 ದತ್ತಿ ಬಹುಮಾನ ಪಡೆಯಲಿರುವ ಜಿ.ಎಂ.ಭಾವನಾ ಅವರ ಮಾತುಗಳಿವು.

ಈ ಬಾರಿ ಅತಿ ಹೆಚ್ಚು ಚಿನ್ನದ ಪದಕ ಪಡೆಯುತ್ತಿರುವ ಅಭ್ಯರ್ಥಿ ಕೂಡ. ರಾಜ್ಯಪಾಲ ಥಾವರಚಂದ್ ಗೆಹಲೋತ್ ಪದಕ ಪ್ರದಾನ ಮಾಡಲಿದ್ದಾರೆ.

ಎಂ.ಎಸ್ಸಿ ರಸಾಯನ ವಿಜ್ಞಾನ ವಿಷಯದಲ್ಲಿ ಈ ಸಾಧನೆ ಮಾಡಿರುವ ಅವರು ಐಎಎಸ್ ಅಧಿಕಾರಿಯಾಗುವ ಗುರಿ ಹೊಂದಿದ್ದಾರೆ.

‘ನಮ್ಮೂರು ಕೆ.ಆರ್.ಪೇಟೆ ತಾಲ್ಲೂಕಿನ ಗೋವಿಂದನಹಳ್ಳಿ ಗ್ರಾಮ. ತಾಯಿ ಡಿ.ಬಿ.ಭಾಗ್ಯಾ ಪದವಿ ಓದಿದ್ದಾರೆ. ಗುತ್ತಿಗೆದಾರರಾಗಿರುವ ತಂದೆ ಜಿ.ಎಂ.ಮಹಾದೇವ್ ಹೆಚ್ಚು ಓದಿಲ್ಲ. ಆದರೆ, ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕೆಂದು ಇಡೀ ಕುಟುಂಬವನ್ನೇ ಮೈಸೂರು ನಗರಕ್ಕೆ ಸ್ಥಳಾಂತರ ಮಾಡಿದರು. ಆಗ ನಾನು ಐದನೇ ತರಗತಿ ಓದುತ್ತಿದ್ದೆ. ಈಗ ಅವರ ಕನಸು ನನಸಾಗಿದ್ದು, ತುಂಬಾ ಖುಷಿಯಾಗಿದ್ದಾರೆ. ತಮ್ಮ ಎಂಜಿನಿಯರಿಂಗ್ ಓದುತ್ತಿದ್ದಾನೆ’ ಎಂದು ಭಾವನಾ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ಎಂ.ಎಸ್ಸಿ ಎರಡು ವರ್ಷಗಳ ವ್ಯಾಸಂಗದಲ್ಲಿ ಮೊದಲ ಸೆಮಿಸ್ಟರ್ ಮಾತ್ರ ತರಗತಿಗೆ ಹೋಗಿ ಪಾಠ ಕೇಳಿದೆವು. ಆನಂತರ ಕೋವಿಡ್‌ನಿಂದಾಗಿ ಮನೆಯಲ್ಲೇ ಬಂದಿಯಾದೆವು. ಆನ್‌ಲೈನ್‌ನಲ್ಲಿ ವಿಜ್ಞಾನ ಪಾಠ ಕೇಳಿ ಅರ್ಥ ಮಾಡಿಕೊಳ್ಳಲು ಕಷ್ಟವಾಗುತಿತ್ತು. ಬೋಧಕರು ಪಿಪಿಟಿ ಮೂಲಕ ಅರ್ಥ ಮಾಡಿಸಲು ಪ್ರಯತ್ನಿಸುತ್ತಿದ್ದರು. ಆನ್‌ಲೈನ್‌ನಲ್ಲೇ ಒಂದು ತಿಂಗಳು ಹೆಚ್ಚುವರಿ ತರಗತಿ ನಡೆಸಿ ಮನದಟ್ಟು ಮಾಡಿದರು. ಆನ್‌ಲೈನ್ ತರಗತಿ, ನೆಟ್‌ವರ್ಕ್ ವಿಚಾರವಾಗಿ ಗ್ರಾಮಾಂತರ ಪ್ರದೇಶದ ಸ್ನೇಹಿತರಿಗೆ ತುಂಬಾ ಕಷ್ಟ ಎದುರಾಯಿತು’ ಎಂದರು.

‘ಪೋಷಕರು, ಬೋಧಕರು ಹಾಗೂ ಸ್ನೇಹಿತರಿಗೆ ಈ ಪದಕ ಅರ್ಪಿಸುತ್ತೇನೆ’ ಎಂದು ಭಾವನಾ ಭಾವುಕರಾಗಿ ನುಡಿದರು.

ಯುವರಾಜ ಕಾಲೇಜಿನಲ್ಲಿ ಬಿ.ಎಸ್ಸಿ (ಲೈಫ್ ಸೈನ್ಸ್) ಪದವಿಯಲ್ಲೂ ಭಾವನಾ ರ‍್ಯಾಂಕ್ ಪಡೆದಿದ್ದಾರೆ.

ಸದ್ಯ ಭಾವನಾ ಅವರು ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದಾರೆ.

ಮಾರಿಕಾಂಬಾ ಜಾತ್ರೆ: ವ್ಯಾಪಾರಿಗಳ ನಿರಾಸಕ್ತಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಕೋಟೆ ಮಾರಿಕಾಂಬಾ ಜಾತ್ರೆ ಮಾರ್ಚ್ 22ರಿಂದ ಆರಂಭವಾಗುತ್ತಿದೆ. ಮುಸ್ಲಿಮರಿಗೆ ಜಾತ್ರೆಯಲ್ಲಿ ಅಂಗಡಿಗಳನ್ನು ಹಾಕಲು ಅವಕಾಶ ನಿರಾಕರಿಸಿದ ನಂತರ ಸೃಷ್ಟಿಯಾದ ಗೊಂದಲದ ಪರಿಣಾಮವಾಗಿ ವ್ಯಾಪಾರಿಗಳು ಸೋಮವಾರ ರಾತ್ರಿಯವರೆಗೂ ಟೆಂಟ್ ಹಾಕಿರಲಿಲ್ಲ.

ಪ್ರತಿ ಎರಡು ವರ್ಷಗಳಿಗೆ ಒಮ್ಮೆ ನಡೆಯುವ ಜಾತ್ರೆಯಲ್ಲಿ ವ್ಯಾಪಾರಿಗಳು ಯಾವ ಧರ್ಮ ಭೇದವೂ ಇಲ್ಲದೆ ಟೆಂಟ್ ಹಾಕಿಕೊಂಡು ಆಟಿಕೆಗಳು, ತಿಂಡಿ, ತಿನಿಸುಗಳು, ತಂಪು ಪಾನೀಯಗಳು, ಬಳೆ, ಬಲೂನುಗಳು ಸೇರಿ ವಿವಿಧ ಸಾಮಗ್ರಿಗಳನ್ನು ಮಾರಾಟ ಮಾಡುತ್ತಿದ್ದರು. ಆದರೆ, ಈ ಬಾರಿ ಬಜರಂಗ ದಳದ ಕಾರ್ಯಕರ್ತ ಹರ್ಷ ಹತ್ಯೆಯ ನಂತರ ನಡೆದ ಕೋಮು ದ್ವೇಷದ ಬೆಳವಣಿಗಳು ಮಾರಿಕಾಂಬಾ ಜಾತ್ರೆಯ ಮೇಲೂ ಪರಿಣಾಮ ಬೀರಿವೆ.

ಈ ಬಾರಿಯ ಜಾತ್ರಾ ಮಹೋತ್ಸವದಲ್ಲಿ ಚಿನ್ನಯ್ಯ ಎಂಬುವವರು ಮಳಿಗೆಗಳ ವಿತರಣೆ, ನಿರ್ವಹಣೆಯ ಗುತ್ತಿಗೆ ಪಡೆದಿದ್ದರು. ಬಿಜೆಪಿ, ಬಜರಂಗ ದಳದ ಮುಖಂಡರು ಮುಸ್ಲಿಮರಿಗೆ ಮಳಿಗೆ ಹಾಕಲು ಅವಕಾಶ ನೀಡದಂತೆ ತಾಕೀತು ಮಾಡಿದ್ದರು. ಇದರಿಂದ ಗುತ್ತಿಗೆದಾರ ಜವಾಬ್ದಾರಿಯಿಂದ ಹಿಂದೆ ಸರಿದಿದ್ದರು. ನಂತರ ಬಜರಂಗ ದಳದ ಮುಖಂಡರೇ ಹಣ ನೀಡಿ, ಗುತ್ತಿಗೆ ಪಡೆದುಕೊಂಡಿದ್ದಾರೆ. ಮುಸ್ಲಿಂ ವ್ಯಾಪಾರಿಗಳಿಗೆ ಮಾರಾಟಕ್ಕೆ ಅವಕಾಶ ನೀಡಿಲ್ಲ.

ಶಿವಮೊಗ್ಗದಲ್ಲಿ ಮಂಗಳವಾರ ಮಾರಿಕಾಂಬ ಜಾತ್ರೆ ಆರಂಭವಾಗುತ್ತಿದ್ದು ಬೆರಳೆಣಿಕೆಯ ವ್ಯಾಪಾರಿಗಳು ಸೋಮವಾರ ಸಿದ್ಧತೆಯಲ್ಲಿ ತೊಡಗಿದ್ದರು.

‘ಮುಸ್ಲಿಮರಿಗೆ ವ್ಯಾಪಾರಕ್ಕೆ ಅವಕಾಶ ಕೊಡಿ’

ಉಡುಪಿ: ‘ಕಾಪು ಮಾರಿಗುಡಿ ಜಾತ್ರೆ ಸೇರಿದಂತೆ ಕರಾವಳಿಯಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆಯುವ ಸ್ಥಳಗಳಲ್ಲಿ ವ್ಯಾಪಾರ ಮಾಡಲು ಮುಸ್ಲಿಮರಿಗೂ ಅನುಮತಿ ನೀಡಬೇಕು’ ಎಂದು ಬೀದಿಬದಿ ವ್ಯಾಪಾರಿಗಳ ಹಾಗೂ ಜಾತ್ರೆ ವ್ಯಾಪಾರಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಆರೀಫ್ ಆಗ್ರಹಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಶಕಗಳಿಂದಲೂ ಹಿಂದೂಗಳ ಧಾರ್ಮಿಕ ಕಾರ್ಯಕ್ರಮಗಳಲ್ಲಿ ವ್ಯಾಪಾರ ಮಾಡಿಕೊಂಡು ಬರುತ್ತಿದ್ದು, ಸೌಹಾರ್ದಯುತವಾಗಿ ಬದುಕುತ್ತಿದ್ದೇವೆ. ಆದರೆ, ಈಚೆಗೆ ಹಿಂದೂಗಳ ಕಾರ್ಯಕ್ರಮಗಳಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ ಹಾಕಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಇಬ್ರಾಹಿಂ ತೌಫಿಕ್, ಹಮೀದ್ ನೇಜಾರು, ಶಾಹಿದ್ ನೇಜಾರು, ಯಾಸಿನ್ ಕೆಮ್ಮಣ್ಣು ಇದ್ದರು.

‘ನಾವು 40 ವರ್ಷಗಳಿಂದಲೂ ಖಾರಾ- ಮಂಡಕ್ಕಿ ಅಂಗಡಿ ಹಾಕುತ್ತಿದ್ದೇವೆ. ಜಾತ್ರೆ ಆರಂಭದ ಮೂರು ದಿನಗಳ ಮೊದಲೇ ವ್ಯಾಪಾರಕ್ಕೆ ಸಿದ್ಧತೆ ನಡೆಯುತ್ತಿತ್ತು. ಹಿಂದಿನ ದಿನದಿಂದಲೇ ವ್ಯಾಪಾರ ಆರಂಭಿಸುತ್ತಿದ್ದೇವು. ಈ ಬಾರಿ ಜಾತ್ರೆ ಆರಂಭಕ್ಕೆ ಕೆಲವು ಗಂಟೆಗಳು ಇದ್ದರೂ ನಾಲ್ಕು ಮಳಿಗೆಗಳೂ ಸಿದ್ಧವಾಗಿಲ್ಲ. ಮುಸ್ಲಿಮರಿಗೆ ಅವಕಾಶ ನಿರಾಕರಿಸಿದ್ದಾರೆ. ಹಿಂದೂ ವ್ಯಾಪಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದಿಲ್ಲ. ಇದೇ ಮೊದಲ ಬಾರಿ ಇಂತಹ ವಾತಾವರಣ ಕಾಣುತ್ತಿದ್ದೇವೆ’ ಎಂದು ಪ್ರತಿಕ್ರಿಯಿಸಿದರು ಜಟ್ಪಂಗಿ ರಾಮೇಶ್ವರ ಕಾರಾಮಂಡಕ್ಕಿ ಅಂಗಡಿಯ ದೇವೇಂದ್ರ.

‘ಹರ್ಷ ಹತ್ಯೆಯ ನಂತರ ಹಿಂದೂ ಸಮಾಜ ನೊಂದಿದೆ. ಇಂತಹ ಸಮಯದಲ್ಲಿ ಮುಸ್ಲಿಮರಿಗೆ ನಮ್ಮ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಲು ಅವಕಾಶ ನೀಡಿದರೆ ದ್ವೇಷ ಹೆಚ್ಚಾಗಬಹುದು. ಅದಕ್ಕಾಗಿ ಮುಸ್ಲಿಂ ವ್ಯಾಪಾರಿಗಳಿಗೆ ಅವಕಾಶ ನಿರಾಕರಿಸಿದ್ದೇವೆ’ ಎನ್ನುತ್ತಾರೆ ಬಜರಂಗ ದಳದ ಮುಖಂಡರು.

ಮುಖ್ಯ ಶಿಕ್ಷಕಿ ಅಮಾನತು

ಖಾಸಗಿ ಶಾಲೆಯಲ್ಲಿ ಮುಸ್ಲಿಂ ವಿದ್ಯಾರ್ಥಿಗಳಿಗೆ ನಮಾಜ್ ಸಲ್ಲಿಸಲು ಅವಕಾಶ ಮಾಡಿಕೊಟ್ಟ ಆರೋಪದ ಮೇಲೆ ಮುಖ್ಯ ಶಿಕ್ಷಕಿಯನ್ನು ಶಾಲಾ ಆಡಳಿತ ಮಂಡಳಿ ಅಮಾನತು ಮಾಡಿದೆ. ಗೋಪಾಳದ ವಿದ್ಯಾನಿಕೇತನ ಶಾಲೆಯ ಜಬೀನಾ ಪರ್ವಿನ್ ಅಮಾನತುಗೊಂಡವರು.

ಹಿಜಾಬ್ ವಿವಾದ ಬಿಜೆಪಿ ಸೃಷ್ಟಿ: ಬೃಂದಾ

ಮಂಗಳೂರು: ‘ಹಿಜಾಬ್ ವಿವಾದವು ಸಮಾಜದಲ್ಲಿ ಒಡಕು ಉಂಟುಮಾಡಿ, ರಾಜಕೀಯ ಲಾಭ ಮಾಡಿಕೊಳ್ಳುವ ಸಲುವಾಗಿ ಬಿಜೆಪಿಯವರು ಸೃಷ್ಟಿಸಿದ್ದು. ರಾಜ್ಯ ಹೈಕೋರ್ಟ್ ಸಹ ಸರ್ಕಾರದ ಸುತ್ತೋಲೆಯನ್ನು ಎತ್ತಿ ಹಿಡಿದಿರುವುದು ಅಚ್ಚರಿ ಮೂಡಿಸಿದೆ’ ಎಂದು ಸಿಪಿಎಂ ನಾಯಕಿ ಬೃಂದಾ ಕಾರಟ್ ಹೇಳಿದರು.

ಇಲ್ಲಿನ ಕುದ್ಮುಲ್ ರಂಗರಾವ್ ಸಭಾಭವನದಲ್ಲಿ ಆಯೋಜಿಸಿದ್ದ ಸೌಹಾರ್ದತಾ ಸಮಾವೇಶದಲ್ಲಿ ಮಾತನಾಡಿದ ಅವರು, ‘ಕೇಂದ್ರ ಸರ್ಕಾರವೇ ನಡೆಸುವ ಕೇಂದ್ರೀಯ ವಿದ್ಯಾಲಯಗಳಲ್ಲಿ ಹಿಜಾಬ್‌ಗೆ ನಿಷೇಧವಿಲ್ಲ. ಪಂಜಾಬ್‌ನಲ್ಲಿ ವಿದ್ಯಾರ್ಥಿಗಳು ಪೇಟ ಅಥವಾ ಶಿರವಸ್ತ್ರ ಧರಿಸಿ ಶಾಲೆಗೆ ಬರುತ್ತಾರೆ. ಹೀಗಿರುವಾಗ ಕರ್ನಾಟಕದಲ್ಲಿ ಮಾತ್ರ ಹಿಜಾಬ್‌ಗೆ ನಿರ್ಬಂಧ ಹೇರಿರುವುದರ ಹಿನ್ನೆಲೆ ಏನು’ ಎಂದು ಪ್ರಶ್ನಿಸಿದರು.

‘ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿರುವ ಶಾಸಕ ರಘುಪತಿ ಭಟ್ ಅವರು ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ. ಹೀಗಿದ್ದರೂ ಸರ್ಕಾರ ಅವರ ವಿರುದ್ಧ ಕ್ರಮ ಕೈಗೊಳ್ಳದಿರುವುದು ಸರಿಯಲ್ಲ’ ಎಂದರು.

ಆರಂಭದಲ್ಲಿ ನಿರಾಕರಣೆ, ನಂತರ ಪರೀಕ್ಷೆಗೆ ಹಾಜರು

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಪ್ರಾಚಾರ್ಯರ ಮನವೊಲಿಕೆ ನಂತರ ಎಂಟು ವಿದ್ಯಾರ್ಥಿನಿಯರು ಹಿಜಾಬ್ ಕಳಚಿ ನಗರದ ವಿಜಯನಗರ ಕಾಲೇಜಿನಲ್ಲಿ ಸೋಮವಾರ ಪದವಿ ಪರೀಕ್ಷೆಗೆ ಹಾಜರಾದರು.

ಹಿಜಾಬ್ ಧರಿಸಿ ಪರೀಕ್ಷೆಗೆ ಹಾಜರಾಗಲು ವಿದ್ಯಾರ್ಥಿನಿಯರು ಮುಂದಾಗಿದ್ದರು. ಆದರೆ, ಪ್ರಾಚಾರ್ಯ ವಿ.ಎಸ್. ಪ್ರಭಯ್ಯ, ಅವರನ್ನು ತಡೆದು, ‘ನ್ಯಾಯಾಲಯದ ಆದೇಶ ಪಾಲಿಸಬೇಕು’ ಎಂದು ಹೇಳಿದರು.

ಮಂಗಳೂರಿನಲ್ಲಿ ಅವಕಾಶ ನಿರಾಕರಣೆ: ನಗರದ ವಾಮಂಜೂರಿನ ಸಂತ ರೇಮಂಡ್ಸ್ ಕಾಲೇಜಿನಲ್ಲಿ ಸೋಮವಾರ ಹಿಜಾಬ್ ಧರಿಸಿದ್ದ ವಿದ್ಯಾರ್ಥಿನಿಯರಿಗೆ ಅರ್ಥಶಾಸ್ತ್ರ ಪರೀಕ್ಷೆಗೆ ಹಾಜರಾಗಲು ಅವಕಾಶ ನಿರಾಕರಿಸಲಾಗಿದೆ. ಹೈಕೋರ್ಟ್ ತೀರ್ಪಿನ ಬಳಿಕ ಕಾಲೇಜಿನ ಆಡಳಿತ ಮಂಡಳಿ ಈ ನಿರ್ಧಾರ ತೆಗೆದುಕೊಂಡಿದ್ದು, ವಿದ್ಯಾರ್ಥಿನಿಯರು, ಪೋಷಕರು ಆಕ್ರೋಶ ವ್ಯಕ್ತಪಡಿಸಿದರು.

ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್
(ಕಂಪನಿಗಳ ಕಾಯಿದೆ 2013ರಡಿಯಲ್ಲಿ ಸ್ಥಾಪಿತವಾಗಿರುವ ಸಂಸ್ಥೆ)
ಸಿಐಎನ್ ಸಂಖ್ಯೆ: ಯು74999ಕೆಎ2018ಪಿಎಲ್‌ಸಿ109175
Bengaluru SMART CITY

ಸಂಖ್ಯೆ: ಬೆಂಸ್ಮಾಸಿಲಿ/ಟಿಎಸ್/ಕಾಪಾಅ–02/ಟೆಂಡರ್–05/2021–22 ದಿನಾಂಕ: 10.03.2022

ತಿದ್ದುಪಡಿ

ಮೇಲ್ಕಂಡ ವಿಷಯದ ಯೋಜನೆಗೆ ಸಂಬಂಧಿಸಿದಂತೆ ಬಿಡ್‌ದಾರರು ಈ ಕೆಳಕಂಡ ಮಾಹಿತಿಗಳನ್ನು ಗಮನಿಸತಕ್ಕದ್ದು.

ಮೇಲಿನ ಎನ್‌ಐಟಿಯಲ್ಲಿ ಸಂಪುಟ ಸಂಖ್ಯೆ: 1, ಪುಟದ ಸಂಖ್ಯೆ: 2 & 4, ಸೆಕ್ಷನ್ ಸಂಖ್ಯೆ/ ಕ್ಲಾಸ್ ಸಂಖ್ಯೆಗಳ ವಿವರ

ದಿನಾಂಕ 10.03.2022 ರಂದು ಎನ್‌ಐಟಿ ಪ್ರಕಟಿಸಿದ ಟೆಂಡರ್ ದಾಖಲೆಯಂತೆ ನಿಬಂಧನೆ	ದಿನಾಂಕ 21.03.2022ರ ತಿದ್ದುಪಡಿಯಂತೆ ಓದಿಕೊಳ್ಳಬೇಕಾದ ನಿಬಂಧನೆ
ಬಿಡ್‌ಗಳನ್ನು ಸಲ್ಲಿಸಲು ದಿನಾಂಕ ಮತ್ತು ಸಮಯ 22.03.2022ರ ಸಂಜೆ 4:00 ಗಂಟೆಯವರೆಗೆ	ಬಿಡ್‌ಗಳನ್ನು ಸಲ್ಲಿಸಲು ದಿನಾಂಕ ಮತ್ತು ಸಮಯ 24.03.2022ರ ಸಂಜೆ 4:00 ಗಂಟೆಯವರೆಗೆ
ತಾಂತ್ರಿಕ ಬಿಡ್‌ಗಳು ದಿನಾಂಕ 23.03.2022ರ ಸಂಜೆ 4:30 ಗಂಟೆಗೆ ತೆರೆಯುವುದು	ತಾಂತ್ರಿಕ ಬಿಡ್‌ಗಳು ದಿನಾಂಕ 25.03.2022ರ ಸಂಜೆ 4:30 ಗಂಟೆಗೆ ತೆರೆಯುವುದು

ಟಿಪ್ಪಣಿ: ಉಳಿದಂತೆ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ

ಕಾರ್ಯಪಾಲಕ ಅಭಿಯಂತರರು–02, ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

ಕರ್ನಾಟಕ ಗೃಹ ಮಂಡಳಿ
ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ,
ಬೆಂಗಳೂರು – 560009 ದೂರವಾಣಿ: 080–22273511–16

ಸಂಖ್ಯೆ: ಕಗೃಮಂ/ಉಪ್ರವ್ಯ(ಗ್ರಾಸೇ)/ಹಂಚಿಕೆ–10/2021–22 ದಿನಾಂಕ: 21–03–2022

ತಿದ್ದುಪಡಿ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಮೆ॥ ಉಪಕಾರ್ ಡೆವಲಪರ್ಸ್, ಬೆಂಗಳೂರು ಇವರ ಸಹಭಾಗಿತ್ವ ಯೋಜನೆಯಡಿ ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಸಬಾ ಹೋಬಳಿ, ದೊಡ್ಡ ಹುಣಸೂರು 2ನೇ ಹಂತದ ಬಡಾವಣೆಯಲ್ಲಿ ಸಾರ್ವಜನಿಕ ಸೌಲಭ್ಯಗಳೊಂದಿಗೆ ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಸದರಿ ನಿವೇಶನಗಳ ಹಂಚಿಕೆಗೆ ಸಾರ್ವಜನಿಕರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ ದಿನಾಂಕ: 21–03–2022 ರಂದು ಪ್ರಜಾವಾಣಿ ಹಾಗೂ ಮೈಸೂರು ಮಿತ್ರ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು. ಸದರಿ ಪ್ರಕಟಣೆಯಲ್ಲಿ ನಿವೇಶನದ ಬೆಲೆ EWS ವರ್ಗಕ್ಕೆ ರೂ.525/– ಹಾಗೂ LIG ವರ್ಗಕ್ಕೆ ರೂ.1050/– ಎಂದು ತಪ್ಪಾಗಿ ನಮೂದಾಗಿದ್ದು, ನಿವೇಶನದ ಬೆಲೆ ಪ್ರತಿ ಚದರಡಿಗೆ EWS ವರ್ಗಕ್ಕೆ ರೂ.525/– ಹಾಗೂ LIG ವರ್ಗಕ್ಕೆ ರೂ.1050/– ಎಂದು ಓದಿಕೊಳ್ಳುವುದು. ಉಳಿದಂತೆ ದಿನಾಂಕ: 21–03–2022 ರಂದು ನೀಡಿರುವ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು
ಸರಕು ಖರೀದಿ ಅಧಿಕಾರಿಗಳ ಕಾರ್ಯಾಲಯ,
ಕೃವಿವಿ, ರಾಯಚೂರು, ಮಿಂಚಂಚೆ:
spo@uasraichur.edu.in, ದೂ: 08532-220165

ಸಂ: SPO/UASR/E-Proc-18/2021-22 ದಿ: 17.03.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿಗೆ ಸಂಬಂಧಪಟ್ಟಂತೆ ವೈಜ್ಞಾನಿಕ, ಉಪಕರಣಗಳು ಮತ್ತು ಇನ್ನಿತರ ವಸ್ತುಗಳ ಖರೀದಿಗಾಗಿ ಅಲ್ಪಾವದಿ ಟೆಂಡರನ್ನು ಕರೆಯಲಾಗಿದ್ದು, ಆಸಕ್ತ ಸರಬರಾಜುದಾರರು ಆನ್‌ಲೈನ್ ಮುಖಾಂತರ ಅಂದರೆ **www.eproc.karnataka.gov.in** ಜಾಲತಾಣದಲ್ಲಿ (ಬೇಡಿಕೆ ಸಂಖ್ಯೆ: UAS/2021-22/ IND4335 to 4372) ಭಾಗವಹಿಸಬಹುದು. ಈ ಟೆಂಡರ್‌ಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಭರ್ತಿಮಾಡಿ ಸಲ್ಲಿಸುವ ಕಡೆ ದಿನಾಂಕ: **26.03.2022 ಆಗಿರುತ್ತದೆ.**

ಸಹಿ/– ಸರಕು ಖರೀದಿ ಅಧಿಕಾರಿಗಳು, ಕೃವಿವಿ., ರಾಯಚೂರು.

ವಾ.ಸಾ.ಸಂ.ಇ/ರಾಯಚೂರು/727/ಎಂ.ಸಿ.&ಎ/2021–22

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ಶಿರಸಿ ವಿಭಾಗ, ಶಿರಸಿ
ಕ್ರಸಂ.ಕಾನಿಇಂ./ಲೋ.ಇ/ವಿ.ಶಿ/ಪಿ. ಬಿ.–2/8443 ಕೇವಣೆ ವಂತಿಗೆ/2021–22/3547 ದಿನಾಂಕ: 16.03.2022

ಇ–ಟೆಂಡರ್ ಅಧಿಸೂಚನೆ IFT-KW-4
ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ದ್ವಿ ಲಕೋಟೆ ಪದ್ಧತಿಯಲ್ಲಿ)(ಅಲ್ಪಾವಧಿ)

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ–ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಕಾಣಿಸಿದಂತೆ ಇ–ಪ್ರೋಕ್‌ನಲ್ಲಿ ಅಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ www.eproc.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ. ಒಟ್ಟು 1 ಕಾಮಗಾರಿ

(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ ದಿನಾಂಕ: 25.03.2022 (16.00 ಗಂಟೆಗೆ)
(2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 28.03.2022 (16.00 ಗಂಟೆವರೆಗೆ)
(3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 29.03.2022 (16.30 ಗಂಟೆವರೆಗೆ)
(4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 30.03.2022 (16.00 ಗಂಟೆವರೆಗೆ)

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು ಹಾಗೂ ರಾಜ್ಯ ಹೆದ್ದಾರಿ ಪ್ರಾಧಿಕಾರ ಅಧಿಕಾರಿ
ಲೋಕೋಪಯೋಗಿ ಇಲಾಖೆ, ವಿಭಾಗ ಶಿರಸಿ (ಉತ್ತರ ಕನ್ನಡ ಜಿಲ್ಲೆ)

DIPR/ADK/MCA/928/21-22 dt.19.03.2022

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರರವರ ಕಛೇರಿ, ಯೋಜನೆ–ದಕ್ಷಿಣ ವಿಭಾಗ, ದಕ್ಷಿಣ ವಲಯ
ಕಛೇರಿ ಸಂಕೀರ್ಣ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು–11

ಸಂ: ಕಾಪಾಅಯೋದ/ಇ–ಪ್ರೊಕ್/21/21–22 ದಿನಾಂಕ: 21.03.2022

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ಯೋಜನೆ–ದಕ್ಷಿಣ ವಿಭಾಗ ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಯ ವಿವರ	ಟೆಂಡರಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಗಳಲ್ಲಿ)
1	ಚಿಕ್ಕನಾಗಮಂಗಲ ತ್ಯಾಜ್ಯ ಸಂಸ್ಕರಣಾ ಘಟಕದಿಂದ ಜಡ ತ್ಯಾಜ್ಯವನ್ನು ಸ್ಥಳಾಂತರಿಸುವುದು.	200.00	3,00,000/-

ಪೂರ್ಣಗೊಳಿಸುವ ಕಾಲಾವಧಿ (ಮಳೆಗಾಲ ಸೇರಿದಂತೆ) : 3 ತಿಂಗಳು. 1)ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪ್ರಿ–ಬಿಡ್ ಮೀಟಿಂಗ್: **28.03.2022ರ 3.00 ಗಂಟೆಗೆ.** 3) ಟೆಂಡರ್ ಡಾಕ್ಯುಮೆಂಟ್ ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : **05.04.2022ರ ಸಂಜೆ 4.00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **07.04.2022ರ ಸಂಜೆ 4.30 ಗಂಟೆಗೆ.** 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **11.04.2022ರ ಸಂಜೆ 4.00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಕೆಳಸಹಿದಾರರ ಕಛೇರಿಯಿಂದ ಅಥವಾ ವೆಬ್‌ಸೈಟ್: **www.eproc.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ–ದಕ್ಷಿಣ ವಿಭಾಗ.

ಕೋವಿಡ್–19 – ಗಾಬರಿಬದ್ಧಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ದಿಮೆ)
ಸಿಐಎನ್: U85110KA1970SGC001919

ಸಂಖ್ಯೆ:ಎ1ಪಿ1ಸಿ/(ಎಲ್.ಎ.ಆರ್&ಆರ್) ದಿನಾಂಕ: 21.03.2022

ಅಧಿಸೂಚನೆ
ಗುತ್ತಿಗೆ ಆಧಾರದ ಮೇಲೆ ನೇಮಕಾತಿ

ಉಲ್ಲೇಖ: ನೇಮಕಾತಿ ಅಧಿಸೂಚನೆ ಸಂಖ್ಯೆ: ಎ1ಪಿ1ಸಿ(ಎಲ್‌ಎ. ಆರ್ & ಆರ್) ದಿನಾಂಕ: 05.02.2022

ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು (ಕೆಪಿಸಿಎಲ್) ಕರ್ನಾಟಕ ಸರ್ಕಾರದ ಉದ್ದಿಮೆಯಾಗಿದ್ದು, ನಿಗಮದ ಭೂಸ್ವಾಧೀನ, ಪುನರ್‌ವಸತಿ ಮತ್ತು ಪರಿಹಾರದ ವಿಷಯಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸಲು 01 ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮುಖ್ಯಸ್ಥರು (ಭೂ–ಸ್ವಾಧೀನ, ಪುನರ್‌ವಸತಿ ಮತ್ತು ಪರಿಹಾರ) ಹುದ್ದೆಗೆ ಈ ಕೆಳಕಂಡ ಅರ್ಹತೆಯಂತೆ ನೇಮಿಸಲು ನಿಗಮವು ಉದ್ದೇಶಿಸಿದೆ.

ಹುದ್ದೆ	ಹುದ್ದೆಗಳ ಸಂಖ್ಯೆ	ನಿಗದಿಪಡಿಸಿದ ಅರ್ಹತೆ ಮತ್ತು ಅನುಭವ	ಮಾಹೆಯಾನ ಕ್ರೋಢೀಕೃತ ಸಂಭಾವನೆ
ಮುಖ್ಯಸ್ಥರು (ಭೂ–ಸ್ವಾಧೀನ, ಪುನರ್‌ವಸತಿ ಮತ್ತು ಪರಿಹಾರ)	01	1) ನಿವೃತ್ತ ಕೆಎಎಸ್ ಅಧಿಕಾರಿ. 2) ಭೂ–ಸ್ವಾಧೀನ, ಪುನರ್‌ವಸತಿ ಮತ್ತು ಪರಿಹಾರದ ವಿಷಯದಲ್ಲಿ ಅನುಭವ ಹೊಂದಿರಬೇಕು	ರೂ. 75,000/– (ಈಗ ಪಡೆಯುತ್ತಿರುವ ಪಿಂಚಣಿ ಹಾಗೂ ನಿಗಮದಿಂದ ಪಾವತಿಯಾಗುವ ಸಂಭಾವನೆ ಸೇರಿ ನಿವೃತ್ತ ಸಮಯದಲ್ಲಿ ಪಡೆಯುತ್ತಿದ್ದ ವೇತನಕ್ಕೆ ಮೀರದಂತೆ)

ಸೂಚನೆ: 1). ವಯೋಮಿತಿ 60 ರಿಂದ 70 ವರ್ಷಗಳು. 2). ನಿಗಮವು ಈ ಗುತ್ತಿಗೆ ನೇಮಕಾತಿಯನ್ನು ಭಾಗಶಃ/ಪೂರ್ಣವಾಗಿ ಯಾವುದೇ ಹಂತದಲ್ಲಿ ಯಾವುದೇ ಕಾರಣ ನೀಡದೆ ರದ್ದುಪಡಿಸುವ ಅಧಿಕಾರವನ್ನು ಹೊಂದಿದೆ. 3). ನಮ್ಮ ಅಧಿಸೂಚನೆ ಸಂಖ್ಯೆ ಎ1ಪಿ1ಸಿ(ಎಲ್‌ಎ, ಆರ್&ಆರ್) ದಿನಾಂಕ: 05.02.2022 ಕ್ಕೆ ಈಗಾಗಲೇ ಮುಖ್ಯಸ್ಥರು (ಭೂ–ಸ್ವಾಧೀನ, ಪುನರ್ ವಸತಿ ಮತ್ತು ಪರಿಹಾರ) ಹುದ್ದೆಗೆ ಅರ್ಜಿ ಸಲ್ಲಿಸಿರುವ ನಿವೃತ್ತ ಅಧಿಕಾರಿಗಳು ಪುನಃ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಈಗ ಹೊರಡಿಸಲಾದ ಅಧಿಸೂಚನೆಗೆ ಅವರ ಅರ್ಜಿಗಳನ್ನು ಪರಿಗಣಿಸಲಾಗುವುದು.

ಆಸಕ್ತ ನಿವೃತ್ತ ಅಧಿಕಾರಿಗಳು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು **“Application for the post of Head (LA,R&R)”** ಎಂದು ಲಕೋಟೆಯ ಮೇಲೆ ನಮೂದಿಸಿ ನೋಂದಾಯಿತ ಅಂಚೆ ಮೂಲಕ ಈ ವಿಳಾಸಕ್ಕೆ ನಿರ್ದೇಶಕರು(ಮಾ.ಸಂ), ನಂ. 82, ಶಕ್ತಿಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು– 560 001 ಇಲ್ಲಿಗೆ ದಿನಾಂಕ: 21.04.2022 ರೊಳಗಾಗಿ ತಲುಪುವಂತೆ ಸಲ್ಲಿಸುವುದು. (ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಲು ಮತ್ತು ಹೆಚ್ಚಿನ ಮಾಹಿತಿಗಾಗಿ **https://kpcl.karnataka.gov.in** ಗೆ ಭೇಟಿ ನೀಡಿ ಮತ್ತು ಹೆಚ್ಚಿನ ಮಾಹಿತಿಗಾಗಿ ದೂರವಾಣಿ: 080–22201820ನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು). ಸಹಿ/– ನಿರ್ದೇಶಕರು (ಮಾ.ಸಂ).

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಘ.ಬ.ದಂ.ಕಾ.ನಿ. ವಿಭಾಗ–4, ಚಿಕ್ಕೋಡಿ
ಫೋನ ನಂ:08338 – 272485 ಫ್ಯಾಕ್ಸ ನಂ: 08338 – 275186

ಅಲ್ಪಾವಧಿ ಟೆಂಡರ ಪ್ರಕಟಣೆ
(ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)

ಟೆಂಡರ ಪ್ರಕಟಣೆ ಸಂಖ್ಯೆ : KNNL/GRBCC -4/Tender/2021-22/28
Date:- 18-03-2022

ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರಮೆಂಟ ಪೋರ್ಟಾಲ್‌ನಲ್ಲಿ (http://eproc.karnataka.gov.in) 4701 ಎಸ್‌ಸಿಪಿ–ಟಿಎಸ್‌ಪಿ ಅಡಿಯಲ್ಲಿನ 4 ಕಾಮಗಾರಿಗಳಿಗೆ ಮೇಲ್ಕಾಣಿಸಿದ ಪ್ರಕಟಣೆಗಳಲ್ಲಿ ಅರ್ಹ ಗುತ್ತಿಗೆದಾರರಿಗೆ ಟೆಂಡರಗಳನ್ನು ಕರೆಯಲಾಗಿರುತ್ತದೆ. ವಿವರ :

ಟೆಂಡರ ಪ್ರಕಟಣೆ ಸಂ:28 dtd 18-03-2022, ಇ–ಪ್ರೊಕ್ಯೂರಮೆಂಟ ಇಂಡೆಂಟ ಸಂಖ್ಯೆ :Two Cover System: 33091, 33092, 33093 & 33094, ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ ಮೊತ್ತ ರೂ: 55.64 lakhs to 55.78 Lakhs. ಇಎಂಡಿ ಮೊತ್ತ ರೂ: 56000/-each, ಟೆಂಡರ ಕುರಿತ ಪ್ರಶ್ನೆಗಳಿಗಾಗಿ / ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ & ಸಮಯ :24-03-2022, Up to 17.00 hrs. ಭರ್ತಿ ಮಾಡಿದ ಟೆಂಡರಗಳನ್ನು ಇ–ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ & ಸಮಯ:25–03–2022 at 16.00 hrs. ತಾಂತ್ರಿಕ ಬಿಡ್‌ನ್ನು (ಲಕೋಟೆ–1) ತೆರೆಯುವ ದಿನಾಂಕ:26–03–2022 at 16.00 hrs. ತಾಂತ್ರಿಕ ಬಿಡ್‌ನಲ್ಲಿ (ಲಕೋಟೆ–1) ಪೂರ್ವಾಹತೆ ಹೊಂದಿದ ಅರ್ಹ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು (ಲಕೋಟೆ–2) ತೆರೆಯುವ ದಿನಾಂಕ: ತಾಂತ್ರಿಕ ಬಿಡ್‌ಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ.

ಕಾಮಗಾರಿಗಳ ಹೆಸರು / ಗುತ್ತಿಗೆದಾರರ ಅರ್ಹತೆ/ ಟೆಂಡರಿನ ನಿಯಮ/ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ http://www.eproc.karnataka.gov.in ಮೂಲಕ ಮಾಹಿತಿ ಪಡೆಯ ಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರು,
ಕನೀನಿನಿ, ಘಬದಂಕಾನಿ ವಿಭಾಗ–4, ಚಿಕ್ಕೋಡಿ

DIPR/BGM/RO-NO-1831/MCA/2021-22

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,
ಆಣೆಕಟ್ಟು ವಿಭಾಗ, ಆಲಮಟ್ಟಿ, ತಾ:ಬ.ಬಾಗೇವಾಡಿ, ಜಿ:ವಿಜಯಪುರ.
ದೂರವಾಣಿ:08426–281027.ಇಮೇಲ್:dam_division@rediffmail.com

ಸಂ:ಕೃಭಾಜನಿನಿ/ಡಿ.ಬಿ/ಟೆಂಡರ್/2021–22/3949 ದಿನಾಂಕ:21.03.2022

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ/2ನೇ ಕರೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ **(1) Indent No. 21811 for Rs. 101.08 Lakhs (Call-IInd)** ಶೇಕಡಾವಾರು ದ್ವಿ–ಲಕೋಟೆಗಳಲ್ಲಿ ಕೆ.ಟಿ.ಪಿ.ಪಿ. ನಿಯಮಗಳನ್ವಯ, ಅರ್ಹ ಬಿಡ್ದುದಾರರುಗಳಿಂದ ಟೆಂಡರ್ ಆಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ–ಛಿಭಿಷ ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ದ್ವಿ–ಲಕೋಟಿ ಪದ್ಧತಿಯಲ್ಲಿ ಸಲ್ಲಿಸಬಹುದಾಗಿದೆ. ಮೊದಲ ಲಕೋಟೆಯು ತಾಂತ್ರಿಕ ಬಿಡ್‌ದಾಗಿದ್ದು, ಅಗತ್ಯವಿರುವ ದಾಖಲೆಗಳನ್ನು ಒಳಗೊಂಡಿದ್ದು ಪ್ಯಾರಾ 1.1 ರಂತೆ, ಎರಡನೇ ಲಕೋಟೆಯು ಆರ್ಥಿಕ ಬಿಡ್‌ದಾಗಿದ್ದು ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದವರ ಆರ್ಥಿಕ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.

1) ಟೆಂಡರ ಡಾಕ್ಯೂಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ **ದಿನಾಂಕ: 22.03.2022 ರಿಂದ 02.04.2022 ಸಾಯಂಕಾಲ 5.00 ಘಂಟೆಯವರೆಗೆ. 2)** ಪೂರ್ವಭಾವಿ ಸಭೆ (ಪ್ರೀ ಬಿಡ್ ಮೀಟಿಂಗ್) : **ದಿನಾಂಕ: 29.03.2022 ರಂದು ಬೆಳಿಗ್ಗೆ 11.00 ಗಂಟೆಗೆ** ಕಾರ್ಯನಿರ್ವಾಹಕ ಅಭಿಯಂತರವರ ಕಚೇರಿ ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ ಕಚೇರಿಯಲ್ಲಿ 3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 04.04.2022 ಮುಂಜಾನೆ 11.00 ಘಂಟೆಗೆ.** 4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 08.04.2022** ಮುಂಜಾನೆ 11.00 ಘಂಟೆಗೆ.

ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. http://www.eproc.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426–281027.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.

ವಾಸಾಸಂಇ/ವಿಜಯಪುರ/600/ಎಂಸಿಎ/2021–22

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

ಐಎಫ್‌ಟಿ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್–4/6837/2021–22 ದಿನಾಂಕ : 17–03–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತೇದಾರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಟೆಂಡರುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಕಾಮಗಾರಿಗಳಿಗೆ ದ್ವಿ ಲಕೋಟಿ ಟೆಂಡರಿಂಗ್ ಪದ್ಧತಿಯನ್ನು ಅನುಸರಿಸಲಾಗುವುದು. ಗುತ್ತೇದಾರರು ಈ ಕೆಳಕಾಣಿಸಿದ ಕಾಮಗಾರಿಗಳಲ್ಲಿ ಯಾವುದಾದರೂ ಎಲ್ಲಾ ಕಾಮಗಾರಿಗಳಿಗೆ ಟೆಂಡರುಗಳನ್ನು ಸಲ್ಲಿಸಬಹುದಾಗಿರುತ್ತದೆ. ಇದಕ್ಕಾಗಿ ಗುತ್ತೇದಾರರು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ http://eproc. karnataka.gov.inವನ್ನು ಸಂದರ್ಶಿಸಬಹುದಾಗಿರುತ್ತದೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತೇದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸೂಚನೆ : ಕಾರಣಾಂತರಗಳಿಂದಾಗಿ ಈ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನತರೆ ಯಾವುದೇ ಬದಲಾವಣೆಗಳಾದಲ್ಲಿ ಗುತ್ತೇದಾರರು –ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಕ್ರ ಸಂ	ಕಾಮಗಾರಿಗಳ ವಿವರ	ಟೆಂಡರ್‌ಗೆ ಸೂಚಿಸಿದ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
	3054–(ಯೋಜನೇತರ)–ರಾಜ್ಯ ಹೆದ್ದಾರಿಗಳ ನಿರ್ವಹಣೆ	
1)	KPWD/2021-22/RD/WORK_INDENT150616	53.50
	3054–(ಯೋಜನೇತರ)–ರಾಜ್ಯ ಹೆದ್ದಾರಿ ಸೇತುವೆಗಳ ನಿರ್ವಹಣೆ	
2)	KPWD/2021-22/BG/WORK_INDENT150617	53.51

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ) ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **22–03–2022 ರಂದು 12.00 ಗಂಟೆಯ ವರೆಗೆ.** ಆ) ಇ–ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **24–03–2022 ರಂದು 16.00 ಗಂಟೆಯ ವರೆಗೆ.** ಇ) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **25–03–2022ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು.**

ಸಹಿ/–ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/890/ಎಂಸಿಎ/2021–22

ಕರ್ನಾಟಕ ಸರ್ಕಾರ
ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಧಾರವಾಡ ಮಿನಿವಿಧಾನಸೌಧ 1ನೇ ಮಹಡಿ, ಧಾರವಾಡ–580001 ದೂರವಾಣಿ : 0836–2447961 E-Mail : dobcmdharwad@gmail.com

ಸಂಖ್ಯೆ:ಹಿಂವಕಇಧಾ/ವನಿಶಾ/ಆಹಾರ–ಟೆಂಡರ್–2022–23/ಸಿಆರ್–10:2021–22 ದಿನಾಂಕ : 19–03–2022

‘ಇ–ಪ್ರೊಕ್ಯೂರ್‌ಮೆಂಟ್’ ಟೆಂಡರ್ ಪ್ರಕಟಣೆ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಧಾರವಾಡ ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ/ ಮೆಟ್ರಿಕ್ ನಂತರದ ಬಾಲಕ ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಗ್ರೂಪ್–ಎ ಹಾಗೂ ಗ್ರೂಪ್–ಬಿ ಆಹಾರ ಸಾಮಗ್ರಿಗಳನ್ನು ಪೂರೈಕೆ ಮಾಡಲು ಅನುಬಂಧ–1ರಲ್ಲಿ ತೋರಿಸಿದಂತೆ ದ್ವಿಲಕೋಟೆ ಪದ್ಧತಿ ಪ್ರಕಾರ ಅರ್ಹ ನೋಂದಾಯಿತ ಏಜನ್ಸಿ/ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000 ಅಡಿಯಲ್ಲಿ ನಿಭಂದನೆಗಳಿಗೊಳಪಟ್ಟು ‘ಇ–ಪ್ರೊಕ್ಯೂರ್‌ಮೆಂಟ್’ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಅನುಬಂಧ–1

ಧಾರವಾಡ ತಾಲೂಕಿನ ವಿದ್ಯಾರ್ಥಿನಿಲಯಗಳಿಗೆ ಗ್ರೂಪ್–ಎ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡಲು ಟೆಂಡರ್ ಆಹ್ವಾನಿಸಿದ ವಿವರ

ಕ್ರ. ಸಂ.	ವಿವರ	ಗ್ರೂಪ್–ಎ ಆಹಾರ ಸಾಮಗ್ರಿ ಸರಬರಾಜು ಟೆಂಡರ್‌ನ ದಿನಾಂಕ ಮತ್ತು ಸಮಯ	ಗ್ರೂಪ್–ಬಿ ಆಹಾರ ಸಾಮಗ್ರಿ ಸರಬರಾಜು ಟೆಂಡರ್‌ನ ದಿನಾಂಕ ಮತ್ತು ಸಮಯ
1	ಟೆಂಡರ ಪ್ರಕಟಣೆ ಸಂಖ್ಯೆ, ದಿನಾಂಕ	ಸಂಖ್ಯೆ: ಹಿಂವಕಇಧಾ/ಆಹಾರ ಟೆಂಡರ/ಧಾ/ಸಿಆರ್–10/2021–22 ದಿನಾಂಕ : 18–03–2022	ಸಂಖ್ಯೆ: ಹಿಂವಕಇಧಾ/ಆಹಾರ ಟೆಂಡರ/ಧಾ/ಸಿಆರ್–10/2021–22 ದಿನಾಂಕ : 18–03–2022
2	ಟೆಂಡರ ಸಲ್ಲಿಸಲು ಪ್ರಾರಂಭ ದಿನಾಂಕ	ದಿನಾಂಕ : **18.03.2022**	ದಿನಾಂಕ : **18.03.2022**
3	ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ & ಸಮಯ	ದಿನಾಂಕ : **18.04.2022** ಸಮಯ : ಸಾಯಂಕಾಲ 05:30 ಗಂಟೆ	ದಿನಾಂಕ : **04.04.2022** ಸಮಯ : ಸಾಯಂಕಾಲ 05:30 ಗಂಟೆ
4	ಪ್ರಿ ಬಿಡ್ ಸಭೆ (ಪೂರ್ವಭಾವಿ ಸಭೆ)	ದಿನಾಂಕ : **25–03–2022** ಸಮಯ : ಸಾಯಂಕಾಲ 04.00 ಗಂಟೆಗೆ	ದಿನಾಂಕ : **25–03–2022** ಸಾಯಂಕಾಲ 04.00 ಗಂಟೆಗೆ
5	ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ	ದಿನಾಂಕ : **19–04–2022** ಸಮಯ: ಸಾಯಂಕಾಲ 05.35 ಗಂಟೆಗೆ	ದಿನಾಂಕ : **05–04–2022** ಸಾಯಂಕಾಲ 05.35 ಗಂಟೆಗೆ
6	ಆರ್ಥಿಕ ಲಕೋಟೆ ತೆರೆಯುವ ದಿನಾಂಕ	ದಿನಾಂಕ : **22–04–2022** ಬೆಳಗ್ಗೆ: 04.30 ಗಂಟೆಗೆ	ದಿನಾಂಕ : **08–04–2022** ಬೆಳಗ್ಗೆ: 11.00 ಗಂಟೆಗೆ
7	ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬಹುದಾದ ವಿಳಾಸ	ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, 1ನೇ ಮಹಡಿ, ಮಿನಿವಿಧಾನಸೌಧ, ಧಾರವಾಡ. ದೂರವಾಣಿ: **0836–2447961** ಇಮೇಲ್ : **dobcmdharwad@gmail.com**	

ಟೆಂಡರ್ ತಪಶೀಲುಗಳಿಗಾಗಿ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸುವ ಆಸಕ್ತರು ನಿಗದಿಪಡಿಸಿದ ದಿನಾಂಕದೊಳಗೆ ಅರ್ಜಿ ಸಲ್ಲಿಸುವುದು. ಹೆಚ್ಚಿನ ಮಾಹಿತಿಯನ್ನು **www.eproc.karnataka.gov.in** ವೆಬ್ ಸೈಟ್‌ನಲ್ಲಿ ನೋಡಬಹುದು.

ಸಹಿ/– ಜಿಲ್ಲಾ ಅಧಿಕಾರಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಧಾರವಾಡ

ವಾಸಾಸಂಇ/ಧಾರವಾಡ/ಎಂಸಿಎ/1171/2021–22

20 ದಿನಗಳ ನಂತರ ಸ್ವಗ್ರಾಮ ಚಳಗೇರಿ ತಲುಪಿದ ನವೀನ್ ಗ್ಯಾನಗೌಡರ ಪಾರ್ಥಿವ ಶರೀರ

ಶೋಕತಪ್ತ ಗ್ರಾಮಸ್ಥರಿಂದ ವಿದಾಯ

ಪ್ರಜಾವಾಣಿ ವಾರ್ತೆ

ರಾಣೆಬೆನ್ನೂರು ತಾಲ್ಲೂಕು ಚಳಗೇರಿ ಗ್ರಾಮದಲ್ಲಿ ಪುತ್ರ ನವೀನ ಅವರನ್ನು ನೆನಪಿಸಿಕೊಂಡು ಕಣ್ಣೀರು ಹಾಕಿದ ತಾಯಿ ವಿಜಯಲಕ್ಷ್ಮಿಯವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಂತೈಸಿದರು. ನವೀನ ಅವರ ಅಣ್ಣ ಹರ್ಷ, ತಂದೆ ಶೇಖರಪ್ಪ, ಶಾಸಕ ಅರುಣಕುಮಾರ ಪೂಜಾರ, ವಿಧಾನ ಪರಿಷತ್ ಸದಸ್ಯ ಆರ್.ಶಂಕರ್ ಇದ್ದಾರೆ –ಪ್ರಜಾವಾಣಿ ಚಿತ್ರ

ಚಳಗೇರಿ (ಹಾವೇರಿ): ಇಪ್ಪತ್ತು ದಿನಗಳಿಂದ ಹೆಪ್ಪುಗಟ್ಟಿದ್ದ ಪೋಷಕರ ನೋವು ಮಗನ ಪಾರ್ಥಿವ ಶರೀರ ನೋಡಿದ ಕೂಡಲೇ ಕಣ್ಣೀರಾಗಿ ಹರಿಯಿತು. ಪೋಷಕರ ವೇದನೆಯನ್ನು ಕಂಡು, ಅಂತಿಮ ದರ್ಶನ ಪಡೆಯಲು ಬಂದಿದ್ದವರ ಕಣ್ಣಾಲಿಗಳು ಒದ್ದೆಯಾದವು.

ರಷ್ಯಾ ದಾಳಿಯಿಂದ ಉಕ್ರೇನ್‌ನಲ್ಲಿ ಮಾರ್ಚ್ 1ರಂದು ಮೃತಪಟ್ಟ ವೈದ್ಯಕೀಯ ವಿದ್ಯಾರ್ಥಿ ನವೀನ್ ಗ್ಯಾನಗೌಡರ ಪಾರ್ಥಿವ ಶರೀರವನ್ನು ಸ್ವಗ್ರಾಮ ಚಳಗೇರಿಗೆ ಸೋಮವಾರ ಬೆಳಿಗ್ಗೆ ತರಲಾಯಿತು. ಈ ವೇಳೆ ಇಡೀ ಗ್ರಾಮವೇ ಶೋಕತಪ್ತವಾಗಿತ್ತು.

ತಂದೆ ಶೇಖರಪ್ಪ ಗ್ಯಾನಗೌಡರ, ತಾಯಿ ವಿಜಯಲಕ್ಷ್ಮಿ, ಅಣ್ಣ ಹರ್ಷ ಗ್ಯಾನಗೌಡರ ಕಂಬನಿ ಮಿಡಿಯುತ್ತ ಭಾರವಾದ ಹೃದಯದಿಂದ ಪಾರ್ಥಿವ ಶರೀರವನ್ನು ಬರಮಾಡಿಕೊಂಡರು. ವೀರಶೈವ ಸಂಪ್ರದಾಯದಂತೆ ಪೂಜಾ ವಿಧಿ ವಿಧಾನಗಳನ್ನು ಕುಟುಂಬಸ್ಥರು ನೆರವೇರಿಸಿದರು.

ಅಂತಿಮ ಮೆರವಣಿಗೆ: ನವೀನ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನವನ್ನು ಪಡೆಯಲು ಸಾರ್ವಜನಿಕರಿಗೆ ಮಧ್ಯಾಹ್ನದವರೆಗೂ ಅವಕಾಶ ಕಲ್ಪಿಸಲಾಗಿತ್ತು. ನಂತರ ಪಾರ್ಥಿವ ಶರೀರದ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ನಡೆಯಿತು. ರಸ್ತೆಯ ಎರಡೂ ಬದಿಯಲ್ಲಿ ಕಿಕ್ಕಿರಿದು ನಿಂತಿದ್ದ ಜನರು ಹೂಮಳೆಗರೆದು ದುಃಖಭರಿತ ವಿದಾಯ ಹೇಳಿದರು. ನವೀನ್ ಅವರ ಶಾಲಾ-ಕಾಲೇಜಿನ ಸಹಪಾಠಿಗಳು ಹಾಗೂ ಉಕ್ರೇನ್‌ನಲ್ಲಿ ನವೀನ್‌ನೊಂದಿಗೆ ಕಲಿಯುತ್ತಿದ್ದ ರಾಜ್ಯದ ವೈದ್ಯಕೀಯ ವಿದ್ಯಾರ್ಥಿಗಳು, ಗಣ್ಯರು, ಮಠಾಧೀಶರು ಅಂತಿಮ ದರ್ಶನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಭಾವುಕರಾದ ಸಿಎಂ:

ಮೃತ ನವೀನ್ ಅವರ ಪಾರ್ಥಿವ ಶರೀರಕ್ಕೆ ಪುಷ್ಪಗುಚ್ಛವಿರಿಸಿ, ತಾಯಿ ವಿಜಯಲಕ್ಷ್ಮಿ ಅವರನ್ನು ಸಂತೈಸುವ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾವುಕರಾದರು. ಈ ಸಂದರ್ಭದಲ್ಲಿ ಮಗನ ಮುಖವನ್ನು ನೋಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ನವೀನ ಅವರ ತಂದೆ ಹಾಗೂ ಸಹೋದರ ಮುಖ್ಯಮಂತ್ರಿಗೆ ಕೃತಜ್ಞತೆ ಸಲ್ಲಿಸಿದರು.

ಎಸ್.ಎಸ್.ಆಸ್ಪತ್ರೆಗೆ ದೇಹದಾನ : ಮೃತ ನವೀನ್ ಗ್ಯಾನಗೌಡರ ಮೃತದೇಹವನ್ನು ಕುಟುಂಬಸ್ಥರ ನಿರ್ಣಯದಂತೆ ದಾವಣಗೆರೆಯ ಶಾಮನೂರು ಶಿವಶಂಕರಪ್ಪ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ (ಸಿಮ್ಸ್ ದೇಹದಾನ ಸಂಸ್ಥೆ) ಕೇಂದ್ರಕ್ಕೆ ಸೋಮವಾರ ಸಂಜೆ ಹಸ್ತಾಂತರಿಸಲಾಯಿತು.

'ನನ್ನ ಮಗ ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು ಎಂಬ ಆಸೆ ಹೊಂದಿದ್ದ, ಆ ಆಸೆ ಈಡೇರಲಿಲ್ಲ. ಅವನ ಮೃತದೇಹ ವೈದ್ಯಕೀಯ ಕ್ಷೇತ್ರಕ್ಕೆ ಬಳಕೆಯಾಗಲಿ ಎಂಬ ಉದ್ದೇಶದಿಂದ ಈ ತೀರ್ಮಾನ ಕೈಗೊಂಡಿದ್ದೇವೆ' ಎಂದು ತಂದೆ ಶೇಖರಪ್ಪ ನುಡಿದರು.

ತಾಯ್ನಾಡು ಸೇರಿದ 19 ಸಾವಿರ ವಿದ್ಯಾರ್ಥಿಗಳು: ಬೊಮ್ಮಾಯಿ

ಚಳಗೇರಿ (ಹಾವೇರಿ): 'ಆಪರೇಷನ್ ಗಂಗಾದಲ್ಲಿ ರಾಜ್ಯದ 572 ವಿದ್ಯಾರ್ಥಿಗಳು ಸೇರಿ ದೇಶದ 19 ಸಾವಿರ ವಿದ್ಯಾರ್ಥಿಗಳನ್ನು ವಾಪಸ್ ತಾಯ್ನಾಡಿಗೆ ತರುವಲ್ಲಿ ಕೇಂದ್ರ ಸರ್ಕಾರ ಶ್ರೇಷ್ಠ ಕಾರ್ಯ ಮಾಡಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ಯುದ್ಧ ಭೂಮಿಯಿಂದ ನಾಗರಿಕರನ್ನು ಹೊರತರುವುದು ಪವಾಡ ಸದೃಶ ಕಾರ್ಯ. ಇಂತಹ ಸಂದಿಗ್ಧ ಸಂದರ್ಭದಲ್ಲಿ ನವೀನರ ಮೃತದೇಹ ತರುವಲ್ಲಿ ಕೇಂದ್ರ ಸರ್ಕಾರ ಯಶಸ್ವಿಯಾಗಿದೆ' ಎಂದರು.

'ಪ್ರಧಾನಿ ಮೋದಿ ಭಗೀರಥ ಯತ್ನ'

ಬೆಂಗಳೂರು: ಉಕ್ರೇನ್‌ನಲ್ಲಿ ಕ್ಷಿಪಣಿ ದಾಳಿ ವೇಳೆ ಲೋಹದ ತುಣುಕು ತಗುಲಿ ಮೃತಪಟ್ಟ ನವೀನ್ ಗ್ಯಾನಗೌಡರ್ ಅವರ ಮೃತ ದೇಹವನ್ನು ಮರಳಿ ತರುವ ಅಸಾಧ್ಯ ಕೆಲಸವನ್ನು ಪ್ರಧಾನಿ ನರೇಂದ್ರ ಮೋದಿಯವರು ಭಗೀರಥ ಪ್ರಯತ್ನದ ಮೂಲಕ ಸಾಧ್ಯವಾಗಿಸಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದ ಕೆಂಪೇಗೌಡ ವಿಮಾನನಿಲ್ದಾಣದಲ್ಲಿ ಸೋಮವಾರ ಮುಂಜಾನೆ ನವೀನ್ ಮೃತದೇಹವನ್ನು ಬರಮಾಡಿಕೊಂಡ ನಂತರ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಬಳಿಕ ಬೊಮ್ಮಾಯಿ ಅವರು ಪ್ರಧಾನಿ ಮೋದಿಯವರಿಗೆ ದೂರವಾಣಿ ಕರೆ ಮಾಡಿ ಮಾತುಕತೆ ನಡೆಸಿದರು.'ನವೀನ್ ಮೃತ ದೇಹವನ್ನು ದೇಶಕ್ಕೆ ತರಿಸುವಲ್ಲಿ ತಮ್ಮ ಪಾತ್ರ ಬಹಳ ಮುಖ್ಯವಾಗಿದೆ. ನವೀನ್ ಮುಖ ನೋಡಬೇಕು ಎಂಬುದು ಅವರ ತಂದೆ–ತಾಯಿಯ ಆಸೆಯಾಗಿತ್ತು. ಹೆತ್ತವರ ಕನಸನ್ನು ತಾವು ಈಡೇರಿಸಿದ್ದೀರಿ. ಅದಕ್ಕಾಗಿ ರಾಜ್ಯದ ಜನತೆ ಪರವಾಗಿ ಧನ್ಯವಾದ ಅರ್ಪಿಸುತ್ತೇನೆ' ಎಂದು ಹೇಳಿದರು.

ಲಟಿಕೆ ತೆಗೆದ ತಾಯಿ, ಹಣೆಗೆ ಮುತ್ತಿಟ್ಟ ಅಣ್ಣ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಪೂಜೆ ಸಲ್ಲಿಸಿದ ವೈದ್ಯರು, ಹಣೆಗೆ ಮುತ್ತಿಟ್ಟ ಅಣ್ಣ, ಲಟಿಕೆ (ನೆಟಿಗೆ) ತೆಗೆದ ತಾಯಿ...

ಉಕ್ರೇನ್‌ನಲ್ಲಿ ಮೃತಪಟ್ಟ ನವೀನ್ ಗ್ಯಾನಗೌಡರ ಅವರ ಪಾರ್ಥಿವ ಶರೀರವನ್ನು ದಾವಣಗೆರೆಯ ಎಸ್‌ಎಸ್‌ಐಎಂ ಕಾಲೇಜು ಮತ್ತು ಆಸ್ಪತ್ರೆಗೆ ಸೋಮವಾರ ಹಸ್ತಾಂತರಿಸುವ ವೇಳೆ ಇಂಥ ಭಾವುಕ ಕ್ಷಣಗಳು ಎಲ್ಲರ ಕಣ್ಣುಗಳನ್ನು ಆರ್ದ್ರಗೊಳಿಸಿದವು. ಹೃದಯವನ್ನು ಭಾರಗೊಳಿಸಿದವು.

ಹಾವೇರಿ ಜಿಲ್ಲೆಯ ಚಳಗೇರಿಯಲ್ಲಿ ಅಂತಿಮ ನಮನ ಸಲ್ಲಿಸಿದ ಬಳಿಕ ಅಲ್ಲಿಂದ ಮೃತದೇಹವನ್ನು ದಾವಣಗೆರೆಗೆ ಪೊಲೀಸ್ ಬಿಗಿ ಬಂದೋಬಸ್ತಿನಲ್ಲಿ ತರಲಾಗಿತ್ತು. ಎಸ್‌ಎಸ್‌ಐಎಂ ಕಾಲೇಜಿನಲ್ಲಿ ಗೌರವಯುತವಾಗಿ ಬರಮಾಡಿಕೊಳ್ಳಲಾಯಿತು.

ಕಾಲೇಜಿನ ಪ್ರಿನ್ಸಿಪಾಲ್ ಡಾ. ಪ್ರಸಾದ್ ಅವರ ನೇತೃತ್ವದಲ್ಲಿ ಅನಾಟಮಿ ವಿಭಾಗದಿಂದ ಎಲ್ಲ ದೇಹದಾನ ಪ್ರಕ್ರಿಯೆಗಳನ್ನು ಮುಗಿಸಲಾಯಿತು. ನವೀನ್ ಗ್ಯಾನಗೌಡರ ಅವರ ಕುಟುಂಬದವರು ಹಿಂದೆಯೇ ದೇಹದಾನದ ಒಪ್ಪಿಗೆ ಪತ್ರ ನೀಡಿದ್ದರು. ಅದರ ಪ್ರತಿಯನ್ನು ತಾಯಿ ವಿಜಯಲಕ್ಷ್ಮಿ ಮತ್ತು ಅಣ್ಣ ಹರ್ಷ ಗ್ಯಾನಗೌಡರ ಅವರಿಗೆ ನೀಡಲಾಯಿತು. ದೇಹ ಪಡೆದಿರುವುದಕ್ಕೆ ಕಾಲೇಜಿನಿಂದ ಪ್ರಮಾಣಪತ್ರ ಹಸ್ತಾಂತರಿಸಲಾಯಿತು. ಜತೆಗೆ ಅಭಿನಂದನಾ ಪತ್ರ ನೀಡಿ ಗೌರವಿಸಲಾಯಿತು.

ಶೀತಲ ಗಾಜಿನ ಬಾಕ್ಸ್‌ನಲ್ಲಿ ಮೃತದೇಹವನ್ನು ತರಲಾಗಿತ್ತು. ಆಸ್ಪತ್ರೆಯ ಅನಾಟಮಿ (ಅಂಗಾಂಗ ರಚನಾ ವಿಜ್ಞಾನ) ವಿಭಾಗದ ಮುಂದೆ ಗಾಜು ತೆರೆದಾಗ ಮಗನ ಹಣೆಗೆ ತಾಯಿ ವಿಜಯಲಕ್ಷ್ಮಿ ಅವರು ವಿಭೂತಿ ಹಚ್ಚಿ, ಹಾರ ಹಾಕಿ ಕಣ್ಣೀರಿಡುತ್ತಾ ನಮಿಸಿದರು. ಅಣ್ಣ ಹರ್ಷ ಹಣೆಗೆ ಮುತ್ತಿಟ್ಟರು. ವೈದ್ಯರ ಸಹಿತ ಎಲ್ಲರೂ ಪೂಜೆ ಸಲ್ಲಿಸಿದರು.

'ಮುಂದೆ, ಅನಾಟಮಿ ವಿಭಾಗದವರು ರಾಸಾಯನಿಕದಿಂದಲೇ ದೇಹವನ್ನು ಸ್ವಚ್ಛಗೊಳಿಸಲಿದ್ದಾರೆ. ಬಳಿಕ ರಾಸಾಯನಿಕ ಬಳಸಿ ದೇಹ ಹಾಳಾಗದಂತೆ ಸಂರಕ್ಷಿಸಲಾಗುತ್ತದೆ. ದೇಹಕ್ಕೆ ಎಷ್ಟು ಗಾಯಗಳಾಗಿವೆ, ಎಷ್ಟು ಭಾಗಗಳನ್ನು ಉಪಯೋಗ ಮಾಡಿಕೊಳ್ಳಬಹುದು ಎಂದು ಪರಿಶೀಲಿಸುತ್ತಾರೆ. ಅಲ್ಲದೆ ನವೀನ್ ಬಾಂಬ್ ದಾಳಿಯಿಂದ ಸಾವನ್ನಪ್ಪಿರುವುದರಿಂದ ಆ ಹಿನ್ನೆಲೆಯಿಂದಲೂ ಅಧ್ಯಯನ ಮಾಡಲಾಗುವುದು' ಎಂದು ಎಸ್‌ಎಸ್‌ಐಎಂ ಕಾಲೇಜಿನ ಪ್ರಿನ್ಸಿಪಾಲ್ ಡಾ. ಪ್ರಸಾದ್ ವಿವರಿಸಿದರು.

ಬಹು ಮಾಧ್ಯಮ ಪ್ರಜಾವಾಣಿ www.prajavani.net Facebook LIVE
ಫೇಸ್‌ಬುಕ್‌ನಲ್ಲಿ ನೇರಪ್ರಸಾರ
ಇಂದು
ಪಿಯು ವಿದ್ಯಾರ್ಥಿಗಳಿಗಾಗಿ
ಆನ್‌ಲೈನ್ ಬೋಧನಾ ಸರಣಿ
ಭೌತ ಶಾಸ್ತ್ರ ಟಿಪ್ಸ್
ವಿಜಯೇಂದ್ರ ತಿವಾರಿ
ಭೌತಶಾಸ್ತ್ರ ಉಪನ್ಯಾಸಕರು,
ಗುರುಕುಲ ಇಂಡಿಪೆಂಡೆಂಟ್ ಪಿಯು ಸೈನ್ಸ್ ಕಾಲೇಜು, ಕಲಬುರಗಿ
ಸಂಜೆ 4 ರಿಂದ 6 ರವರೆಗೆ
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9,
ಸಂಪಾದಕೀಯ: ಬೆಳಿಗ್ಗೆ 9.30,
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಪಳವಳ್ಳಿ ಕಟ್ಟೆ ಬಳಿ ಅಪಘಾತ: ಗಾಯಾಳುಗಳಿಗೆ ಉಚಿತ ಚಿಕಿತ್ಸೆ

ಬಸ್ ದುರಂತ: ವಿದ್ಯಾರ್ಥಿಗಳ ಭವಿಷ್ಯ ಅತಂತ್ರ

ಪ್ರಜಾವಾಣಿ ವಾರ್ತೆ

ಚಿಕಿತ್ಸೆ ಪಡೆಯುತ್ತಿರುವ ವಿದ್ಯಾರ್ಥಿ

ತುಮಕೂರು: ಪಾವಗಡ ತಾಲ್ಲೂಕು ಪಳವಳ್ಳಿ ಕಟ್ಟೆ ಬಳಿ ಖಾಸಗಿ ಬಸ್ ಅಪಘಾತದಲ್ಲಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿರುವ ಪಿಯುಸಿ ವಿದ್ಯಾರ್ಥಿಗಳ ಭವಿಷ್ಯ ಮಸುಕಾಗಿದೆ.

ಪ್ರಥಮ ಪಿಯುಸಿಯ ಆರು ಹಾಗೂ ದ್ವಿತೀಯ ಪಿಯುಸಿಯ 12 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 18 ವಿದ್ಯಾರ್ಥಿಗಳು ಅಪಘಾತದಲ್ಲಿ ಗಾಯಗೊಂಡಿದ್ದಾರೆ. ಪ್ರಥಮ ಪಿಯು ಪರೀಕ್ಷೆ ಇದೇ 28 ರಿಂದ ಆರಂಭವಾಗಲಿದ್ದು, ದ್ವಿತೀಯ ಪಿಯು ಪರೀಕ್ಷೆ ಏಪ್ರಿಲ್ 22ರಿಂದ ನಡೆಯಲಿದೆ. ದ್ವಿತೀಯ ಪಿಯು ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಗಾಯಗೊಂಡಿದ್ದು ಪರೀಕ್ಷೆ ಕಳೆದುಕೊಳ್ಳುವ ಆತಂಕ ಎದುರಿಸುತ್ತಿದ್ದಾರೆ.

ಅಪಘಾತದಲ್ಲಿ ಈಗಾಗಲೇ ಪ್ರಥಮ ಪಿಯು ಓದುತ್ತಿದ್ದ ಸಹೋದರಿಯರಾದ ಪೋತಗಾನಹಳ್ಳಿ ಗ್ರಾಮದ ಅಮೂಲ್ಯಾ, ಹರ್ಷಿತಾ ಜೊತೆಗೆ ಹನುಮಂತರಾಯಪ್ಪ ಸಾವನ್ನಪ್ಪಿದ್ದಾರೆ.

ಗಾಯಾಳುಗಳಿಗೆ ಉಚಿತವಾಗಿ ಚಿಕಿತ್ಸೆ ನೀಡಲಾಗುವುದು ಎಂದು ಆರೋಗ್ಯ ಸಚಿವರು ಸೋಮವಾರ ಭರವಸೆ ನೀಡಿದ್ದಾರೆ. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ದ್ವಿತೀಯ ಪಿಯು ವಿದ್ಯಾರ್ಥಿ ಮಹೇಂದ್ರ ಅವರಿಗೆ ಬೆನ್ನು ಮೂಳೆ ಮುರಿದಿದ್ದು, ಸ್ಥಿತಿ ಗಂಭೀರವಾಗಿದೆ. ಸಚಿವರ ಭರವಸೆ ನಂತರ ಉಚಿತವಾಗಿ ಚಿಕಿತ್ಸೆ ಸಿಗುತ್ತಿದೆ ಎಂದು ಅವರ ತಂದೆ ಸೀನಪ್ಪ ತಿಳಿಸಿದರು.

'ಶಸ್ತ್ರಚಿಕಿತ್ಸೆ ನಂತರ ಚೇತರಿಸಿಕೊಳ್ಳಲು ಇನ್ನೂ ಕೆಲವು ತಿಂಗಳುಗಳೇ ಬೇಕಾಗುತ್ತದೆ ಎಂದು ವೈದ್ಯರು ಹೇಳಿದ್ದಾರೆ. ಈ ಬಾರಿ ಪರೀಕ್ಷೆ ಬರೆಯಲು ಸಾಧ್ಯವೇ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಗುಣಮುಖರಾಗಿ ಓಡಾಡುವಂತಾದ ನಂತರ ಪರೀಕ್ಷೆ ಬಗ್ಗೆ ಯೋಚಿಸಬೇಕಿದೆ. ಅದಕ್ಕೆ ಸರ್ಕಾರ ಅವಕಾಶ ನೀಡಿದರೆ ಮಾತ್ರ ಸಹಾಯವಾಗಲಿದೆ. ತಡವಾಗಿದೆ ಎಂಬ ಕಾರಣ ನೀಡಿ ಪರೀಕ್ಷೆ ನಿರಾಕರಿಸಿದರೆ ಮತ್ತೆ ಒಂದು ವರ್ಷ ಕಾಯುವಂತಹ ಪರಿಸ್ಥಿತಿ ನಿರ್ಮಾಣವಾಗಲಿದೆ' ಎಂದು ಅವರು ಆತಂಕ ವ್ಯಕ್ತಪಡಿಸುತ್ತಾರೆ.

ಝಾನ್ಸಿ, ದಿನೇಶ್, ಹೇಮಂತಕುಮಾರ್, ಪ್ರಶಾಂತ್, ಸಿರಿ, ಶ್ರುತಿ, ಮಧು, ಯಶವಂತ್ ಸೇರಿದಂತೆ 12 ವಿದ್ಯಾರ್ಥಿಗಳು ಪಾವಗಡ, ತುಮಕೂರು, ಬೆಂಗಳೂರಿನ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬಹುತೇಕರಿಗೆ ಕೈ, ಕಾಲು, ತಲೆಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು, ಪರೀಕ್ಷೆ ವೇಳೆಗೆ ಚೇರಿಸಿಕೊಳ್ಳುವುದು ಅನುಮಾನ ಎಂದು ಅವರ ಪೋಷಕರು ಹೇಳುತ್ತಾರೆ.

ಪ್ರಥಮ ಪಿಯು ವಿದ್ಯಾರ್ಥಿನಿ ಭೂಮಿಕಾ ಕೈಗೆ ತೀವ್ರ ಪೆಟ್ಟಾಗಿದೆ. ಸದ್ಯಕ್ಕೆ ಚೇತರಿಕೆ ಕಷ್ಟಕರ ಎಂದು ವೈದ್ಯರು ಹೇಳಿದ್ದಾರೆ. ರಂಜಿತ್, ಗೌತಮಿ, ಯಶವಂತ್ ಚಿಕಿತ್ಸೆ ಪಡೆಯುತ್ತಿದ್ದು, ಗುಣಮುಖರಾದ ನಂತರ ಪರೀಕ್ಷೆ ಬಗ್ಗೆ ಯೋಚಿಸಬೇಕಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಪರೀಕ್ಷೆ ಬರೆಯುವುದು ಕಷ್ಟಕರ ಎಂದು ಅವರ ಪೋಷಕರು ನೋವು ತೋಡಿಕೊಂಡರು.

'ಭೂಮಿಕಾ ಎಡಗೈಗೆ ಎರಡು ಬಾರಿ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಆದರೂ ಸಂಪೂರ್ಣವಾಗಿ ಚೇತರಿಸಿಲ್ಲ. ಪೊಲೀಸ್ ಅಧಿಕಾರಿ ಆಗಬೇಕೆಂಬ ಆಸೆ ಆಕೆಗಿತ್ತು. ಇದೀಗ ಎಡಗೈ ಸಂಪೂರ್ಣ ನಜ್ಜುಗುಜ್ಜಾಗಿದೆ. ಶಾಶ್ವತ ಅಂಗವಿಕಲೆಯಾದರೆ ಭವಿಷ್ಯ ಹೇಗೆ ಎಂಬ ಆತಂಕ ಕಾಡುತ್ತದೆ' ಎನ್ನುತ್ತಾರೆ ಕುಟುಂಬದ ಸದಸ್ಯ ನರಸಿಂಹ.

'ತಲೆಗೆ ಗಾಜು ಚುಚ್ಚಿಕೊಂಡಿತ್ತು. ಹೊಲಿಗೆ ಹಾಕಿಸಲಾಗಿದೆ. ಆಸ್ಪತ್ರೆಯಿಂದ ಮಗ ಮರಳಿ ಮನೆಗೆ ಬರುತ್ತಿದ್ದಾನೆ. ಆದರೆ ಸುಸ್ತು ಕಡಿಮೆಯಾಗಿಲ್ಲ. ಮುಂದಿನ ಶಿಕ್ಷಣದ ಬಗ್ಗೆ ಆತಂಕ ಇದೆ' ಎಂದು ಚಿಕ್ಕಹಳ್ಳಿ ಹೇಮಂತಕುಮಾರ್ ತಾಯಿ ಜಯಮ್ಮ ತಿಳಿಸಿದರು.

'ಗಾಯಾಳುಗಳ ಪಟ್ಟಿ ತರಿಸಿಕೊಳ್ಳುತ್ತಿದ್ದೇವೆ. ಮುಂದೆ ಏನು ಮಾಡಬೇಕು ಎಂಬ ಬಗ್ಗೆ ನಿರ್ಧರಿಸಲಾಗುವುದು' ಎಂದು ಜಿಲ್ಲಾ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಗಂಗಾಧರ್ ಪ್ರತಿಕ್ರಿಯಿಸಿದರು.

ಟಾಪ್ ಪ್ರಯಾಣ: ತಪಾಸಣೆ ತೀವ್ರ

ಖಾಸಗಿ ಬಸ್ ಅಪಘಾತದ ನಂತರ ಬಸ್‌ಗಳು ಸೇರಿದಂತೆ ಇತರ ವಾಹನಗಳ ತಪಾಸಣೆಯನ್ನು ತೀವ್ರಗೊಳಿಸಲಾಗಿದೆ. ಪೊಲೀಸ್, ಸಾರಿಗೆ ಇಲಾಖೆ ಅಧಿಕಾರಿಗಳು ತಪಾಸಣೆ ನಡೆಸಿದ್ದಾರೆ. ಬಸ್ ಪರ್ಮಿಟ್, ಚಾಲನಾ ಪರವಾನಗಿ ಪತ್ರ ಸೇರಿದಂತೆ ಅಗತ್ಯ ದಾಖಲೆ ಪರಿಶೀಲಿಸುತ್ತಿದ್ದಾರೆ. ದಾಖಲೆ ಇಲ್ಲದ ವಾಹನಗಳಿಗೆ ದಂಡ ವಿಧಿಸುತ್ತಿದ್ದಾರೆ.

ಪಾವಗಡ ತಾಲ್ಲೂಕು ನಾಗಲಮಡಿಕೆ ಬಳಿ ಸೋಮವಾರ ಬಸ್ ಮೇಲೆ ಜನರನ್ನು ಹತ್ತಿಸಿಕೊಂಡು ಬರುತ್ತಿದ್ದ ಬಸ್ ತಡೆದಿದ್ದಾರೆ. ಜನರನ್ನು ಕೆಳಗಿಸಿ ಕಳುಹಿಸಿದ್ದಾರೆ. ಆದರೆ, ಪೊಲೀಸರು ಬೇರೆ ಬಸ್ ವ್ಯವಸ್ಥೆ ಮಾಡದೆ ಪರದಾಡಬೇಕಾಯಿತು ಎಂದು ವಿದ್ಯಾರ್ಥಿ ನಾಗರಾಜ ಪ್ರತಿಕ್ರಿಯಿಸಿದರು.

ಕೆಎಸ್‌ಆರ್‌ಟಿಸಿ ಬಸ್ ಸಂಖ್ಯೆ ಹೆಚ್ಚಳ: ಪಾವಗಡ ಬಳಿಯ ಅಪಘಾತದ ನಂತರ ಕೆಎಸ್‌ಆರ್‌ಟಿಸಿ ಬಸ್ ಓಡಾಟ ಸಂಖ್ಯೆ ಹೆಚ್ಚಿಸಲಾಗಿದೆ. ಪಾವಗಡ–ವೈ.ಎನ್. ಹೊಸಕೋಟೆ ನಡುವೆ ಹೆಚ್ಚುವರಿಯಾಗಿ 8 ಬಸ್ ಸಂಚರಿಸುತ್ತಿವೆ. ಅಪಘಾತಕ್ಕೂ ಮೊದಲು ಈ ಮಾರ್ಗದಲ್ಲಿ 14 ಟ್ರಿಪ್ ಸಂಚರಿಸುತ್ತಿದ್ದವು. ಈಗ 48 ಟ್ರಿಪ್ ಓಡಾಡುತ್ತಿವೆ.

ತಾತ್ಕಾಲಿಕವಾಗಿ ಬಸ್ ವ್ಯವಸ್ಥೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಹೆಚ್ಚುವರಿ ಬಸ್‌ಗಳ ಸಂಚಾರದ ಬಗ್ಗೆ ನಿರ್ಧರಿಸಲಾಗುವುದು ಎಂದು ಕೆಎಸ್‌ಆರ್‌ಟಿಸಿ ಮೂಲಗಳು ತಿಳಿಸಿವೆ.

ಮೂರು ಕುಟುಂಬಗಳಿಗೆ ಸಾಮಾಜಿಕ ಬಹಿಷ್ಕಾರ: ದೂರು

ಪ್ರಜಾವಾಣಿ ವಾರ್ತೆ

ನಂಜನಗೂಡು: ತಾಲ್ಲೂಕಿನ ಬಿಳಿಗೆರೆ ಹೋಬಳಿಯ ಕೊಂತಯ್ಯನಹುಂಡಿಯಲ್ಲಿ ಜಮೀನಿನ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಉಂಟಾದ ಜಗಳದಿಂದ ಮುಖಂಡರು ತಮ್ಮ ಕುಟುಂಬಗಳಿಗೆ ಸಾಮಾಜಿಕ ಬಹಿಷ್ಕಾರ ಹಾಕಿದ್ದಾರೆ ಎಂದು ಗುರುಮಲ್ಲಪ್ಪ, ಪರಶಿವಪ್ಪ, ದೊರೆಸ್ವಾಮಿ ಎಂಬುವವರು ದೂರಿದ್ದಾರೆ.

ಬಹಿಷ್ಕಾರಕ್ಕೆ ಒಳಗಾಗಿರುವ ಮೂರು ಕುಟುಂಬದವರು ಕವಲಂದೆ ಪೊಲೀಸ್ ಠಾಣೆ ಹಾಗೂ ತಹಶೀಲ್ದಾರ್ ಶಿವಮೂರ್ತಿ ಅವರಿಗೆ ದೂರು ಸಲ್ಲಿಸಿದ್ದಾರೆ.

'ಗ್ರಾಮದ ರಸ್ತೆ ವಿಚಾರವಾಗಿ ಆರು ವರ್ಷಗಳ ಹಿಂದೆ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರಿಂದ ಕೋಪಗೊಂಡು ಸ್ವಜಾತಿ (ಲಿಂಗಾಯತರು) ಮುಖಂಡರಾದ ಗೌಡಿಕೆ ಪುಟ್ಟಸ್ವಾಮಿ, ಮರಿಸ್ವಾಮಿ, ಪುಟ್ಟಬುದ್ಧಿ ಎಂಬುವವರು ನಮ್ಮ ಕುಟುಂಬಗಳಿಗೆ ಬಹಿಷ್ಕಾರ ಹಾಕಿದ್ದಾರೆ. ಗ್ರಾಮದ ಅಂಗಡಿಗಳಲ್ಲಿ ನಾವು ಖರೀದಿ ಮಾಡುವಂತಿಲ್ಲ. ನಮ್ಮ ಜಮೀನುಗಳಿಗೆ ಗ್ರಾಮದ ಯಾರೂ ಕೆಲಸಕ್ಕೆ ಬರುವಂತಿಲ್ಲ. ದೇವಾಲಯಗಳಿಗೆ ನಾವು ಪ್ರವೇಶಿಸುವಂತಿಲ್ಲ. ಗ್ರಾಮಸ್ಥರು ನಮ್ಮನ್ನು ಮಾತನಾಡಿಸುವಂತಿಲ್ಲಎಂದು ತಾಕೀತು ಮಾಡಿದ್ದಾರೆ' ಎಂದು ಗುರುಮಲ್ಲಪ್ಪ ದೂರಿನಲ್ಲಿ ತಿಳಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಪೊಲೀಸರು, 'ಗ್ರಾಮದ ಕೆಲವರು ದೂರುದಾರರನ್ನು ಮಾತನಾಡಿಸುತ್ತಿಲ್ಲ ಎನ್ನುವುದು ಬಿಟ್ಟರೆ ಸಾಮಾಜಿಕ ಬಹಿಷ್ಕಾರದಂತಹ ಘಟನೆ ನಡೆದಿಲ್ಲ. ಈಗಾಗಲೇ ಒಂದು ಸಭೆ ನಡೆಸಲಾಗಿದೆ. ಮತ್ತೊಂದು ಸಭೆ ಕರೆಯಲಾಗುವುದು' ಎಂದರು.

ಸಿಲಿಂಡರ್ ಸ್ಫೋಟ: ಇಬ್ಬರು ಸಾವು

ಕಾಪು (ಉಡುಪಿ ಜಿಲ್ಲೆ): ತಾಲ್ಲೂಕಿನ ಮಲ್ಲಾರು ಫಕೀರನಕಟ್ಟೆಯಲ್ಲಿರುವ ಗುಜರಿ ಅಂಗಡಿಯಲ್ಲಿ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡು ಇಬ್ಬರು ಮೃತಪಟ್ಟಿದ್ದಾರೆ. ಐವರು ಗಾಯಗೊಂಡಿದ್ದು ಚಿಕಿತ್ಸೆ ಪಡೆಯುತ್ತಿದ್ದಾರೆ. ರಜಬ್ ಅಲಿ (44), ರಜಬ್ ಬ್ಯಾರಿ (47) ಮೃತರು.

ಗುಜರಿ ಅಂಗಡಿಯಲ್ಲಿದ್ದ ಸಿಲಿಂಡರ್ ಏಕಾಏಕಿ ಸಿಡಿದ ಪರಿಣಾಮ ಇಬ್ಬರು ಸ್ಥಳದಲ್ಲೇ ಸಜೀವವಾಗಿ ದಹನವಾಗಿದ್ದಾರೆ. ನಯಾಜ್, ಈರಪ್ಪ, ಹಸನಬ್ಬ, ಫಹೀಮ್ ಮಣಿಪಾಲದ ಕೆಎಂಸಿ ಆಸ್ಪತ್ರೆಯಲ್ಲಿ ಹಾಗೂ ವೀರೇಶ್ ಉಡುಪಿಯ ಹೈಟೆಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬೆಂಕಿ ನಂದಿಸಲು ಮುಂದಾಗಿದ್ದ ಬೆಳಪು ಗ್ರಾಮ ಪಂಚಾಯಿತಿ ಸದಸ್ಯ ಫಹಿಂ ಗಂಭೀರವಾಗಿ ಗಾಯಗೊಂಡಿದ್ದಾರೆ. ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ.

ತಲಾ ₹ 25 ಲಕ್ಷ ಪರಿಹಾರಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾವಗಡ ತಾಲ್ಲೂಕಿನ ಪಳವಳ್ಳಿ ಕಟ್ಟೆ ಬಳಿ ಶನಿವಾರ ಬಸ್ ಅಪಘಾತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ತಲಾ ₹ 25 ಲಕ್ಷ ಪರಿಹಾರ ನೀಡುವಂತೆ ವಿಧಾನಸಭೆಯ ವಿರೋಧ ಪಕ್ಷದ ಉಪನಾಯಕ ಯು.ಟಿ.ಖಾದರ್ ಒತ್ತಾಯಿಸಿದರು.

ವಿಧಾನಸಭೆಯಲ್ಲಿ ಸೋಮವಾರ ಶೂನ್ಯ ವೇಳೆಯಲ್ಲಿ ಈ ವಿಚಾರ ಪ್ರಸ್ತಾಪಿಸಿದ ಅವರು, 'ಖಾಸಗಿ ಬಸ್‌ಗಳಿಗೆ ನೀಡಿರುವ ಪರವಾನಗಿ ರದ್ದು ಪಡಿಸುತ್ತೇವೆ ಎಂದು ಈ ಅವಘಡದ ಬಳಿಕ ಸಾರಿಗೆ ಸಚಿವರು ಹೇಳಿದ್ದಾರೆ. ಈ ಪ್ರದೇಶದಲ್ಲಿ 150ಕ್ಕೂ ಹೆಚ್ಚು ಖಾಸಗಿ ಬಸ್‌ಗಳು ಸಂಚರಿಸುತ್ತಿದ್ದವು. ಪರವಾನಗಿ ನವೀಕರಿಸದ ಕಾರಣ ಅವುಗಳ ಸಂಖ್ಯೆಯೂ ಗಣನೀಯವಾಗಿ ಕಡಿಮೆ ಆಗಿದೆ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯೂ ಇಲ್ಲಿ ಬಸ್ ಸೌಕರ್ಯ ಕಲ್ಪಿಸಿಲ್ಲ. ಜನ ಬಸ್‌ನ ಟಾಪ್‌ನಲ್ಲಿ ಕುಳಿತು ಪ್ರಯಾಣಿಸಿದರೆ ಪ್ರಕರಣ ದಾಖಲಿಸಲಾಗುತ್ತದೆ. ಪರಿಸ್ಥಿತಿ ಹೀಗಿರುವಾಗ ವಿದ್ಯಾರ್ಥಿಗಳು ಹಾಗೂ ದುಡಿಯುವ ವರ್ಗದವರು ಪ್ರಯಾಣಿಸುವುದಾದರು ಹೇಗೆ' ಎಂದು ಪ್ರಶ್ನಿಸಿದರು.

ಸಾರಿಗೆ ಸಚಿವ ಬಿ.ಶ್ರೀರಾಮುಲು, 'ನಿಗದಿತ ಮಿತಿಗಿಂತ ಹೆಚ್ಚು ಪ್ರಯಾಣಿಕರನ್ನು ತುಂಬಿಸಿಕೊಂಡಿದ್ದು ಹಾಗೂ ಅತಿವೇಗವೇ ಈ ಅಪಘಾತಕ್ಕೆ ಕಾರಣ ಎಂದು ತಿಳಿದುಬಂದಿದೆ. ಮೃತರ ಕುಟುಂಬಕ್ಕೆ ತಲಾ ₹ 5 ಲಕ್ಷವನ್ನು ಸರ್ಕಾರದ ವತಿಯಿಂದ ಹಾಗೂ ₹ 1 ಲಕ್ಷವನ್ನು ವೈಯಕ್ತಿಕ ನೆಲೆಯಲ್ಲಿ ಪರಿಹಾರ ನೀಡಿದ್ದೇನೆ. ಈ ಪ್ರದೇಶದಲ್ಲಿ 14 ವಾಹನಗಳ ವ್ಯವಸ್ಥೆ ಮಾಡಲಾಗಿದೆ. ಪದೇ ಪದೇ ಅಪಘಾತ ಸಂಭವಿಸುವ ದೋಷಪೂರಿತ ರಸ್ತೆತಾಣಗಳನ್ನು (ಬ್ಲ್ಯಾಕ್‌ಸ್ಪಾಟ್) ಗುರುತಿಸಿ ದುರಸ್ತಿಪಡಿಸಲು ಸೂಚನೆ ನೀಡಿದ್ದೇನೆ' ಎಂದು ತಿಳಿಸಿದರು.

ಜೆಡಿಎಸ್ ಸದಸ್ಯ ಡಿ.ಸಿ.ತಮ್ಮಣ್ಣ, 'ಬಹುತೇಕ ಅಪಘಾತಗಳು ಸಂಭವಿಸುವುದಕ್ಕೆ ವಾಹನಗಳಲ್ಲಿನ ದೋಷವೂ ಕಾರಣ. ಚಕ್ರಗಳ ವಿನ್ಯಾಸ ಹೊಂದಾಣಿಕೆ (ವ್ಹೀಲ್ ಅಲೈನ್‌ಮೆಂಟ್) ಮಾಡುವುದಕ್ಕೆ ಸಾರಿಗೆ ಸಂಸ್ಥೆಗಳಲ್ಲಿ ಸಮರ್ಪಕ ಸೌಕರ್ಯಗಳೇ ಇಲ್ಲ. ವ್ಹೀಲ್ ಅಲೈನ್‌ಮೆಂಟ್ ಸರಿ ಇಲ್ಲದಿದ್ದರೆ, ಚಾಲಕ ಸ್ವಲ್ಪ ಎಚ್ಚರ ತಪ್ಪಿದರೂ ಅಪಘಾತ ಸಂಭವಿಸುವ ಅಪಾಯ ಹೆಚ್ಚು' ಎಂದರು.

ಇಬ್ಬರ ಅಮಾನತಿಗೆ ಕ್ರಮ

ಅಪಘಾತಕ್ಕೆ ಸಂಬಂಧಿಸಿದಂತೆ ಸಾರಿಗೆ ಇಲಾಖೆಯ ಇಬ್ಬರು ಅಧಿಕಾರಿಗಳನ್ನು ಅಮಾನತು ಮಾಡಲು ಕ್ರಮಕೈಗೊಳ್ಳಲಾಗಿದೆ ಎಂದು ಸಚಿವ ಶ್ರೀರಾಮುಲು ತಿಳಿಸಿದರು.

ವಿಧಾನ ಪರಿಷತ್‌ನಲ್ಲೂ ಶೂನ್ಯ ವೇಳೆಯಲ್ಲಿ ಕಾಂಗ್ರೆಸ್‌ನ ಆರ್. ರಾಜೇಂದ್ರ ರಾಜಣ್ಣ ಅವರು ಈ ಪ್ರಕರಣವನ್ನು ಪ್ರಸ್ತಾಪಿಸಿ, ಅಪಘಾತದಲ್ಲಿ ಸಾವಿಗೀಡಾದವರ ಕುಟುಂಬಕ್ಕೆ ತಲಾ ₹ 25 ಲಕ್ಷ ಪರಿಹಾರ ನೀಡುವಂತೆ ಒತ್ತಾಯಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು, 'ಬಸ್‌ಗಳಿಗೆ ಪರವಾನಗಿ ನೀಡಿದ ಮತ್ತು ಮಿತಿಗಿಂತ ಹೆಚ್ಚು ಜನರನ್ನು ಸಾಗಿಸಲು ಅವಕಾಶ ನೀಡಿದ ಅಧಿಕಾರಿಗಳನ್ನು ಅಮಾನತು ಮಾಡಲು ಈಗಾಗಲೇ ಸೂಚಿಸಲಾಗಿದೆ. ಬಸ್‌ಗಳ ಸುಸ್ಥಿತಿ ಪ್ರಮಾಣ ಪತ್ರ ಪಡೆಯಲು ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ' ಎಂದರು.

'40 ಹಳ್ಳಿಗಳ ಜನರ ಸಂಚಾರಕ್ಕೆ ಅನುಕೂಲ ಕಲ್ಪಿಸಲು ಈ ಮಾರ್ಗದಲ್ಲಿ ಖಾಸಗಿ ಬಸ್‌ಗಳ ಪರವಾನಗಿಯನ್ನು ರದ್ದು ಮಾಡಿ ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಚಾರಕ್ಕೆ ಕ್ರಮಕೈಗೊಳ್ಳಲಾಗುವುದು' ಎಂದೂ ತಿಳಿಸಿದರು.

'ರಾಷ್ಟ್ರೀಕೃತ ಬಸ್ ಮಾರ್ಗ ನೀತಿ ಮರುಪರಿಶೀಲಿಸಿ'

'ರಾಜ್ಯದ ಅನೇಕ ಪ್ರದೇಶಗಳಲ್ಲಿ ಬಸ್ ಮಾರ್ಗಗಳನ್ನು 1960 ರ ದಶಕದಲ್ಲಿ ರಾಷ್ಟ್ರೀಕರಣಗೊಳಿಸಲಾಗಿತ್ತು. ಅಂತಹ ಕಡೆ ಖಾಸಗಿ ಬಸ್ ಸಂಚಾರಕ್ಕೆ ಅವಕಾಶ ನೀಡಲು ರಸ್ತೆ ಸಾರಿಗೆ ಸಂಸ್ಥೆ ಆಕ್ಷೇಪ ವ್ಯಕ್ತಪಡಿಸುತ್ತದೆ. ಸರ್ಕಾರವೂ ಇಲ್ಲಿ ಸಾರಿಗೆ ವ್ಯವಸ್ಥೆ ಕಲ್ಪಿಸುವುದಿಲ್ಲ. ಈ ನೀತಿಯನ್ನು ಬದಲಾಯಿಸುವ ಅಗತ್ಯ ಇದೆ' ಎಂದು ಶಾಸಕ ಕೆ.ಆರ್. ರಮೇಶ್ ಕುಮಾರ್ ಸಲಹೆ ನೀಡಿದರು.

'ಭಗವದ್ಗೀತೆ ಮೂಲ ಪುಸ್ತಕದ ಮಾಹಿತಿ ಇಲ್ಲವೆಂದ ಕೇಂದ್ರ'

ಬೆಳಗಾವಿ: ಭಗವದ್ಗೀತೆ ಮೂಲ ಪುಸ್ತಕದ ಬಗ್ಗೆ ಕೇಂದ್ರ ಸರ್ಕಾರದ ಬಳಿ ಮಾಹಿತಿ ಇಲ್ಲದಿರುವುದು ತಿಳಿದುಬಂದಿದೆ.

ಜಿಲ್ಲೆಯ ರಾಯಬಾಗದ ವಕೀಲ ಸುರೇಂದ್ರ ಉಗಾರೆ ಅವರು ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿ ಕೇಳಿದ್ದ ಮಾಹಿತಿಗೆ ಕೇಂದ್ರ ಸರ್ಕಾರವು ನೀಡಿರುವ ಉತ್ತರ ಅಚ್ಚರಿಗೆ ಕಾರಣವಾಗಿದೆ.

'ಭಗವದ್ಗೀತೆ ಮೂಲ ಪುಸ್ತಕದ ಪ್ರತಿ ಎಲ್ಲಿದೆ? ಮಾನ್ಯತೆ ಪಡೆದ ಅಧಿಕೃತ ಪುಸ್ತಕ, ಪ್ರಕಾಶಕರ ಪಟ್ಟಿ ಬಗ್ಗೆ ಮಾಹಿತಿ ಕೊಡಬೇಕು' ಎಂದು ಕೇಂದ್ರ ಸಂಸ್ಕೃತಿ ಸಚಿವಾಲಯಕ್ಕೆ ಅರ್ಜಿ ಸಲ್ಲಿಸಿದ್ದೆ. 'ಆ ಬಗ್ಗೆ ತಮ್ಮ ಬಳಿ ಮಾಹಿತಿ ಇಲ್ಲ' ಎಂದು ಇಲಾಖೆಯಿಂದ ಉತ್ತರ ಬಂದಿದೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಪವಿತ್ರಗ್ರಂಥ ಭಗವದ್ಗೀತೆ ವಿಷಯವನ್ನು ಪಠ್ಯದಲ್ಲಿ ಅಳವಡಿಸುವ ಬಗ್ಗೆ ನಮಗೆ ಅಭ್ಯಂತರವಿಲ್ಲ. ಆದರೆ, ಭಗವದ್ಗೀತೆ ಮೂಲ ಪ್ರತಿ, ಪ್ರಕಾಶಕರ ಪಟ್ಟಿ ನೀಡಬೇಕು. ಮಕ್ಕಳಿಗೆ ಕಲಿಸಲು ಮುಂದಾಗಿರುವ ಭಗವದ್ಗೀತೆ ಯಾವುದು? ಸಂಸ್ಕೃತದಲ್ಲಿದ್ದ ಭಗವದ್ಗೀತೆ ಹಿಂದಿ, ಇಂಗ್ಲಿಷ್, ಕನ್ನಡ ಭಾಷೆಗೆ ಅಧಿಕೃತವಾಗಿ ಭಾಷಾಂತರ ಮಾಡಿದವರು ಯಾರು? ಈ ಬಗ್ಗೆ ಕೇಂದ್ರ ಸರ್ಕಾರದ ಬಳಿಯೇ ಮಾಹಿತಿ ಇಲ್ಲ' ಎಂದು ಹೇಳಿದರು.

'ಭಗವದ್ಗೀತೆ ಮೂಲ ಭಾಷೆ ಸಂಸ್ಕೃತದಲ್ಲಿತ್ತು ಎಂದು ಹೇಳುತ್ತಾರೆ. ಮೂಲ ಗ್ರಂಥ ಮತ್ತು ಅಧಿಕೃತವಾಗಿ ಭಾಷಾಂತರ ಮಾಡಿದವರು ಯಾರು ಎನ್ನುವುದನ್ನು ತಿಳಿಸದಿದ್ದರೆ ವಿದ್ಯಾರ್ಥಿಗಳಿಗೆ ತಪ್ಪು ಸಂದೇಶ ಹೋಗುತ್ತದೆ. ಕೇಂದ್ರ ಸರ್ಕಾರ ಸ್ಪಷ್ಟನೆ ನೀಡಬೇಕು' ಎಂದು ಅವರು ತಿಳಿಸಿದರು.

ಕರ್ನಾಟಕ ಸರ್ಕಾರ
ಜಲಸಂಪನ್ಮೂಲ ಇಲಾಖೆ
ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ (ವಾಲ್ಮಿ)
ಧಾರವಾಡ
ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು
ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು
ವಿಶ್ವ ಜಲ ದಿನಾಚರಣೆ 2022
ವಿಶ್ವ ಜಲ ದಿನಾಚರಣೆ - 2022
ಘೋಷ ವಾಕ್ಯ:
"ಅಗೋಚರ ಅಂತರ್ಜಲವನ್ನು ಗೋಚರಿಸುವಂತೆ ಮಾಡುವುದು"
ಸಂದೇಶ
ಜಾಗತಿಕ ಜಲ ಸಂಕಷ್ಟದ ಮಹತ್ವವನ್ನು ಮನಗಂಡ ಸಂಯುಕ್ತ ರಾಷ್ಟ್ರ ಸಂಘವು ಜಗತ್ತಿನಾದ್ಯಂತ ವಿಶ್ವ ಜಲ ದಿನಾಚರಣೆಯನ್ನು ಆಚರಿಸಲು ಕರೆ ಕೊಡುತ್ತದೆ. 1992 ರಲ್ಲಿ ರಿಯೋ ಡಿ ಜನಿರೋ (ಬ್ರಾಜಿಲ್) ನಲ್ಲಿ ನಡೆದ ಸಂಯುಕ್ತ ರಾಷ್ಟ್ರ ಸಂಘದ ಪರಿಸರ ಮತ್ತು ಅಭಿವೃದ್ಧಿ ಕುರಿತ ಸಮ್ಮೇಳನದಲ್ಲಿ ಜಾಗತಿಕ ಮಟ್ಟದಲ್ಲಿ ಜಲ ದಿನಾಚರಣೆಯ ಕುರಿತು ನಿರ್ಣಯ ಅಂಗೀಕರಿಸಲಾಯಿತು. ಮಾರ್ಚ್ 22, 1993 ರಲ್ಲಿ ಪ್ರಥಮ ಬಾರಿಗೆ ವಿಶ್ವ ಜಲ ದಿನಾಚರಣೆಯನ್ನು ಆಚರಿಸಲಾಯಿತು. ಪ್ರತಿ ವರ್ಷವೂ ಒಂದು ವಿಶಿಷ್ಟವಾದ ಘೋಷ ವಾಕ್ಯದೊಂದಿಗೆ ವಿಶ್ವ ಜಲ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಸಾಮಾನ್ಯ ಜಲ ಸಂಕಷ್ಟದೊಂದಿಗೆ ದಿನದಿಂದ ದಿನಕ್ಕೆ ಉಲ್ಬಣಗೊಳ್ಳುತ್ತಿರುವ ಅಂತರ್ಜಲ ಸಮಸ್ಯೆಯ ಗಂಭೀರತೆಯನ್ನು ಮನಗಂಡು ಸಂಯುಕ್ತ ರಾಷ್ಟ್ರ ಸಂಘದ ಯು.ಎನ್ ವಾಟರ್ ಎಂಬ ವೇದಿಕೆ ಪ್ರಸಕ್ತ ವರ್ಷದಲ್ಲಿ "ಅಗೋಚರ ಅಂತರ್ಜಲವನ್ನು ಗೋಚರಿಸುವಂತೆ ಮಾಡುವುದು" ಎಂಬ ಘೋಷಣೆಯೊಂದಿಗೆ (Groundwater- Making the invisible, visible) ವಿಶ್ವ ಜಲ ದಿನಾಚರಣೆಗೆ ಕರೆ ಕೊಟ್ಟಿದೆ. ಈ ಹಿನ್ನೆಲೆಯಲ್ಲಿ ಅಂತರ್ಜಲದ ವಿವಿಧ ಆಯಾಮಗಳನ್ನು ಅರ್ಥ ಮಾಡಿಕೊಂಡು ಅಂತರ್ಜಲ ಅಭಿವೃದ್ಧಿ, ಸಂರಕ್ಷಣೆ ಮತ್ತು ಬಳಕೆ ಕುರಿತು ಜಾಗತಿಕ ಹಾಗೂ ಸ್ಥಳೀಯ ಪ್ರಯತ್ನಗಳ ಅವಶ್ಯಕತೆ ಇರುತ್ತದೆ. ಈ ನಿಟ್ಟಿನಲ್ಲಿ ಅಂತರ್ಜಲದ ಮಹತ್ವವನ್ನು ತಿಳಿಸಿಕೊಡಲು ಜಲ ಜಾಗೃತಿ ಅವಶ್ಯಕವಾಗಿದೆ. ಪ್ರಸ್ತುತ ವರ್ಷದ ಘೋಷ ವಾಕ್ಯವು ಪ್ರಸಕ್ತ ಕಾಲಕ್ಕೆ ಅತ್ಯಂತ ಸೂಕ್ತವಾಗಿದೆ.
ಸನ್ಮಾನ್ಯ ಜಲಸಂಪನ್ಮೂಲ ಸಚಿವರಾದ ಶ್ರೀ ಗೋವಿಂದ ಎಂ. ಕಾರಜೋಳ ಅವರು ಅಭಿವೃದ್ಧಿ ಕಾಮಗಾರಿಗಳನ್ನು ಪರಾಮರ್ಶಿಸುತ್ತಿರುವುದು.
ದೇಶದಲ್ಲಿ ಹಾಗೂ ಕರ್ನಾಟಕದಲ್ಲಿ ಅಂತರ್ಜಲ ಅಭಿವೃದ್ಧಿ ಮತ್ತು ಬಳಕೆ ಮೂಲಕ ಆಹಾರ ಮತ್ತು ಕೃಷಿ ಉತ್ಪಾದನೆಗಳಲ್ಲಿ ಸಾಕಷ್ಟು ವೃದ್ಧಿಯಾಗಿದೆ. ಅಂತರ್ಜಲ ಕುಡಿಯುವ ನೀರಿನ ಮಹತ್ವದ ಮೂಲವಾಗಿದೆ ಮತ್ತು ಕೈಗಾರಿಕಾ ಅಭಿವೃದ್ಧಿಗೆ ಕಾರಣವಾಗಿದೆ. ಒಟ್ಟು ನೀರಾವರಿ ಕ್ಷೇತ್ರದ ಪ್ರತಿಶತ 65 ರಷ್ಟು ನೀರು ಅಂತರ್ಜಲದಿಂದ ಲಭ್ಯವಾಗುತ್ತಿದೆ. ಅದೇ ರೀತಿ ಗ್ರಾಮೀಣ ಪ್ರದೇಶದ ಪ್ರತಿಶತ 85 ರಷ್ಟು ಹಾಗೂ ಪಟ್ಟಣ ಪ್ರದೇಶದ ಸುಮಾರು 55 ರಷ್ಟು ನೀರಿನ ಸರಬರಾಜು ಅಂತರ್ಜಲದಿಂದ ಸಾಧ್ಯವಾಗಿದೆ. ಕಳೆದ ಮೂರು ದಶಕಗಳಲ್ಲಿ ಅಗಾಧ ಪ್ರಮಾಣದ ಅಂತರ್ಜಲ ಅಭಿವೃದ್ಧಿ ಮೂಲಕ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿದೆ. ಭಾರತ ಇಂದು ಜಗತ್ತಿನ ಅತ್ಯಂತ ಹೆಚ್ಚಿನ ಮಟ್ಟದ ಅಂತರ್ಜಲ ಬಳಸುತ್ತಿರುವ ರಾಷ್ಟ್ರವೆಂದರೆ ಅತಿಶಯೋಕ್ತಿಯಲ್ಲ.
ಜಗತ್ತಿನ ಒಟ್ಟಾರೆ ಜಲ ಚಕ್ರದಲ್ಲಿ ಅಂತರ್ಜಲ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಅಂತರ್ಜಲದಲ್ಲಿ ಆಗುವ ಯಾವುದೇ ಬದಲಾವಣೆ ಉಳಿದೆಲ್ಲ ಜಲ ಮೂಲಗಳ ಮೇಲೆ ವಿಪರೀತ ಪರಿಣಾಮಗಳನ್ನು ಬೀರುವ ಸಾಧ್ಯತೆಗಳಿವೆ.
ಅವ್ಯಾಹತವಾದ ಅಂತರ್ಜಲ ಬಳಕೆಯಿಂದ ದೇಶದ ಜಲ ಸಂಪತ್ತಿಗೆ ಗಂಡಾಂತರ ಉಂಟಾಗುವ ಲಕ್ಷಣಗಳು ಕಾಣುತ್ತಿವೆ. ಅನಿಯಂತ್ರಿತ ಶೋಷಣೆಯಿಂದ ಅಂತರ್ಜಲದ ಮಟ್ಟ ಅನಾಹುತಕಾರಿ ಮಟ್ಟಕ್ಕೆ ಕುಸಿದಿದೆ. ಕೇಂದ್ರ ಅಂತರ್ಜಲ ಮಂಡಳಿಯ ವರದಿಗಳ ಪ್ರಕಾರ ದೇಶದ ಒಟ್ಟು 6881 ಬ್ಲಾಕ್ / ತಾಲ್ಲೂಕುಗಳ ಪೈಕಿ 1186 'ಅತೀ ಶೋಷಿತ' ಪ್ರದೇಶಗಳೆಂದು ತಿಳಿದುಬಂದಿದೆ. ಅತೀ ಶೋಷಿತ ಪ್ರದೇಶವೆಂದರೆ ಆ ಪ್ರದೇಶದ ಒಟ್ಟಾರೆ ನೀರಿನ ಬಳಕೆ ಮಳೆ ಮತ್ತು ವಿವಿಧ ಮೂಲಗಳಿಂದಾಗುವ ಮರುಪೂರಣ ಪ್ರಮಾಣಕ್ಕಿಂತ ಹೆಚ್ಚಾಗಿರುತ್ತದೆ. ಇದೇ ಸಂಸ್ಥೆಯ ಇನ್ನೊಂದು ವರದಿಯ ಪ್ರಕಾರ ದೇಶದ ಒಟ್ಟಾರೆ ಅಂತರ್ಜಲ ಪರಿವೀಕ್ಷಣಾ ಬಾವಿಗಳ ಪೈಕಿ ಶೇಕಡಾ 61 ರಷ್ಟು ಬಾವಿಗಳು ದೀರ್ಘಕಾಲೀನ ಇಳಿಮುಖ ಗತಿಯನ್ನು ತೋರಿಸುತ್ತಿವೆ. ಇದಕ್ಕೆಲ್ಲ ಮಿಗಿಲಾಗಿ ಇತ್ತೀಚಿನ ದಿನಗಳಲ್ಲಿ ಹವಾಮಾನ ವೈಪರೀತ್ಯವು ಅಂತರ್ಜಲದ ಪ್ರಮಾಣ ಮತ್ತು ಗುಣಮಟ್ಟದ ಮೇಲೆ ಅಗಾಧ ಪ್ರಮಾಣದ ದುಷ್ಪರಿಣಾಮಗಳನ್ನು ಬೀರುತ್ತಿದೆ.
ಪ್ರಸ್ತುತ ವರ್ಷದ ಘೋಷಣೆಗೆ ಪೂರಕವಾಗಿರುವಂತೆ ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಅಂತರ್ಜಲ ಅಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಭಾರತ ಸರ್ಕಾರ ಪ್ರಾಯೋಜಿತ ಅಟಲ್ ಭೂಜಲ ಯೋಜನೆ ಒಂದು ಮಹತ್ವಾಕಾಂಕ್ಷಿ ಕಾರ್ಯಕ್ರಮವಾಗಿದ್ದು ಕರ್ನಾಟಕದಲ್ಲಿಯೂ ಕೂಡಾ ಅನುಷ್ಠಾನ ಮಾಡಲಾಗುತ್ತಿದೆ. ರಾಜ್ಯದ ಬಾಧಿತವಾದ 14 ಜಿಲ್ಲೆಗಳ 41 ತಾಲ್ಲೂಕುಗಳಲ್ಲಿ ಯೋಜನೆ ಜಾರಿಯಲ್ಲಿದೆ. ಒಟ್ಟಾರೆ ಅಂತರ್ಜಲದ ಅಭಿವೃದ್ಧಿ ಮತ್ತು ಸದ್ಬಳಕೆಯನ್ನು ಪ್ರೋತ್ಸಾಹಿಸಲು ತಾಂತ್ರಿಕ ಮತ್ತು ಸಾಂಸ್ಥಿಕ ಸುಧಾರಣೆಗಳ ಅವಶ್ಯಕತೆ ಇದೆ. ಜೊತೆಗೆ ಸಮುದಾಯದ ಸಹಭಾಗಿತ್ವ ಕೂಡಾ ಅಷ್ಟೇ ಮಹತ್ವದ್ದಾಗಿದ್ದು, ಮುಂಬರುವ ದಿನಗಳಲ್ಲಿ ಸಮುದಾಯ ಆಧಾರಿತ ಅಂತರ್ಜಲ ಅಭಿವೃದ್ಧಿ ಕುರಿತು ಇನ್ನೂ ಹೆಚ್ಚಿನ ಕಾರ್ಯಕ್ರಮಗಳ ಅವಶ್ಯಕತೆ ಇದೆ. ವಿಶೇಷವಾಗಿ ವಿದ್ಯಾರ್ಥಿಗಳಲ್ಲಿ ಹಾಗೂ ಯುವಕರಲ್ಲಿ ಅಂತರ್ಜಲದ ಮಹತ್ವ, ಬಳಕೆಯ ಶಿಸ್ತನ್ನು ರೂಪಿಸುವುದು ಶಿಕ್ಷಣ ಸಂಸ್ಥೆಗಳ ಜವಾಬ್ದಾರಿಯಾಗಿದೆ. ಜಲ ಜಾಗೃತಿಯ ಮೂಲಕ ಪ್ರಸ್ತುತ ವರ್ಷದ ಘೋಷ ವಾಕ್ಯದ ಸಾರ್ಥಕತೆಗೆ ಶ್ರಮಿಸೋಣ.
- ಗೋವಿಂದ ಎಂ. ಕಾರಜೋಳ
ಜಲಸಂಪನ್ಮೂಲ ಸಚಿವ
ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಅನುದಾನ ಬೇಡಿಕೆ ಚರ್ಚೆ ವೇಳೆ ಶಾಸಕ ಎನ್.ಮಹೇಶ್ ಪ್ರಸ್ತಾಪ; ಕಂದಾಯ ಸಚಿವ ಆರ್. ಅಶೋಕ ಸ್ಪಷ್ಟನೆ

‘ಪಿಟಿಸಿಎಲ್: ಅರ್ಜಿ ಸಲ್ಲಿಕೆಗೆ ಕಾಲಮಿತಿ ಇಲ್ಲ’

ಪ್ರಜಾವಾಣಿ ವಾರ್ತೆ

ಆರ್. ಅಶೋಕ

ಎನ್. ಮಹೇಶ್

ಬೆಂಗಳೂರು: ‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಭೂಮಿ ಪರಭಾರೆ ನಿಷೇಧ (ಪಿಟಿಸಿಎಲ್) ಕಾಯ್ದೆಯ ಷರತ್ತು ಉಲ್ಲಂಘಿಸಿ ಮಾರಾಟ ಆಗಿರುವ ಭೂಮಿಯ ಮರುಮಂಜೂರಾತಿ ಕೋರಿ ಅರ್ಜಿ ಸಲ್ಲಿಸುವುದಕ್ಕೆ ಕಾಲಮಿತಿ ಇಲ್ಲ. ಇದನ್ನು ಸ್ಪಷ್ಟಪಡಿಸಿ ಸುತ್ತೋಲೆ ಹೊರಡಿಸಿದ್ದೇವೆ’ ಎಂದು ಕಂದಾಯ ಸಚಿವ ಆರ್. ಅಶೋಕ ಸ್ಪಷ್ಟಪಡಿಸಿದರು.

ಪಿಟಿಸಿಎಲ್ ಕಾಯ್ದೆಯ ಆಶಯ ಈಡೇರದ ಕುರಿತು ಶಾಸಕ ಎನ್. ಮಹೇಶ್ ವಿಧಾನಸಭೆಯಲ್ಲಿ ಅನುದಾನ ಬೇಡಿಕೆ ಚರ್ಚೆ ವೇಳೆ ಪ್ರಸ್ತಾಪಿಸಿದರು.

‘ರಾಜ್ಯದಲ್ಲಿ 10 ವರ್ಷಗಳಲ್ಲಿ 8,501 ಪರಿಶಿಷ್ಟ ಕುಟುಂಬಗಳಿಗೆ ಒಟ್ಟು 4,705 ಎಕರೆ ಭೂಮಿ ನೀಡಲಾಗಿದೆ. ನೆಕ್ಕಂಟಿ ರಾಮಲಕ್ಷ್ಮಿ ಪ್ರಕರಣದಲ್ಲಿ ಪಿಟಿಸಿಎಲ್ ಕಾಯ್ದೆಯಡಿ ಭೂಮಿ ಮರುಮಂಜೂರಾತಿ ಅರ್ಜಿಯನ್ನು ಸಮುಚಿತ ಸಮಯದೊಳಗೆ ಸಲ್ಲಿಸಬೇಕು ಎಂದು ಸುಪ್ರೀಂಕೋರ್ಟ್ ಅಭಿಪ್ರಾಯಪಟ್ಟದ್ದರಿಂದಾಗಿ ಪರಿಶಿಷ್ಟ ಕುಟುಂಬಗಳು ಸುಮಾರು 5 ಸಾವಿರ ಎಕರೆಗಳಷ್ಟು ಭೂಮಿಯನ್ನು ಕಳೆದುಕೊಂಡಿವೆ’ ಎಂದು ಬೇಸರ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಅಶೋಕ, ‘ನೆಕ್ಕಂಟಿ ರಾಮಲಕ್ಷ್ಮಿ ಪ್ರಕರಣದಲ್ಲಿ ಸುಪ್ರೀಂಕೋರ್ಟ್‌ನ ಪೀಠವೊಂದು ಈ ಕಾಯ್ದೆಯಡಿ ಸಲ್ಲಿಕೆಯಾಗುವ ಅರ್ಜಿ ವಿಲೇವಾರಿಗೆ ಕಾಲಮಿತಿ ನಿಗದಿಪಡಿಸಿದ್ದು ನಿಜ. ಆ ಬಳಿಕ ಸುಪ್ರೀಂಕೋರ್ಟ್‌ನ ದ್ವಿಸದಸ್ಯ ಪೀಠವು ಪಿಟಿಸಿಎಲ್ ಕಾಯ್ದೆಯ ಆಶಯವನ್ನು ಎತ್ತಿ ಹಿಡಿದಿದ್ದು, ಅರ್ಜಿ ವಿಲೇವಾರಿಗೆ ಕಾಲಮಿತಿ ಇಲ್ಲ ಎಂದು ಸ್ಪಷ್ಟಪಡಿಸಿದೆ. ಆದರೂ ಕೆಲವು ಉಪವಿಭಾಗಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ಸುಪ್ರೀಂಕೋರ್ಟ್‌ನ ಬೇರೆ ಬೇರೆ ಆದೇಶಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡು ಅರ್ಜಿ ಇತ್ಯರ್ಥಪಡಿಸುತ್ತಿದ್ದಾರೆ. ಇದನ್ನು ತಡೆಯಲೆಂದೇ ಸರ್ಕಾರ ಸುತ್ತೋಲೆ ಹೊರಡಿಸಿದೆ. ಈ ಆದೇಶ ಪಾಲಿಸದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಿದ್ದೇವೆ’ ಎಂದು ಎಚ್ಚರಿಸಿದರು.

‘ಸರ್ಕಾರದ ಸುತ್ತೋಲೆಯಿಂದ ಏನೂ ಪ್ರಯೋಜನವಾಗದು. ಪರಿಶಿಷ್ಟ ಕುಟುಂಬಗಳ ಭೂಮಿ ಪರಾಭಾರೆಯನ್ನು ಕಟ್ಟುನಿಟ್ಟಾಗಿ ತಡೆಯಲು ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ತರಬೇಕು’ ಎಂದು ಮಹೇಶ್ ಒತ್ತಾಯಿಸಿದರು.

10 ವರ್ಷಗಳಲ್ಲಿ ₹ 2.5 ಲಕ್ಷ ಕೋಟಿ ಅನುದಾನ

ಬೆಂಗಳೂರು: ‘2013ರ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಪರಿಶಿಷ್ಟ ಪಂಗಡ ಉಪಯೋಜನೆ (ಎಸ್‌ಸಿಎಸ್‌ಪಿ–ಟಿಎಸ್‌ಪಿ) ಕಾಯ್ದೆ ಜಾರಿಗೆ ಬಂದ ಬಳಿಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗೆ ಸರ್ಕಾರದ ವಿವಿಧ ಬಜೆಟ್‌ಗಳಲ್ಲಿ ಒಟ್ಟು ₹ 2.5 ಲಕ್ಷ ಕೋಟಿಗಳಷ್ಟು ಅನುದಾನ ಕಾಯ್ದಿರಿಸಲಾಗಿದೆ. ಆದರೂ ಪರಿಶಿಷ್ಟ ಕುಟುಂಬಗಳು ಇದರಿಂದ ಎಷ್ಟರಮಟ್ಟಿಗೆ ಸಶಕ್ತವಾಗಿವೆ ಎಂದು ಸರ್ಕಾರ ಆತ್ಮಾವಲೋಕನ ಮಾಡಿಕೊಳ್ಳಬೇಕು’ ಎಂದು ಶಾಸಕ ಎನ್.ಮಹೇಶ್ ಹೇಳಿದರು.

ವಿಧಾನಸಭೆಯಲ್ಲಿ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ ವೇಳೆ ಸೋಮವಾರ ಮಾತನಾಡಿದ ಅವರು, ‘ಎಸ್‌ಸಿಎಸ್‌ಪಿ–ಟಿಎಸ್‌ಪಿ ಕಾಯ್ದೆಯಿಂದಾಗಿ ಒಂದಷ್ಟು ಆಸ್ತಿಗಳು ನಿರ್ಮಾಣವಾಗಿದ್ದು ನಿಜ. ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅಂದಾಜು 30 ಲಕ್ಷ ಕುಟುಂಬಗಳಿವೆ. ಈ ಕಾಯ್ದೆ ಜಾರಿಯಾದ ಬಳಿಕ ಪ್ರತಿ ಕುಟುಂಬಕ್ಕೆ ತಲಾ ₹ 8.30 ಲಕ್ಷದಷ್ಟು ಅನುದಾನ ಒದಗಿಸಿದಂತಾಗಿದೆ. ಈ ಅವಧಿಯಲ್ಲಿ ನೇರವಾಗಿ ಸವಲತ್ತು ಪಡೆದಿರುವುದು 3.38 ಲಕ್ಷ ಕುಟುಂಬಗಳು ಮಾತ್ರ. ಇಷ್ಟೆಲ್ಲ ಅನುದಾನ ನೀಡಿಯೂ ಅವರ ಆರ್ಥಿಕ ಸಬಲೀಕರಣವಾಗಿಲ್ಲ. ವಾಹನ ಖರೀದಿ, ಭೂಮಿ ಖರೀದಿಗೆ ನೆರವು ಮುಂತಾದ ಆರ್ಥಿಕ ಕಾರ್ಯಕ್ರಮಗಳಿಂದ ಮಾತ್ರ ಈ ಕುಟುಂಬಗಳನ್ನು ಮೇಲಕ್ಕೆತ್ತಬಹುದು’ ಎಂದು ಅಭಿಪ್ರಾಯಪಟ್ಟರು.

‘ಕಾಯ್ದೆಯ ಸೆಕ್ಷನ್ 7ಡಿ ಪ್ರಕಾರ ಲೋಕೋಪಯೋಗಿ ಹಾಗೂ ನೀರಾವರಿ ರೀತಿಯ ಕಾಮಗಾರಿಗಳಲ್ಲಿ 10 ವರ್ಷಗಳಲ್ಲಿ ₹ 20 ಸಾವಿರ ಕೋಟಿ ಅನುದಾನವನ್ನು ಪರಿಶಿಷ್ಟರ ಅಭಿವೃದ್ಧಿಗೆ ಬಳಸಲಾಗಿದೆ ಎಂದು ತೋರಿಸಲಾಗಿದೆ. ಕಾಯ್ದೆಯ 7ಡಿ ಸೆಕ್ಷನ್ ಅನ್ನು ರದ್ದುಪಡಿಸಬೇಕು. ಅದರ ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ನಿಗಮಗಳಿಗೆ ಹಂಚಿಕೆ ಮಾಡಬೇಕು. ಆಗ ಮಾತ್ರ ಈ ಅನುದಾನವನ್ನು ಪರಿಶಿಷ್ಟ ಕುಟುಂಬಗಳ ಆರ್ಥಿಕ ಸಬಲೀಕರಣಕ್ಕೆ ಪರಿಣಾಮಕಾರಿಯಾಗಿ ಬಳಸಲು ಸಾಧ್ಯ ಎಂದು’ ಎಂದು ಮಹೇಶ್ ಸಲಹೆ ನೀಡಿದರು.

ವಿಧಾನಸಭೆಯಲ್ಲಿ ಸೋಮವಾರ ಸಚಿವರಾದ ಬಿ.ಸಿ. ನಾಗೇಶ್, ವಿ.ಸುನೀಲ್ ಕುಮಾರ್, ಬಿ.ಶ್ರೀರಾಮುಲು ಚರ್ಚೆ ನಡೆಸಿದರು – ಪ್ರಜಾವಾಣಿ ಚಿತ್ರ

‘ಅಡಿಕೆ ಅಧ್ಯಯನಕ್ಕೆ ಕೇಂದ್ರ ಸಮಿತಿ’

ಬೆಂಗಳೂರು: ಅಡಿಕೆ ಆರೋಗ್ಯಕ್ಕೆ ಹಾನಿಕಾರಕವಲ್ಲ ಎಂಬ ಬಗ್ಗೆ ಅಧ್ಯಯನಕ್ಕೆ ಸಮಿತಿ ರಚನೆಗೆ ಕೇಂದ್ರ ಕೃಷಿ ಸಚಿವರು ಒಪ್ಪಿಗೆ ನೀಡಿದ್ದಾರೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಸೋಮವಾರ ವಿಧಾನಸೌಧದಲ್ಲಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಅವರು, ಕರ್ನಾಟಕದ ಅಡಕೆ ಕಾರ್ಯಪಡೆ ಸದಸ್ಯರು ಇತ್ತೀಚೆಗೆ ದೆಹಲಿಯಲ್ಲಿ ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್, ಕೃಷಿ ಇಲಾಖೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಅಡಿಕೆಯಿಂದ ಹಾನಿ ಆಗುತ್ತದೆ ಎಂಬ ಅರ್ಥದಲ್ಲಿ ಹೇಳಿಕೆ ನೀಡಬಾರದು. ಇದರಿಂದ ಅಡಿಕೆ ಮಾರುಕಟ್ಟೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಮನವಿ ಮಾಡಲಾಯಿತು. ಅದಕ್ಕೆ ಅವರು ಒಪ್ಪಿದ್ದಾರೆ ಎಂದು ಆರಗ ತಿಳಿಸಿದರು.

ಹಿಂದಿನ ಕಾಂಗ್ರೆಸ್ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ಅಫಿಡವಿಟ್ ಅನ್ನು ತೆಗೆಯುವ ಸಲುವಾಗಿ ನಾವು ಪ್ರಯತ್ನ ಮಾಡ್ತಿದ್ದೇವೆ ಎಂದು ಹೇಳಿದರು.

ಪಂಚಾಯತ್ ರಾಜ್ ತಿದ್ದುಪಡಿ ಮಸೂದೆ ಮಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷೆಗೊಳಗಾದ ಮತ್ತು ಶಿಸ್ತುಕ್ರಮಕ್ಕೆ ಒಳಗಾದ ಸರ್ಕಾರಿ ನೌಕರರು, ಸಹಕಾರಿ ಸಂಸ್ಥೆಗಳ ನೌಕರರು ಮತ್ತು ಪದಾಧಿಕಾರಿಗಳು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ನಿಷೇಧಿಸುವ ಪ್ರಸ್ತಾವವುಳ್ಳ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ತಿದ್ದುಪಡಿ ಮಸೂದೆ– 2022 ಅನ್ನು ವಿಧಾನ ಸಭೆಯಲ್ಲಿ ಸೋಮವಾರ ಮಂಡಿಸಲಾಯಿತು.

ತಾಲ್ಲೂಕಿನ ಒಟ್ಟು ಜನಸಂಖ್ಯೆಯ ಆಧಾರದಲ್ಲಿ ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಸಂಖ್ಯೆಯನ್ನು ನಿರ್ಧರಿಸುವ ಅಂಶವೂ ಮಸೂದೆಯಲ್ಲಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ಮಸೂದೆ ಮಂಡಿಸಿದರು.

ಕೇಂದ್ರ ಅಥವಾ ರಾಜ್ಯ ಸರ್ಕಾರದ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಗಾದವರು ಅಥವಾ ಸೇವೆಯಿಂದ ತೆಗೆದು ಹಾಕಿದವರು ಅಥವಾ ವಜಾಗೊಂಡಿರುವ ವ್ಯಕ್ತಿಗಳು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸ್ಪರ್ಧಿಸುವುದನ್ನು ಈ ತಿದ್ದುಪಡಿ ನಿರ್ಬಂಧಿಸುತ್ತದೆ. ಸಹಕಾರ ಸಂಘಗಳ ನೌಕರರಿಗೂ ಈ ನಿರ್ಬಂಧ ಅನ್ವಯವಾಗುತ್ತದೆ. ಸಹಕಾರ ಸಂಸ್ಥೆಗಳ ಅಧ್ಯಕ್ಷ ಅಥವಾ ಸದಸ್ಯ ಸ್ಥಾನದಿಂದ ವಜಾಗೊಂಡವರು ಕೂಡ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶವಿರುವುದಿಲ್ಲ.

ಜನಸಂಖ್ಯೆ ಆಧಾರದಲ್ಲಿ ಕ್ಷೇತ್ರ: ಎರಡು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ತಾಲ್ಲೂಕುಗಳಲ್ಲಿ ಪ್ರತಿ 12,000 ಜನರಿಗೆ ಒಬ್ಬ ತಾಲ್ಲೂಕು ಪಂಚಾಯಿತಿ ಸದಸ್ಯ ಇರಬೇಕು. ಒಂದು ಲಕ್ಷದಿಂದ ಎರಡು ಲಕ್ಷದವರೆಗಿನ ಜನಸಂಖ್ಯೆ ಇರುವ ತಾಲ್ಲೂಕುಗಳಲ್ಲಿ ಪ್ರತಿ 10,000 ಜನರಿಗೆ ಒಬ್ಬ ತಾಲ್ಲೂಕು ಪಂಚಾಯಿತಿ ಸದಸ್ಯರಿರಬೇಕು. ಒಟ್ಟು ಸದಸ್ಯರ ಕನಿಷ್ಠ ಸಂಖ್ಯೆ ಇರಬೇಕು ಎಂಬ ತಿದ್ದುಪಡಿಯನ್ನೂ ಈ ಮಸೂದೆ ಒಳಗೊಂಡಿದೆ.

50,000 ದಿಂದ ಒಂದು ಲಕ್ಷ ಜನಸಂಖ್ಯೆ ಹೊಂದಿರುವ ತಾಲ್ಲೂಕು ಪಂಚಾಯಿತಿಗಳಲ್ಲಿ ಕನಿಷ್ಠ ಒಂಬತ್ತು ಮತ್ತು 50,000ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ತಾಲ್ಲೂಕು ಪಂಚಾಯಿತಿಗಳಲ್ಲಿ ಕನಿಷ್ಠ ಏಳು ಸದಸ್ಯರಿರಬೇಕು ಎಂಬ ಅಂಶವೂ ಇದೆ.

ತರೀಕೆರೆ, ಕಡೂರು ಮತ್ತು ಅಜ್ಜಂಪುರ ತಾಲ್ಲೂಕುಗಳನ್ನು ಹೊರತುಪಡಿಸಿದಂತೆ ಚಿಕ್ಕಮಗಳೂರು, ಉತ್ತರ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿ ಪ್ರತಿ 18,000ದಿಂದ 25,000 ಜನಸಂಖ್ಯೆಗೆ ಒಬ್ಬ ತಾಲ್ಲೂಕು ಪಂಚಾಯಿತಿ ಸದಸ್ಯನ ಆಯ್ಕೆಗೆ ಅವಕಾಶ ಕಲ್ಪಿಸುವ ತಿದ್ದುಪಡಿಯೂ ಸೇರಿದೆ.

ಜಿಲ್ಲಾ ಯೋಜನಾ ಸಮಿತಿಗೆ ಜಿಲ್ಲಾ ಉಸ್ತುವಾರಿ ಸಚಿವರನ್ನು ಅಧ್ಯಕ್ಷರನ್ನಾಗಿ, ಜಿಲ್ಲಾ ಕೇಂದ್ರದಲ್ಲಿನ ನಗರಪಾಲಿಕೆ ಮೇಯರ್ ಅಥವಾ ಪುರಸಭೆಗಳ ಅಧ್ಯಕ್ಷರನ್ನು ಉಪಾಧ್ಯಕ್ಷರನ್ನಾಗಿ ನೇಮಿಸಲು ಅವಕಾಶ ಕಲ್ಪಿಸುವ ತಿದ್ದುಪಡಿಯೂ ಮಸೂದೆಯಲ್ಲಿದೆ. ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರನ್ನು ವಿಶೇಷ ಆಹ್ವಾನಿತರಾಗಿ ಆಹ್ವಾನಿಸಲು ಅವಕಾಶ ನೀಡುವ ಅಂಶವೂ ಇದೆ.

ಎರಡು ಮಸೂದೆಗಳಿಗೆ ಅಂಗೀಕಾರ

ಭೂಸ್ವಾಧೀನ, ಪರಿಹಾರ ಮತ್ತು ಪುನರ್ವಸತಿ ಕಾಯ್ದೆ–2013ರ ಪ್ರಕಾರವೇ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲೂ ಭೂಸ್ವಾಧೀನ ಪ್ರಕ್ರಿಯೆ ನಡೆಸುವುದನ್ನು ಕಡ್ಡಾಯಗೊಳಿಸುವ ‘ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ತಿದ್ದುಪಡಿ ಮಸೂದೆ–2022’ಕ್ಕೆ ವಿಧಾನಸಭೆ ಸೋಮವಾರ ಅಂಗೀಕಾರ ನೀಡಿತು.

ಬಂದೀಖಾನೆಗಳಲ್ಲಿ ಮೊಬೈಲ್ ಮತ್ತು ಇತರ ಸಂಪರ್ಕ ಸಾಧನಗಳನ್ನು ನಿಷೇಧಿಸುವ ಹಾಗೂ ಪರೋಲ್ ಮೇಲೆ ಹೊರ ಬಂದು ನಾಪತ್ತೆಯಾಗುವವರ ಶಿಕ್ಷೆ ಪ್ರಮಾಣ ಹೆಚ್ಚಿಸುವ ಮತ್ತು ಜಾಮೀನು ನೀಡಿದವರಿಗೂ ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸುವ ‘ಕರ್ನಾಟಕ ಬಂದೀಖಾನೆಗಳ ತಿದ್ದುಪಡಿ ಮಸೂದೆ –2022’ಕ್ಕೂ ವಿಧಾನಸಭೆಯ ಅಂಗೀಕಾರ ದೊರಕಿತು.

ಸುದ್ದಿ 2 ನಿಮಿಷ

ಆಗಸ್ಟ್‌ನಲ್ಲಿ ನಾಲ್ಕನೇ ಅಲೆ ಸಾಧ್ಯತೆ: ಸಚಿವ ಸುಧಾಕರ್

ಬೆಂಗಳೂರು: ‘ಐಐಟಿ ಕಾನ್ಪುರ ತಂಡದ ಅಧ್ಯಯನ ಪ್ರಕಾರ ಆಗಸ್ಟ್‌ನಲ್ಲಿ ಕೋವಿಡ್ ನಾಲ್ಕನೇ ಅಲೆ ಬರುವ ಸಾಧ್ಯತೆ ಇದೆ. ಆದರೆ, ದೇಶದಲ್ಲಿ ಲಸಿಕಾ ಅಭಿಯಾನ ವ್ಯಾಪಕವಾಗಿ ಕೈಗೊಂಡಿರುವುದರಿಂದ ಆತಂಕ ಪಡುವ ಅಗತ್ಯ ಇಲ್ಲ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಸೋಮವಾರ ಶೂನ್ಯ ವೇಳೆಯಲ್ಲಿ ಶಶಿಲ್ ಜಿ. ನಮೋಶಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಹೊಸ ತಳಿ ಬಿಎ2 ಫಿಲಿಪ್ಪೀನ್ಸ್‌ನಲ್ಲಿ ಕಾಣಿಸಿಕೊಂಡಿದ್ದು, 40 ದೇಶಗಳಲ್ಲಿ ಹಬ್ಬಿದೆ. ಹೀಗಾಗಿ, ಎಚ್ಚರಿಕೆ ಕ್ರಮಗಳು ಅಗತ್ಯ’ ಎಂದು ವಿವರಿಸಿದರು.

‘ಮುಖ್ಯಮಂತ್ರಿ ಅವರ ಜತೆಯೂ ಈ ಬಗ್ಗೆ ಸಭೆ ನಡೆಸಲಾಗುವುದು. ರಾಜ್ಯದಲ್ಲಿ 10.25 ಕೋಟಿಗೂ ಹೆಚ್ಚು ಲಸಿಕಾ ಡೋಸ್‌ಗಳನ್ನು ನೀಡಲಾಗಿದೆ. ಇದರಲ್ಲಿ 4.97 ಕೋಟಿಗೂ ಹೆಚ್ಚು ಮಂದಿ ಮೊದಲ ಡೋಸ್ ಪಡೆದಿದ್ದಾರೆ. 4.76 ಕೋಟಿಗೂ ಹೆಚ್ಚು ಮಂದಿ ಎರಡನೇ ಡೋಸ್ ಪಡೆದಿದ್ದು, ಶೇಕಡ 96 ರಷ್ಟು ಪ್ರಗತಿ ಸಾಧಿಸಲಾಗಿದೆ. 12 ವರ್ಷ ಮೇಲ್ಪಟ್ಟ ಮಕ್ಕಳಿಗೂ ಲಸಿಕೆ ನೀಡುವ ಕಾರ್ಯ ತ್ವರಿತಗತಿಯಲ್ಲಿ ಸಾಗಿದೆ’ ಎಂದು ವಿವರಿಸಿದರು.

‘ಕೋವಿಡ್ ತಡೆಯಲು ಕಡ್ಡಾಯವಾಗಿ ಮಾಸ್ಕ್ ಧರಿಸುವುದು ಸೇರಿದಂತೆ ಎಲ್ಲ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಮೂರು ಅಲೆಗಳಿಂದಾಗಿ ಸಾಕಷ್ಟು ಅನುಭವ ದೊರೆತಿದ್ದು, ಎಲ್ಲ ರೀತಿಯಲ್ಲೂ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. 55,256 ಆಮ್ಲಜನಕ ಹೊಂದಿರುವ ಹಾಸಿಗೆಗಳಿವೆ. 165 ಪ್ರಯೋಗಾಲಯಗಳಿವೆ. ಹೀಗಾಗಿ, ನಾಲ್ಕನೇ ಅಲೆ ಬಂದರೂ ಪರಿಣಾಮಕಾರಿ ಎದುರಿಸುವ ಸಾಮರ್ಥ್ಯ ನಮಗಿದೆ’ ಎಂದು ತಿಳಿಸಿದರು.

1,884 ಮಕ್ಕಳಲ್ಲಿ ಟೈಪ್–1 ಮಧುಮೇಹ

ಬೆಂಗಳೂರು: ‘ರಾಜ್ಯದಲ್ಲಿ 18 ವರ್ಷದ ಒಳಗಿನ 1,884 ಮಕ್ಕಳಲ್ಲಿ ಟೈಪ್–1 ಮಧುಮೇಹ ಕಂಡು ಬಂದಿದೆ. ಶೀಘ್ರ ಇನ್ನೊಂದು ಬಾರಿ ಶಾಲೆಗಳಲ್ಲಿ ಮಕ್ಕಳ ಸಮೀಕ್ಷೆ ಕೈಗೊಳ್ಳಲಾಗುವುದು’ ಎಂದು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿಯ ಕೆ.ಎಸ್. ನವೀನ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಆರೋಗ್ಯ ನಂದನ ಎನ್ನುವ ವಿಶೇಷ ಅಭಿಯಾನದ ಅಡಿಯಲ್ಲಿ ಒಟ್ಟು 78.32 ಲಕ್ಷ ಮಕ್ಕಳ ಆರೋಗ್ಯ ತಪಾಸಣೆಯನ್ನು ಕೈಗೊಳ್ಳಲಾಗಿತ್ತು. ಇದರಲ್ಲಿ 1,884 ಮಕ್ಕಳು ಮಧುಮೇಹದಿಂದ ಬಳಲುತ್ತಿರುವುದನ್ನು ಗುರುತಿಸಲಾಗಿದೆ’ ಎಂದು ವಿವರಿಸಿದರು.

‘ತಾಲ್ಲೂಕು ಮಟ್ಟದಲ್ಲಿ ಟೈಪ್–1 ಮಧುಮೇಹ ಪತ್ತೆ ಮಾಡಲು ಈಗಾಗಲೇ ಪ್ರಯೋಗಾಲಯಗಳ ವ್ಯವಸ್ಥೆ ಮಾಡಲಾಗಿದ್ದು, ಮಕ್ಕಳಿಗೆ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ಇನ್ಸೂಲಿನ್ ಹಾಗೂ ಇತರೆ ಔಷಧಗಳನ್ನು ಸಹ ಉಚಿತವಾಗಿ ನೀಡಲಾಗುತ್ತಿದೆ’ ಎಂದರು.

‘ನಕಲಿ ರಸಗೊಬ್ಬರ ಪೂರೈಕೆ: ರೈತರು ಹೈರಾಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ನಕಲಿ ರಸಗೊಬ್ಬರ ಪೂರೈಕೆ ದಂಧೆ ನಡೆಯುತ್ತಿದೆ. ಇದರಿಂದಾಗಿ ರೈತರು ಹೈರಾಣಾಗಿದ್ದು, ಬೀದಿಗೆ ಬೀಳುವ ಸ್ಥಿತಿ ಎದುರಿಸುತ್ತಿದ್ದಾರೆ’ ಎಂದು ಜೆಡಿಎಸ್ ಸದಸ್ಯ ಡಿ.ಸಿ.ತಮ್ಮಣ್ಣ ಅವರು ವಿಧಾನಸಭೆಯಲ್ಲಿ ಆರೋಪಿಸಿದರು.

ಇಲಾಖೆಗಳ ಅನುದಾನ ಬೇಡಿಕೆ ಮೇಲಿನ ಚರ್ಚೆಯಲ್ಲಿ ಸೋಮವಾರ ಮಾತನಾಡುವಾಗ ಅವರು ಈ ವಿಚಾರ ಪ್ರಸ್ತಾಪಿಸಿದರು. ಇದಕ್ಕೆ ದನಿಗೂಡಿಸಿದ ಜೆಡಿಎಸ್ ಸದಸ್ಯ ಕೆ.ಅನ್ನದಾನಿ, ‘ನಕಲಿ ರಸಗೊಬ್ಬರ ದಂಧೆ ಬೆಳಕಿಗೆ ಬಂದ ಬಳಿಕವೂ ಯಾರೊಬ್ಬರ ವಿರುದ್ಧವೂ ಕ್ರಮವಾಗಿಲ್ಲ. ಅನ್ನದಲ್ಲೇ ವಿಷ ಹಾಕುವ ಸ್ಥಿತಿ ನಿರ್ಮಾಣವಾಗಿದ್ದು ವಿಪರ್ಯಾಸ’ ಎಂದು ಬೇಸರ ವ್ಯಕ್ತಪಡಿಸಿದರು.

ಡಿ.ಸಿ.ತಮ್ಮಣ್ಣ

‘ಮಂಡ್ಯ ಜಿಲ್ಲೆಯ ನೀರಾವರಿಯ ಮುಖ್ಯ ನಾಲೆಗಳ ಆಧುನೀಕರಣಕ್ಕೆ ₹ 522 ಕೋಟಿಯ ಸಮಗ್ರ ಯೋಜನಾ ವರದಿ ಸಿದ್ಧಪಡಿಸಲಾಗಿತ್ತು. ಸಮ್ಮಿಶ್ರ ಸರ್ಕಾರದ ಬಜೆಟ್‌ನಲ್ಲಿ ಈ ಯೋಜನೆಗೆ ₹ 300 ಕೋಟಿ ಅನುದಾನವನ್ನೂ ಒದಗಿಸಲಾಗಿತ್ತು. ಕಾಮಗಾರಿಗೆ 2019 ರಲ್ಲೇ ಕಾರ್ಯಾದೇಶ ನೀಡಿದ್ದರೂ ಕೆಲಸ ಇನ್ನೂ ಶುರುವಾಗಿಲ್ಲ. ಈ ಕಾಮಗಾರಿ ನಡೆಸಲು ರೈತರು ಒಂದು ವರ್ಷದ ಮಟ್ಟಿಗೆ ಬೆಳೆ ಬೆಳೆಯುವುದನ್ನು ಸ್ಥಗಿತಗೊಳಿಸಬೇಕಾಗುತ್ತದೆ. ಅದಕ್ಕೆ ರೈತರು ಒಪ್ಪುವುದಿಲ್ಲ. ಈ ಯೋಜನೆಯ ಹಣವನ್ನು ಪಿಕ್‌ಅಪ್ ನಾಲೆಗಳ ಅಭಿವೃದ್ಧಿಗಾದರೂ ಬಳಸಲು ಅನುಮತಿ ನೀಡಬೇಕು’ ಎಂದು ಡಿ.ಸಿ.ತಮ್ಮಣ್ಣ ಕೋರಿದರು.

‘ರೈತರ ಕುಟುಂಬದ ವರಮಾನವು ಕೂಲಿ ಕಾರ್ಮಿಕರ ಕುಟುಂಬದ ವರಮಾನಕ್ಕಿಂತಲೂ ಕಡಿಮೆ ಇದೆ. ರೈತ ಕುಟುಂಬದ ಒಬ್ಬ ಸದಸ್ಯನಿಗೆ ನಿರುದ್ಯೋಗ ಭತ್ಯೆ ನೀಡಬೇಕು. ಕೃಷಿ ಪಂಪ್‌ಸೆಟ್‌ಗಳಿಗೆ ನಿತ್ಯ ಕನಿಷ್ಠ 15 ಗಂಟೆ ವಿದ್ಯುತ್ ಪೂರೈಸಬೇಕು. ಗದ್ದೆ ಬಯಲು ರಸ್ತೆ ಅಭಿವೃದ್ಧಿಗೆ ಸರ್ಕಾರ ಆದ್ಯತೆ ನೀಡಬೇಕು’ ಎಂದು ಅವರು ಒತ್ತಾಯಿಸಿದರು.

‘ಈಗಲೂ ಶೇ 25 ರಷ್ಟು ಗ್ರಾಮಗಳಿಗೂ ಶುದ್ಧ ಕುಡಿಯುವ ನೀರು ಪೂರೈಕೆ ವ್ಯವಸ್ಥೆ ಇಲ್ಲ. ಅಂತರ್ಜಲ ಕಲುಷಿತಗೊಂಡು ಕೊಳವೆ ಬಾವಿಗಳ ನೀರು ಲವಣಾಂಶಗಳಿಂದ ಕೂಡಿದೆ. ಕುಡಿಯಲು ಯೋಗ್ಯವಲ್ಲದ ನೀರನ್ನೇ ಬಳಸುವ ಸ್ಥಿತಿ ಅನೇಕ ಗ್ರಾಮಗಳಲ್ಲಿದೆ. ಈ ಕೊರತೆ ನೀಗಿಸಲೆಂದೇ ಸಮ್ಮಿಶ್ರ ಸರ್ಕಾರವು ಜಲಧಾರೆ ಕಾರ್ಯಕ್ರಮವನ್ನು ಆರಂಭಿಸಿತ್ತು. ಅದನ್ನು ಈಗಿನ ಸರ್ಕಾರ ಕೈಬಿಟ್ಟಿದೆ. ಕೇಂದ್ರದ ನೆರವಿನಿಂದ ಜಾರಿಗೊಳಿಸುತ್ತಿರುವ ಜಲಜೀವನ್ ಅಭಿಯಾನದಲ್ಲಿ ಹಳೆ ಕೊಳವೆಗಳನ್ನು ಕಿತ್ತು ಹೊಸ ಕೊಳವೆಗಳನ್ನು ಅಳವಡಿಸುವ ಕೆಲಸ ಮಾತ್ರ ಆಗುತ್ತಿದೆ’ ಎಂದು ಟೀಕಿಸಿದರು.

‘ಸೂಳೆಕೆರೆ ಹೆಸರು ಬದಲಿಸಿ’

ಹಿಂದಿನ ಕಾಲದಲ್ಲಿ ಕೆಲವರು ಪ್ರೇಯಸಿಯರ ನೆನಪಿಗಾಗಿ ಕಟ್ಟಿಸಿದ ಕೆರೆಗಳಿಗೆ ಸೂಳೆ ಕೆರೆ ಎಂದು ಹೆಸರಿಸಿದ್ದರು. ಗ್ರಾಮಗಳಿಗೆ ಜಾತಿ ಸೂಚಕ ಹೆಸರು ಇಡಬಾರದು ಎಂದು ಸದನದಲ್ಲಿ ಚರ್ಚೆ ನಡೆದಿದೆ. ಅಂತೆಯೇ ‘ಸೂಳೆ ಕೆರೆ’ ಎಂಬ ಹೆಸರುಗಳನ್ನೂ ಬದಲಾಯಿಸಬೇಕು. ಅವುಗಳನ್ನು ಅನ್ನಪೂರ್ಣೇಶ್ವರಿ ಕೆರೆ ಎಂದು ಕರೆಯಬಹುದು’ ಎಂದು ಡಿ.ಸಿ.ತಮ್ಮಣ್ಣ ಸಲಹೆ ನೀಡಿದರು.

‘ಕೃಷಿ ಚಿಕಿತ್ಸಾಲಯಕ್ಕೆ ಅನುಮತಿ ನೀಡಿ’

‘ಕೃಷಿ ವಿಶ್ವವಿದ್ಯಾಲಯಗಳು ಪದವೀಧರರನ್ನು ನಿರ್ಮಿಸುವ ಕಾರ್ಖಾನೆಗಳಂತಾಗಿವೆ. ಕೃಷಿ ಪದವೀಧರರೂ ಗದ್ದೆಗಿಳಿಯುತ್ತಿಲ್ಲ. ಅವರು ಕೃಷಿ ಚಿಕಿತ್ಸಾಲಯಗಳನ್ನು ನಡೆಸಲು ಸರ್ಕಾರ ಅನುಮತಿ ನೀಡಬೇಕು. ಇದರಿಂದ ಅವರ ಜೀವನೋಪಾಯಕ್ಕೆ ದಾರಿಯಾಗಲಿದೆ. ಅವರ ಜ್ಞಾನವು ಕೃಷಿಕರಿಗೆ ದೊರಕಲಿದೆ’ ಎಂದು ಡಿ.ಸಿ.ತಮ್ಮಣ್ಣ ತಿಳಿಸಿದರು.

ಪ್ರಾಂಶುಪಾಲರ 310 ಹುದ್ದೆ ಭರ್ತಿಗೆ ಶೀಘ್ರ ಚಾಲನೆ

ಪ್ರಜಾವಾಣಿ ವಾರ್ತೆ

ಅಶ್ವತ್ಥನಾರಾಯಣ

ಬೆಂಗಳೂರು: ‘ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ 310 ಪ್ರಾಂಶುಪಾಲರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಮೂಲಕ ಶೀಘ್ರ ಚಾಲನೆ ನೀಡಲಾಗುವುದು’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಸೋಮವಾರ ಅ.ದೇವೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯ 440 ಸರ್ಕಾರಿ ಪದವಿ ಕಾಲೇಜುಗಳಲ್ಲಿ ಮಂಜೂರಾಗಿರುವ ಎಲ್ಲ 412 ಪ್ರಾಂಶುಪಾಲರ ಹುದ್ದೆಗಳು ಖಾಲಿ ಉಳಿದಿವೆ. ಸದ್ಯಕ್ಕೆ ಸೇವಾ ಜೇಷ್ಠತೆ ಆಧಾರದಲ್ಲಿ ಹಿರಿಯ ಬೋಧಕರು ಪ್ರಭಾರ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ’ ಎಂದು ವಿವರಿಸಿದರು.

‘ಪ್ರಾಂಶುಪಾಲರ ಹುದ್ದೆಗೆ ಬಡ್ತಿ ನೀಡಿ ಭರ್ತಿ ಮಾಡಲು ನಿಯಮಗಳಲ್ಲಿ ಅವಕಾಶ ಇಲ್ಲ. ಹೀಗಾಗಿ, ಪ್ರಾಂಶುಪಾಲರ ಖಾಲಿ ಹುದ್ದೆಗಳನ್ನು ಯುಜಿಸಿ ನಿಯಮಗಳ ಅನ್ವಯ ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗುತ್ತಿದೆ’ ಎಂದು ವಿವರಿಸಿದರು.

15 ಸಾವಿರ ಶಿಕ್ಷಕರ ನೇಮಕ: ಅರ್ಜಿ ಸಲ್ಲಿಸಲು ಏಪ್ರಿಲ್ 22 ಕೊನೆ ದಿನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ (6ರಿಂದ 8 ತರಗತಿವರೆಗೆ) 15 ಸಾವಿರ ಪದವೀಧರ ಶಿಕ್ಷಕರ (ಜಿಪಿಟಿ) ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಮಾಡಿಕೊಳ್ಳಲು ರಾಜ್ಯ ಸರ್ಕಾರ ಸೋಮವಾರ ಅಧಿಸೂಚನೆ ಹೊರಡಿಸಿದೆ. ಮೇ 21 ಮತ್ತು 22ರಂದು ಸ್ಪರ್ಧಾತ್ಮಕ ಪರೀಕ್ಷೆ (ಸಿಇಟಿ) ನಡೆಯಲಿದೆ.

ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಿಗೆ ಮೀಸಲಿಟ್ಟಿರುವ 5 ಸಾವಿರ ಹುದ್ದೆಗಳು ಇದರಲ್ಲಿ ಸೇರಿವೆ. ಆಂಗ್ಲ ಭಾಷೆಯ 1,500, ಗಣಿತ ಮತ್ತು ವಿಜ್ಞಾನ 6,500 ಜೀವ ವಿಜ್ಞಾನದ (ಮಕ್ಕಳು ಮತ್ತು ಶಿಕ್ಷಕರ ಅನುಪಾತಕ್ಕೆ ಅನುಗುಣವಾಗಿ ಎರಡನೇ ಹುದ್ದೆ) 2 ಸಾವಿರ ಹಾಗೂ ಸಮಾಜ ಪಾಠಗಳ 5 ಸಾವಿರ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ. ಅಭ್ಯರ್ಥಿಗಳು ಶಿಕ್ಷಣ ಇಲಾಖೆಯ ವೆಬ್‌ಸೈಟ್ ಆನ್‌ಲೈನ್‌ನಲ್ಲಿ ಏ. 22ರವರೆಗೆ ಅರ್ಜಿ ಸಲ್ಲಿಸಬಹುದು.

ಆನ್‌ಲೈನ್ ಅರ್ಜಿಭರ್ತಿ ಮಾಡುವ ಮೊದಲು ಇಲಾಖೆಯ ವೆಬ್‌ಸೈಟ್‌ನಲ್ಲಿ ಯೂಸರ್ ನೇಮ್ ಮತ್ತು ಪಾಸ್‌ವರ್ಡ್ ನಮೂದಿಸಿ ನೋಂದಾಯಿಸಿಕೊಳ್ಳಬೇಕು. ನೋಂದಣಿಗೆ ಆಧಾರ ಸಂಖ್ಯೆ ಕಡ್ಡಾಯ. ಪರಿಶಿಷ್ಟ ಜಾತಿ, ಪಂಗಡ, ಪ್ರವರ್ಗ-1 ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಒಂದು ಹುದ್ದೆ ಅರ್ಜಿಗೆ ₹ 625ಮತ್ತು ಎರಡು ಹುದ್ದೆಗೆ ₹ 1,250 ಶುಲ್ಕ ನಿಗದಿ ಮಾಡಲಾಗಿದೆ. ಇತರ ವರ್ಗಗಳ ಅಭ್ಯರ್ಥಿಗಳಿಗೆ ಒಂದು ಹುದ್ದೆ ಅರ್ಜಿಗೆ ₹ 1,250, ಎರಡು ಹುದ್ದೆಗೆ ₹ 2,500 ಶುಲ್ಕ ಪಾವತಿಸಬೇಕು.

ಮೇಕೆದಾಟು ಯೋಜನೆ: ಕರ್ನಾಟಕದ ವಿರುದ್ಧ ನಿರ್ಣಯ

ಚೆನ್ನೈ (ಪಿಟಿಐ): ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಬಳಿ ಅಣೆಕಟ್ಟು ನಿರ್ಮಿಸುವ ಕರ್ನಾಟಕ ಸರ್ಕಾರದ ಯೋಜನೆ ‘ಏಕಪಕ್ಷೀಯ’ವಾದದ್ದು ಎಂದು ಖಂಡಿಸಿರುವ ತಮಿಳುನಾಡು, ಈ ಕುರಿತು ವಿಧಾನಸಭೆಯಲ್ಲಿ ಸರ್ವಾನುಮತದ ನಿರ್ಣಯ ಅಂಗೀಕರಿಸಿದೆ. ಅಲ್ಲದೆ ಈ ಯೋಜನೆ ಕುರಿತ ಕರ್ನಾಟಕ ಸರ್ಕಾರದ ಪ್ರಸ್ತಾವನೆಯನ್ನು ತಿರಸ್ಕರಿಸುವಂತೆ ಕೇಂದ್ರವನ್ನು ಆಗ್ರಹಿಸಿದೆ.

ಈ ಸಂಬಂಧ ನಿರ್ಣಯ ಮಂಡಿಸಿದ ಜಲಸಂಪನ್ಮೂಲ ಸಚಿವ ದೊರೈಮುರುಗನ್, ದಶಕಗಳಿಂದ ನೆರೆಯ ರಾಜ್ಯವು ತಮಿಳುನಾಡಿಗೆ ಸಮಸ್ಯೆ ಉಂಟು ಮಾಡುತ್ತಿದೆ. ಈಗ ಮೇಕೆದಾಟು ಬಳಿ ಅಣೆಕಟ್ಟು (ಸಮತೋಲನ ಜಲಾಶಯ) ಯೋಜನೆಯ ನಿರ್ಧಾರ ಕೈಗೊಳ್ಳುವ ಮೂಲಕ ಕರ್ನಾಟಕವು ಸುಪ್ರೀಂ ಕೋರ್ಟ್ ತೀರ್ಪಿಗೆ ಅಗೌರವ ತೋರಿದೆ ಎಂದು ಹೇಳಿದರು.

‘ದೇಶದಲ್ಲಿ ಸಂಯುಕ್ತ ವ್ಯವಸ್ಥೆ ಎಲ್ಲಿದೆ. ಸುಪ್ರೀಂ ಕೋರ್ಟ್ ಆದೇಶವನ್ನು ಧಿಕ್ಕರಿಸುವ ಮತ್ತು ತಮಿಳುನಾಡಿಗೆ ಪೂರ್ಣ ಪ್ರಮಾಣದ ನೀರನ್ನು ಹರಿಸದ ರಾಜ್ಯ ಇಲ್ಲಿದೆ. ನಾವು ಈಗ ಒಗ್ಗಟ್ಟಾಗಿ ಹೋರಾಟ ಮಾಡದಿದ್ದರೆ ನಮ್ಮ ಹಕ್ಕುಗಳನ್ನು ಕಳೆದುಕೊಳ್ಳುತ್ತೇವೆ. ಭವಿಷ್ಯದ ಪೀಳಿಗೆ ನಮ್ಮನ್ನು ಶಪಿಸಬಹುದು’ ಎಂದ ಅವರು, ಪಕ್ಷಭೇದ ಮರೆತು ನಿರ್ಣಯವನ್ನು ಬೆಂಬಲಿಸುವಂತೆ ಮನವಿ ಮಾಡಿದರು.

ತಮಿಳುನಾಡು ನಿರ್ಣಯ: ಬೊಮ್ಮಾಯಿ ಖಂಡನೆ

ಬೆಂಗಳೂರು: ತಮಿಳುನಾಡು ವಿಧಾನಸಭೆ ಸೋಮವಾರ ಮೇಕೆದಾಟು ಯೋಜನೆ ವಿರುದ್ಧ ಕೈಗೊಂಡಿರುವ ನಿರ್ಣಯ ಕಾನೂನು ಬಾಹಿರವಾಗಿದ್ದು, ಇದನ್ನು ಕರ್ನಾಟಕ ಖಂಡಿಸುತ್ತದೆ ಮತ್ತು ಮೇಕೆದಾಟು ಯೋಜನೆ ನಿರ್ಮಾಣಕ್ಕೆ ಬದ್ಧರಾಗಿದ್ದೇವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ಒಂದು ರಾಜ್ಯ ಇನ್ನೊಂದು ರಾಜ್ಯದ ಹಕ್ಕನ್ನು ಆಕ್ರಮಿಸಿಕೊಳ್ಳುವಂತಹ ಜನ ವಿರೋಧಿ ನಿರ್ಣಯ ಇದಾಗಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ತಮಿಳುನಾಡಿಗೆ ನಂಬಿಕೆ ಇಲ್ಲದ ನಿರ್ಣಯ ಇದಾಗಿದೆ ಎಂದಿದ್ದಾರೆ.



ಮೇಕೆದಾಟು ಯೋಜನೆ ರಾಜ್ಯದಲ್ಲಿ ಹುಟ್ಟುವ ಕಾವೇರಿ ನದಿಗೆ ಸಂಬಂಧಿಸಿದ್ದಾಗಿದೆ. ಕಾವೇರಿ ನ್ಯಾಯಾಧಿಕರಣ ಅನ್ವಯ ತಮಿಳುನಾಡಿಗೆ 177.25 ಟಿಎಂಸಿ ನೀರನ್ನು ಕೊಟ್ಟ ನಂತರ ಉಳಿದ ನೀರಿನ ಮೇಲೆ ಕರ್ನಾಟಕದ ಹಕ್ಕು ಇದೆ. ತಮಿಳುನಾಡಿನ ಈ ರಾಜಕೀಯ ನಿರ್ಧಾರವನ್ನು ಲೆಕ್ಕಿಸದೇ ಮೇಕೆದಾಟು ಯೋಜನೆ ಕೈಗೆತ್ತಿಕೊಳ್ಳಲು ಸರ್ಕಾರ ಎಲ್ಲ ರೀತಿಯ ಕ್ರಮ ಕೈಗೊಳ್ಳಲಿದೆ ಎಂದು ಹೇಳಿದರು.

ಶ್ರೀಗಂಧ ನೀತಿ ಶೀಘ್ರ ಪ್ರಕಟ: ಕತ್ತಿ

ಬೆಂಗಳೂರು: ‘ಶ್ರೀಗಂಧ ಬೆಳೆಯುವುದು ಮತ್ತು ಮಾರಾಟ ಮಾಡುವುದಕ್ಕೆ ಸಂಬಂಧಿಸಿ ಶೀಘ್ರ ಹೊಸ ನೀತಿಯನ್ನು ಪ್ರಕಟಿಸಲಾಗುವುದು’ ಎಂದು ಅರಣ್ಯ ಸಚಿವ ಉಮೇಶ ವಿ. ಕತ್ತಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಸೋಮವಾರ ಕಾಂಗ್ರೆಸ್‌ನ ಎಸ್. ರವಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ರಾಜ್ಯದಲ್ಲಿ ಶ್ರೀಗಂಧ ಬೆಳೆಯಲು ಅರಣ್ಯ ಇಲಾಖೆಯ ಅನುಮತಿ ಅಗತ್ಯ ಇಲ್ಲ. ಶ್ರೀಗಂಧದ ಮರಗಳನ್ನು ಮೈಸೂರು, ಶಿವಮೊಗ್ಗ ಮತ್ತು ಧಾರವಾಡ ಸರ್ಕಾರಿ ಶ್ರೀಗಂಧದ ಕೋಠಿಗಳಿಗೆ ಹಾಗೂ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಸಂಸ್ಥೆಗಳಿಗೆ ಮಾರಬಹುದು. ಮುಂದಿನ ದಿನಗಳಲ್ಲಿ ರೈತರು ಎಲ್ಲಿ ಬೇಕಾದರೂ ಶ್ರೀಗಂಧ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗುವುದು’ ಎಂದು ವಿವರಿಸಿದರು.

‘ರಾಜ್ಯದಲ್ಲಿ 4,699 ಹೆಕ್ಟೇರ್ ಪ್ರದೇಶದಲ್ಲಿ ಶ್ರೀಗಂಧ ಬೆಳೆಯಲಾಗುತ್ತಿದೆ. ಕರ್ನಾಟಕ ಅರಣ್ಯ ನಿಯಮಾವಳಿ ಅನ್ವಯ ಕಟಾವಿಗೆ ಬಂದ ಶ್ರೀಗಂಧವನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಅವಕಾಶ ಇಲ್ಲ’ ಎಂದರು.

ಸಚಿವರ ಉತ್ತರಕ್ಕೆ ಪ್ರತಿಕ್ರಿಯಿಸಿದ ಎಸ್. ರವಿ, ‘ಶ್ರೀಗಂಧಕ್ಕೆ ಲಕ್ಷಾಂತರ ರೂಪಾಯಿ ಮೌಲ್ಯವಿದ್ದರೂ ಅರಣ್ಯ ಇಲಾಖೆಯು ಕಡಿಮೆ ಬೆಲೆ ನೀಡಿ ರೈತರಿಗೆ ಮೋಸ ಮಾಡುತ್ತಿದೆ’ ಎಂದರು.


ಆಸ್ಟ್ರೇಲಿಯಾ ಹಿಂದುರುಗಿಸಿದ ಪ್ರಾಚೀನ ಕಲಾಕೃತಿಗಳನ್ನು ನವದೆಹಲಿಯಲ್ಲಿ ಸೋಮವಾರ ಪ್ರಧಾನ ಮಂತ್ರಿ ನರೇಂದ್ರ ಮೋದಿ ಪರಿಶೀಲಿಸಿದರು– ಪಿಟಿಐ ಚಿತ್ರ

ಭಾರತಕ್ಕೆ ಮರಳಿದ 29 ಕಲಾಕೃತಿಗಳು

ನವದೆಹಲಿ (ಪಿಟಿಐ): ಭಾರತಕ್ಕೆ ಸೇರಿದ ಭಗವಾನ್ ಶಿವ ಮತ್ತು ಶಿವನ ಭಕ್ತರು, ಶಕ್ತಿ ಪೂಜೆ, ಭಗವಾನ್ ವಿಷ್ಣು ಮತ್ತು ಜೈನ ಸಂಪ್ರದಾಯದ ಶಿಲ್ಪಗಳು ಸೇರಿ 29 ಪ್ರಾಚೀನ ಕಲಾಕೃತಿಗಳನ್ನು ಆಸ್ಟ್ರೇಲಿಯಾ, ಭಾರತಕ್ಕೆ ಮರಳಿಸಿದೆ.

ಕಲಾಕೃತಿಗಳನ್ನು ಪರಿಶೀಲಿಸಿದ ಪ್ರಧಾನಿ ಮೋದಿ, ಆಸ್ಟ್ರೇಲಿಯಾಕ್ಕೆ ಧನ್ಯವಾದ ಸಲ್ಲಿಸಿದ್ದಾರೆ ಎಂದು ಪ್ರಧಾನಿ ಕಾರ್ಯಾಲಯ ತಿಳಿಸಿದೆ.

ಇವು ಬೇರೆ ಬೇರೆ ಶತಮಾನಗಳಿಗೆ ಸೇರಿದಂತವು. ಮರಳು ಶಿಲ್ಪ, ಅಮೃತಶಿಲೆ, ಕಂಚು, ಹಿತ್ತಾಳೆ ಶಿಲ್ಪ ಹಾಗೂ ವರ್ಣಶಿಲ್ಪಗಳು, ಆಲಂಕಾರಿಕ ಕಲಾಕೃತಿಗಳು ಇದರಲ್ಲಿವೆ. ರಾಜಸ್ಥಾನ, ಗುಜರಾತ್, ಮಧ್ಯಪ್ರದೇಶ, ತಮಿಳುನಾಡು, ತೆಲಂಗಾಣ ಮತ್ತು ಪಶ್ಚಿಮ ಬಂಗಾಳಕ್ಕೆ ಸೇರಿದ್ದಾಗಿದೆ ಎಂದು ಕೇಂದ್ರ ವಾರ್ತಾ ಶಾಖೆ (ಪಿಐಬಿ) ಟ್ವೀಟ್ ಮಾಡಿದೆ.

2014ರವರೆಗೆ 228 ಪ್ರಾಚೀನ ಕಲಾಕೃತಿಗಳನ್ನು ಭಾರತಕ್ಕೆ ಹಿಂತಿರುಗಿ ಬಂದಿವೆ ಎಂದು ಭಾರತೀಯ ಪುರಾತತ್ವ ಇಲಾಖೆ ತಿಳಿಸಿದೆ.

ಉಕ್ರೇನ್‌ನಿಂದ ಮರಳಿದವರಿಗೆ 60 ಕಾಲೇಜುಗಳಲ್ಲಿ ಕಲಿಕೆಗೆ ಅವಕಾಶ

ಒಂದನೇ ಪುಟದಿಂದ

ಉನ್ನತಮಟ್ಟದ ಸಮಿತಿ ನೇಮಕ: ಈ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯ ರೂಪಿಸುವ ಕುರಿತು ಅಧ್ಯಯನ ನಡೆಸಿ, ವರದಿ ನೀಡಲು ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಉನ್ನತಮಟ್ಟದ ಸಮಿತಿ ನೇಮಿಸಲಾಗುವುದು. ಇಲಾಖೆಯ ನಿರ್ದೇಶಕರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ, ಕುಲಸಚಿವರು, ಕೆಲವು ವೈದ್ಯಕೀಯ ಕಾಲೇಜುಗಳ ಡೀನ್‌ಗಳು ಸಮಿತಿಯಲ್ಲಿರುತ್ತಾರೆ ಎಂದು ಸುಧಾಕರ್ ಹೇಳಿದರು.

ಈ ವಿದ್ಯಾರ್ಥಿಗಳಿಗೆ ರಾಜ್ಯದ ವೈದ್ಯಕೀಯ ಶಿಕ್ಷಣ ಕಾಲೇಜುಗಳಲ್ಲಿ ಕಲಿಕೆಗೆ ಅವಕಾಶ ನೀಡಲು ಉನ್ನತ ಸಮಿತಿ ನಿಯಮಗಳನ್ನು ರೂಪಿಸಲಿದೆ. ಅದರ ಆಧಾರದಲ್ಲೇ ಕ್ರಮ ಜರುಗಿಸಲಾಗುವುದು. ವಿದ್ಯಾರ್ಥಿಗಳ ಸ್ವಂತ ಜಿಲ್ಲೆ ಅಥವಾ ನೆರೆಯ ಜಿಲ್ಲೆಗಳಲ್ಲೇ ಕಲಿಕೆಗೆ ಅವಕಾಶ ಕೊಡಲಾಗುವುದು ಎಂದರು.

ಸಮಿತಿ ನೀಡುವ ವರದಿ ಆಧರಿಸಿ ಕೇಂದ್ರ ಸರ್ಕಾರ ಮತ್ತು ರಾಷ್ಟ್ರೀಯ ವೈದ್ಯಕೀಯ ಮಂಡಳಿಗೆ ಮನವಿ ಸಲ್ಲಿಸಲಾಗುವುದು. ಅವರು ಅಂತಿಮ ನಿರ್ಧಾರಗಳನ್ನು ಕೈಗೊಳ್ಳುತ್ತಾರೆ ಎಂದರು.

ಉಕ್ರೇನ್‌ನಿಂದ ಮರಳಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯಕ್ಕೆ ತೊಂದರೆ ಆಗದಂತೆ ತಡೆಯುವ ಪ್ರಯತ್ನವನ್ನು ಪ್ರಧಾನಿ ಮೋದಿ ಮಾಡುತ್ತಿದ್ದಾರೆ. ಈಗಾಗಲೇ ಹಲವು ಸಭೆಗಳನ್ನು ನಡೆಸಿದ್ದಾರೆ. ಕಾನೂನು ಮತ್ತು ಶೈಕ್ಷಣಿಕ ಚೌಕಟ್ಟಿನಲ್ಲಿ ಇರುವ ಅವಕಾಶಗಳನ್ನು ಆಧರಿಸಿ ವಿದ್ಯಾರ್ಥಿಗಳಿಗೆ ನೆರವು ಒದಗಿಸಲಾಗುವುದು ಎಂದು ಹೇಳಿದರು.

‘ಈ ವಿದ್ಯಾರ್ಥಿಗಳು ದೇಶದಲ್ಲಿ ವೈದ್ಯಕೀಯ ವೃತ್ತಿ ನಡೆಸಲು ಅವಕಾಶ ನೀಡಲು ವಿಶೇಷ ಪರೀಕ್ಷೆ ನಡೆಸಲಾಗುವುದೆ?’ ಎಂಬ ಪ್ರಶ್ನೆಗೆ ಸಚಿವರು, ‘ಈಗ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯಕ್ಕೆ ತೊಂದರೆ ಆಗದಂತೆ ತಪ್ಪಿಸುವುದು ನಮ್ಮ ಗುರಿ. ಅವರನ್ನು ವೈದ್ಯರೆಂದು ನಾವು ಪರಿಗಣಿಸುತ್ತಿಲ್ಲ. ವಿದ್ಯಾರ್ಥಿಗಳಾಗಿ ಕಲಿಕೆ ಮುಂದುವರಿಸಲು ಮಾತ್ರ ಅವಕಾಶ ನೀಡಲಾಗುವುದು’ ಎಂದು ತಿಳಿಸಿದರು.

ಪಠ್ಯಕ್ರಮದಲ್ಲಿ ಭಗವದ್ಗೀತೆ: ಸಮಿತಿ ರಚನೆ

ಬೆಂಗಳೂರು: ‘ಶಾಲಾ ಪಠ್ಯಪುಸ್ತಕಗಳಲ್ಲಿ ಭಗವದ್ಗೀತೆ ಅಳವಡಿಸುವ ಕುರಿತು ಮುಂದಿನ ದಿನಗಳಲ್ಲಿ ಸಮಿತಿ ರಚಿಸಲಾಗುವುದು’ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಸೋಮವಾರ ಶೂನ್ಯವೇಳೆಯಲ್ಲಿ ಬಿಜೆಪಿಯ ಎಂ.ಕೆ. ಪ್ರಾಣೇಶ್ ಅವರು, ‘2022-23ನೇ ಶೈಕ್ಷಣಿಕ ವರ್ಷದಿಂದ ಪಠ್ಯಪುಸ್ತಕಗಳಲ್ಲಿ ಭಗವದ್ಗೀತೆ ಪರಿಚಯಿಸಬೇಕು’ ಎಂದು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ‘ಶಾಲೆಗಳಲ್ಲಿ ನೈತಿಕ ಶಿಕ್ಷಣ ಬೋಧಿಸುವುದು ಮುಖ್ಯವಾಗಿದೆ. ಜೀವನ ಅಂದರೆ ಏನು ಎನ್ನುವುದನ್ನು ಭಗವದ್ಗೀತೆಯ ಸಂದೇಶ ಸಾರುತ್ತದೆ. ಇಂತಹ ಶಿಕ್ಷಣ ಅವಶ್ಯಕತೆ ಇದೆ. ಮುಖ್ಯಮಂತ್ರಿ ಅವರ ಜತೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದರು.

ನ್ಯಾಯಮೂರ್ತಿಗಳಿಗೆ ಬೆದರಿಕೆ: ತಮಿಳುನಾಡಿನಲ್ಲಿ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಜಾಬ್ ವಿಚಾರವಾಗಿ ತೀರ್ಪು ನೀಡಿದ್ದ ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ಜೀವ ಬೆದರಿಕೆಯೊಡ್ಡಿದ್ದ ಆರೋಪದಡಿ ಇಬ್ಬರನ್ನು ತಮಿಳುನಾಡು ಪೊಲೀಸರು ಬಂಧಿಸಿದ್ದು, ನ್ಯಾಯಾಲಯಕ್ಕೆ ಹಾಜರುಪಡಿಸಿ ಕಸ್ಟಡಿಗೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

‘ತಮಿಳುನಾಡಿನ ತೌಹೀದ್ ಜಮಾತ್ (ಟಿ.ಎಂ.ಟಿ.ಜೆ)’ ಮುಸ್ಲಿಂ ಸಂಘಟನೆಯ ಮುಖಂಡ ಆರ್. ರಹಮತ್–ಉಲ್ಲಾ ಹಾಗೂ ಎಸ್. ಜಮಾಲ್ ಮುಹಮ್ಮದ್ ಉಸ್ಮಾನಿ (44) ಬಂಧಿತರು. ಮಾರ್ಚ್ 17ರಂದು ಮಧುರೈನಲ್ಲಿ ನಡೆದ ಸಮಾವೇಶದಲ್ಲಿ ಭಾಷಣ ಮಾಡಿದ್ದ ಆರೋಪಿಗಳು, ನ್ಯಾಯಮೂರ್ತಿಗಳಿಗೆ ಕೊಲೆ ಬೆದರಿಕೆಯೊಡ್ಡಿದ್ದರು. ತಮಿಳುನಾಡು ಹಾಗೂ ಕರ್ನಾಟಕ ಎರಡೂ ರಾಜ್ಯಗಳ ವಿವಿಧ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದವು.

ಆರೋಪಿಗಳ ಭಾಷಣದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಇದನ್ನು ನೋಡಿದ್ದ ವಕೀಲರೊಬ್ಬರು ವಿಧಾನಸೌಧ ಠಾಣೆಗೆ ದೂರು ನೀಡಿದ್ದರು. ಈ ಬಗ್ಗೆ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು. ಕೃತ್ಯ ನಡೆದಿದ್ದು ತಮಿಳುನಾಡು ಆಗಿದ್ದರಿಂದ, ಅಲ್ಲಿಯ ಪೊಲೀಸರಿಗೆ ಮಾಹಿತಿ ರವಾನಿಸಲಾಗಿತ್ತು.

‘ನ್ಯಾಯಮೂರ್ತಿಗಳಿಗೆ ಜೀವ ಬೆದರಿಕೆಯೊಡ್ಡಿದ್ದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದ ತಮಿಳುನಾಡು ಪೊಲೀಸರು, ತಿರುನಲ್ವೇಲಿ ಬಳಿ ರಹಮತ್– ಉಲ್ಲಾ ಹಾಗೂ ತಂಜಾವೂರಿನಲ್ಲಿ ಜಮಾನ್ ಮುಹಮ್ಮದ್ ಅವರನ್ನು ಬಂಧಿಸಿದ್ದಾರೆ. ಈ ಬಗ್ಗೆ ಕರ್ನಾಟಕ ಪೊಲೀಸ್ ಇಲಾಖೆ ಉನ್ನತ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ಬಂಧಿತ ಇಬ್ಬರೂ ಆರೋಪಿಗಳನ್ನು ತಮಿಳುನಾಡು ಪೊಲೀಸರು ಕಸ್ಟಡಿಗೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ತೌಹೀದ್ ಜಮಾತ್ (ಟಿ.ಎಂ.ಟಿ.ಜೆ) ಸಂಘಟನೆಯ ಜಿಲ್ಲಾ ಘಟಕದ ಮುಖಂಡ ರಾಜಿಕ್ ಮುಹಮ್ಮದ್ ಎಂಬುವರ ವಿರುದ್ಧವೂ ಪ್ರಕರಣ ದಾಖಲಾಗಿದ್ದು, ಸದ್ಯ ಅವರು ತಲೆಮರೆಸಿಕೊಂಡಿದ್ದಾರೆ’ ಎಂದೂ ತಿಳಿಸಿವೆ.

‘ಗ್ಲೈಕೊ ಫಾಸ್ಫೇಟ್’: ಜೀವ ವೈವಿಧ್ಯಕ್ಕೆ ಕಂಟಕ

ಒಂದನೇ ಪುಟದಿಂದ

ಗರಿಕೆ, ತುಂಬೆ, ಉತ್ತರಾಣಿ ಸೇರಿ ಅಪರೂಪದ ಔಷಧೀಯ ಸಸ್ಯಗಳು, ಜೇನು ಹುಳು, ಜೀರುಂಡೆ, ಮಿಂಚು ಹುಳುಗಳು ಸೇರಿ ಅನೇಕ ಬಗೆಯ ಪರೋಪಕಾರಿ ಕೀಟಗಳು ನಾಶವಾಗಿವೆ. ನಮ್ಮ ಒಂದು ತಾಲ್ಲೂಕಿನಲ್ಲೇ ವರ್ಷಕ್ಕೆ ಸುಮಾರು ₹8 ಕೋಟಿ ಮೌಲ್ಯದಷ್ಟು ಮೊತ್ತದ ಕಳೆ ನಾಶಕ ಮಾರಾಟವಾಗುತ್ತದೆ. ನೆರೆಯ ಎಚ್.ಡಿ.ಕೋಟೆ, ಪಿರಿಯಾಪಟ್ಟಣ ಸುತ್ತಮುತ್ತಲಿನ ತಾಲ್ಲೂಕುಗಳು ಸೇರಿದರೆ ಈ ರಾಸಾಯನಿಕ ವಾರ್ಷಿಕ ಮಾರಾಟದ ಮೊತ್ತ ₹30 ಕೋಟಿ ದಾಟಬಹುದು ಎನ್ನುತ್ತಾರೆ ಅವರು.

ಮಲೆನಾಡು ಭಾಗದ ಬೆಟ್ಟ–ಗುಡ್ಡಗಳಲ್ಲಿ ಬೆಳೆಯುವ ಆನೆ ಹುಲ್ಲೂ ಗ್ಲೈಕೊ ಫಾಸ್ಫೇಟ್ ಬಳಕೆಯಿಂದ ನಾಶವಾಗುತ್ತಿವೆ ಎಂದು ಅವರು ಹೇಳಿದರು.

‘ನಮ್ಮ ರಾಜ್ಯದ ಕೆಲವು ರೈತರು ಸುಲಭವಾಗಿ ಹಣ ಸಿಗುತ್ತದೆ ಎಂಬ ಕಾರಣಕ್ಕೆ ಶುಂಠಿ ಬೆಳೆಗಾರರಿಗೆ ಭೂಮಿಯನ್ನು ಕೊಟ್ಟು ಭೂಮಿ ಬರಡು ಮಾಡಿ, ಜೀವ ವೈವಿಧ್ಯಗಳ ನಾಶಕ್ಕೆ ಕಾರಣರಾಗುತ್ತಿದ್ದಾರೆ. ಜಲಮೂಲವೂ ವಿಷಮಯವಾಗುತ್ತಿದೆ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಕೃಷಿ ಇಲಾಖೆ ಯಾವುದೇ ಕಟ್ಟು ನಿಟ್ಟಿನ ಕ್ರಮ ತೆಗೆದುಕೊಳ್ಳುತ್ತಿಲ್ಲ’ ಎನ್ನುತ್ತಾರೆ ರೈತ ಸಂಜಯ್.

ಶಿವಮೊಗ್ಗ ಜಿಲ್ಲೆಯಲ್ಲಿ ವಾರ್ಷಿಕ ₹ 10 ಕೋಟಿ ಮೊತ್ತದ ಸರಾಸರಿ 2 ಲಕ್ಷ ಲೀಟರ್ ಕಳೆನಾಶಕ, ವಿಜಯಪುರ ಜಿಲ್ಲೆಯಲ್ಲಿ ವಾರ್ಷಿಕ ಅಂದಾಜು ₹4 ಕೋಟಿ ಮೊತ್ತದ ಕಳೆ ನಾಶಕ ರಾಸಾಯನಿಕ ಮಾರಾಟವಾಗುತ್ತಿದೆ.

‘ದ್ರಾಕ್ಷಿ ತೋಟ, ಕಬ್ಬಿನ ಹೊಲ, ಈರುಳ್ಳಿ, ಗೋಧಿ, ಕಡಲೆ, ತೊಗರಿ, ಜೋಳದ ಹೊಲ, ಲಿಂಬೆ ತೋಟಗಳಲ್ಲಿ ಮಳೆಗಾಲದಲ್ಲಿ ಏಳುವ ಕಳೆಯನ್ನು ಸ್ವಚ್ಛ ಮಾಡಲು ಕೂಲಿ ಆಳುಗಳ ಕೊರತೆ ಇರುವುದರಿಂದ ಹೆಚ್ಚಿನ ರೈತರು ಕಳೆ ನಾಶಕ ಸಿಂಪಡಿಸುವ ಸುಲಭ ವಿಧಾನಕ್ಕೆ ಮೊರೆ ಹೋಗಿದ್ದಾರೆ. ಇದರಿಂದ ರೈತರಿಗೆ ಉಳಿತಾಯವಾಗುತ್ತದೆ. ಆದರೆ, ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತಿದೆ’ ಎನ್ನುತ್ತಾರೆ ವಿಜಯಪುರ ಜಿಲ್ಲಾ ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ರಾಜಶೇಖರ ವಿಲಿಯಮ್ಸ್.

ಈ ಕುರಿತು ಪ್ರತಿಕ್ರಿಯೆಗೆ ಕೃಷಿ ಇಲಾಖೆ ಅಧಿಕಾರಿಗಳನ್ನು ಪ್ರಯತ್ನಿಸಿದಾಗ ದೂರವಾಣಿ ಕರೆಯನ್ನು ಸ್ವೀಕರಿಸಲಿಲ್ಲ. ಹಲವು ಜಿಲ್ಲೆಗಳಲ್ಲಿ ಈ ರಾಸಾಯನಿಕ ಬಳಕೆಯ ಪ್ರಮಾಣವನ್ನು ಅಧ್ಯಯನ ನಡೆಸುವ ಗೋಜಿಗೆ ಅಧಿಕಾರಿಗಳು ಹೋಗಿಲ್ಲ.

ಕ್ಷೇಮ ಕುಶಲ

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ~~₹599~~ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ–ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಮನೆಯಲ್ಲೀಗ ಪರೀಕ್ಷೆ!

ರಮ್ಯಾ ಶ್ರೀಹರಿ

'ಪರೀಕ್ಷೆ' – ಅದು ಶಾಲಾ-ಕಾಲೇಜುಗಳಲ್ಲಿ ನಡೆಯುವಂಥದ್ದಿರಬಹುದು ಅಥವಾ ಜೀವನದ ಅನೇಕ ಘಟ್ಟಗಳಲ್ಲಿ ಎದುರಾಗುವಂಥದ್ದಿರಬಹುದು, ಪರೀಕ್ಷೆ ಎಂದರೇ ಒಂದು ಬಗೆಯ ಬಿಗುವಿನ ವಾತಾವರಣ, ಆತಂಕ ಸೃಷ್ಟಿಯಾಗುವುದು ಸಾಮಾನ್ಯ. ಮೌಲ್ಯಮಾಪನಗಳು, ಸೋಲು-ಗೆಲುವಿನ ಮಾನದಂಡಗಳು, ಪರೀಕ್ಷೆಯ ಫಲಿತಾಂಶದಿಂದ ದೊರಕಬಹುದಾದ ಸನ್ಮಾನ, ಅವಮಾನಗಳು – ಇವೆಲ್ಲ ನಮ್ಮ ಜೀವನವನ್ನು ಎಷ್ಟರ ಮಟ್ಟಿಗೆ ಪ್ರಭಾವಿಸಬಹುದೆನ್ನುವ ಕುರಿತು ನಮಗಿರುವ ಕಲ್ಪನೆಗಳು ಎಲ್ಲವೂ ಸೇರಿ ಪರೀಕ್ಷೆ ಎನ್ನುವುದು ನಮ್ಮ 'ಯೋಗ್ಯತೆ'ಯ ಅಳತೆಗೋಲು ಎನಿಸಿಬಿಡುವುದೇ ಪರೀಕ್ಷೆಯ ಕುರಿತಾದ ಭಯಕ್ಕೆ ಕಾರಣ. ಹಾಗಾಗಿ ಪರೀಕ್ಷೆಯ ಸಮಯದಲ್ಲಿನ ನಮ್ಮ ಮಾನಸಿಕ ಸಮತೋಲನ ನಾವು ಈ ಭಯವನ್ನು ಹೇಗೆ ನಿರ್ವಹಿಸುತ್ತೇವೆ ಎನ್ನುವುದರ ಮೇಲೆ ಅವಲಂಬಿತವಾಗಿದೆ.

> ಪರೀಕ್ಷೆಗಳು ಯಾವುದೇ ರೀತಿಯಲ್ಲೂ, ಯಾವುದೇ ಯೋಗ್ಯತೆಯ ಮಾಪಕವಲ್ಲ ಎನ್ನುವುದು ಮನವರಿಕೆಯಾಗಬೇಕು; ಅನಂತರವಷ್ಟೇ ಪರೀಕ್ಷೆಗಳನ್ನು ಹೆಚ್ಚು ಆತ್ಮವಿಶ್ವಾಸದಿಂದ ಎದುರಿಸುವುದು ಸಾಧ್ಯವಾಗುತ್ತದೆ.

ಪರೀಕ್ಷೆಯ ಫಲಿತಾಂಶಕ್ಕೂ ನಮ್ಮ ನಮ್ಮ ಯೋಗ್ಯತೆ ಅಥವಾ ಸೆಲ್ಫ್ ವರ್ಥ್(self worth)ಗೂ ಯಾವುದೇ ಸಂಬಂಧವಿಲ್ಲ ಎನ್ನುವುದನ್ನು ಪೋಷಕರು, ಶಿಕ್ಷಕರು ತಮ್ಮ ವರ್ತನೆಯ ಮೂಲಕ ಚಿಕ್ಕ ವಯಸ್ಸಿಗೇ ಮಕ್ಕಳಿಗೆ ಅರ್ಥಮಾಡಿಸುವುದು ಸಾಧ್ಯವಾಗಿಬಿಟ್ಟರೆ ಅಂತಹ ಮಕ್ಕಳು ಪರೀಕ್ಷೆಯ ಅನಗತ್ಯ ಆತಂಕದಿಂದ ಮುಕ್ತರಾಗುತ್ತಾರೆ. ಶೈಕ್ಷಣಿಕ ಹಾದಿಯಲ್ಲಿ ಮುಂದುವರೆಯಲು, ಇಷ್ಟದ ಉದ್ಯೋಗವನ್ನು ಗಳಿಸಲು ಪರೀಕ್ಷೆಗಳು ಅಗತ್ಯವೇ ಹೊರತು ಅವು ಯಾವುದೇ ರೀತಿಯಲ್ಲೂ, ಯಾವುದೇ ಯೋಗ್ಯತೆಯ ಮಾಪಕವಲ್ಲ ಎನ್ನುವುದು ಮನವರಿಕೆಯಾಗಬೇಕು; ಅನಂತರ ಪರೀಕ್ಷೆಗಳನ್ನು ಹೆಚ್ಚು ಆತ್ಮವಿಶ್ವಾಸದಿಂದ ಎದುರಿಸುವುದು ಸಾಧ್ಯವಾಗುತ್ತದೆ.

ಇಂದಿನ ಪ್ರಪಂಚ ಈ ಮಟ್ಟಕ್ಕೆ ಸ್ಪರ್ಧಾತ್ಮಕಗೊಂಡಿರುವುದು ಖಂಡಿತ ಮಕ್ಕಳ ತಪ್ಪಲ್ಲ. ತಮ್ಮಿಷ್ಟದ ವಿಷಯವನ್ನು, ಪರಿಣತರ ಮಾರ್ಗದರ್ಶನದಲ್ಲಿ, ಉತ್ಕೃಷ್ಟ ವಿದ್ಯಾಸಂಸ್ಥೆಗಳಲ್ಲಿ ಕಲಿಯುವುದು ಸುಲಭದಲ್ಲಿ ಸಾಧ್ಯವಿಲ್ಲದಂತಹ, ಅದಕ್ಕಾಗಿ ಅನೇಕ ಸ್ಪರ್ಧೆಗಳನ್ನು ಎದುರಿಸಬೇಕಾದಂತಹ ಅಸ್ವಾಭಾವಿಕ ಸಂಕೀರ್ಣ ವ್ಯವಸ್ಥೆ ಸೃಷ್ಟಿಯಾಗಿದೆ. ಇಂತಹ ಉಸಿರುಗಟ್ಟಿಸುವ ವ್ಯವಸ್ಥೆಯಲ್ಲಿ ಒತ್ತಡಕ್ಕೆ ಸಿಲುಕಿ, ಬಳಲಿ ತಮ್ಮ ನೈಜ ಕ್ರಿಯಾಶೀಲತೆ, ಸೃಜನಶೀಲತೆಗಳನ್ನು ಮಕ್ಕಳು ಕಳೆದುಕೊಳ್ಳಬೇಕಾಗಿರುವುದು ಶೋಚನೀಯವೇ ಸರಿ. ಇಂತಹ ಪರಿಸ್ಥಿತಿಯನ್ನು ಚೆನ್ನಾಗಿ ಅರಿತು ಮಕ್ಕಳನ್ನು ಸಹಾನುಭೂತಿಯಿಂದ ಕಾಣಬೇಕಾಗಿರುವುದೂ ಅಗತ್ಯವಾದ ಪರೀಕ್ಷಾ ತಯಾರಿಯ ಒಂದು ಹಂತವೇ ಹೌದು.

ತಮ್ಮ ತಮ್ಮ ಆಸಕ್ತಿ, ಗ್ರಹಿಕೆಯ ಸಾಮರ್ಥ್ಯ, ವ್ಯಕ್ತಿತ್ವ, ಸುತ್ತಲಿನ ಸಮಾಜಕ್ಕೆ/ಜೀವನಕ್ಕೆ ಸ್ಪಂದಿಸುವ ರೀತಿ ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೆ ಕೇವಲ 'ಎಲ್ಲರೂ ಓದುವ' ಬಹು ಬೇಡಿಕೆಯ ಕೋರ್ಸ್‌ಗಳನ್ನು ಹಠದಿಂದಲೋ ಒತ್ತಾಯದಿಂದಲೋ ಮಾಡಬೇಕೆಂದು ಹೊರಡುವವರಿಗೆ ಪರೀಕ್ಷೆ ದುಃಸ್ವಪ್ನದಂತೆ ಕಾಡದಿರುತ್ತದೆಯೇ?

ಕಲಿಕೆಯಲ್ಲಿನ ಆನಂದವನ್ನು ಅನುಭವಿಸದೆ, ಹೆಚ್ಚು ಕಲಿಯಬೇಕೆನ್ನುವ ಉತ್ಸಾಹ, ಕುತೂಹಲಗಳಿಲ್ಲದೆ ಯಾವ ಅಧ್ಯಯನವೂ ಮುಂದೆ ಸಾಗುವುದಿಲ್ಲ. ಒಂದು ಬೆಟ್ಟದ ತುದಿಯನ್ನು ಮುಟ್ಟಬೇಕಾದರೆ ಆ ಬೆಟ್ಟದ ಮೇಲೆ ನಿಂತಾಗ ಕಾಣುವ ನಯನ ಮನೋಹರ ದೃಶ್ಯದ ಬಗೆಗೆ, ಅದು ನೀಡುವ ಅನುಭವದ ಬಗೆಗೆ ಒಂದು ಕನಸು, ಆಸೆ, ನಿರೀಕ್ಷೆ ಇರಬೇಕಾಗುತ್ತದೆ. ಅದಿಲ್ಲದಿದ್ದರೆ ಒಂದು ಹೆಜ್ಜೆ ಎತ್ತಿಡುವುದೂ ಸಾಧ್ಯವಾಗುವುದಿಲ್ಲ. ಕಲಿಕೆ ಎಂಬ ಚಾರಣದ ಹಾದಿಯೂ ಹೀಗೇ, ಹಾದಿಯೂ ಸುಂದರವಾಗಿರಬೇಕು, ಗುರಿಯೂ ಧನ್ಯತೆ ಮೂಡಿಸುವಂಥದ್ದಾಗಿರಬೇಕು. ಆಗಷ್ಟೇ ಕಷ್ಟ ಪಡಲು, ಬೆವರು ಹರಿಸಲು ನಾವು ಸಿದ್ಧರಿರುತ್ತೇವೆ. ಹಾಗಿಲ್ಲದೆ ಬರೀ ಆಯಾಸ, ಆತಂಕ ತರುವ ಪ್ರಯಾಣ ಯಾರಿಗೆ ಬೇಕಿರುತ್ತದೆ? ಓದುವುದರಲ್ಲಿ ಅನಾಸಕ್ತಿ, ಪರೀಕ್ಷಾ ಭಯ ಮುಂತಾದ ಸಮಸ್ಯೆಗಳು ಕಲಿಕೆ, ಪರೀಕ್ಷೆ – ಇವುಗಳ ಕುರಿತಾದ ತಪ್ಪು ಕಲ್ಪನೆಗಳಿಂದ ಹುಟ್ಟಿಕೊಂಡಿರುವ ಸಾಧ್ಯತೆಗಳೇ ಹೆಚ್ಚು.

ಇನ್ನೇನು ಪರೀಕ್ಷೆ ಇನ್ನೊಂದು ತಿಂಗಳಿದೆ ಎನ್ನುವಾಗ ನಮ್ಮ ವ್ಯಕ್ತಿತ್ವದಲ್ಲಾಗಲಿ, ಅಧ್ಯಯನ ಕ್ರಮದಲ್ಲಾಗಲಿ, ಓದುವುದಕ್ಕೆ ಪೂರಕವಾಗಿ ಮನೆಯ ವಾತಾವರಣವನ್ನು ಸೃಷ್ಟಿಸಿಕೊಳ್ಳುವುದರಲ್ಲಾಗಲಿ ಹೆಚ್ಚಿನ ಬದಲಾವಣೆ ತಂದುಕೊಳ್ಳುವುದು ಸಾಧ್ಯವಾಗುವುದಿಲ್ಲ. ಶಿಸ್ತುಬದ್ಧ ಜೀವನ, ನಿಯಮಿತ ಅಧ್ಯಯನಗಳಿಲ್ಲದೆ ಕೊನೆಯ ಗಳಿಗೆಯಲ್ಲಿ ಯಾವ ಪವಾಡವೂ ನಡೆಯುವುದಿಲ್ಲ.

ಓದುವ ಸಮಯವನ್ನು, ಓದುವ ಮನಸ್ಸನ್ನು ಕಸಿದುಕೊಂಡು ಬಿಡುವ ಮೊಬೈಲ್, ಇಂಟರ್‌ನೆಟ್ ವ್ಯಸನವನ್ನು ಪರೀಕ್ಷೆಯ ಸಮಯದಲ್ಲಿ ಏಕಾಏಕಿ ಹತೋಟಿಗೆ ತರುವುದು ಸಾಧ್ಯವಾಗದಿರಬಹುದು. ತಂತ್ರಜ್ಞಾನದ ಸೌಲಭ್ಯಗಳನ್ನು ಬಳಸುವಲ್ಲಿನ ಸಂಯಮವನ್ನು ಮೊದಲಿನಿಂದಲೂ ರೂಢಿಸಿಕೊಂಡಿರುವ ವಿದ್ಯಾರ್ಥಿಗಳಿಗೆ ಪರೀಕ್ಷಾ ಸಮಯದಲ್ಲಿ ಏಕಾಗ್ರತೆಯ ಸಮಸ್ಯೆಗಳು ಅಷ್ಟಾಗಿ ಬಾಧಿಸದು. ಹಾಗೆಯೇ ಮನಸ್ಸು ಎಲ್ಲೆಲ್ಲಿಗೋ ಹೋಗುತ್ತಿರುವಾಗ ಅದನ್ನು ಮತ್ತೆ ಮತ್ತೆ ಅಧ್ಯಯನದ ಕಡೆಗೆ ತಂದು ನಿಲ್ಲಿಸಿಕೊಳ್ಳುವ ಅಭ್ಯಾಸಗಳನ್ನು ಮೈಗೂಡಿಸಿಕೊಂಡಿರುವುದೊಳಿತು.

ತಂದೆ/ತಾಯಿ ತಮ್ಮ ಮಕ್ಕಳ ಪರೀಕ್ಷೆಯ ಕುರಿತಾದ ಆತಂಕವನ್ನು ನಿರ್ವಹಿಸುವ ಹೊಣೆಯನ್ನು ತಾವೇ ಹೊತ್ತುಕೊಳ್ಳಬೇಕು. ಪೋಷಕರು ತಮ್ಮ ಪರೀಕ್ಷಾ ಆತಂಕವನ್ನು 'ಚೆನ್ನಾಗಿ ಓದಿ ಅತ್ಯುತ್ತಮ ಅಂಕಗಳನ್ನು ಪಡೆಯುವುದರ ಮೂಲಕ' ಮಕ್ಕಳು ತೊಡೆದುಹಾಕಬೇಕೆಂದು ಬಯಸುವುದು ಇನ್ನಷ್ಟು ಸಮಸ್ಯೆಗಳಿಗೆ ಮೂಲ. ಪರೀಕ್ಷೆಯ ಸಮಯದಲ್ಲಿ ಪೋಷಕರು ತಮ್ಮ ಸಾಮಾಜಿಕ ಜೀವನವನ್ನು ಇತಿಮಿತಿಯಲ್ಲಿಟ್ಟುಕೊಂಡು ಮಕ್ಕಳಿಗೆ ಹೆಚ್ಚಿನ ಗಮನ ನೀಡುವುದು ಮಕ್ಕಳ ಮಾನಸಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ.

ಚಿಕ್ಕ ಮಕ್ಕಳಾಗಿದ್ದಾಗ ಕಲಿಯುವುದು ಸ್ವಾಭಾವಿಕ ಕ್ರಿಯೆ ಎನಿಸುವ ವಯಸ್ಸಿನಲ್ಲಿ ಪರೀಕ್ಷೆಯ ಅಗತ್ಯ ಹೆಚ್ಚಿರುವುದಿಲ್ಲ. ಅನಂತರದ ಕೆಲವು ವರ್ಷಗಳು ಮಕ್ಕಳು ತಮ್ಮ ಆಸಕ್ತಿಯ ಕ್ಷೇತ್ರಗಳನ್ನು ಅನ್ವೇಷಿಸುತ್ತಾ ಏಕಾಗ್ರತೆ, ಜ್ಞಾಪಕಶಕ್ತಿ, ಸಮಯಪಾಲನೆ, ಪರೀಕ್ಷೆಗಾಗಿ ಓದಿ ಬರೆಯುವ ಕೌಶಲಗಳನ್ನು ಕಲಿಯುವ ವಯಸ್ಸು. ಆಗ ಶಿಸ್ತುಬದ್ಧ ಅಧ್ಯಯನ ಕ್ರಮದಿಂದ ಪರೀಕ್ಷೆಯ ಭಯವನ್ನು ದೂರವಿಡಬಹುದು. ಅನಂತರದ ಹಲವು ವರ್ಷಗಳು ತಮ್ಮ ಇಷ್ಟದ ವಿಷಯವನ್ನು ಅಧ್ಯಯನ ಮಾಡುವ ಮೂಲಕ ಸ್ವಪ್ರೇರಣೆಯಿಂದ ಓದಿ, ಕಲಿಕೆಯ ಹಾದಿಯಲ್ಲಿ ಮುಂದುವರೆಯುವ ಕಾರಣ ಆಗಲೂ ಪರೀಕ್ಷೆಯ ಭಯವನ್ನು ಗೆಲ್ಲಬಹುದು. ಒಟ್ಟಿನಲ್ಲಿ ಯಾವ ಹಂತದಲ್ಲಿಯೂ ಪರೀಕ್ಷೆ ಎನ್ನುವುದು ಒತ್ತಡ ಎನಿಸುವಂತಹ ಪರಿಸ್ಥಿತಿಗೆ ಸಿಲುಕದಿರುವುದು ನಮ್ಮ ಕೈಯಲ್ಲೇ ಇದೆ.

❖

ಇದು ಮಕ್ಕಳ ಹೃದಯದ ವಿಷಯ

ಡಾ. ಕಿರಣ್ ವಿ. ಎಸ್.

> ಮಕ್ಕಳ ಜನ್ಮಜಾತ ಹೃದ್ರೋಗ ಸಮಸ್ಯೆಗಳು ಹಲವಾರು ಬಗೆಯವು. 'ಒಂದು ಶಿಶುವಿನ ಹೃದಯದಂತೆ ಮತ್ತೊಂದು ಇರುವುದಿಲ್ಲ' ಎನ್ನುತ್ತಾರೆ ತಜ್ಞರು.

ಒಂದೂವರೆ ತಿಂಗಳ ಕುಶಾಲ ಮನೆಯೆಲ್ಲರ ಕಣ್ಣಬಿಂದು. ಸಹಜ ಹೆರಿಗೆಯಿಂದ ಸುಖಪ್ರಸವವಾಗಿ, ಆರೋಗ್ಯವಾಗಿ ಜನಿಸಿದ ಚಟುವಟಿಕೆಯ ಕೂಸು. ಒಂದೂವರೆ ತಿಂಗಳ ಲಸಿಕೆ ಕೊಡಿಸಲು ಹೋದಾಗ ಮಕ್ಕಳ ವೈದ್ಯರು ಪರೀಕ್ಷೆ ಮಾಡಿ 'ಮಗುವಿನ ಹೃದಯದಲ್ಲಿ ಮರ್ಮರ್ ಸದ್ದು ಕೇಳುತ್ತಿದೆ. ಅವನಿಗೆ ಹೃದಯ ಪರೀಕ್ಷೆ ಮಾಡಬೇಕು' ಎಂದು ಹೇಳಿ, ದೊಡ್ಡಾಸ್ಪತ್ರೆಗೆ ಬರೆದುಕೊಟ್ಟಿದ್ದಾರೆ. ಅವನ ತಾಯಿ ದೇವಕಿಗೆ ಅಂದಿನಿಂದ ಒಂದೇ ಅಳು. ಮನೆಮಂದಿಯೆಲ್ಲಾ ದಿಗಿಲು ಬಿದ್ದಿದ್ದಾರೆ.

'ಹೃದ್ರೋಗ ಮಕ್ಕಳಿಗೂ ಬರುವುದುಂಟೇ?' ಎಂದು ಕೆಲವರಿಗೆ ಅಚ್ಚರಿ ಆಗಬಹುದು. ಮಕ್ಕಳಲ್ಲಿ ಕಾಣುವ ಹೃದಯದ ಸಮಸ್ಯೆಗಳು ಹಿರಿಯರ ಹೃದ್ರೋಗಗಳಿಗಿಂತ ಸಂಪೂರ್ಣ ಭಿನ್ನ. ವಯಸ್ಸಾದವರಲ್ಲಿ ಬಹುಮಟ್ಟಿಗೆ ಕಾಣುವುದು ಹೃದಯಕ್ಕೆ ರಕ್ತಪೂರೈಸುವ ಧಮನಿಗಳ ಅಡೆತಡೆ. ಆದರೆ, ಹೃದಯದ ರಚನೆಯಲ್ಲಿ ಆಗುವ ಜನ್ಮಜಾತ ದೋಷಗಳು ಎಳೆಯ ವಯಸ್ಸಿನಲ್ಲೇ ಗೋಚರವಾಗುತ್ತವೆ. ಹೃದಯ ಸರಳವಾದರೂ ಸಂಕೀರ್ಣ ಅಂಗ. ಶರೀರದ ಅಶುದ್ಧ ರಕ್ತ ಅಪಧಮನಿಗಳ ಮೂಲಕ ಹೃದಯದ ಬಲಭಾಗವನ್ನು ಸೇರಿ, ಅಲ್ಲಿಂದ ಶ್ವಾಸಕೋಶಗಳನ್ನು ತಲುಪುತ್ತದೆ. ಅಲ್ಲಿ ಉಸಿರಾಟದ ಆಕ್ಸಿಜನ್ ಬೆರೆತು ರಕ್ತ ಶುದ್ಧವಾಗುತ್ತದೆ. ಈ ಆಕ್ಸಿಜನ್-ಯುಕ್ತ ಶುದ್ಧ ರಕ್ತವು ಹೃದಯದ ಎಡಭಾಗವನ್ನು ಸೇರಿ, ಅಭಿಧಮನಿಗಳ ಮೂಲಕ ಇಡೀ ಶರೀರಕ್ಕೆ ಸರಬರಾಜಾಗುತ್ತದೆ. ಅಶುದ್ಧ ಮತ್ತು ಶುದ್ಧ ರಕ್ತಗಳನ್ನು ಪ್ರತ್ಯೇಕಿಸಲು ಹೃದಯದ ಎಡ ಮತ್ತು ಬಲಭಾಗಗಳ ನಡುವೆ ಎರಡು ಗೋಡೆಗಳು ಇರುತ್ತವೆ. ರಕ್ತದ ಏಕಮುಖ ಸಂಚಾರವನ್ನು ನಿಯಂತ್ರಿಸಲು ಹೃದಯದಲ್ಲಿ ಸ್ವಯಂಚಾಲಿತ ಬಾಗಿಲಿನಂತಹ, ನಿಶ್ಚಿತ ಸಮಯಕ್ಕೆ ಸರಿಯಾಗಿ ತೆರೆದು, ಮುಚ್ಚಿಕೊಳ್ಳುವ ನಾಲ್ಕು ಕವಾಟಗಳು ಇರುತ್ತವೆ. ಶ್ವಾಸಕೋಶಗಳಿಗೆ ಮತ್ತು ಶರೀರಕ್ಕೆ ರಕ್ತ ಒಯ್ಯುವ ಸಲುವಾಗಿ ಬೇರೆ ಬೇರೆ ಧಮನಿಗಳು ಇರುತ್ತವೆ. ಹೀಗೆ, ಒಂದೇ ಹೃದಯದಲ್ಲಿ ಇದ್ದರೂ, ಅಶುದ್ಧ ಮತ್ತು ಶುದ್ಧ ರಕ್ತಗಳು ಪರಸ್ಪರ ಸಂಪರ್ಕಕ್ಕೆ ಬಾರದಂತೆ ವ್ಯವಸ್ಥೆ ಇರುತ್ತದೆ.

ಅಶುದ್ಧ ಮತ್ತು ಶುದ್ಧ ರಕ್ತಗಳನ್ನು ಪ್ರತ್ಯೇಕಿಸುವ ಗೋಡೆಗಳಲ್ಲಿ ರಂಧ್ರವಿದ್ದರೆ ಅವು ಒಂದರ ಜೊತೆಗೊಂದು ಬೆರೆಯುತ್ತವೆ. ಈ ರೀತಿಯ ರಂಧ್ರಗಳು ಹುಟ್ಟಿನಿಂದಲೇ ಬರುವುದರಿಂದ, ಎಳೆಯ ವಯಸ್ಸಿನಲ್ಲೇ ಪತ್ತೆಯಾಗುತ್ತವೆ. ಹೃದಯದ ನಾಲ್ಕು ಕವಾಟಗಳ ಪೈಕಿ ಯಾವುದೋ ಒಂದು ಕವಾಟದ ರಚನೆಯಲ್ಲಿ ದೋಷವಿದ್ದರೆ, ಅದು ಸರಿಯಾಗಿ ಮುಚ್ಚದೆಯೋ, ತೆರೆಯದೆಯೋ ಇರಬಹುದು. ಆಗಲೂ ರಕ್ತಸಂಚಾರದಲ್ಲಿ ತಡೆಯಾಗುತ್ತದೆ. ರಕ್ತ ಒಯ್ಯುವ ರಕ್ತನಾಳಗಳಲ್ಲಿ ಏನಾದರೂ ಸಮಸ್ಯೆ ಇದ್ದರೂ, ರಕ್ತಸಂಚಾರಕ್ಕೆ ಅಡ್ಡಿಯಾಗುತ್ತದೆ. ರಕ್ತಪೂರೈಕೆಯ ಸಂಪೂರ್ಣ ಜವಾಬ್ದಾರಿ ಹೃದಯದ್ದೇ ಆದ್ದರಿಂದ, ಇಡೀ ರಕ್ತಸಂಚಾರದ ವ್ಯವಸ್ಥೆಯಲ್ಲಿ ಎಲ್ಲೇ ತೊಂದರೆಯಾದರೂ, ಅದರ ಪ್ರತ್ಯಕ್ಷ ಯಾ ಪರೋಕ್ಷ ಪರಿಣಾಮ ಹೃದಯದ ಮೇಲೆಯೇ ಆಗುತ್ತದೆ.

ಹೃದಯದ ಸಮಸ್ಯೆ ಸಣ್ಣ ಮಟ್ಟದಲ್ಲಿದ್ದರೆ ಶರೀರಕ್ಕೆ ಯಾವುದೇ ಹಾನಿಯಾಗದೇ ಇರಬಹುದು. ಅಂತಹ ಮಕ್ಕಳು ಇತರ ಮಕ್ಕಳಂತೆ ಆರಾಮವಾಗಿ, ಚಟುವಟಿಕೆಯಿಂದಲೇ ಇರುತ್ತಾರೆ. ಬೇರೆ ಯಾವುದೋ ಕಾರಣಕ್ಕೆ ವೈದ್ಯರ ಬಳಿ ಒಯ್ದಾಗ, ಅಂತಹ ಮಕ್ಕಳ ಹೃದಯವನ್ನು ಪರೀಕ್ಷಿಸುವ ವೈದ್ಯರಿಗೆ ವಿಭಿನ್ನ ಸದ್ದು ಕೇಳುತ್ತದೆ. ಹೃದಯದ ರಂಧ್ರ ಯಾ ದೋಷಪೂರ್ಣ ಕವಾಟದ ಮೂಲಕ ಹರಿಯುವ ರಕ್ತ ಮರ್ಮರ್ ಸದ್ದನ್ನೋ, ಅಥವಾ ಕ್ಲಿಕ್ ಸದ್ದನ್ನೋ ಮಾಡುತ್ತದೆ. ಅನುಭವಿ ವೈದ್ಯರು ಇಂತಹ ಸದ್ದನ್ನು ಖಚಿತವಾಗಿ ಗ್ರಹಿಸಬಲ್ಲರು. ಆದರೆ, ಪ್ರತಿಯೊಂದು ವಿಭಿನ್ನ ಸದ್ದಿಗೂ ಹೃದಯದ ಆಂತರಿಕ ದೋಷವೇ ಕಾರಣ ಎನ್ನಲಾಗದು. ಕೆಲವೊಮ್ಮೆ ಸಾಮಾನ್ಯ ಮಕ್ಕಳಲ್ಲೂ ಮರ್ಮರ್ ಸದ್ದು ಕೇಳಿಸುತ್ತದೆ. ಹೀಗಾಗಿ, ಹೃದಯದ ಸದ್ದು ವಿಭಿನ್ನವಾಗಿದ್ದರೆ, ವೈದ್ಯರು ಮಕ್ಕಳ ಹೃದಯದ ತಪಾಸಣೆ ಮಾಡಿಸುತ್ತಾರೆ.

ಹೃದಯದ ಜನ್ಮಜಾತ ಸಮಸ್ಯೆ ತೀವ್ರವಾಗಿದ್ದರೆ, ಅಂತಹ ಮಕ್ಕಳಲ್ಲಿ ಉಸಿರಾಟದ ಸಮಸ್ಯೆ, ಚರ್ಮ ಮತ್ತು ಲೋಳೆಪದರ ನೀಲಿಗಟ್ಟುವುದು, ಪದೇಪದೇ ಕಾಯಿಲೆ ಬೀಳುವುದು, ತೂಕ ಸರಿಯಾಗಿ ಏರದಿರುವುದು, ಹಾಲೂಡಿಸುವಾಗ ಮಗು ವಿಪರೀತ ಬೆವರುವುದು, ಬಿಟ್ಟು-ಬಿಟ್ಟು ಹಾಲು ಕುಡಿಯುವುದು, ಸರಿಯಾಗಿ ನಿದ್ರಿಸದಿರುವುದು ಮೊದಲಾದ ಗಂಭೀರ ಸಮಸ್ಯೆಗಳು ಕಾಣುತ್ತವೆ. ಶಿಶುವೈದ್ಯತಜ್ಞರ ಸಲಹೆ ಪಡೆದು, ಇಂತಹ ಮಕ್ಕಳನ್ನು ಸಾಧ್ಯವಾದಷ್ಟೂ ಬೇಗ ಮಕ್ಕಳ ಹೃದ್ರೋಗತಜ್ಞರಿಗೆ ತೋರಿಸಬೇಕು.

ಮಕ್ಕಳ ಜನ್ಮಜಾತ ಹೃದ್ರೋಗ ಸಮಸ್ಯೆಗಳು ಹಲವಾರು ಬಗೆಯವು. ಸರಳವಾದ ಸಣ್ಣ ರಂಧ್ರದಿಂದ ಹಿಡಿದು, ರಕ್ತನಾಳಗಳ ಅದಲಿ-ಬದಲಿ, ಹೃದಯದ ಒಂದು ಕೋಣೆಯೇ ಬೆಳವಣಿಗೆ ಆಗದಿರುವುದು, ಕವಾಟಗಳ ಅನುಪಸ್ಥಿತಿಯಂತಹ ಸಂಕೀರ್ಣ ಸಮಸ್ಯೆಗಳು ಇರುತ್ತವೆ. ಪ್ರತಿಯೊಂದಕ್ಕೂ ಚಿಕಿತ್ಸೆ ಭಿನ್ನವಾಗಿರುತ್ತದೆ. 'ಒಂದು ಶಿಶುವಿನ ಹೃದಯದಂತೆ ಮತ್ತೊಂದು ಇರುವುದಿಲ್ಲ' ಎಂದು ಮಕ್ಕಳ ಹೃದ್ರೋಗತಜ್ಞರು ಅಭಿಪ್ರಾಯ ಪಡುತ್ತಾರೆ.

ಪ್ರಸ್ತುತ ವೈದ್ಯಕೀಯ ವಿಜ್ಞಾನ ಬಹಳ ಪ್ರಗತಿ ಸಾಧಿಸಿದೆ. ಜನ್ಮಜಾತ ಹೃದ್ರೋಗ ಸಮಸ್ಯೆಗಳಿಗೆ ಈಗ ನಿರ್ದಿಷ್ಟ ಚಿಕಿತ್ಸೆಗಳಿವೆ. ಗರ್ಭಸ್ಥ ಭ್ರೂಣದ ಹಂತದಲ್ಲಿಯೇ ಹೃದ್ರೋಗವನ್ನು ನಿರ್ದಿಷ್ಟವಾಗಿ ಪತ್ತೆ ಮಾಡಬಲ್ಲ ತಂತ್ರಜ್ಞಾನವಿದೆ. ಸರಿಯಾದ ವೇಳೆಗೆ ವೈದ್ಯಕೀಯ ನೆರವು ಪಡೆದರೆ ಯಾವುದೇ ಜನ್ಮಜಾತ ಹೃದ್ರೋಗವನ್ನಾದರೂ ಸುಧಾರಿಸಬಲ್ಲ ಚಿಕಿತ್ಸೆಗಳಿವೆ. ಈಗಷ್ಟೇ ಜನಿಸಿದ ಮಗುವಿನ ಹೃದಯಕ್ಕೂ ಶಸ್ತ್ರಚಿಕಿತ್ಸೆ ಮಾಡಿ, ಸಮಸ್ಯೆಯನ್ನು ನಿಗ್ರಹಿಸಬಲ್ಲ ತೀವ್ರ ನಿಗಾ ಘಟಕಗಳಿವೆ. ಈ ನಿಟ್ಟಿನಲ್ಲಿ ಜಗತ್ತಿನ ಯಾವುದೇ ಮುಂದುವರೆದ ದೇಶಕ್ಕೆ ಸಮನಾಗಿ ನಿಲ್ಲುವಷ್ಟು ತಾಂತ್ರಿಕತೆ ಭಾರತದಲ್ಲೇ, ಅದೂ ಬೆಂಗಳೂರಿನ ಆಸ್ಪತ್ರೆಗಳಲ್ಲಿಯೇ ಲಭ್ಯವಿದೆ. ದೇಶ-ವಿದೇಶಗಳ ಶಿಶುಗಳು ಈಗ ಹೃದಯಚಿಕಿತ್ಸೆಗಾಗಿ ಬೆಂಗಳೂರನ್ನು ಎಡತಾಕುತ್ತಿದ್ದಾರೆ. ಮಕ್ಕಳ ಹೃದ್ರೋಗ ಈಗ ಪೋಷಕರಿಗೆ ಆತಂಕದ ವಿಷಯವಾಗಬೇಕಿಲ್ಲ.

❖

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಅಧ್ಯಾಯ 11 ಜೀವಿಗಳ ಸಂತಾನೋತ್ಪತ್ತಿ

ಜೀವಶಾಸ್ತ್ರ

ಎಸ್ಸೆಸ್ಸೆಲ್ಸಿ

ಸಂಭವನೀಯ ಪ್ರಶ್ನೆ ಉತ್ತರಗಳು:

1.ಏಕಲಿಂಗಿ ಮತ್ತು ದ್ವಿಲಿಂಗಿ ಹೂವುಗಳು ಎಂದರೇನು? ಉದಾಹರಣೆ ಕೊಡಿ.

- ಒಂದು ಹೂವು ಹೂವಿನ ಗಂಡುಭಾಗವಾದ ಕೇಸರಗಳನ್ನೋ ಅಥವಾ ಹೆಣ್ಣುಭಾಗವಾದ ಶಲಾಕಗಳನ್ನು ಮಾತ್ರ ಹೊಂದಿದ್ದರೆ ಅದು ಏಕಲಿಂಗಿ ಹೂವು.

ಉದಾ: ಪಪ್ಪಾಯ, ಕಲ್ಲಂಗಡಿ.

- ಒಂದು ಹೂವು ಗಂಡುಭಾಗವಾದ ಕೇಸರಗಳು ಮತ್ತು ಹೆಣ್ಣುಭಾಗವಾದ ಶಲಾಕಗಳು ಎರಡನ್ನೂ ಹೊಂದಿದ್ದರೆ ಅದು ದ್ವಿಲಿಂಗಿ ಹೂವು.

ಉದಾ: ದಾಸವಾಳ, ಸಾಸಿವೆ.

2. ಪರಾಗಸ್ಪರ್ಶ ಎಂದರೇನು? ಇದರ ಎರಡು ವಿಧಗಳನ್ನು ಹೆಸರಿಸಿ.

- ಹೂವಿನ ಗಂಡು ಲಿಂಗಾಣುಗಳಾದ ಪರಾಗರೇಣುಗಳು ಹೆಣ್ಣು ಭಾಗವಾದಂತಹ ಶಲಾಕಾಗ್ರದ ಮೇಲೆ ಬೀಳುವುದನ್ನು ಪರಾಗಸ್ಪರ್ಶ ಎನ್ನುವರು.

ಇದರ ಎರಡು ವಿಧಗಳೆಂದರೆ

- ಸ್ವಕೀಯಪರಾಗಸ್ಪರ್ಶ
- ಪರಕೀಯ ಪರಾಗಸ್ಪರ್ಶ

3. ಜರಾಯು ಎಂದರೇನು? ಅದರ ಕಾರ್ಯವೇನು?

- ತಾಯಿಯ ಗರ್ಭಕೋಶದ ಗೋಡೆಯೊಳಗೆ ಹುದುಗಿಕೊಂಡಿದ್ದು ಭ್ರೂಣದ ಬೆಳವಣಿಗೆಗೆ ಸಹಕರಿಸುವ ವಿಶೇಷ ಅಂಗಾಂಶವನ್ನು ಜರಾಯು ಎನ್ನುವರು.
- **ಜರಾಯುವಿನ ಕಾರ್ಯಗಳು:**
- ಕಾರ್ಬನ್ ಡೈ ಆಕ್ಸೈಡ್ ಮತ್ತು ಆಕ್ಸಿಜನ್‌ಗಳ ವಿನಿಯಮ ಮಾಡುತ್ತದೆ
- ಭ್ರೂಣಕ್ಕೆ ಬೇಕಾದ ಪೋಷಕಾಂಶಗಳನ್ನು ಒದಗಿಸುತ್ತದೆ
- ಭ್ರೂಣದ ತ್ಯಾಜ್ಯವಸ್ತುಗಳನ್ನು ಹೊರಹಾಕಲು ಸಹಾಯ ಮಾಡುತ್ತದೆ

4.ಅಂಡವು ಫಲಿತಗೊಳ್ಳದಿದ್ದರೆ ಏನಾಗುತ್ತದೆ? ಅಥವಾ ಋತುಚಕ್ರ ಹೇಗೆ ಉಂಟಾಗುತ್ತದೆ?

- ಅಂಡಾಶಯವು ಪ್ರತಿ ತಿಂಗಳೂ ಒಂದು ಅಂಡವನ್ನು ಬಿಡುಗಡೆಗೊಳಿಸುವುದರಿಂದ ಗರ್ಭಕೋಶವು ಫಲಿತ ಅಂಡವನ್ನು ಬರಮಾಡಿಕೊಳ್ಳಲು ಪ್ರತಿ ತಿಂಗಳು ತನ್ನನ್ನೇ ತಾನು ಸಜ್ಜುಗೊಳಿಸಿಕೊಳ್ಳುತ್ತದೆ. ಒಂದು ವೇಳೆ ಅಂಡವು ಫಲಿತಗೊಳ್ಳದಿದ್ದರೆ ಗರ್ಭಕೋಶದ ಒಳ ಸ್ತರಿಯು ನಿಧಾನವಾಗಿ ಬಿರುಕು ಬಿಟ್ಟು ರಕ್ತ ಮತ್ತು ಲೋಳೆಯ ರೂಪದಲ್ಲಿ ಯೋನಿಯಿಂದ ಹೊರಬರುತ್ತದೆ. ಈ ಚಕ್ರವು ಸರಿ ಸುಮಾರು ಪ್ರತಿ ತಿಂಗಳೂ ನಡೆಯುತ್ತದೆ. ಇದನ್ನೇ ಋತುಚಕ್ರ ಎನ್ನುವರು.

5.ಗಂಡು ಸಂತಾನೋತ್ಪತ್ತಿಯ ಅಂಗಗಳು ಹಾಗೂ ಅವುಗಳ ಕಾರ್ಯಗಳನ್ನು ವಿವರಿಸಿ.

- **ಗಂಡು ಸಂತಾನೋತ್ಪತ್ತಿಯ ಪ್ರಮುಖ ಅಂಗಗಳೆಂದರೆ,**
- **ವೃಷಣಗಳು:-** ವೀರ್ಯಾಣುಗಳ ಉತ್ಪತ್ತಿ ಮತ್ತು ಟೆಸ್ಟೋಸ್ಟಿರಾನ್ ಹಾರ್ಮೋನಿನ ಸ್ರವಿಕೆ

*ವೀರ್ಯನಾಳ:- ವೀರ್ಯಾಣುಗಳನ್ನು ಸಾಗಿಸುತ್ತದೆ.

- **ಪ್ರೋಸ್ಟೇಟ್ ಗ್ರಂಥಿ:-** ವೀರ್ಯಾಣುಗಳ ಪೋಷಣೆಗೆ ಅಗತ್ಯವಾದ ಪೋಷಕ ದ್ರವವನ್ನು ಸ್ರವಿಸುತ್ತದೆ.
- **ವೀರ್ಯಕೋಶಿಕೆ:-** ವೀರ್ಯಾಣುಗಳ ಪೋಷಣೆ ಮತ್ತು ಸಾಗಾಣಿಕೆಯನ್ನು ಸುಲಭಗೊಳಿಸುವ ದ್ರವವನ್ನು ಸ್ರವಿಸುತ್ತದೆ.
- **ಶಿಶ್ನ:-** ವೀರ್ಯಾಣುಗಳನ್ನು ಯೋನಿಯಲ್ಲಿ ಸೇರಿಸುತ್ತದೆ ಮತ್ತು ಮೂತ್ರವನ್ನು ದೇಹದಿಂದ ಹೊರಹಾಕುತ್ತದೆ.

ಪರೀಕ್ಷೆಗೆ ನೀಡಬಹುದಾದ ಸಂಭವನೀಯ ಚಿತ್ರಗಳು:

ಎ)ಶಲಾಕಾಗ್ರದ ಮೇಲೆ ಪರಾಗದ ಮೊಳೆಯುವಿಕೆ (ಚಿತ್ರ-8.8)



ಬಿ)ಒಂದು ಹೂವಿನ ನೀಳಛೇದ ಭಾಗ(ಚಿತ್ರ-8.7) (ಪರಿಕಲ್ಪನೆಗಳಾದ 8.1 & 8.2 ಈ ವಿಷಯಗಳಿಗೆ ಸಂಬಂದಿಸಿದಂತೆ ವಿಜ್ಞಾನ ಭಾಗ-2ರ ಪುಟಸಂಖ್ಯೆ 46 ರಿಂದ 53 ರವರೆಗಿನ ಪಠ್ಯ ಭಾಗವನ್ನು ಈ ವರ್ಷ ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ).

ಎ. ಬಾಲರಾಜು, ಎಂ.ಎಸ್ಸಿ., ಎಂ.ಇಡಿ.
ವಿಜ್ಞಾನ ಶಿಕ್ಷಕರು, ಚಿಕ್ಕಬಳ್ಳಾಪುರ

ಪ್ರಜಾವಾಣಿ ನೋಡಿಯೊ
ಹತ್ತನೇ ತರಗತಿ ಜೀವಶಾಸ್ತ್ರದ 'ಹೌ ಡು ಆರ್ಗ್ಯಾನಿಸಮ್ಸ್ ರಿಪ್ರೊಡ್ಯುಸ್' ಅಧ್ಯಯನಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾದರಿ ಪ್ರಶ್ನೋತ್ತರ ಫೀನಾಲ್ ತಯಾರಿಕಾ ವಿಧಾನ

ರಸಾಯನ ಶಾಸ್ತ್ರ

ಪಿಯುಸಿ

42) ಫೀನಾಲ್ ತಯಾರಿಕಾ ವಿಧಾನಗಳನ್ನು ಬರೆಯಿರಿ

ಉತ್ತರ:- ಫೀನಾಲ್ ಅನ್ನು ಕಾರ್ಬಾಲಿಕ್ ಆಮ್ಲ ಎಂದು ಸಹ ಕರೆಯುತ್ತಾರೆ. ಇದನ್ನು ಮೊದಲಿಗೆ 19ನೇ ಶತಮಾನದ ಪ್ರಾರಂಭದಲ್ಲಿ ಡಾಂಬರಿನಿಂದ ಬೇರ್ಪಡಿಸಲಾಯಿತು. ಇತ್ತೀಚಿನ ದಿನಗಳಲ್ಲಿ ಫೀನಾಲನ್ನು ವಾಣಿಜ್ಯಕವಾಗಿ ಕೃತಕವಾಗಿ ತಯಾರಿಸಲಾಗುತ್ತದೆ. ಪ್ರಯೋಗ ಶಾಲೆಯಲ್ಲಿ ಫೀನಾಲ್‌ಗಳನ್ನು ಬೆಂಜೀನ್ ಉತ್ಪನ್ನಗಳಿಂದ ಈ ಕೆಳಕಂಡ ವಿಧಾನಗಳಿಂದ ತಯಾರಿಸಬಹುದು

1. ಹ್ಯಾಲೋ ಆರೀನ್‌ಗಳಿಂದ: ಕ್ಲೋರೋ ಬೆಂಜೀನ್ ಅನ್ನು ಸೋಡಿಯಮ್ ಹೈಡ್ರಾಕ್ಸೈಡ್‌ನೊಂದಿಗೆ 623K ತಾಪ ಮತ್ತು 320 ವಾತಾವರಣದಷ್ಟು ಒತ್ತಡದಲ್ಲಿ ಕರಗಿಸಿದಾಗ ಸೋಡಿಯಮ್ ಫೀನೈಡ್ ಉತ್ಪತ್ತಿಯಾಗುತ್ತದೆ. ಸೋಡಿಯಮ್ ಫೀನಾಕ್ಸೈಡ್‌ನ ಆಮ್ಲೀಕರಣದಿಂದ ಫೀನಾಲ್ ಅನ್ನು ಪಡೆಯಬಹುದು.



2. ಬೆಂಜಿನ್ ಸಲ್ಫೋನಿಕ್ ಆಮ್ಲದಿಂದ: ಬೆಂಜೀನ್ ಅನ್ನು ಓಲೀಯಮ್ ಸಲ್ಫೋನೀಕರಣಕ್ಕೆ ಒಳಪಡಿಸಿದಾಗ ಬೆಂಜೀನ್ ಸಲ್ಫೋನಿಕ್ ಆಮ್ಲ ಉಂಟಾಗುತ್ತದೆ. ಈ ಆಮ್ಲವನ್ನು ಸೋಡಿಯಮ್ ಹೈಡ್ರಾಕ್ಸೈಡ್‌ನೊಂದಿಗೆ ಕಾಯಿಸಿದಾಗ ಸೋಡಿಯಮ್ ಫಿನಾಕ್ಸೈಡ್ ಆಗಿ ಬದಲಾಗುತ್ತದೆ. ಸೋಡಿಯಮ್ ಲವಣ ಆಮ್ಲೀಕರಿಸಿದಾಗ ಫೀನಾಲ್ ನೀಡುತ್ತದೆ.



3. ಡೈ ಆಜೋನಿಯಮ್ ಲವಣದಿಂದ: ಆರೋಮ್ಯಾಟಿಕ್ ಪ್ರಾಥಮಿಕ ಅಮೈನ್ ನೈಟ್ರಸ್ ಆಮ್ಲ (NaNO2 + HCl)ನ ಜೊತೆ 273-278K ಉಷ್ಣತೆಯಲ್ಲಿ ವರ್ತಿಸಿದಾಗ ಡೈ ಆಜೋನಿಯಮ್ ಲವಣ ಉತ್ಪತ್ತಿಯಾಗುತ್ತದೆ. ಲವಣವನ್ನು ನೀರಿನೊಂದಿಗೆ ಬಿಸಿ ಮಾಡಿದಾಗ ಅಥವಾ ಸಾರರಿಕ್ತ ಆಮ್ಲಗಳೊಂದಿಗೆ ಜಲವಿಭಜನೆ ಮಾಡಿದಾಗ ಫೀನಾಲ್ ಉತ್ಪತ್ತಿಯಾಗುತ್ತದೆ


NH_2
ಅನಿಲೀನ್
$NaNO_2$
+HCl
$\overset{\oplus}{N_2}\overset{\ominus}{Cl}$
H_2O
ಕಾಯಿಸು
ಬೆಂಜೀನ್‌ಡೈಆಝೂನಿಯಮ್ ಕ್ಲೋರೈಡ್
OH
+ N_2 + HCl

4. ಕ್ಯುಮೀನ್ ವಿಧಾನದಿಂದ: ಫೀನಾಲ್ ಅನ್ನು ಕ್ಯುಮಿನ್ ಹೈಡ್ರೋಕಾರ್ಬನ್‌ನಿಂದ ಉತ್ಪಾದಿಸಲಾಗುತ್ತದೆ. ಕ್ಯುಮಿನ್ (ಐಸೋ ಪ್ರೋಪೈಲ್ ಬೆಂಜೀನ್) ಗಾಳಿಯ ಉಪಸ್ಥಿತಿಯಲ್ಲಿ ಕ್ಯುಮಿನ್ ಹೈಡ್ರೋಪೆರಾಕ್ಸೈಡ್ ಆಗಿ ಉತ್ಕರ್ಷಿಸಲ್ಪಡುತ್ತದೆ. ಇದನ್ನು ಸಾರರಿಕ್ತ ಆಮ್ಲದೊಂದಿಗೆ ವರ್ತಿಸಿದಾಗ ಫೀನಾಲ್ ಮತ್ತು ಆಸಿಟೋನ್‌ಗಳಾಗಿ ಪರಿವರ್ತನೆಯಾಗುತ್ತದೆ. ಆಸಿಟೋನ್ ಉತ್ಪನ್ನವನ್ನು ಈ ವಿಧಾನದಿಂದ ಹೆಚ್ಚಿನ ಪ್ರಮಾಣದಲ್ಲಿ ಪಡೆಯಬಹುದು.



43) ಫ್ರಿಯಾನ್ ಬಗ್ಗೆ ಬರೆಯಿರಿ

ಉತ್ತರ:- ಮಿಥೇನ್ ಮತ್ತು ಈಥೇನ್‌ಗಳಿಂದಾದ ಕ್ಲೋರೊಫ್ಲೋರೋಕಾರ್ಬನ್‌ಸಂಯುಕ್ತಗಳನ್ನುಫ್ರಿಯಾನ್‌ಗಳು ಎನ್ನುವರು. ಅವು ವಿಷವಲ್ಲದ, ಕ್ರಿಯಾಶೀಲವಲ್ಲದ ಕೊರೆಯದ, ಹೆಚ್ಚು ಸ್ಥಿರವಾದ ಸುಲಭವಾಗಿ ದ್ರವೀಕರಿಸಬಲ್ಲ ಅನಿಲಗಳು. ಫ್ರಿಯಾನ್ 12 (CCl2F2) ಕೈಗಾರಿಕೆಯಲ್ಲಿ ಸಾಮಾನ್ಯವಾಗಿ ಬಳಸುವ ಫ್ರಿಯಾನ್ ಇದನ್ನು ಟೆಟ್ರಾಕ್ಲೋರೋ ಮಿಥೇನ್ ಸ್ವಾಟ್ಸ್ ಕ್ರಿಯೆಗೆ ಒಳಪಡಿಸಿ ತಯಾರಿಸುತ್ತಾರೆ. ಇವುಗಳನ್ನು ಪ್ರಮುಖವಾಗಿ ನೋದನಾಕಾರಿಯಾಗಿ, ಶೀತಕಗಳಲ್ಲಿ ಮತ್ತು ಹವಾ ನಿಯಂತ್ರಿತ ಉದ್ದೇಶಗಳಿಗೆ ಬಳಸುತ್ತಾರೆ. 1974ರಲ್ಲಿ ವಿಶ್ವದ ವಾರ್ಷಿಕ ಫ್ರಿಯಾನ್‌ಗಳ ಉತ್ಪಾದನೆಯು ಸುಮಾರು 2 ಬಿಲಿಯನ್ ಪೌಂಡ್‌ಗಳಾಗಿತ್ತು. ಈಗಲೂ ಹೆಚ್ಚಿನ ಪ್ರಮಾಣದ ಫ್ರಿಯಾನ್‌ಗಳನ್ನು ಶೀತಕಗಳಲ್ಲಿ ಬಳಸುತ್ತಿದ್ದು ಕ್ರಮೇಣವಾಗಿ ವಾತಾವರಣದ ಮೂಲಕ ಸ್ತರಗೋಳದಲ್ಲಿ ಪ್ರಸರಣಗೊಳ್ಳುತ್ತದೆ. ಸ್ತರಗೋಳದಲ್ಲಿ ಪ್ರೀಯಾನುಗಳು ಮುಕ್ತ ಮಾತೃಕೆ ಸರಪಣಿ ಕ್ರಿಯೆಗಳನ್ನು ಆರಂಭಿಸುವುದರಿಂದ ಸ್ವಾಭಾವಿಕ ಒಝೋನ್ ಸಮತೋಲನವನ್ನು ಹಾಳು ಮಾಡುತ್ತವೆ.

44) ಕೆಳಗಿನ ಸಂಯುಕ್ತಗಳ IUPAC ಹೆಸರುಗಳನ್ನು ನೀಡಿ



$$\text{(i)}\ CH_3-\underset{\underset{Cl}{|}}{CH}-\underset{\underset{CH_3}{|}}{CH}-\underset{\underset{CH_3}{|}}{CH}-CH_2OH \qquad \text{(ii)}\ CH_3-\underset{\underset{CH_3}{|}}{CH}-O-CH_2CH_3$$

ಉತ್ತರ:-.

1. 4–ಕ್ಲೋರೋ–2,3–ಡೈಮಿಥೈಲ್ ಪೆಂಟೀನ್ –1–ಓಲ್
2. 2– ಈಥಾಕ್ಸಿ ಪ್ರೋಪೆನ್
3. 2,6–ಡೈಮಿಥೈಲ್ ಫೀನಾಲ್
4. 1–ಈಥಾಕ್ಸಿ –2–ನೈಟ್ರೋ ಸೈಕ್ಲೋಹೆಕ್ಸೇನ್

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಪ್ರಜಾವಾಣಿ ನೋಡಿಯೊ
ದ್ವಿತೀಯ ರಸಾಯನಶಾಸ್ತ್ರದ ಆಂಗ್ಲಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸುಭಾಷಿತ

ಹೆಚ್ಚು ಹೆಚ್ಚು ಟೀಕೆಗಳನ್ನು ಮಾಡುತ್ತಾ ಹೋದಷ್ಟೂ ಪ್ರೀತಿಸುವುದು ಕಡಿಮೆಯಾಗುತ್ತದೆ.

–ಹೊನೌರಿ ಡೆ ಬಲ್‌ಜಾಕ್

ಜಾತ್ರೆಗಳಿಗೆ ಕೋಮುದ್ವೇಷದ ಕರಿನೆರಳು ಚಿಗುರಿನಲ್ಲಿಯೇ ಚಿವುಟುವುದು ಅಗತ್ಯ

ಧಾರ್ಮಿಕ ಸಾಮರಸ್ಯದ ವೇದಿಕೆಗಳಾಗಿದ್ದ ಜಾತ್ರೆಗಳಿಗೆ ನಾಡಿನ ಕೆಲವು ಭಾಗಗಳಲ್ಲಿ ಕೋಮು ಬಣ್ಣ ಬಳಿಯುತ್ತಿರುವ ಪ್ರಕರಣಗಳು ವರದಿಯಾಗುತ್ತಿರುವುದು ದುರದೃಷ್ಟಕರ. ಶಿವಮೊಗ್ಗದ ಮಾರಿಕಾಂಬಾ ಜಾತ್ರೆಯಲ್ಲಿ ಮುಸ್ಲಿಮರಿಗೆ ವ್ಯಾಪಾರಕ್ಕೆ ಅವಕಾಶ ನೀಡದಿರಲು ಬಿಜೆಪಿ ಮತ್ತು ಬಜರಂಗದಳದ ಕಾರ್ಯಕರ್ತರು ಮುಂದಾಗಿದ್ದಾರೆ. ಉಡುಪಿ ಜಿಲ್ಲೆಯ ಕಾಪುವಿನ ಮೂರು ಮಾರಿಗುಡಿಗಳಲ್ಲಿನ ಸುಗ್ಗಿ ಮಾರಿ ಪೂಜೆ ಸಂದರ್ಭದಲ್ಲಿ ಮುಸ್ಲಿಮರಿಗೆ ವ್ಯಾಪಾರಕ್ಕೆ ಅವಕಾಶ ನೀಡದಂತೆ ಹಿಂದೂ ಸಂಘಟನೆಗಳ ಕಾರ್ಯಕರ್ತರು ಪ್ರಯತ್ನ ನಡೆಸಿದ್ದಾರೆ. 'ಮುಸ್ಲಿಂ ಸಮುದಾಯದವರಿಗೆ ಅಂಗಡಿಗಳನ್ನು ಹಾಕಲು ಅವಕಾಶ ಕೊಟ್ಟರೆ ಮುಂದೆ ಎದುರಾಗುವ ಅನಾಹುತಗಳಿಗೆ ನೀವೇ ಹೊಣೆ' ಎಂದು ಕಾಪುವಿನಲ್ಲಿ ಪುರಸಭೆ ಮುಖ್ಯಾಧಿಕಾರಿಗೆ ನೀಡಿರುವ ಎಚ್ಚರಿಕೆ ರೂಪದ ಮನವಿಯಲ್ಲಿ ತಿಳಿಸಲಾಗಿದೆ. ಈ ಬೆದರಿಕೆಗೆ ಪ್ರತಿಕ್ರಿಯಿಸಿರುವ ಪುರಸಭೆ ಮುಖ್ಯಾಧಿಕಾರಿಯು ನಿರ್ದಿಷ್ಟ ಸಮುದಾಯದವರಿಗೆ ಮಾತ್ರ ವ್ಯಾಪಾರಕ್ಕೆ ಅವಕಾಶ ನೀಡಲು ಕಾನೂನಿನಲ್ಲಿ ಅವಕಾಶವಿಲ್ಲ ಎಂದು ಹೇಳಿರುವುದು ಸರಿಯಾಗಿದೆ. ಆದರೆ, ಹಿಂದೂಗಳಿಗೆ ಮಾತ್ರ ವ್ಯಾಪಾರ ಮಾಡಲು ಅವಕಾಶ ಕಲ್ಪಿಸುವಂತೆ ಹಿಂದೂ ಸಂಘಟನೆಗಳು ಮಾಡಿಕೊಂಡಿರುವ ಮನವಿಗೆ ದೇವಸ್ಥಾನದ ಆಡಳಿತ ಮಂಡಳಿ ಸಕಾರಾತ್ಮಕವಾಗಿ ಸ್ಪಂದಿಸಿರುವುದು ಧರ್ಮ ಒಪ್ಪುವಂತಹದ್ದೂ ಅಲ್ಲ, ಸಂವಿಧಾನಾತ್ಮಕವೂ ಅಲ್ಲ. ಇಷ್ಟು ವರ್ಷಗಳ ಕಾಲ ಮುಸ್ಲಿಂ ವ್ಯಾಪಾರಿಗಳು ಜಾತ್ರೆಗಳಲ್ಲಿ ವಹಿವಾಟು ನಡೆಸುತ್ತಿದ್ದಾಗ ಇಲ್ಲದ ತಕರಾರು ಈಗ ದಿಢೀರ್ ಉದ್ಭವಿಸಿರುವುದು ಅನುಮಾನಗಳಿಗೆ ಕಾರಣವಾಗುವಂತಿದೆ. ಶಿವಮೊಗ್ಗದ ಮಾರಿಕಾಂಬಾ ಜಾತ್ರೆ ಹಲವು ದಶಕಗಳಿಂದ ಸೌಹಾರ್ದಕ್ಕೆ ಹೆಸರಾದುದು. ಈಗ ಇದ್ದಕ್ಕಿದ್ದಂತೆ ಬಿಜೆಪಿ ಹಾಗೂ ಬಜರಂಗದಳದ ಕೆಲವು ಮುಖಂಡರು ಧರ್ಮದ ಹೆಸರಿನಲ್ಲಿ ಪ್ರತ್ಯೇಕತೆಯ ಮಾತನಾಡುವ ಮೂಲಕ ಜಾತ್ರೆ ಹೊಂದಿರುವ ಧಾರ್ಮಿಕ ಸಹಿಷ್ಣುತೆಯ ವರ್ಚಸ್ಸಿಗೆ ಧಕ್ಕೆಯುಂಟು ಮಾಡುತ್ತಿದ್ದಾರೆ. ಮಳಿಗೆಗಳ ವಿತರಣೆ ಮತ್ತು ನಿರ್ವಹಣೆಯ ಟೆಂಡರ್ ಪಡೆದಿದ್ದ ವ್ಯಕ್ತಿಯನ್ನು ಹಿಂದಕ್ಕೆ ಸರಿಯುವಂತೆ ಮಾಡಿ, ಆ ಟೆಂಡರ್ ಹಣ ಭರಿಸುವ ಮೂಲಕ ಹಿಂದೂಗಳಿಗೆ ಮಾತ್ರ ಮಳಿಗೆ ವಿತರಿಸಲು ಮುಂದಾಗಿರುವ ಬಜರಂಗದಳದ ಪ್ರಯತ್ನ ಆತಂಕಕಾರಿಯಾದುದು.

ಧಾರ್ಮಿಕ ಅಸಹನೆಯನ್ನು ಬಿತ್ತುವವರ ವಿರುದ್ಧ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ಕ್ರಮ ಜರುಗಿಸಬೇಕು

ಮುಸ್ಲಿಂ ವ್ಯಾಪಾರಿಗಳಿಗೆ ಅವಕಾಶ ಮಾಡಿಕೊಡುವುದಿಲ್ಲ ಎನ್ನುವ ಧೋರಣೆಗೆ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಅವಕಾಶವಿಲ್ಲ. ದೇಶದ ಯಾವುದೇ ಭಾಗದಲ್ಲಿ ಹಿಂದೂಗಳಿಗೆ ವ್ಯಾಪಾರ ಮಾಡಲು ಅವಕಾಶವಿರುವಂತೆಯೇ ಮುಸ್ಲಿಂ ಸೇರಿದಂತೆ ಎಲ್ಲ ಧರ್ಮದವರಿಗೂ ಅವಕಾಶವಿದೆ. ಸಂವಿಧಾನ ಕಲ್ಪಿಸಿರುವ ಈ ವ್ಯವಸ್ಥೆಗೆ ಯಾರಿಂದಲಾದರೂ ಅಡ್ಡಿಯುಂಟಾದರೆ ಅಂಥವರ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳಬೇಕು. ಕ್ರಿಯೆ-ಪ್ರತಿಕ್ರಿಯೆಯ ಮಾತನಾಡುವ ಮೂಲಕ ಕೋಮುಕೃತ್ಯಗಳಿಗೆ ಗಾಳಿ ಹಾಕುವುದನ್ನು ನಿಲ್ಲಿಸಿ, ಕೋಮುದ್ವೇಷ ಹರಡುವವರ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳುವ ಬಗ್ಗೆ ಕ್ರಿಯಾಶೀಲವಾಗಬೇಕು. ಮುಸ್ಲಿಂ ಸಮುದಾಯದವರಿಗೆ ವ್ಯಾಪಾರ ಮಾಡಲು ಅವಕಾಶ ಕೊಡುವುದಿಲ್ಲ ಎನ್ನುವ ಯೋಚನೆಯೇ ನಂಜಿನಿಂದ ಕೂಡಿದ್ದು, ಅಂಥ ಪ್ರಯತ್ನಗಳನ್ನು ಸರ್ಕಾರ ಚಿಗುರಿನಲ್ಲಿಯೇ ಚಿವುಟಿ ಹಾಕಬೇಕು; ಅಲ್ಪಸಂಖ್ಯಾತರಲ್ಲಿ ಅಸುರಕ್ಷತೆಯನ್ನು ಮೂಡಿಸುವ ಪ್ರಯತ್ನಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಧಾರ್ಮಿಕ ಅಸಹನೆಯನ್ನು ಬಿತ್ತುವವರ ವಿರುದ್ಧ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ಕ್ರಮ ಜರುಗಿಸಬೇಕು. ಶಿವಮೊಗ್ಗ ಮತ್ತು ಕಾಪುವಿನ ಪ್ರಕರಣಗಳಿಗೆ ಸಂಬಂಧಿಸಿದಂತೆ ಸರ್ಕಾರ ತಕ್ಷಣ ಮಧ್ಯಪ್ರವೇಶಿಸಿ, ಮುಸ್ಲಿಂ ವ್ಯಾಪಾರಿಗಳಿಗೆ ಜಾತ್ರೆಗಳಲ್ಲಿ ವ್ಯಾಪಾರ ನಡೆಸಲು ಅವಕಾಶ ದೊರೆಯುವಂತೆ ನೋಡಿಕೊಳ್ಳಬೇಕು.

ನಾಡಿನ ಅನೇಕ ಜಾತ್ರೆಗಳು ಧಾರ್ಮಿಕ ಸಾಮರಸ್ಯದ ಪ್ರಯೋಗಶಾಲೆಗಳಾಗಿವೆ. ಹಿಂದೂ ಮತ್ತು ಮುಸ್ಲಿಂ ಎರಡೂ ಸಮುದಾಯಗಳು ಬೆರೆತು ಜಾತ್ರೆಗಳು, ಧಾರ್ಮಿಕ ಆಚರಣೆಗಳ ಶೋಭೆ ಹೆಚ್ಚಿಸುವ ಹಲವು ಜೀವಂತ ಉದಾಹರಣೆಗಳು ಕರ್ನಾಟಕದಲ್ಲಿವೆ. ಅಂಥ ಸಾಮರಸ್ಯವನ್ನು ಕದಡುವ ಹಾಗೂ ಧರ್ಮದ ಹೆಸರಿನಲ್ಲಿ ಸಮಾಜವನ್ನು ವಿಭಜಿಸುವ ಪ್ರವೃತ್ತಿ ಖಂಡನೀಯ. ಕೋವಿಡ್ ಸಾಂಕ್ರಾಮಿಕದಿಂದಾಗಿ ಎರಡು ವರ್ಷಗಳಿಂದ ಜಾತ್ರೆಗಳು ಔಪಚಾರಿಕ ಆಚರಣೆಗಷ್ಟೇ ಸೀಮಿತವಾಗಿದ್ದವು. ಸೋಂಕಿನ ಆತಂಕ ಕಡಿಮೆಯಾಗಿರುವ ಸಂದರ್ಭದಲ್ಲಿ ಜಾತ್ರೆಗಳು ವಿಜೃಂಭಣೆಯಿಂದ ನಡೆಯುತ್ತಿವೆ. ಈ ಸಂಭ್ರಮಕ್ಕೆ ಧರ್ಮದ ಹೆಸರಿನಲ್ಲಿ ವಿಷ ಕಾರುವ ಕೆಲವರು ಅಡ್ಡಿಯುಂಟು ಮಾಡುತ್ತಿರುವುದು ದುರದೃಷ್ಟಕರ. ಹಿಜಾಬ್‌ಗೆ ಸಂಬಂಧಿಸಿದಂತೆ ಹೈಕೋರ್ಟ್ ತೀರ್ಪು ವಿರೋಧಿಸಿ ಮುಸ್ಲಿಂ ವರ್ತಕರು ಅಂಗಡಿಗಳನ್ನು ಮುಚ್ಚಿ ಪ್ರತಿಭಟಿಸಿದ್ದನ್ನು ನೆಪವಾಗಿಸಿಕೊಂಡು, ಅವರ ಜೊತೆ ವ್ಯವಹಾರ ನಡೆಸಬೇಡಿ ಎಂದು ಸಾಮಾಜಿಕ ಜಾಲತಾಣಗಳಲ್ಲಿ ನಡೆಸುವ ಅಪಪ್ರಚಾರವೂ ಸರಿಯಾದುದಲ್ಲ. ಇಂಥ ಪ್ರಯತ್ನಗಳು ಒಂದು ವರ್ಗದ ಬದುಕುವ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನಗಳಾಗಿವೆ. ಆಯಾ ದಿನದ ದುಡಿಮೆಯನ್ನು ನೆಚ್ಚಿಕೊಂಡು ಬದುಕುವ ಶ್ರೀಸಾಮಾನ್ಯರು ಎಲ್ಲ ಧರ್ಮಗಳಲ್ಲೂ ಇದ್ದಾರೆ. ಅಂಥವರನ್ನು ಧರ್ಮದ ಹೆಸರಿನಲ್ಲಿ ಪ್ರತ್ಯೇಕಿಸಿ ದೂರ ಸರಿಸುವುದು ಕಾನೂನಿಗೆ ವಿರುದ್ಧವಾದುದಷ್ಟೇ ಅಲ್ಲ, ಅಮಾನವೀಯವೂ ಹೌದು.

ದಿನದ ಟ್ವೀಟ್

ನೆರವು ಅನಿವಾರ್ಯ?

ವಿದ್ಯಾರ್ಥಿಗಳಿಗಾಗಿ ಕಾಗದವನ್ನು ಆಮದು ಮಾಡಿಕೊಳ್ಳಲು ಹಣವಿಲ್ಲದ ಕಾರಣದಿಂದ ಶಾಲಾ ಪರೀಕ್ಷೆಗಳನ್ನು ಶ್ರೀಲಂಕಾ ರದ್ದುಗೊಳಿಸಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯು (ಐಎಂಎಫ್) ನೆರವಿಗೆ ಬರಬೇಕಾದುದು ಅನಿವಾರ್ಯವೆಂಬಂತೆ ಕಾಣುತ್ತಿದೆ.

ಸುಮಂತ್ ರಾಮನ್, ಟಿ.ವಿ. ನಿರೂಪಕ, ರಾಜಕೀಯ ವಿಶ್ಲೇಷಕ

ಕಿಡಿನುಡಿ

#TRIPSWaiver thread ಬರೆದ್ರೆ 50 ಜನ ಓದಲ್ಲ, ಕಷ್ಟಪಟ್ಟು ವಿಚಾರಗಳನ್ನು ಒಟ್ಟುಹಾಕಿ ಬರಹಗಳನ್ನು ಬರೆದ್ರೆ ಓದೋವ್ರ ಸಂಖ್ಯೆ ಎರಡಂಕಿ ದಾಟಲ್ಲ. ರಸ್ತೆ, ಕುಡಿಯುವ ನೀರು, ತಾಯ್ನುಡಿ, ಉದ್ಯೋಗ... ಉಹ್ಞೂಂ, ಜನ ಜಪ್ಪಯ್ಯ ಅನ್ನಲ್ಲ. ಹಿಂದೂ- ಮುಸ್ಲಿಂ ಅಂತ ಒಂದು ಟ್ವೀಟ್ ಹಾಕಿದ್ರೆ ಲಬೋ ಲಬೋ ಅಂತ ಹೊಯ್ಕೊಳ್ತಾರೆ. ಇದ್ಕೇ ಈ ದೇಶ ಹಿಂಗಾಗಿರೋದು.

ಮೈತ್ರೇಯಿ ಹೆಗಡೆ, ವಕೀಲೆ

25 ವರ್ಷಗಳ ಹಿಂದೆ

ಶನಿವಾರ, 22-3-1997

- **ಮಾಯಾವತಿ ನೇತೃತ್ವದ ಸರ್ಕಾರ ಇಂದು ಪ್ರಮಾಣವಚನ**

ಲಖನೌ, ಮಾರ್ಚ್ 21 (ಪಿಟಿಐ)– ಉತ್ತರ ಪ್ರದೇಶದಲ್ಲಿ ಮಾಯಾವತಿ ನೇತೃತ್ವದ ಬಿಎಸ್‌ಪಿ– ಬಿಜೆಪಿ ಪಕ್ಷಗಳ ಸಮ್ಮಿಶ್ರ ಸರ್ಕಾರದ ಐವರು ಸದಸ್ಯರ ಸಚಿವ ಸಂಪುಟ ಇಂದು ಪ್ರಮಾಣವಚನ ಸ್ವೀಕರಿಸುವ ಮೂಲಕ ಕಳೆದ ಐದು ತಿಂಗಳ ಅವಧಿಯ ರಾಷ್ಟ್ರಪತಿ ಆಳ್ವಿಕೆ ಕೊನೆಗೊಂಡಿತು.

- **ಆಲಮಟ್ಟಿ ಅಣೆ ನಿರ್ಮಾಣ ಕಾಮಗಾರಿ ನಿಲ್ಲದು**

ಬೆಂಗಳೂರು, ಮಾರ್ಚ್ 21– ಆಲಮಟ್ಟಿ ಅಣೆ ಕಟ್ಟೆ ನಿರ್ಮಾಣ ಕಾರ್ಯಕ್ಕೆ ಆಂಧ್ರಪ್ರದೇಶವಾಗಲಿ ಅಥವಾ ಯಾರೇ ಆಗಲಿ ಅಡಚಣೆ ಉಂಟು ಮಾಡುವುದನ್ನು ಸಹಿಸುವುದಿಲ್ಲ. ನಿಯೋಜಿಸಿರುವಂತೆ ಕೈಗೊಂಡಿರುವ ಅಣೆಕಟ್ಟಿನ ಕಾಮಗಾರಿಗಳನ್ನು ಯಾವುದೇ ಕಾರಣದಿಂದ ಸ್ಥಗಿತಗೊಳಿಸುವುದಿಲ್ಲ ಎಂದು ಸ್ಪಷ್ಟಪಡಿಸುವ ನಿರ್ಣಯವನ್ನು ಇಂದು ವಿಧಾನಸಭೆಯು ಸರ್ವಾನುಮತದಿಂದ ಅಂಗೀಕರಿಸಿತು. ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಮಂಡಿಸಿದ ನಿರ್ಣಯಕ್ಕೆ ಪಕ್ಷಭೇದವಿಲ್ಲದೆ ಎಲ್ಲರ ಒಪ್ಪಿಗೆ ದೊರೆಯಿತು.

- **ಸುಪ್ರೀಂ ಕೋರ್ಟಿಗೆ ಆಂಧ್ರದ ಮೊರೆ**

ಹೈದರಾಬಾದ್, ಮಾರ್ಚ್ 21 (ಪಿಟಿಐ)– ಆಲಮಟ್ಟಿ ಅಣೆಕಟ್ಟಿನ ಎತ್ತರ ಹೆಚ್ಚಳವನ್ನು ಸ್ಥಗಿತಗೊಳಿಸುವಂತೆ ಕರ್ನಾಟಕ ಸರ್ಕಾರಕ್ಕೆ ಆದೇಶಿಸಬೇಕು ಎಂದು ಆಂಧ್ರಪ್ರದೇಶ ಸರ್ಕಾರ ಇಂದು ಸುಪ್ರೀಂ ಕೋರ್ಟಿಗೆ ಮನವಿ ಸಲ್ಲಿಸಿದೆ.

50 ವರ್ಷಗಳ ಹಿಂದೆ

ಬುಧವಾರ, 22-3-1972

- **ಹುಬ್ಬಳ್ಳಿಯಲ್ಲಿ ಮತ್ತೆ ಗಲಭೆ– ಅಗ್ನಿಸ್ಪರ್ಶ: ಲಾಠಿಪ್ರಹಾರ, ಕರ್ಫ್ಯೂ**

ಹುಬ್ಬಳ್ಳಿ, ಮಾರ್ಚ್ 21– ಇಂದು ಹುಬ್ಬಳ್ಳಿಯ ಅನೇಕ ಕಡೆಗಳಲ್ಲಿ ಹಠಾತ್ತನೆ ಅಗ್ನಿಸ್ಪರ್ಶ, ಕಲ್ಲು ಮತ್ತು ಸೋಡಾ ಶೀಷೆಗಳ ಎಸೆತದ ಪ್ರಕರಣಗಳು ಸಂಭವಿಸಿ ಪೊಲೀಸರು ಲಾಠಿ ಪ್ರಹಾರ ಮಾಡಿದರಲ್ಲದೆ ಕರ್ಫ್ಯೂ ಜಾರಿಗೆ ತರಲಾಯಿತು.

ಕರ್ಫ್ಯೂ ಇಂದು ಮತ್ತು ನಾಳೆ ಸಂಜೆ 7ರಿಂದ ಬೆಳಿಗ್ಗೆ 8 ಗಂಟೆವರೆಗೆ ಹುಬ್ಬಳ್ಳಿ ನಗರ ಮತ್ತು ಹತ್ತು ಕಿಲೊ ಮೀಟರ್ ಸುತ್ತಲ ಪ್ರದೇಶದಲ್ಲಿ ಜಾರಿಯಲ್ಲಿರುತ್ತದೆ.

ಕಳೆದ ಶುಕ್ರವಾರ ಇಲ್ಲಿಯ ಕಾರ್ಪೊರೇಷನ್ ಕಚೇರಿ ಬಳಿ ಎರಡು ಗುಂಪುಗಳ ನಡುವೆ ನಡೆದ ಘರ್ಷಣೆಗಳಲ್ಲಿ ಇರಿತಕ್ಕೊಳಗಾಗಿದ್ದ 22 ವರ್ಷದ ಯುವಕ ಶ್ರೀಕಾಂತ್ ಚಿಪ್ಕರ್ ಅವರು ಇಂದು ಮೃತರಾದ ಸುದ್ದಿ ಕೇಳಿದ ಕೂಡಲೇ ನಗರದ ಕೆಲವು ಭಾಗಗಳಲ್ಲಿ ಮತ್ತೆ ಬೆಂಕಿ ಹಚ್ಚುವ ಹಾಗೂ ಗೂಂಡಾಗಿರಿ ಪ್ರಕರಣಗಳು ಆರಂಭವಾದವು.

- **ರಾಜ್ಯ ಸಂಪುಟ ರಚನೆ: ದೆಹಲಿಯಲ್ಲಿ ಮುಖ್ಯರೊಡನೆ ಅರಸು ಮಾತುಕತೆ**

ನವದೆಹಲಿ, ಮಾರ್ಚ್ 21– ಮೈಸೂರು ಸಂಪುಟದ ಉಳಿದ ಸಚಿವರ ಆಯ್ಕೆ ಸಂಬಂಧದಲ್ಲಿ ಇಲ್ಲಿಗೆ ಆಗಮಿಸಿರುವ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರು ಇಂದು ಹೈಕಮಾಂಡಿನ ಮುಖ್ಯರೊಡನೆ ಸಮಾಲೋಚನೆ ನಡೆಸಿದರು.

ಅರಸು ಅವರು ಇಂದು ರಕ್ಷಣಾ ಸಚಿವ ಜಗಜೀವನರಾಂ ಅವರನ್ನೂ ಕಂಡಿದ್ದರು.

ಎಳೆಯರನ್ನು ಒಂದು ಕೃತಿಗೆ ವಿಮುಖರನ್ನಾಗಿಸುವ ಸುಲಭೋಪಾಯವೆಂದರೆ ಅದನ್ನು ಪಠ್ಯಕ್ಕೆ ಅಳವಡಿಸುವುದು

ಯುದ್ಧಭೂಮಿಯಲ್ಲಿ ಶಾಂತಿಯ ಉಪದೇಶ

ವಿಶ್ಲೇಷಣೆ

ಡಾ. ಟಿ.ಎನ್. ವಾಸುದೇವಮೂರ್ತಿ

ಭಗವದ್ಗೀತೆಯನ್ನು ಶಾಲಾ ಪಠ್ಯಪುಸ್ತಕದಲ್ಲಿ ಸೇರಿಸುವುದರ ಕುರಿತು ಚಿಂತನೆ ನಡೆದಿದೆ. ಬಿಜೆಪಿ ಆಳ್ವಿಕೆಯ ಗುಜರಾತ್‌ನಲ್ಲಿ ಈ ಉಪಕ್ರಮವನ್ನು ಈಗಾಗಲೇ ಜಾರಿಗೊಳಿಸಲಾಗಿದೆ. ಕರ್ನಾಟಕದ ಮಕ್ಕಳಿಗೂ ಪಠ್ಯಕ್ರಮದಲ್ಲಿ ಗೀತೆ ಅಳವಡಿಸುವ ಬಗ್ಗೆ ಸರ್ಕಾರ ಆಸಕ್ತಿ ತೋರಿಸುತ್ತಿದೆ. ಇದು ವೋಟಿನ ವ್ಯಾಮೋಹವೋ ಅಥವಾ ಬೌದ್ಧಿಕ ಇಬ್ಬಂದಿತನವೋ ತಿಳಿಯದಾಗಿದೆ.

ಭಗವದ್ಗೀತೆಯು ಕುರುಕ್ಷೇತ್ರ ಯುದ್ಧದ ಮೊದಲ ದಿವಸ ಯುದ್ಧಭೂಮಿಯಲ್ಲಿ ಕೃಷ್ಣಾರ್ಜುನರ ನಡುವೆ ನಡೆದ ಒಂದು ಖಾಸಗಿ ಸಂವಾದವಾಗಿದೆ. 'ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಯುದ್ಧೋತ್ಸಾಹಿಗಳಾದ ನನ್ನ ಮಕ್ಕಳು ಮತ್ತು ಪಾಂಡವರು ಏನು ಮಾಡುತ್ತಿದ್ದಾರೆ, ಹೇಳು ಸಂಜಯ' ಎಂದು ಸಂಜಯನನ್ನು ಧೃತರಾಷ್ಟ್ರ ಕೇಳುತ್ತಾನೆ. ಅಂಧರೊಬ್ಬರ ಪ್ರಶ್ನೆಯಿಂದ ಭಗವದ್ಗೀತೆ ಶುರುವಾಗುತ್ತದೆ. ಹಾಗೆ ನೋಡಿದರೆ ಜಗತ್ತಿನ ಎಲ್ಲ ಧರ್ಮಗ್ರಂಥಗಳೂ ಅಂಧರ ಪ್ರಶ್ನೆಯಿಂದಲೇ ಪ್ರಾರಂಭವಾಗುವುದು. ಆದರೆ ಗೀತೆಯ ವೈಶಿಷ್ಟ್ಯ ಏನೆಂದರೆ, ಅದನ್ನು ಶಾಂತಿಯ ನೆಲದಲ್ಲಲ್ಲ; ರಣರಂಗದಲ್ಲಿ ಉಪದೇಶಿಸಲಾಯಿತು. ಯುದ್ಧಭೂಮಿಯ ಮಧ್ಯದಲ್ಲಿ ಶಾಂತಿಯ ಉಪದೇಶ ನಡೆಯುವುದೇ ಒಂದು ಅಪೂರ್ವ ರೂಪಕವಾಗಿದೆ.

ಗೀತೆಯನ್ನು ಒಂದು ಧಾರ್ಮಿಕ ಕೃತಿ ಎನ್ನುವುದಕ್ಕಿಂತ ಒಂದು ಕಾವ್ಯಕೃತಿ ಎಂದು ಕರೆಯುವುದು ಸೂಕ್ತ. ಬೈಬಲ್, ಕುರಾನ್ ಸಹ ಅವುಗಳ ಸ್ವರೂಪದಲ್ಲಿ ಕಾವ್ಯಕೃತಿಗಳೇ ಆಗಿವೆ. ಮಿಲ್ಟನ್, ಡಾಂಟೆ ಮುಂತಾದವರ ಅಭಿಜಾತ ಕಾವ್ಯಕೃತಿಗಳು ಬೈಬಲ್ಲನ್ನು ಆಧರಿಸಿದ್ದಾಗಿವೆ. ಹಾಗೆ ನೋಡಿದರೆ ಧರ್ಮ ಮತ್ತು ಕಾವ್ಯಗಳ ನಡುವೆ ಗಾಢವಾದ ಸಂಬಂಧವಿದೆ. ಒಂದು ಧಾರ್ಮಿಕ ಮನಸ್ಸು ಕಾವ್ಯಾಭಿರುಚಿಯ ಒಂದು ಪರಿಷ್ಕೃತ, ಸುಧಾರಿತ ರೂಪವಾಗಿದೆ. ಈ ಕಾವ್ಯಾಭಿರುಚಿಯನ್ನು ವರಕವಿ ಬೇಂದ್ರೆ 'ಓಂಕಾರದ ಶಂಖನಾದಕಿಂತ ಕಿಂಚಿದೂನ' ಎಂದು ವಿವರಿಸುತ್ತಾರೆ. ಧರ್ಮ-ಕಾವ್ಯಗಳ ನಡುವಿನ ಅಂತಃಸಂಬಂಧವನ್ನು ವಿವರಿಸುವ ಕುವೆಂಪು 'ರಸೋ ವೈ ಸಃ' (ಆ ಪರಮತತ್ವವು ರಸಾನುಭವವೇ ಅಲ್ಲವೇ?) ಎಂಬ ಉಪನಿಷತ್ತಿನ ವಾಕ್ಯವನ್ನು ಉದ್ಧರಿಸುತ್ತಾರೆ.

ಆದರೆ ನಾಗರಿಕತೆ ವಿಕಾಸಗೊಂಡಂತೆ ಕಾವ್ಯಧರ್ಮ ಮತ್ತು ಧರ್ಮಗಳ ನಡುವಿನ ಸಂಬಂಧ ದೂರವಾಗುತ್ತಾ ಹೋಯಿತು. ಧರ್ಮವು ರಾಜಕಾರಣದೊಂದಿಗೆ ತನ್ನ ನಂಟನ್ನು ಬೆಳೆಸಿಕೊಂಡು ಪತಿತವಾಗತೊಡಗಿತು. ಇಂದು ಗೀತೆಯನ್ನು ಶಾಲಾಪಠ್ಯಕ್ಕೆ ಅಳವಡಿಸಬೇಕೆಂಬ ಆಗ್ರಹದ ಹಿಂದೆ ರಾಜಕೀಯ ಪ್ರೇರೇಪಣೆ ಇದೆಯೇ ವಿನಾ ಕಾವ್ಯಾಭಿರುಚಿಯನ್ನು ಬೆಳೆಸಬೇಕೆಂಬ ಆಶಯವಿಲ್ಲ.

ಪಠ್ಯಕ್ರಮದಲ್ಲಿ ಗೀತೆಯನ್ನು ಅಳವಡಿಸಬೇಕೆಂದು ಆಗ್ರಹಿಸುವವರು 'ಭಗವದ್ಗೀತೆ ಒಂದು ಧರ್ಮಗ್ರಂಥ ಅಲ್ಲವೇ ಅಲ್ಲ; ಗೀತೆ ಮನೋವಿಜ್ಞಾನ, ಮ್ಯಾನೇಜ್‌ಮೆಂಟ್ ಕೌಶಲ ಮುಂತಾದವನ್ನು ಕಲಿಸಿಕೊಡುವ ಒಂದು ಶಾಸ್ತ್ರಗ್ರಂಥವಾಗಿದೆ. ವಿದೇಶಿ ವಿಶ್ವವಿದ್ಯಾಲಯಗಳಲ್ಲಿ, ಪ್ರಸಿದ್ಧ ಮ್ಯಾನೇಜ್‌ಮೆಂಟ್ ಸಂಸ್ಥೆಗಳಲ್ಲಿ ಅದನ್ನು ಕಲಿಸುತ್ತಿದ್ದಾರೆಂದ ಮೇಲೆ ನಮ್ಮ ಶಾಲಾ ಮಕ್ಕಳಿಗೆ ಕಲಿಸಿದರೆ ಏನು ತಪ್ಪು' ಎಂದು ವಾದಿಸುತ್ತಾರೆ.

ಭಗವದ್ಗೀತೆಯಲ್ಲಿ ಹಲವು ಜ್ಞಾನಶಾಖೆಗಳ ಮೂಲಧಾತುಗಳು ಇರಬಹುದು, ಇಲ್ಲವೆಂದಲ್ಲ. ಆದರೆ ಅಷ್ಟಕ್ಕೇ ಗೀತೆಯನ್ನು ಸೀಮಿತಗೊಳಿಸಿ ವ್ಯಾಖ್ಯಾನಿಸಿದಾಗ ಅದರ ಮಹತ್ವವನ್ನು ಕಿರಿದುಗೊಳಿಸಿದಂತಾಗುತ್ತದೆ. ಎಲ್ಲ ಜ್ಞಾನಶಾಖೆಗಳೂ ಪ್ರವೃತ್ತಿ ಮಾರ್ಗದವು; ಗೀತೆ ಯಾದರೂ ನಿವೃತ್ತಿ ಮಾರ್ಗವನ್ನು ಬೋಧಿಸುವ ಅಧ್ಯಾತ್ಮ ವಿದ್ಯೆಯಾಗಿದೆ.

'ಸಿಕ್ಕಿದ್ದರಲ್ಲಿ ತೃಪ್ತಿಪಡುವುದು, ದ್ವಂದ್ವವಿಲ್ಲದೇ ಜೀವಿಸುವುದು, ಅನ್ಯರಿಗೆ ಅಸೂಯೆ ಪಡದಿರುವುದು, ಸೋಲು ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸುವುದು– ಇವು ವಿಮೋಚನೆಗೆ ದಾರಿ' (ಯದೃಚ್ಛಾಲಾಭಸಂತುಷ್ಟೋ ದ್ವಂದ್ವಾತೀತೋ ವಿಮತ್ಸರಃ । ಸಮಃ ಸಿದ್ಧಾವಸಿದ್ಧೌ ಚ ಕೃತ್ವಾಪಿ ನ ನಿಬಧ್ಯತೇ- 4.22) ಎಂಬುದು ಗೀತೆ ಬೋಧಿಸುವ ನೀತಿಯಾಗಿದೆ. ನಮ್ಮ ರಾಜಕಾರಣಿಗಳು ಈ ಮೌಲ್ಯಗಳನ್ನು ಎಷ್ಟರಮಟ್ಟಿಗೆ ಪಾಲಿಸುತ್ತಿದ್ದಾರೆಂದು ಅವಲೋಕಿಸಿ ನೋಡಿದರೆ ನಿರಾಶೆಯಾಗುತ್ತದೆ.

ನಾವು ಒಂದು ಮೌಲ್ಯವನ್ನು ಪಾಲಿಸದೇ ಹೋದಾಗ ಆ ವೈಫಲ್ಯವನ್ನು ಮುಚ್ಚಿಕೊಳ್ಳುವ ಸಲುವಾಗಿ ಅದನ್ನು ಬೇರೆಯವರಿಗೆ ಬೋಧಿಸಲು ಹೋಗುತ್ತೇವೆ. ಶಾಲಾ ಕಾಲೇಜು ಹುದ್ದೆ ನೇಮಕಾತಿ, ಡೊನೇಷನ್ ಹಾವಳಿಯಿಂದ ಹಿಡಿದು ಶಾಸಕರನ್ನು ಖರೀದಿಸುವವರೆಗೆ ಆಡಳಿತದ ಪ್ರತೀ ಹಂತದಲ್ಲೂ ಭ್ರಷ್ಟಾಚಾರ, ಸೋಗಲಾಡಿತನ ತಾಂಡವವಾಡುತ್ತಿವೆ. ಸರ್ಕಾರ ತಾನು ನೈತಿಕವಾಗಿ ಸ್ವಚ್ಛವಾಗದೇ ಮಕ್ಕಳಿಗೆ ಗೀತೆ ಕಲಿಸುವ ಮೂಲಕ ಅವರನ್ನು ನೀತಿ ಮಾರ್ಗದಲ್ಲಿ ನಡೆಸಲು ಹೊರಟಿರುವುದು ಒಂದು ವಿಡಂಬನೆಯಾಗಿದೆ, ಒಂದು ಆತ್ಮವಂಚನೆಯಾಗಿದೆ.

ಇವರಿಗೆ ಗೀತೆಯ ತತ್ವವನ್ನು ಕಾರ್ಯರೂಪಕ್ಕೆ ತರಲೇಬೇಕೆಂಬ ಬಯಕೆ ಇದ್ದಲ್ಲಿ ಗೀತೆಯ ವಿಚಾರವನ್ನು ಗಾಂಧೀಜಿ ಮಾಡಿದಂತೆ ಮೊದಲು ತಮ್ಮ ಸಾರ್ವಜನಿಕ ಬದುಕಿನಲ್ಲಿ ಅನುಷ್ಠಾನಕ್ಕೆ ತರಬೇಕಾಗುತ್ತದೆ. ಆಗ ಮಕ್ಕಳಿಗೆ ಆ ಪ್ರೇರೇಪಣೆ ತಾನಾಗೇ ಸಿಗುತ್ತದೆ. ಗೀತೆ, ಬೈಬಲ್, ಕುರಾನ್‌ನಲ್ಲಿನ ಉದಾತ್ತ ಸಂದೇಶಗಳನ್ನು ಮಕ್ಕಳು ತಿಳಿಯಬಾರದೆಂದಲ್ಲ. ಮಕ್ಕಳಿಗೆ ಆ ಪವಿತ್ರ ಗ್ರಂಥಗಳನ್ನು ಓದುವ ಅಕ್ಷರಜ್ಞಾನ ನೀಡಿದರೆ ಸಾಕೆನಿಸುತ್ತದೆ. ಶಿಕ್ಷಕರಾಗಲಿ, ರಾಜಕಾರಣಿಗಳಾಗಲಿ ಲೋಕೋದ್ಧಾರದ ಗೊಡವೆಗೆ ಹೋಗಬೇಕಿಲ್ಲ. ತಾವು ಮಾಡುವ ಕೆಲಸವನ್ನು ನೆಟ್ಟಗೆ ಮಾಡಿದರೆ ಸಾಕು ಎಂದೇ ಗೀತೆಯೂ ಹೇಳುವುದು (3.35).



ಒಂದು ಅಮೂಲ್ಯ ಕೃತಿಯ ಬಗ್ಗೆ ಹೊಸ ತಲೆಮಾರಿನಲ್ಲಿ ವಿಮುಖತೆ ಮೂಡಿಸುವ ಅತಿಸುಲಭ ವಿಧಾನವೆಂದರೆ ಅದನ್ನು ಪಠ್ಯಕ್ರಮಕ್ಕೆ ಅಳವಡಿಸುವುದು. ಈ ಹಿನ್ನೆಲೆಯಲ್ಲಿ ನೋಡಿದರೆ, ಇಂದು ಯಾರೆಲ್ಲ ಗೀತೆಯನ್ನು ಶಾಲೆಗಳಲ್ಲಿ ಕಲಿಸಬೇಕೆಂದು ಆಗ್ರಹಿಸುತ್ತಿರುವರೋ ಅವರು ತಮಗರಿವಿಲ್ಲದಂತೆ ಗೀತೆಯ ಬಗ್ಗೆ ಮಕ್ಕಳಲ್ಲಿ ವಿಮುಖತೆ ಮೂಡಿಸುವ ಕೆಲಸ ಮಾಡುತ್ತಿರುವರು. ಶಾಲಾ ಪರೀಕ್ಷೆ ಮುಗಿದು ಬೇಸಿಗೆ ರಜೆ ಬಂದರೆ ಮಕ್ಕಳು ತಮ್ಮ ಪಠ್ಯಪುಸ್ತಕಗಳನ್ನು ರದ್ದಿ ಕಾಗದದ ಅಂಗಡಿಗೆ ಹಾಕುತ್ತಾರೆ. ದೇವರ ಕೋಣೆಯ ಪವಿತ್ರ ಜಾಗವನ್ನು ಅಲಂಕರಿಸಬೇಕಾದ ಒಂದು ಕೃತಿ ರದ್ದಿ ಪೇಪರಿನ ಅಂಗಡಿಯಲ್ಲಿ ತೂಕದ ಲೆಕ್ಕದಲ್ಲಿ ಮಾರಾಟ ಆಗುವುದು ಅವಮಾನಕರವಲ್ಲವೇ?

ಗೀತೆಯಲ್ಲಿರುವಂತೆ ಬೈಬಲ್, ಕುರಾನ್‌ನಲ್ಲೂ ಉದಾತ್ತವಾದ ಸಂದೇಶಗಳಿವೆ. ಇಂದು ಹಿಂದೂಗಳನ್ನು ಓಲೈಸುತ್ತಿರುವ ಸರ್ಕಾರ ಗೀತೆಯನ್ನು ಪಠ್ಯಕ್ರಮದಲ್ಲಿ ಸೇರಿಸಿದರೆ ನಾಳೆ ದಿನ ಮುಸ್ಲಿಮರನ್ನೋ ಕ್ರೈಸ್ತರನ್ನೋ ಓಲೈಸುವ ಸರ್ಕಾರ ಬಂದರೆ ಅದು ಬೈಬಲ್, ಕುರಾನ್ ಸೇರಿಸದಿರದು. ಓದುವ ಮಕ್ಕಳನ್ನು ರಾಜಕೀಯ ಮೇಲಾಟಕ್ಕೆ ಆಡುಂಬೊಲವಾಗಿಸಿಕೊಳ್ಳುವುದು ಅನಾಚಾರವಾಗಿದೆ.

ಬಾಯಾರಿದವರು ಬಾವಿಯನ್ನು ಹುಡುಕಿಕೊಂಡು ಹೋಗುವರೇ ವಿನಾ ಬಾವಿಯೇ ಬಾಯಾರಿದವನ ಬಳಿಗೆ ಬರುವುದಿಲ್ಲ. ಸ್ವತಃ ಶ್ರೀಕೃಷ್ಣನೇ ತನ್ನ ವಿಚಾರಗಳನ್ನು ಅರ್ಜುನನ ಮೇಲೆ ಹೇರಲಿಲ್ಲ. ಅರ್ಜುನ ತಾನಾಗೇ ತಿಳಿವ ಹಂಬಲ ವ್ಯಕ್ತಪಡಿಸಿದಾಗ ಶ್ರೀಕೃಷ್ಣ ಗೀತೋಪದೇಶ ಮಾಡಿದ. ನೀನು ಕೇಳಿದ್ದರಿಂದ ನಾನು ಹೇಳಿದ್ದೇನೆ ಎಂದ. ತಿಳಿವ ಹಂಬಲವಿರುವವನ ಕಡೆಯಿಂದ ಪ್ರಯತ್ನ ಶುರುವಾಗಬೇಕಲ್ಲದೇ ತಿಳಿಸುವವನು ಶಿಷ್ಯನ ಮೇಲೆ ಮುಗಿಬಿದ್ದು ಉಪದೇಶಿಸಲು ಹೋಗಬಾರದು. 'ನೀನಾಗೇ ಕೇಳಬೇಕು, ಆಗ ನಿನಗೆ ಹೇಳಲಾಗುತ್ತದೆ, ನೀನಾಗೇ ಹುಡುಕಬೇಕು ಆಗ ಅದು ನಿನಗೆ ಸಿಗುತ್ತದೆ, ನೀನಾಗೇ ಬಾಗಿಲು ತಟ್ಟಬೇಕು ಆಗ ಬಾಗಿಲು ತೆರೆಯುತ್ತದೆ' (ಮ್ಯಾಥ್ಯೂ 7.7) ಎಂಬ ಮಾತು ಬೈಬಲ್ಲಿನಲ್ಲೂ ಇದೆ.

ಗೀತೆ ಒಂದು ವಿಶ್ವ ಸಾಹಿತ್ಯವಾಗಿದೆ. ಇಂತಹ ಗೀತೆಯನ್ನು ಹಿಂದೂಗಳ ಓಲೈಕೆಗಾಗಿ ಶಾಲಾಪಠ್ಯದಲ್ಲಿ ಅಳವಡಿಸಲು ಹೊರಟಿರುವವರು ತಮಗರಿವಿಲ್ಲದೆಯೇ ಸಾರ್ವಕಾಲಿಕವಾದ, ವಿಶ್ವಾತ್ಮಕವಾದ ಗೀತೆಯನ್ನು ಒಂದು ನಿರ್ದಿಷ್ಟ ಕೋಮಿಗೆ ಸೀಮಿತಗೊಳಿಸುತ್ತಾರೆ. ಇವರ ಈ ಪ್ರಯತ್ನದಿಂದ ಗೀತೆಯ ಮಹತ್ವಕ್ಕೆ ಕುಂದುಂಟಾಗುತ್ತದೆ.

ಯಾವುದೇ ಶಾಸ್ತ್ರಗ್ರಂಥವನ್ನು ಓದುವವನಿಗೆ ಒಂದು ಕನಿಷ್ಠ ಅರ್ಹತೆ ಇರಬೇಕಾಗುತ್ತದೆ. ಈ ಮಾತನ್ನು ಗೀತೆಯೂ ಅನುಮೋದಿಸುತ್ತದೆ (18.67). ಗೀತೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಜೀವನಾನುಭವವೂ ಬೇಕು. ಎಳೆಯ ವಯಸ್ಸಿನವರ ಓದಿಗೆ ಗೀತೆ ಸೂಕ್ತವಾಗಬಹುದೇ? ಗೀತೆಯನ್ನು ಪಠ್ಯದಲ್ಲಿ ಅಳವಡಿಸಲು ಮುಂದಾಗಿರುವವರು ಸ್ವಗತದಲ್ಲಿಯಾದರೂ ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲಿ.

ಲೇಖಕ: ಸಹಾಯಕ ಪ್ರಾಧ್ಯಾಪಕ
ಜ್ಯೋತಿನಿವಾಸ್ ಕಾಲೇಜ್, ಬೆಂಗಳೂರು

ಚುರುಮುರಿ

ಲೇಣೆದೇಣೆ ಆಟ

• ಲಿಂಗರಾಜು ಡಿ.ಎಸ್.

'ಸಾ, ಇನ್ನೇನು ಐಪಿಎಲ್ ಸುರುವಾಯ್ತಾ ಅದೆ. ನೋಡಕ್ಕೆ ತಯಾರಾಗಿದೀರಾ?' ತುರೇಮಣೆಗೆ ಕೇಳಿದೆ.

'ಬುಡ್ಲಾ ಐಪಿಎಲ್‌ನಲ್ಲೇನದೆ! ರಾಜಕೀಯ ವೈರಸ್ ಆಟದ ಮಜಾ ಕ್ರಿಕೆಟ್ನಲ್ಲಿ ಬಂದದೇ' ಅಂತ ಮೂಗೆಳೆದರು.

'ಅಲ್ಲ ಸಾ, ರಾಜಕೀಯಕ್ಕೂ ಕ್ರಿಕೆಟ್ಟಿಗೂ ಏನು ಸಂಬಂಜ' ಅಂತ ಆಶ್ಚರ್ಯದೇಲಿ ಕೇಳಿದೆ.

'ಬೊಡ್ಡಿಹೈದ್ನೆ, ಇಲ್ಲಿ ರಾಜಕಾರಣದ ವೈರಸ್ಸುಗಳೇ ಪ್ಲೇಯರ್ಸು ಕನೋ. ಇಲಾಖೆಯಲ್ಲಿರೋ ಭ್ರಷ್ಟಾಚಾರಿಗಳು, ದಲ್ಲಾಳಿಗಳೇ ಚಿಯರ್ ಗರ್ಲ್ಸ್. ಅಕ್ರಮದ ಸಿಕ್ಸರ್ ಎತ್ತಿದಾಗೆಲ್ಲಾ ಡಂಕಣಕ ಅಂತ ಕುಣಿತವೆ. ರಾಜಕೀಯದೇಲಿ 'ನನಗೊಂದು, ನನ್ನ ಮಗನಿಗೊಂದು ಟಿಕೆಟ್ ಕೊಟ್ರೆ ನಿಮ್ಮಡಿಕೆ' ಅಂತ ಯವಾರ ಮಾಡಿ ಓಪನ್ ಮ್ಯಾಚ್ ಫಿಕ್ಸಿಂಗ್ ಮಾಡಿಕೋದಿಲ್ವೇ! ಟೀಂ ಪೂರ್ತಿ ಹೈಜಾಕ್ ಮಾಡಿಕ್ಕಂಡು ಮ್ಯಾಚೇ ಇಲ್ದಂಗೆ ಟ್ರೋಫಿ ತಗಳದು ಕ್ರಿಕೆಟ್ನಲ್ಲಿ ಆಯ್ತದಾ? ರಾಜಕೀಯದ ಪ್ಲೇಯರುಗಳು ಪರ್ಸೆಂಟೇಜು, ಒಪ್ಪಂದದ ಗೋಲ್‌ಮಾಲ್ ಮಾಡಿದಂಗೆ ಕ್ರಿಕೆಟ್ನೇಲಿ ಆದದೇ? 'ಕಾಸು ಕೊಟ್ರೋನೆ ಬಾಸು' ಅಂತ ವರ್ಗಾವಣೆ ದಂಧೆ ಕ್ರಿಕೆಟ್ನಲ್ಲಿ ಆಯ್ತದಾ? ಪರ್ಫಾರ್ಮೆನ್ಸ್ ಸರಿಯಾಗಿಲ್ದಿದ್ರೆ ಟೀಮಿಂದ ಆಚಿಗೋಗಬೇಕಾಯ್ತದೆ ಕನೋ. ಆದರೆ ರಾಜಕೀಯದೇಲಿ ಮಂತ್ರಿ ಪರ್ಫಾರ್ಮೆನ್ಸ್ ಸರಿಯಾಗಿಲ್ಲ ಅಂದ್ರೆ ತಗದಾಕೋ ದಾಸತ್ತು ಯಾರಿಗದೆ?' ಅಂತ ಹೇಳಿ ನಿಟ್ಟುಸಿರುಬುಟ್ಟರು.

'ಸಾ, ಇಲ್ಲಿ ಥರ್ಡ್ ಅಂಪೈರ್ ಇಲ್ಲುವೇ?' ಅಂದೆ.

'ಕೋರ್ಟೇ ಥರ್ಡ್ ಅಂಪೈರು ಕನೋ. ಇವರು ಲಂಚಾಟಗಾರರ ಬಾಯಿಗೆ ಕುಕ್ಕೆ ಹಾಕುತ್ಲೆ ಅವರೆ. ಆದ್ರೂ ನಾಮ ಇಕ್ಕೋ ಕೆಲಸ ನಿಲ್ಲಿತಿಲ್ಲ' ತುರೇಮಣೆ ಬೇಜಾರಾದ್ರು.

'ಅಲ್ಲ ಸಾ, ಈ ಹಲವಂಗದ ಆಟ ಜನಕ್ಕೆ ಬೇಕಾಗ್ಯದಾ?' ಅಂತ ಕೇಳಿದೆ.

'ಜನಕ್ಕೆ ಬೇಕಾಗಿಲ್ಲ ಕನೋ. ಲಂಚಮುಕ್ತ, ಉತ್ತರದಾಯಿತ್ವ, ಗುಣಮಟ್ಟ, ಕ್ರಮ ಅಂತ ನಾನು ಬುದ್ಧಿ ಕಂಡಾಗಿಂದ ನಾಯಕರು ಹೇಳುತ್ಲೇ ಬಂದವರೆ. ಆದರೂ ಲೇಣೆದೇಣೆ ಆಟ ನಿಂತಿಲ್ಲ. ನಾವೂ ನೋಡಿ ಮಜ ತಕ್ಕಂದು ಸ್ವಲ್ಪ ದಿನಕೆ ಮರತೋಯ್ತಿವಿ' ಅಂದು ಸುಮ್ಮಗಾದರು.

ಚರ್ಚೆ

ಸಮವಸ್ತ್ರ: ಉದಾರವಾಗಿರಲಿ ಸಂಸ್ಥೆ

ಸಮವಸ್ತ್ರದಿಂದ ಸಮಾನತೆಯ ಭಾವ ಬಂದುಬಿಡುತ್ತದೆ ಎಂಬುದು ಕುರುಡುಗಾಂಪು

• ಡಾ. ಆರ್.ಲಕ್ಷ್ಮೀನಾರಾಯಣ

ತೀರಾ ಕಡೆಗಣಿಸಬಹುದಾಗಿದ್ದ ಸಂಗತಿಯೊಂದನ್ನು ಎಷ್ಟೆಲ್ಲ ಪೆಡಂಭೂತ ಮಾಡುತ್ತಿದ್ದಾರಲ್ಲ ಎಂದು ಈ ಹಿಜಾಬ್ ವಿವಾದ ಶುರುವಾದ ಮೇಲೆ ನನ್ನ ಮನಸ್ಸಿಗೆ ಅನ್ನಿಸಿದ ಹಾಗೆಯೇ ಬಹುಶಃ ಡಾ. ಸಿ.ಎನ್. ರಾಮಚಂದ್ರನ್ ಅವರಿಗೂ ಅನ್ನಿಸಿದ್ದರಿಂದಲೋ ಏನೋ ಅವರು ಪ್ರಸ್ತಾಪಿಸಿ ಬರೆದಿರುವ ಮಾತುಗಳು (ಸಂಗತ, ಮಾರ್ಚ್ 18) ನನಗೆ ತೀರಾ ನಿಜವೆನಿಸುತ್ತವೆ. ಅವರ ಹಾಗೆಯೇ ನನಗೂ ನನ್ನ ಕಾಲೇಜು ಓದಿನ ಹಾಗೂ ಕಾಲೇಜಿನ ಅಧ್ಯಾಪಕ ವೃತ್ತಿಯ ದಿನಗಳಲ್ಲಿ ಈ ಸಮವಸ್ತ್ರ ಸಂಹಿತೆ ಎಂದೂ ಒಂದು ಚರ್ಚಾಸ್ಪದವಾದ ಸಂಗತಿಯೇ ಆಗಿರಲಿಲ್ಲ.

ಸಮವಸ್ತ್ರ ಕುರಿತಂತೆ ಅವರು ಹೇಳಿರುವ ಮಾತುಗಳೆಲ್ಲವೂ ನೂರಕ್ಕೆ ನೂರು ನಿಜ. ಸಮವಸ್ತ್ರದಿಂದ ಸಮಾನತೆಯ ಭಾವ ಬಂದುಬಿಡುತ್ತದೆ ಎಂಬುದು ಕುರುಡುಗಾಂಪು. ಇನ್ನು ಬಹಳಷ್ಟು ಸರ್ಕಾರಿ ಕಾಲೇಜುಗಳಲ್ಲಿ (ಜೂನಿಯರ್ ಮತ್ತು ಪದವಿ) ಯಾವ ಸಮವಸ್ತ್ರ ಸಂಹಿತೆಯೂ ನನಗೆ ತಿಳಿದಂತೆ ಇರಲಿಲ್ಲ. ಕೆಲ ವರ್ಷಗಳ ಹಿಂದೆ ಪದವಿ ಕಾಲೇಜಿನಲ್ಲಿ ಅಧ್ಯಾಪಕರಿಗೆ ಒಂದು ವಸ್ತ್ರಸಂಹಿತೆ ತರಬೇಕೆಂಬ ಕೆಲ ಅಧಿಕಾರಿಗಳ ಧೋರಣೆ ಪ್ರಾರಂಭದಲ್ಲೇ ಬಿದ್ದು ಹೋಯಿತು. ಗೌರವವಾದ ವಸ್ತ್ರ ಧರಿಸಿ ಬಂದರಾಯಿತು ಎಂಬಷ್ಟಕ್ಕೆ ಈಗ ನಿಂತಿದೆ.

ನನ್ನ ಓದಿನ ದಿನಗಳಲ್ಲಿ ಮುಸ್ಲಿಂ ಹೆಣ್ಣು ಮಕ್ಕಳು ಶಾಲಾ ಕಾಲೇಜಿಗೆ ಬರುತ್ತಿದ್ದುದೇ ಅಪರೂಪ. ಈಗ ಅದು ಬದಲಾಗಿ ಅವರೂ ಶಿಕ್ಷಣಕ್ಕೆ ತೆರೆದುಕೊಳ್ಳುತ್ತಿರುವುದು ಅತ್ಯಂತ ಸ್ವಾಗತಾರ್ಹ. ಇನ್ನು ನನ್ನ ಕಾಲೇಜು ಅಧ್ಯಾಪಕ ವೃತ್ತಿಯ ದಿನಗಳಲ್ಲಿ ಅದೂ ಕೋಲಾರ ಮತ್ತು ಚಿಕ್ಕಮಗಳೂರಿನಲ್ಲಿ ಬಹಳಷ್ಟು ಮುಸ್ಲಿಂ ಹೆಣ್ಣುಮಕ್ಕಳು ಕಾಲೇಜಿಗೆ ಬರುತ್ತಿದ್ದರು. ಅವರು ಏನನ್ನು ಧರಿಸಿ ಬರುತ್ತಿದ್ದರು ಎಂಬ ಬಗ್ಗೆ ನಾನಷ್ಟೇ ಅಲ್ಲ ಯಾವ ಅಧ್ಯಾಪಕರೂ ಎಂದೂ ತಲೆಕೆಡಿಸಿಕೊಂಡಿರಲಿಲ್ಲ. ವಿಭೂತಿ, ನಾಮ ಮತ್ತು ಮುದ್ರೆಗಳನ್ನು ಕೆಲ ವಿದ್ಯಾರ್ಥಿಗಳು ಮತ್ತು ಕೆಲ ಅಧ್ಯಾಪಕರು ಢಾಳವಾಗಿ ಧರಿಸಿಕೊಂಡು ಬರುತ್ತಿದ್ದರೆ ಹೇಗೆ ನಾವು ಗಮನಕ್ಕೇ ತೆಗೆದುಕೊಳ್ಳದೆ, ಅದು ಅವರ ಆಚಾರ ಎಂದೋ ಇಚ್ಛೆ ಎಂದೋ ಭಾವಿಸುತ್ತಿದ್ದೆವೋ ಹಾಗೆಯೇ ಭಾವಿಸುತ್ತಿದ್ದೆವು.

ಇನ್ನು ಹಿಜಾಬ್ ಇಷ್ಟೊಂದು ಮುನ್ನೆಲೆಗೆ ಬಂದದ್ದೇ ಈ ವಿವಾದ ಶುರುವಾದ ಮೇಲೆ. ಅದನ್ನು ಎಲ್ಲ ಮುಸ್ಲಿಂ ಹೆಣ್ಣುಮಕ್ಕಳೂ ಖಂಡಿತಾ ಧರಿಸಿಕೊಂಡು ಬರುತ್ತಿರಲಿಲ್ಲ ಎನ್ನುವುದಂತೂ ತೀರಾ ನಿಜ. ಕೆಲವರು ಧರಿಸಿಕೊಂಡು ಬರುತ್ತಿದ್ದರು ಅಷ್ಟೆ. ಆದರೆ ನನ್ನ ಅಧ್ಯಾಪಕ ವೃತ್ತಿಯ ಸಂದರ್ಭದಲ್ಲಿ ಅನೇಕ ಮುಸ್ಲಿಂ ಅಧ್ಯಾಪಕಿಯರು ಸಹೋದ್ಯೋಗಿಗಳಾಗಿದ್ದುದಂತೂ ನಿಜ. ಅವರ್‍ಯಾರೂ ಎಂದೂ ಹಿಜಾಬ್ ಧರಿಸಿ ಕಾಲೇಜಿಗೆ ಬಂದದ್ದನ್ನು ನಾನಂತೂ ಕಾಣೆ. ಅಂದರೆ ಅದು ಖಂಡಿತವಾಗಿಯೂ ಕಡ್ಡಾಯವಾದ ಧಾರ್ಮಿಕ ಆಚರಣೆಯ ಭಾಗವಾಗಿರಲಿಲ್ಲ ಎಂದು ಖಂಡಿತಾ ತಿಳಿಯಬಹುದು. ಈಗ ಅದು ಧರಿಸಿಕೊಂಡೇ ಬರಬೇಕಾದ ಒಂದು ಧಾರ್ಮಿಕ ಆಚರಣೆ ಎಂದು ಅನಗತ್ಯವಾಗಿ ಹುಯಿಲೆಬ್ಬಿಸಲಾಗುತ್ತಿದೆ ಅಷ್ಟೆ. ಹಾಗೆ ಹುಯಿಲೆಬ್ಬಿಸುತ್ತಿರುವವರಲ್ಲಿ ರಾಜಕೀಯ ಶಕ್ತಿಗಳೊಂದಿಗೆ ಮೂಲಭೂತವಾದಿಗಳು ಕೈ ಜೋಡಿಸಿದ್ದಾರೆ.

ಇನ್ನು ಇದು ಕೋರ್ಟ್ ಮೆಟ್ಟಿಲೇರುವ ಅಗತ್ಯ ಖಂಡಿತಾ ಇರಲಿಲ್ಲ. ಹೀಗೆ ಅದು ಏರಲು ಹಿಂದೂ ಮುಸ್ಲಿಂ ಎರಡೂ ಕಡೆಯವರ ರಾಜಕೀಯ ಹಿತಾಸಕ್ತಿಗಳೇ ಕಾರಣ; ಈ ವಿಷಯದಲ್ಲಿ ಮುಸ್ಲಿಂ ಹೆಣ್ಣುಮಕ್ಕಳನ್ನಂತೂ ತೀರಾ ಪ್ರಚೋದನೆಗೆ ಒಳಪಡಿಸಲಾಗಿದೆ. ಈಗ ಕೋರ್ಟ್ ಒಂದು ತೀರ್ಪು ನೀಡಿದೆ. ಆದರೆ ಸಮವಸ್ತ್ರ ಸಂಹಿತೆಯನ್ನು ನಿರ್ಧರಿಸಬೇಕಾದವರು ಶಿಕ್ಷಣ ಸಂಸ್ಥೆಯವರು. ಹಿಜಾಬ್ ಸಮವಸ್ತ್ರದ ಭಾಗವಲ್ಲ ಎಂದು ನಿರ್ಧರಿಸಲು ಅವರು ಸ್ವತಂತ್ರರು. ಹಾಗೆ ನಿರ್ಧರಿಸಿದರೆ ಕೋರ್ಟ್ ಖಂಡಿತಾ ಅಡ್ಡ ಬರುವುದಿಲ್ಲ. ಬೇಕಾದರೆ ಸಮವಸ್ತ್ರದ ಬಣ್ಣದ ಹಿಜಾಬ್ ಅನ್ನೇ ಧರಿಸಬಹುದೆಂದರೂ ಆಯಿತು.

ಧಾರ್ಮಿಕ ಮೂಲಭೂತವಾದಕ್ಕೆ ಯಾವ ಧರ್ಮವೂ ಅಪವಾದವಲ್ಲ. ಹಿಂದೂ ಧರ್ಮ ಕಾಲದಿಂದ ಕಾಲಕ್ಕೆ ಬದಲಾವಣೆಗೆ ತನ್ನನ್ನು ತೆರೆದುಕೊಳ್ಳುತ್ತ ಬರುತ್ತಿರುವುದರಲ್ಲಿ ಸದಾ ಮುಂದಿದೆ. ಅದು ಅದರ ಪ್ರಗತಿಪರ ಮನೋಧರ್ಮ ಮತ್ತು ಉದಾರತೆಯ ದ್ಯೋತಕ. ಆದರೆ ಅದೇ ಮಾತನ್ನು ಇಸ್ಲಾಂ ಧರ್ಮದ ಬಗ್ಗೆ ಹೇಳುವುದು ಕಷ್ಟ. ಆದರೆ ವಿದ್ಯಾಭ್ಯಾಸಕ್ಕೆ ತೆರೆದುಕೊಳ್ಳುತ್ತಾ ಹೋದಂತೆ, ವಿಚಾರಪರತೆ ಹೆಚ್ಚುತ್ತಾ ಬಂದಹಾಗೆ ಅವರಲ್ಲೂ ನಿಧಾನವಾಗಿಯಾದರೂ ಬದಲಾವಣೆಗಳು ಆಗುತ್ತಿರುವುದನ್ನು ನಾವು ಗಮನಿಸಬಹುದು. ಅದು ಹೆಚ್ಚಾದಷ್ಟೂ ಧಾರ್ಮಿಕ ಮೂಲಭೂತವಾದಿಗಳ ಹಿಡಿತದಿಂದ ಅವರೂ ಹೊರಬರುತ್ತಾರೆ ಎನ್ನುವುದರಲ್ಲಿ ಸಂದೇಹವಿಲ್ಲ. ಆದರೆ ಬಹುಸಂಖ್ಯಾತ ಧರ್ಮದವರು ಹಿಜಾಬ್ ಬಗ್ಗೆ ತಲೆಕೆಡಿಸಿಕೊಳ್ಳದೆ ಮುಸ್ಲಿಂ ಹೆಣ್ಣುಮಕ್ಕಳನ್ನು ತರಗತಿಗಳಿಗೆ, ಪರೀಕ್ಷೆಗಳಿಗೆ ಉದಾರ ಮನೋಭಾವ ತೋರಿ ಅವಕಾಶ ಒದಗಿಸಿ ಕೊಡಬೇಕು. ಹಾಗೆ ಕೊಟ್ಟರೆ ಅದು ಕೋರ್ಟ್ ಆದೇಶದ ಉಲ್ಲಂಘನೆಯೇನೂ ಆಗುವುದಿಲ್ಲ. ಆದರೆ ಕೋರ್ಟ್ ತೀರ್ಪು ಒಪ್ಪದೆ ಮೇಲ್ಮನವಿ ಸಲ್ಲಿಸಲು ಅವಕಾಶ ಇರುವಾಗ ಅದನ್ನು ಪ್ರತಿಭಟಿಸಿ ಬಂದ್‌ಗೆ ಕರೆ ಕೊಟ್ಟಿದ್ದು ಮೊಂಡುತನ ಮತ್ತು ಹಾಗೆ ಮಾಡುವವರ ಬಗ್ಗೆ ಯಾರೇ ವಿವೇಕಿಗಳಿಗೂ ಯಾವುದೇ ಸಹಾನುಭೂತಿ ಮತ್ತು ಗೌರವ ಇರುವುದಿಲ್ಲವೆಂಬುದನ್ನು ಅವರು ಮರೆಯಬಾರದು.

ವಾಚಕರ ವಾಣಿ

ಚುನಾವಣೆ ಗೆಲ್ಲಲು ಸಿದ್ಧ ಸೂತ್ರ!

ದೆಹಲಿ ಗದ್ದುಗೆ ಏರಿದ ನಂತರ ಪಂಜಾಬ್ ರಾಜ್ಯವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿರುವ ಎಎಪಿ ನಾಯಕ ಅರವಿಂದ ಕೇಜ್ರಿವಾಲ್, ನೂತನ ಶಾಸಕರಿಗೆ 'ಕೆಲಸ ಮಾಡದಿದ್ದರೆ ತಲೆದಂಡ' ಎಂಬ ಎಚ್ಚರಿಕೆಯ ಸೂಚನೆಯನ್ನು ನೀಡಿದ್ದಾರೆ. ಪಕ್ಷದ ಎಲ್ಲ ಶಾಸಕರು ಒಂದು ತಂಡವಾಗಿ ಕೆಲಸ ಮಾಡಬೇಕು, ಯಾರ ಬಗ್ಗೆಯೂ ಆಕ್ಷೇಪಾರ್ಹ ಭಾಷೆ ಬಳಸಬಾರದು, ಒರಟಾಗಿ ನಡೆದುಕೊಳ್ಳಬಾರದು, ಕೆಲಸದ ಮೂಲಕ ಜನರ ಮನಸ್ಸನ್ನು ಗೆಲ್ಲಬೇಕು ಎಂದು ಸಲಹೆ ನೀಡಿದ್ದಾರೆ. ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಶಾಸಕರು ತಪ್ಪು ಮಾಡಿರುವುದು ಕಂಡುಬಂದರೆ ಕಠಿಣ ಕ್ರಮ ಜರುಗಿಸಲಾಗುವುದು, ಅವಿಧೇಯತೆಯನ್ನು ಹಾಗೂ ಸಾರ್ವಜನಿಕರ ಹಣಕ್ಕೆ ಕನ್ನ ಹಾಕುವುದನ್ನು ಸಹಿಸಿಕೊಳ್ಳುವುದಿಲ್ಲ, ಅಧಿಕಾರಿಗಳ ವರ್ಗಾವಣೆಗೆ ಸಚಿವರ ಅಥವಾ ಮುಖ್ಯಮಂತ್ರಿ ಕಚೇರಿಗೆ ಹೋಗಬೇಡಿ ಎಂದು ಶಾಸಕರೊಂದಿಗೆ ನಡೆಸಿದ ಸಂವಾದದಲ್ಲಿ ಹೇಳಿದ್ದಾರೆ.

ಈ ಸೂಚನೆಗಳು ಒಟ್ಟಾರೆ ಭಾರತದ ಎಲ್ಲ ರಾಜ್ಯಗಳ ಶಾಸಕರಿಗೆ ಪಾಠ ಎಂಬಂತಿವೆ. ಜನರಿಂದ ಆಯ್ಕೆಯಾದವರು ಜನರ ಸೇವಕರಾಗಬೇಕೇ ವಿನಾ ಅವರೆದುರು ಅಧಿಕಾರದ ದರ್ಪ ತೋರಬಾರದು. ಕೇಜ್ರಿವಾಲರ ಈ ಸೂಚನೆಯನ್ನು ಪಾಲಿಸಿದರೆ ಇದೊಂದು ಪಂಜಾಬಿನ ಮಾದರಿ ನಡೆಯಾಗುತ್ತದೆ. ಇದು ಪ್ರತಿಯೊಂದು ಚುನಾವಣೆಯನ್ನು ಗೆಲ್ಲಲು ಸಿದ್ಧ ಸೂತ್ರವೂ ಆಗುತ್ತದೆ ಎಂಬುದರಲ್ಲಿ ಅನುಮಾನವಿಲ್ಲ.

ಗಣಪತಿ ಶಿರಳಗಿ, ಸಾಗರ

ಪ್ರಾಮಾಣಿಕ ಗಟ್ಟಿತನ ತೋರಬೇಕಿದೆ

'ವಿಶ್ವವಿದ್ಯಾಲಯಗಳಲ್ಲಿನ ನೇಮಕಾತಿ ಲೋಪ ಸರಿಪಡಿಸುವ ಕೆಲಸ ತಕ್ಷಣ ಆಗಲಿ' ಎಂದು ಆಗ್ರಹಿಸಿರುವ ಸಂಪಾದಕೀಯದಲ್ಲಿನ (ಪ್ರ.ವಾ., ಮಾರ್ಚ್ 21) ವಿಷಯ ನೂರಕ್ಕೆ ನೂರರಷ್ಟು ಸತ್ಯವಾದುದು. ಕಳೆದ ಹತ್ತಾರು ವರ್ಷಗಳಿಂದ ವಿಶ್ವವಿದ್ಯಾಲಯದ ಆಡಳಿತವನ್ನು ಹತ್ತಿರದಿಂದ ಗಮನಿಸಿರುವಂತೆ, ಕುಲಪತಿಯಿಂದ ಹಿಡಿದು ವಿಶ್ವವಿದ್ಯಾಲಯದಲ್ಲಿ ಕಸ ಗುಡಿಸುವ ವ್ಯಕ್ತಿಯ ನೇಮಕದವರೆಗೂ ಅಕ್ರಮಗಳು ನಡೆಯುತ್ತಲೇ ಇವೆ. ಕುಲಪತಿ ಸ್ಥಾನದ ಆಕಾಂಕ್ಷಿಗಳು ಬಡ್ಡಿ ದಂಧೆ ನಡೆಸುವವರ ಬಳಿ ಶೇ 10ರ ಬಡ್ಡಿ ದರದಲ್ಲಿ ಕೋಟಿಗಟ್ಟಲೆ ಸಾಲ ಪಡೆದು ಸಂಬಂಧಿಸಿದವರಿಗೆ ತಲುಪಿಸಿ ಕುಲಪತಿ ಆಗಿರುವ ಉದಾಹರಣೆಗಳು ಕರ್ನಾಟಕದಲ್ಲಿವೆ. ಇತ್ತೀಚಿನ ದಿನಗಳಲ್ಲಿ ಕುಲಪತಿಗಳ ಅಕ್ರಮ ನೇಮಕ, ವಿಶ್ವವಿದ್ಯಾಲಯಗಳಲ್ಲಿ ನೇಮಕಗೊಂಡ ಶಿಕ್ಷಕರಿಗೆ ಕನಿಷ್ಠ ವಿದ್ಯಾರ್ಹತೆಯೂ ಇಲ್ಲ ಎಂದು ನ್ಯಾಯಾಲಯವು ನೇಮಕಾತಿಯನ್ನು ರದ್ದುಪಡಿಸಿ ತೀರ್ಪು ನೀಡಿರುವ ಪ್ರಕರಣಗಳೂ ಇವೆ. ಅಕ್ರಮವಾಗಿ ನೇಮಕಾತಿಯಾಗಿದೆ ಎಂದು ನ್ಯಾಯಾಲಯ ತೀರ್ಪು ನೀಡಿದರೂ ಅಂತಹ ನೇಮಕಾತಿಗೆ ಕಾರಣರಾದವರಿಗೆ ಯಾವ ಶಿಕ್ಷೆಯೂ ಆಗದಿರುವುದು ಮಾತ್ರ ನಮ್ಮ ವ್ಯವಸ್ಥೆಯ ದುರಂತವೇ ಸರಿ.

ನೇಮಕಾತಿಯಲ್ಲಿ ಸಾಮರ್ಥ್ಯ ಮತ್ತು ಅರ್ಹತೆಯನ್ನು ಅಳತೆಗೋಲಾಗಿ ಇರಿಸಿಕೊಳ್ಳುವಂತಹ ವ್ಯವಸ್ಥೆಯನ್ನು ತರಲಾಗುವುದೆಂದು ಶಿಕ್ಷಣ ಸಚಿವರು ಪದೇ ಪದೇ ಹೇಳಿಕೆ ನೀಡುತ್ತಿರುತ್ತಾರೆ. ಆದರೆ ವ್ಯವಸ್ಥೆ ಮಾತ್ರ ಬದಲಾಗುತ್ತಿಲ್ಲ. ಅಂತಹ ಪ್ರಾಮಾಣಿಕ ಗಟ್ಟಿತನ ತೋರಿಸುವ ಸಚಿವರ ಅಗತ್ಯವಿದೆ. ಕನಿಷ್ಠಪಕ್ಷ ಅಂತಹ ಗಟ್ಟಿತನ ತೋರಿಸುವ ರಾಜ್ಯಪಾಲರಾದರೂ ಇದ್ದರೆ ಶಿಕ್ಷಣ ಕ್ಷೇತ್ರದ ಮೌಲ್ಯ ಉಳಿದೀತು.

ಜಯಂತ ಕೆ.ಎಸ್., ಧಾರವಾಡ

ಜಾತಿ ಲೆಕ್ಕಾಚಾರದ ಅಸ್ತ್ರ ಸಲ್ಲ

'ದಲಿತ ರಾಜಕಾರಣ: ಆಳದಲ್ಲಿ ಪಲ್ಲಟ' ಎಂಬ, ವಾದಿರಾಜ್ ಅವರ ಲೇಖನದಲ್ಲಿ (ಸಂಗತ, ಮಾರ್ಚ್ 21) ಕೇವಲ ಅಂಕಿಅಂಶವನ್ನು ಹಿಡಿದು ಉತ್ತರಪ್ರದೇಶದ ರಾಜಕೀಯವನ್ನು ನೋಡಲಾಗಿದೆಯೇ ವಿನಾ ಕಾಂಗ್ರೆಸ್, ಬಿಎಸ್‌ಪಿ, ಎಸ್‌ಪಿ ನಡುವೆ ಮತಗಳು ಹಂಚಿಹೋಗಿ ಬಿಜೆಪಿ ಗೆದ್ದಿರುವುದನ್ನು ಮರೆಮಾಚಲಾಗಿದೆ. ಅಷ್ಟಲ್ಲದೆ ಮಾಯಾವತಿ ಅವರು ಜಾತಿ ರಾಜಕೀಯ ಮಾಡಿ ಒಂದು ಸಲ ಮುಖ್ಯಮಂತ್ರಿಯಾದರೆ ಬಿಜೆಪಿ ಅದೇ ಅಸ್ತ್ರವನ್ನು ತಿರುವುಮುರುವಾಗಿ ಬಳಸಿ ಗೆಲುವು ಸಾಧಿಸಿದ ಸಮೀಕರಣವನ್ನು ಒಪ್ಪಬಹುದಾದರೂ ಒಟ್ಟಾರೆ ಜಾತಿ ಲೆಕ್ಕಾಚಾರವೇ ಎಲ್ಲರಿಗೂ ಮಾರಕವಲ್ಲವೇ? ದಲಿತರನ್ನು ಶೋಷಿತ ಸಮುದಾಯವನ್ನಾಗಿ ನೋಡಬೇಕೇ ವಿನಾ ಜಾತಿ ಸಮುದಾಯವಾಗಿ ಅಲ್ಲ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

ಬರಲಿ 'ಕಾಶ್ಮೀರ ಡೋಗ್ರಾ ಫೈಲ್ಸ್'

'ದಿ ಕಾಶ್ಮೀರ್ ಫೈಲ್ಸ್' ಚಲನಚಿತ್ರ ನೋಡಿದ ಮೇಲೆ ಹಲವರ ಮನದಲ್ಲಿ ಮೂಡಿರುವ ಪ್ರಶ್ನೆಯೆಂದರೆ, 'ಕಾಶ್ಮೀರದ ಕಣಿವೆಯಲ್ಲಿ ಇದ್ದ ಹಿಂದೂಗಳಲ್ಲಿ ಪಂಡಿತರು ಮಾತ್ರ ಸೇರಿದ್ದರೇ? ಜಾತಿ ವಿಜಾತಿಯಿಂದ ಕೂಡಿರುವ ಹಿಂದೂ ಧರ್ಮ ಇರುವ ಪ್ರದೇಶದಲ್ಲಿ ಒಂದೇ ಜಾತಿಯ ಜನರು ಇರಲು ಹೇಗೆ ಸಾಧ್ಯ? ಹೌದು, ಕಾಶ್ಮೀರ ಕಣಿವೆಯಲ್ಲಿ ಪಂಡಿತರು ಮಾತ್ರವಲ್ಲ ಅಲ್ಲಿ ಡೋಗ್ರಾ ಎಂಬ ಕೃಷಿ ಅವಲಂಬಿತ ಯೋಧ ಸಮುದಾಯವೂ ಪಂಡಿತರಿಗಿಂತ ಹೆಚ್ಚು ಸಂಖ್ಯೆಯಲ್ಲಿ ಇತ್ತು. ಕಾಶ್ಮೀರದ ಹಿಂದಿನ ರಾಜರುಗಳೆಲ್ಲಾ ಡೋಗ್ರಾ ಜಾತಿಯವರಾಗಿದ್ದರು. ಜತೆಗೆ ಹಿಂದೂ ದಲಿತರೂ ಅಲ್ಲಿದ್ದರು. ರಾಜಾ ಹರಿಸಿಂಗನ ಪೂರ್ವಜರು ಪಂಜಾಬಿನಿಂದ ವೀರ ಸಿಖ್ಖರನ್ನು ಕರೆಸಿ ತನ್ನ ಸೇನೆಯಲ್ಲಿ ಸೇರಿಸಿಕೊಂಡಿದ್ದರು. ಈ ಸಿಖ್ಖರು ತಮ್ಮ ಪಂಜಾಬಿ ಭಾಷೆ ಬಿಟ್ಟು ಕಾಶ್ಮೀರಿ ಭಾಷೆಯನ್ನೇ ಮಾತೃಭಾಷೆಯಾಗಿ ಸ್ವೀಕರಿಸಿ ಅಲ್ಲಿಯೇ ಶಾಶ್ವತವಾಗಿ ನೆಲೆಸಿದರಂತೆ. ಹಾಗಾದರೆ 1990ರಲ್ಲಿ ನಗರವಾಸಿ ಪಂಡಿತರನ್ನು ಮಾತ್ರ ಪಾಕಿಸ್ತಾನ ಪ್ರಾಯೋಜಿತ ಉಗ್ರವಾದಿಗಳು ಗುರಿ ಮಾಡಿದ್ದು ಸತ್ಯವೇ?

ಇಲ್ಲ, ನಿಜವಾಗಿ ಪಾಕ್ ಉಗ್ರರು ಎಲ್ಲಾ ಜಾತಿಯ ಹಿಂದೂಗಳನ್ನೂ ಗುರಿ ಮಾಡಿ ಭಯ ಹರಡಿದ್ದರು. ಆದರೆ ಹೆಚ್ಚಾಗಿ ಶ್ರೀನಗರದಲ್ಲಿ ಕೇಂದ್ರಿತವಾದ ಪಂಡಿತರನ್ನು ಕಾಶ್ಮೀರದ ಆಗಿನ ಗವರ್ನರ್ ಜಗಮೋಹನ್ ತುರಾತುರಿಯಿಂದ ಜಮ್ಮುವಿಗೆ ವಲಸೆ ಹೋಗುವಂತೆ ಒತ್ತಾಯಿಸಿ ಅವರಿಗೆ ಸಾರಿಗೆ ಒದಗಿಸಿದರಂತೆ. ಡೋಗ್ರಾ ಮತ್ತು ಇತರ ಹಿಂದೂಗಳು ಹಳ್ಳಿಗಳಲ್ಲಿ ಇರುತ್ತಿದ್ದು, ಅವರು ಅಲ್ಲಿಯೇ ಉಳಿದು ಉಗ್ರರನ್ನು ಪ್ರಬಲವಾಗಿ ಎದುರಿಸಿದರು. ಹಾಗಾಗಿ ಸರ್ಕಾರದ ಅಧಿಕೃತ ಅಂಕಿ ಅಂಶಗಳ ಪ್ರಕಾರ, 1990ರಲ್ಲಿ ಪಾಕ್ ಉಗ್ರರು 219 ಪಂಡಿತರನ್ನು ಕೊಂದರೆ, 1700ಕ್ಕೂ ಹೆಚ್ಚು ಡೋಗ್ರಾ, ದಲಿತ ಹಿಂದೂ ಮತ್ತು ಸಿಖ್ಖರನ್ನು ಕೊಂದರಂತೆ. ಹಾಗಾದರೆ ಜನರಿಗೆ ಸತ್ಯ ತಿಳಿಯಬೇಕಾದರೆ 'ಕಾಶ್ಮೀರ ಡೋಗ್ರಾ ಫೈಲ್ಸ್' ಸಹ ಚಲನಚಿತ್ರ ಆಗಬೇಕು ಅಲ್ಲವೇ?

ಪ್ರಕಾಶ್ ಗಾಂಭೀರ್, ಕಲ್ಲಬೆಟ್ಟು, ಮೂಡುಬಿದಿರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited.
To know more about The Printers (Mysore) Private Ltd, visit www.printersmysore.com.

ಜಾತಿ ಗಣತಿ ನಿರಾಕರಣೆಗೆ ಸಕಾರಣವಿಲ್ಲ

ರಾಜಕೀಯ ಪ್ರಾತಿನಿಧ್ಯದ ಮೀಸಲಾತಿ ನೀಡುವುದಕ್ಕೆ ಅಗತ್ಯವಾದ ಸಮಗ್ರ ಮತ್ತು ಅಧಿಕೃತ ಮಾಹಿತಿ ಕರ್ನಾಟಕದಲ್ಲಿ ಲಭ್ಯ ಇದೆ. ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಮೂರು ಸೂತ್ರಗಳ ಆಧಾರದಲ್ಲಿ ಪರಿಶೀಲನೆ ನಡೆಸಲು ಈ ಅಂಕಿ ಅಂಶಗಳನ್ನು ಬಳಸಿಕೊಳ್ಳಬಹುದು. ಆ ಮೂಲಕ ಒಬಿಸಿ ಸಮುದಾಯಗಳಿಗೆ ಕನಿಷ್ಠ ಅವಧಿಯಲ್ಲಿ ರಾಜಕೀಯ ಮೀಸಲಾತಿ ನೀಡಬಹುದು

• ಎಚ್. ಕಾಂತರಾಜ

ಸಂವಿಧಾನಕ್ಕೆ 1993ರಲ್ಲಿ ಮಾಡಲಾದ 73 ಮತ್ತು 74ನೇ ತಿದ್ದುಪಡಿ ಪ್ರಕಾರ, ಪರಿಶಿಷ್ಟ ಜಾತಿ, ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಗ್ರಾಮೀಣ ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ 243(ಡಿ)(6) ಹಾಗೂ 243(ಟಿ)(6) ವಿಧಿ ಅಡಿಯಲ್ಲಿ ಸ್ಥಾನಗಳನ್ನು ಮೀಸಲಿರಿಸಬೇಕಾಗಿದೆ. ಈ ತಿದ್ದುಪಡಿಗಳ ಉದ್ದೇಶ ಅವಕಾಶವಂಚಿತ ದುರ್ಬಲ ವರ್ಗಗಳಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಪ್ರಾತಿನಿಧ್ಯ ನೀಡಿ, ರಾಜಕೀಯ ಶಕ್ತಿ ತುಂಬುವುದು.

ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನಗರಪಾಲಿಕೆ, ಪುರಸಭೆ, ಜಿಲ್ಲಾ ಪಂಚಾಯಿತಿ ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಒಳಪಡುತ್ತವೆ. ಸಂವಿಧಾನದ 73ನೇ ತಿದ್ದುಪಡಿಯ ಅನ್ವಯ ನಮ್ಮ ರಾಜ್ಯದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ನ್ನು ರಚಿಸಿ ಮೀಸಲಾತಿ ಕಲ್ಪಿಸಲಾಗಿದೆ. ಕರ್ನಾಟಕದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಸದಸ್ಯರ ಅವಧಿ ಮುಗಿದು ಒಂದು ವರ್ಷಕ್ಕಿಂತಲೂ ಮೇಲಾಗಿದೆ. ಚುನಾವಣೆ ನಡೆಸುವುದು ಬಾಕಿ ಇದೆ. 1993ರ ನಂತರ ಇಲ್ಲಿಯವರೆಗೆ 29 ವರ್ಷಗಳ ಕಾಲ ಸ್ಥಳೀಯ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳು (ಒಬಿಸಿ) ಸ್ಥಾನಗಳ ಮೀಸಲಾತಿಯನ್ನು ಪಡೆದಿವೆ. ಒಬಿಸಿ ಮೀಸಲಾತಿ ನೀಡಲು ಸಾಧ್ಯವಿಲ್ಲದ ಪರಿಸ್ಥಿತಿಯು ಈಗ ನಿರ್ಮಾಣ ಆಗಿದೆ. ಸುಪ್ರೀಂ ಕೋರ್ಟ್ ಮೀಸಲಾತಿಗೆ ಸಂಬಂಧಿಸಿ ನೀಡಿರುವ ಆದೇಶಗಳನ್ನು ರಾಜ್ಯವು ಪಾಲಿಸದೇ ಇರುವುದು ಇದಕ್ಕೆ ಕಾರಣ.

ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಲು ನಿಖರವಾದ ದತ್ತಾಂಶದ ಅವಶ್ಯಕತೆ ಇದೆ ಎಂದು ಕೆ. ಕೃಷ್ಣಮೂರ್ತಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ 2010ರ ಮೇಯಲ್ಲಿ ಹೇಳಿತ್ತು. ಸಂವಿಧಾನದ 15 (4) ಮತ್ತು 16 (4) ವಿಧಿಗಳ ಪ್ರಕಾರ ಶಿಕ್ಷಣ ಮತ್ತು ಉದ್ಯೋಗದಲ್ಲಿ ನೀಡುವ ಮೀಸಲಾತಿಯ ಮಾನದಂಡಗಳು ರಾಜಕೀಯ ಮೀಸಲಾತಿಗೆ ಅನ್ವಯಿಸುವುದಿಲ್ಲ; ರಾಜಕೀಯ ಮೀಸಲಾತಿಯ ಮಾನದಂಡ ಪ್ರತ್ಯೇಕವಾಗಿರಬೇಕು ಮತ್ತು ಭಿನ್ನವಾಗಿರಬೇಕು. ಒಬಿಸಿಯಲ್ಲಿರುವ ಜಾತಿಗಳಲ್ಲಿ ಯಾವುವು ರಾಜಕೀಯವಾಗಿ ಹಿಂದುಳಿದಿವೆ ಎಂಬುದನ್ನು ಲೆಕ್ಕಹಾಕಬೇಕು. ರಾಜಕೀಯ ಮೀಸಲಾತಿ ನಿಗದಿಗೆ ಪ್ರತ್ಯೇಕ ಆಯೋಗ ಬೇಕು ಎಂದು ಕೋರ್ಟ್ ಹೇಳಿತ್ತು.

ಮಹಾರಾಷ್ಟ್ರದ ವಿಕಾಸ್ ಕೃಷ್ಣರಾವ್ ಗವಳಿ ಪ್ರಕರಣದ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್‌ನ ಮೂವರು ನ್ಯಾಯಮೂರ್ತಿಗಳ ಪೀಠವು, ಕೃಷ್ಣಮೂರ್ತಿ ಪ್ರಕರಣದ ತೀರ್ಪು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಅನ್ವಯ ಎಂದು 2021ರ ಮಾರ್ಚ್ 4ರಂದು ಆದೇಶಿಸಿದೆ. ಕೋರ್ಟ್ ತೀರ್ಪಿನಲ್ಲಿ ಇರುವ ಮೂರು ಸೂತ್ರಗಳ ಪ್ರಮುಖ ಅಂಶಗಳು ಹೀಗಿವೆ:

1. ಹಿಂದುಳಿದ ವರ್ಗಗಳ ಪ್ರಮುಖ ಜಾತಿಗಳು ರಾಜಕೀಯವಾಗಿ ಹಿಂದುಳಿದಿವೆಯೇ ಅಥವಾ ಮುಂದುವರಿದಿವೆಯೇ ಎಂಬುದರ ವಿಸ್ತೃತ ಅಧ್ಯಯನ, ಸಂವಿಧಾನದ 243 (ಡಿ) (6) ಮತ್ತು 243 (ಟಿ)(6) ವಿಧಿಗಳ ಅಡಿಯಲ್ಲಿ ಈ ಜಾತಿಗಳನ್ನು ಮೀಸಲಾತಿ ವ್ಯಾಪ್ತಿಗೆ ತರುವುದು ರಾಜ್ಯ ಸರ್ಕಾರಗಳ ಹೊಣೆಗಾರಿಕೆ. ಈ ಉದ್ದೇಶಕ್ಕಾಗಿ ಪ್ರತ್ಯೇಕ ಆಯೋಗವನ್ನು ರಾಜ್ಯವು ರಚಿಸಬೇಕು. ಆಯೋಗವು ಯಾವೆಲ್ಲ ಅಂಶಗಳನ್ನು ಪರಿಶೀಲಿಸಿ ವರದಿ ತಯಾರಿಸಬೇಕು ಎಂಬ ಬಗ್ಗೆ ಮಾನದಂಡವನ್ನೂ ರೂಪಿಸಬೇಕು.

2. ಈ ಉದ್ದೇಶಕ್ಕಾಗಿ ರಚಿಸಿದ ಆಯೋಗದ ವರದಿಯನ್ನು ಆಧರಿಸಿ ರಾಜ್ಯ ಸರ್ಕಾರವು ಹಿಂದುಳಿದ ವರ್ಗಗಳ ಜಾತಿಗಳ ಮೀಸಲಾತಿ ಪ್ರಮಾಣ ನಿಗದಿಗೊಳಿಸಬೇಕು.

3. ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿರುವಂತೆ ಮೀಸಲಾತಿಯ ಒಟ್ಟು ಪ್ರಮಾಣವು ಯಾವುದೇ ಕಾರಣಕ್ಕೂ ಶೇ 50ರಷ್ಟನ್ನು ಮೀರಬಾರದು.

ಈ ಸೂತ್ರಗಳ ಆಧಾರದಲ್ಲಿಯೇ ಮೀಸಲಾತಿ ನಿಗದಿ ಮಾಡಬೇಕು ಎಂದು ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿಯೂ ಸುಪ್ರೀಂ ಕೋರ್ಟ್ 2021ರ ಡಿಸೆಂಬರ್ 15 ಮತ್ತು ಡಿಸೆಂಬರ್ 17ರಂದು ಮತ್ತೆ ಹೇಳಿದೆ. ಈ ಸೂತ್ರ ಪಾಲನೆ ಆಗದೇ ಇದ್ದರೆ ಒಬಿಸಿ ಮೀಸಲಾತಿಯನ್ನು ಒಪ್ಪಿಕೊಳ್ಳಲಾಗದು ಎಂದೂ ಕೋರ್ಟ್ ಹೇಳಿದೆ.

ಮೇಲೆ ಉಲ್ಲೇಖಿಸಿದ ತ್ರಿಸೂತ್ರಗಳನ್ನು ಪಾಲಿಸಿ ಇತರೆ ಹಿಂದುಳಿದ ವರ್ಗಗಳಿಗೆ ಶೇ 27ರಷ್ಟು ರಾಜಕೀಯ ಮೀಸಲಾತಿ ನೀಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳ ಚುನಾವಣೆಯನ್ನು ರಾಜ್ಯ ಸರ್ಕಾರ ನಡೆಸುವುದೇ ಎಂಬುದು ಬಹುಮುಖ್ಯವಾದ ಪ್ರಶ್ನೆ.

ಮಹಾರಾಷ್ಟ್ರದ ಹಿಂದುಳಿದ ವರ್ಗಗಳ ಆಯೋಗವು ಈ ಸೂತ್ರಗಳನ್ನು ಪಾಲಿಸದೆ ನೀಡಿದ್ದ ವರದಿಯನ್ನು ಸುಪ್ರೀಂ ಕೋರ್ಟ್ ಇದೇ 3ರಂದು ತಿರಸ್ಕರಿಸಿದೆ. ಒಬಿಸಿ ಮೀಸಲು ಕ್ಷೇತ್ರಗಳನ್ನು ಸಾಮಾನ್ಯ ಕ್ಷೇತ್ರಗಳು ಎಂದು ಪರಿಗಣಿಸಿ ಚುನಾವಣೆ ನಡೆಸಬೇಕು, ಚುನಾವಣೆಯನ್ನು ಅನಿರ್ದಿಷ್ಟ ಕಾಲ ಮುಂದೂಡಲಾಗದು ಎಂದು ಕೋರ್ಟ್ ಹೇಳಿದೆ.

ಕರ್ನಾಟಕದ ಸ್ಥಳೀಯ ಸಂಸ್ಥೆ ಚುನಾವಣೆಗಳು ಮತ್ತು ಒಬಿಸಿ ಮೀಸಲಾತಿ ವಿಷಯಕ್ಕೆ ಬಂದರೆ, ಇತರೆ ರಾಜ್ಯಗಳಿಗಿಂತ ಕರ್ನಾಟಕದ ಸ್ಥಿತಿ ಭಿನ್ನವಾಗಿದೆ. ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರವು ವೈಜ್ಞಾನಿಕವಾದ ಜಾತಿಗಣತಿ ದತ್ತಾಂಶ ದೃಷ್ಟಿಯಿಂದ ರಾಜ್ಯದಲ್ಲಿ ಸಮಗ್ರವಾದ ಸಮೀಕ್ಷೆಯನ್ನು ನಡೆಸಲು ಆದೇಶಿಸಿ ಸಮೀಕ್ಷೆ ಕಾರ್ಯವನ್ನು ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ 2014ರಲ್ಲಿ ವಹಿಸಿತ್ತು. ಆಯೋಗವು 2015ರಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ) ನಡೆಸಿದೆ. ರಾಜ್ಯದ ಎಲ್ಲಾ ಜಾತಿ-ಸಮುದಾಯಗಳ ಜನರ ಮನೆಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿ ಈ ಸಮೀಕ್ಷೆ ನಡೆಸಲಾಗಿದೆ.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಕಾಯ್ದೆ-1995 ವ್ಯಾಪ್ತಿಯಲ್ಲಿ ಆಯೋಗವು ಕಾರ್ಯ ನಿರ್ವಹಿಸಬೇಕು. ರಾಜಕೀಯ ಮೀಸಲಾತಿ ನಿರ್ಧರಿಸುವ ಅವಕಾಶವು 1995ರ ಕಾಯ್ದೆಯ ವ್ಯಾಪ್ತಿಯಲ್ಲಿ ಇಲ್ಲ. ಹಾಗಿದ್ದರೂ ರಾಜ್ಯದ ಎಲ್ಲ ಜನರನ್ನು ಒಳಗೊಂಡು ಈ ಸಮೀಕ್ಷೆ ನಡೆಸಲಾಗಿದೆ. ಪರಿಣತರ ಅಭಿಪ್ರಾಯ ಪಡೆದು, 55 ಅಂಶಗಳ ಮಾನದಂಡ ರೂಪಿಸಿ ನಿಖರವಾದ ಅಂಕಿ ಅಂಶ ಪಡೆಯುವ ಪ್ರಯತ್ನ ನಡೆಸಲಾಗಿದೆ. ಅದರಲ್ಲಿ ಪ್ರತಿಯೊಬ್ಬ ವ್ಯಕ್ತಿ ಹಾಗೂ ಕುಟುಂಬದ ಎಲ್ಲಾ ಹಂತದ ರಾಜಕೀಯ ಪ್ರಾತಿನಿಧ್ಯದ ಅಂಶವೂ ಸೇರಿದೆ. ಕರ್ನಾಟಕ ರಾಜ್ಯದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ 2015ರ ವರದಿಯಲ್ಲಿ ಈ ಎಲ್ಲ ಮಾಹಿತಿಯೂ ಇದೆ. ಇಂಥ ಸಮಗ್ರವಾದ ಸಮೀಕ್ಷೆಯ ಅವಶ್ಯಕತೆ ಇದೆ ಎಂದು ಸುಪ್ರೀಂ ಕೋರ್ಟ್ ಇಂದ್ರಾ ಸಾಹ್ನಿ ಪ್ರಕರಣದಲ್ಲಿ ಹೇಳಿತ್ತು.

ಆದ್ದರಿಂದ, 2015ರ ಸಮೀಕ್ಷೆಯಲ್ಲಿ ಸಂಗ್ರಹಿಸಿದ ಅಂಕಿ-ಅಂಶಗಳನ್ನು ಬಳಸಿಕೊಳ್ಳದೇ ಇರಲು ಕಾರಣಗಳು ಕಾಣಿಸುತ್ತಿಲ್ಲ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಕೂಡಾ ಸಮೀಕ್ಷೆಯ ಅಂಕಿಂಶವನ್ನು ಬಳಸಿಕೊಳ್ಳಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದೆ. ಜಾತಿ ಆಧಾರಿತ ರಾಜಕೀಯ ಮೀಸಲಾತಿಗೆ ಮುಖ್ಯವಾಗಿ ಬೇಕಾದ ಜಾತಿವಾರು ಜನಸಂಖ್ಯೆಯ ಅಂಕಿ-ಅಂಶಗಳು ವರದಿಯಲ್ಲಿ ಇವೆ. ಜತೆಗೆ, 1993ರಿಂದ 2021ರವರೆಗೆ ಎಲ್ಲ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳಲ್ಲಿ ಚುನಾಯಿತರಾದ ಸದಸ್ಯರ ಜಾತಿವಾರು ಅಂಕಿ ಅಂಶಗಳನ್ನು ದ್ವಿತೀಯ ಮೂಲದಿಂದ ಪಡೆದು ವರದಿಯಲ್ಲಿ ಸೇರಿಸಿಕೊಳ್ಳಲಾಗಿದೆ.

ರಾಜಕೀಯ ಪ್ರಾತಿನಿಧ್ಯದ ಮೀಸಲಾತಿ ನೀಡುವುದಕ್ಕೆ ಅಗತ್ಯವಾದ ಸಮಗ್ರ ಮತ್ತು ಅಧಿಕೃತ ಮಾಹಿತಿ ಕರ್ನಾಟಕದಲ್ಲಿ ಲಭ್ಯ ಇದೆ. ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಮೂರು ಸೂತ್ರಗಳ ಆಧಾರದಲ್ಲಿ ಪರಿಶೀಲನೆ ನಡೆಸಲು ಈ ಅಂಕಿ ಅಂಶಗಳನ್ನು ಬಳಸಿಕೊಳ್ಳಬಹುದು. ಆ ಮೂಲಕ ಒಬಿಸಿ ಸಮುದಾಯಗಳಿಗೆ ಕನಿಷ್ಠ ಅವಧಿಯಲ್ಲಿ ರಾಜಕೀಯ ಮೀಸಲಾತಿ ನೀಡಬಹುದು.

ಯಾವುದೇ ಆಯೋಗಕ್ಕೆ ಬೇಕಾದ ನಿಖರವಾದ ಅಂಕಿ-ಅಂಶಗಳನ್ನು ಒದಗಿಸುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜವಾಬ್ದಾರಿ. ಹತ್ತು ವರ್ಷಗಳಿಗೆ ಒಮ್ಮೆ ನಡೆಸಲಾಗುವ ಜನಗಣತಿಯಲ್ಲಿ 1931ರ ನಂತರ ಇತರೆ ಹಿಂದುಳಿದ ವರ್ಗಗಳ ಕುರಿತ ಅಧಿಕೃತವಾದ ಜಾತಿವಾರು ಮಾಹಿತಿ ಇಲ್ಲ.

ಪ್ರತ್ಯೇಕವಾದ ಆಯೋಗವನ್ನು ರೂಪಿಸಿ, ಮೂರು ಸೂತ್ರಗಳಿಗೆ ಅನುಸಾರವಾದ ವರದಿಯನ್ನು ಪಡೆದು ಒಬಿಸಿ ಮೀಸಲು ನಿಗದಿ ಮಾಡುವುದು ಸರ್ಕಾರದ ಮುಂದಿರುವ ಆಯ್ಕೆ. ನಿಗದಿತ ಅವಧಿಯಲ್ಲಿ ಈ ಪ್ರಯತ್ನ ಆಗದೇ, ಮೀಸಲು ವಾರ್ಡ್‌ಗಳನ್ನು ಸಾಮಾನ್ಯ ವಾರ್ಡ್ ಎಂದು ಪರಿಗಣಿಸಿ ಚುನಾವಣೆ ನಡೆಸುವುದು ಸಾಮಾಜಿಕ ನ್ಯಾಯದ ಉಲ್ಲಂಘನೆ ಎನಿಸುತ್ತದೆ.

ಲೇಖಕ: ಮಾಜಿ ಅಧ್ಯಕ್ಷ, ರಾಜ್ಯ ಹಿಂದುಳಿದ ವರ್ಗಗಳ ಆಯೋಗ

‘ಆಯೋಗಕ್ಕೆ ಸಮೀಕ್ಷೆ ಅಧಿಕಾರ ನೀಡಿ’

ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಕಾನೂನಿಗೆ ತಿದ್ದುಪಡಿ ತರುವ ಮೂಲಕ ರಾಜ್ಯ ಸರ್ಕಾರ, ಆಯೋಗಕ್ಕೆ ಹಿಂದುಳಿದ ವರ್ಗಗಳ ರಾಜಕೀಯ ಪ್ರಾತಿನಿಧ್ಯದ ಸಮೀಕ್ಷೆ ನಡೆಸಲು ಅಧಿಕಾರ ನೀಡಬೇಕು. ಆಯೋಗವು ರಾಜಕೀಯ ಹಿಂದುಳಿದಿರುವಿಕೆಯ ಸಮೀಕ್ಷೆ ನಡೆಸಿ ಮೂರು ತಿಂಗಳ ಒಳಗಾಗಿ ವರದಿ ಸಲ್ಲಿಸುವಂತೆ ನಿರ್ದೇಶಿಸಬೇಕು. ಸರ್ಕಾರ ಸಾಂವಿಧಾನಿಕ ಮೂಲತತ್ವಗಳಿಗೆ ವಿರುದ್ಧವಾಗಿ ನಡೆದುಕೊಳ್ಳಲು ಸಾಧ್ಯವಿಲ್ಲ.

ಈ ಹಿಂದೆ ರಾಜ್ಯ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದ ಜಗದೀಶ್ ಸಿಂಗ್ ಖೇಹರ್ ಅವರು, ‘ಇಲ್ಲಿ ಲಿಂಗಾಯತ-ಒಕ್ಕಲಿಗರ ಪ್ರಾಬಲ್ಯವಿದೆ. ಅವರೂ ಇತರೆ ಹಿಂದುಳಿದ ವರ್ಗಗಳ ಅಡಿಯಲ್ಲಿ ಮೀಸಲಾತಿ ಪಡೆಯುತ್ತಿದ್ದಾರೆ ಅಲ್ಲವೇ’ ಎಂದು ಪ್ರಶ್ನಿಸಿದ್ದರು. ಇದನ್ನು ಈಗ ಯಾಕೆ ನೆನಪಿಸಿಕೊಳ್ಳಬೇಕಾಗಿದೆ ಎಂದರೆ, ಕರ್ನಾಟಕದಲ್ಲಿ ಈತನಕ ಹಿಂದುಳಿದ ವರ್ಗಗಳ ರಾಜಕೀಯ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ ಯಾವುದೇ ಸಮೀಕ್ಷೆ ನಡೆದಿಲ್ಲ. ಸುಪ್ರಿಂ ಕೋರ್ಟ್‌ನಲ್ಲಿ ಇಂದಿರಾ ಸಾಹ್ನಿ ಪ್ರಕರಣ ಆದ ನಂತರ ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದವರ ಸಮೀಕ್ಷೆ ನಡೆಯಬೇಕು ಎಂಬ ನೆಲೆಗಟ್ಟಿನಲ್ಲೇ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವನ್ನು ರಚಿಸಲಾಗಿದೆ. ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಶೈಕ್ಷಣಿಕ ಸಾಮಾಜಿಕ ಸಮೀಕ್ಷೆ ನಡೆದಿದೆ. ಆದರೆ, ಕಾಂತರಾಜ ಆಯೋಗದ ವರದಿ ಆಧಾರಿತವಾಗಿಯೇ ಹಿಂದುಳಿದ ವರ್ಗಗಳ ರಾಜಕೀಯ ಪ್ರಾತಿನಿಧ್ಯವನ್ನು ನಾವು ಗುರುತಿಸಲು ಸಾಧ್ಯವಿಲ್ಲ.

ಎ.ಎಸ್.ಪೊನ್ನಣ್ಣ, ಹಿರಿಯ ವಕೀಲ, ಹೈಕೋರ್ಟ್

ರಾಜಕೀಯ ಮೀಸಲಾತಿ ನಮ್ಮ ವ್ಯಾಪ್ತಿಯಲ್ಲಿಲ್ಲ: ಜಯಪ್ರಕಾಶ್ ಹೆಗ್ಡೆ

ಯಾವುದೇ ಸಮುದಾಯಕ್ಕೆ ರಾಜಕೀಯ ಮೀಸಲಾತಿ ನಿರ್ಣಯಿಸುವ ವಿಷಯ ನಮ್ಮ (ಹಿಂದುಳಿದ ವರ್ಗಗಳ ಆಯೋಗ) ವ್ಯಾಪ್ತಿಗೆ ಬರುವುದಿಲ್ಲ. ರಾಜಕೀಯ ಸ್ಥಿತಿಗತಿಯನ್ನು ಸಮೀಕ್ಷೆ ಮಾಡಿ ಈ ಬಗ್ಗೆ ತೀರ್ಮಾನಿಸಲು ಆಯೋಗದ ಕಾಯ್ದೆಯಲ್ಲಿ ಅವಕಾಶ ಕೊಟ್ಟಿಲ್ಲ. ರಾಜ್ಯ ಸರ್ಕಾರ ಈ ಬಗ್ಗೆ ತಿರ್ಮಾನ ತೆಗೆದುಕೊಳ್ಳಬೇಕು. ಸ್ಥಳೀಯ ಸಂಸ್ಥೆಗಳಲ್ಲಿ ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸುವ ವಿಚಾರದಲ್ಲಿ ಪ್ರತ್ಯೇಕ ಆಯೋಗ ರಚಿಸುವಂತೆ ಕೋರ್ಟ್ ಹೇಳಿದೆ. ನಾವು ಈ ಕೆಲಸ ಮಾಡಬೇಕೆಂದರೆ ನಮ್ಮ ಕಾಯ್ದೆಯಲ್ಲಿ ತಿದ್ದುಪಡಿ ಮಾಡಬೇಕು.

ಈಗಿರುವ ಕಾಯ್ದೆಯಡಿ ಆಯೋಗಕ್ಕೆ ಆ ಅವಕಾಶ ಇಲ್ಲ. ನಾವು ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಯ ಸಮೀಕ್ಷೆಯನ್ನು ಮಾತ್ರ ಮಾಡಬಹುದು.

ಈ ಹಿಂದಿನ ಆಯೋಗದ ಅವಧಿಯಲ್ಲಿ ರಾಜ್ಯದಲ್ಲಿ ನಡೆದಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ಸ್ವೀಕರಿಸುವುದು ರಾಜ್ಯ ಸರ್ಕಾರಕ್ಕೆ ಬಿಟ್ಟಿದ್ದು. ಈ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕಿದೆ. ಆದರೆ, ಈ ವರದಿ ವಿಚಾರ ಸದ್ಯ ಕೋರ್ಟ್‌ನಲ್ಲಿದೆ. ವರದಿಯನ್ನು ಸರ್ಕಾರ ಯಾಕೆ ಸ್ವೀಕರಿಸಿಲ್ಲ ಎಂಬ ಬಗ್ಗೆ ಹಿಂದೆಯೂ ಚರ್ಚೆ ನಡೆದಿದೆ. ನಾವು ಒಂದು ಮಾಡಬಹುದು, ಅಂದರೆ ವರದಿಯನ್ನು ಸರ್ಕಾರಕ್ಕೆ ಕೊಡಬಹುದು. ಆದರೆ, ಕಾಯ್ದೆಯ ಪ್ರಕಾರ ಈ ಸಮೀಕ್ಷಾ ವರದಿ ಅಧಿಕೃತಗೊಳ್ಳಬೇಕಿದ್ದರೆ ಆಯೋಗದ ಸದಸ್ಯ ಕಾರ್ಯದರ್ಶಿ ಅದಕ್ಕೆ ಸಹಿ ಹಾಕಿರಬೇಕು. ಸದಸ್ಯ ಕಾರ್ಯದರ್ಶಿ ಸಹಿ ಹಾಕಿಲ್ಲ. ನಾವು ಅದರ ಬಗ್ಗೆ ಅಧ್ಯಯನ ಮಾಡುತ್ತಿದ್ದೇವೆ. ಶೀಘ್ರದಲ್ಲಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಕೆ. ಜಯಪ್ರಕಾಶ್ ಹೆಗ್ಡೆ

ಅಧ್ಯಕ್ಷರು, ರಾಜ್ಯ ಹಿಂದುಳಿದ ವರ್ಗಗಳ ಆಯೋಗ

‘ಜಾತಿ ಗಣತಿ ವರದಿ ಬಳಸಿಕೊಳ್ಳಲಾಗದು’

ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಈ ಹಿಂದಿನ ಅಧ್ಯಕ್ಷ ಎಚ್. ಕಾಂತರಾಜ ಆಯೋಗ ನಡೆಸಿದ ಸಮೀಕ್ಷೆಯಲ್ಲಿರುವ ಮಾಹಿತಿ ಅಥವಾ ಅಂಕಿ ಅಂಶಗಳನ್ನು ಬಳಸಿಕೊಳ್ಳಲು ಈಗ ಸಾಧ್ಯವಿಲ್ಲ. ಯಾಕೆಂದರೆ, ಈ ಆಯೋಗದ ವರದಿಗೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ಕೆಲವು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ವಿಚಾರಣೆಗೆ ಬಾಕಿ ಇವೆ. ಹೀಗಿರುವಾಗ ಈ ಆಯೋಗದ ವರದಿ ಆಧಾರದ ಮೇಲೆ ಚುನಾವಣೆ ಮಾಡಲು ಬರೋದಿಲ್ಲ.

ಡಿ.ಎಲ್.ಜಗದೀಶ್

ಹಿರಿಯ ವಕೀಲ, ಹೈಕೋರ್ಟ್

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 74

ವಿಷ್ಣು ಮುಂದೆ ಜಂಭ ಕೊಚ್ಚಿದ ನಾರದ

ಅಹಂಕಾರದಿಂದ ಬುದ್ಧಿಹೀನನಾಗಿದ್ದ ನಾರದ, ವಿಷ್ಣುವಿನ ಮುಂದೆ ತನ್ನ ಯಶಸ್ವಿ ಕಾಮನಿಗ್ರಹ ತಪೋ ವೃತ್ತಾಂತವನ್ನು ಹೇಳಿಕೊಳ್ಳಲು ಉತ್ಸುಕನಾಗಿ ವೈಕುಂಠಕ್ಕೆ ತೆರಳಿದ.

ನಾರದನು ವೈಕುಂಠಕ್ಕೆ ಬರುತ್ತಿರುವ ವಿಷಯ ಮತ್ತು ಯಾವ ಕಾರಣಕ್ಕಾಗಿ ತನ್ನ ಬಳಿ ಬರುತ್ತಿದ್ದಾನೆಂಬ ವಿಚಾರಗಳೆಲ್ಲವನ್ನೂ ದಿವ್ಯಜ್ಞಾನದೃಷ್ಟಿಯಿಂದ ಮೊದಲೇ ಅರಿತಿದ್ದ ಶ್ರೀಮನ್ನಾರಾಯಣ. ಇದಕ್ಕಾಗಿ ತನ್ನ ಬಳಿಗೆ ಬಂದ ನಾರದಮಹರ್ಷಿಯನ್ನು ಆದರದಿಂದ ಬರಮಾಡಿಕೊಂಡ. ನಾರದನನ್ನು ತನ್ನ ಪೀಠದಲ್ಲೇ ಕೂರಿಸಿಕೊಂಡು ವಿಷ್ಣು ಸಹ ನಾರದನಿಗೆ ಬುದ್ಧಿಯನ್ನ ಹೇಳಿದ. ಶಿವನ ಪಾದಾರವಿಂದಗಳನ್ನು ವಿಷ್ಣು ನೆನೆಯುತ್ತಾ, ಶಿವನ ಮಹಿಮೆಯನ್ನ ಸ್ಮರಣೆ ಮಾಡಿದ. ನಾರದ ತನ್ನ ನಾಲಿಗೆಯಿಂದ ಅಹಂಕಾರದ ಮಾತನ್ನಾಡಬಾರದೆಂದು, ಶಿವನ ಮಹಿಮೆ ಇಲ್ಲದೆ ಯಾವ ಘಟನೆಯೂ ನಡೆಯುವುದಿಲ್ಲ ಎಂದು, ನಾರದನ ಅಹಮಿಕೆ ನಾಶಮಾಡುವ ಯಥಾರ್ಥವಾದ ಮಾತನ್ನು ಹೇಳಿದ.

ಹಾಗೆಯೇ, ‘ನಾರದ ಮುನಿಯೋಗ್ಯ, ನೀನು ಇಲ್ಲಿಗೆ ದಯಮಾಡಿಸಿದುದರಿಂದ ನಾನು ಪವಿತ್ರನಾದೆ’ ಎಂದು ನಾರದನನ್ನ ಹೊಗಳಿದ. ವಿಷ್ಣುವಿನ ಈ ಔಪಚಾರಿಕ ಹೊಗಳಿಕೆ ಮಾತನ್ನು ಕೇಳಿ ಮತ್ತಷ್ಟು ಗರ್ವಿತನಾದ ನಾರದ ಮಹರ್ಷಿಯು ಹೆಮ್ಮೆಯಿಂದ ಬೀಗುತ್ತಾ, ಮೈಮರೆತು ತನ್ನ ಕಾಮನಿಗ್ರಹ ತಪೋ ವೃತ್ತಾಂತವನ್ನು ಹೇಳಿದ. ಅಹಂಕಾರದಿಂದ ಕೂಡಿದ ನಾರದನ ಮಾತನ್ನು ಕೇಳಿದ ವಿಷ್ಣು, ತನ್ನ ಹೃದಯದಲ್ಲಿ ಶಿವನ ಸ್ಮರಣೆ ಮಾಡಿದ.

ಶಿವಸ್ವರೂಪನಾದ ಮತ್ತು ಶೈವಾಗ್ರಣಿಯೂ ಆದ ಹರಿಯು, ಭಕ್ತಿಯಿಂದ ಮುಕುಲಿತಹಸ್ತನಾಗಿ ತಲೆಯನ್ನು ತಗ್ಗಿಸಿ, ‘ಓ ದೇವ! ಓ ಮಹದೇವ! ಓ ಪರಮೇಶ್ವರ! ಪ್ರಸನ್ನನಾಗು. ಓ ಮಂಗಳಸ್ವರೂಪ! ನೀನು ಧನ್ಯ. ಎಲ್ಲರನ್ನೂ ಮರುಳುಗೊಳಿಸುವ ನಿನ್ನ ಮಾಯೆಯೂ ಧನ್ಯವಾದುದೇ’ ಎಂದು ಪರಮೇಶ್ವರನನ್ನು ಧ್ಯಾನಿಸಿದ. ನಂತರ ನಾರದನನ್ನುದ್ದೇಶಿಸಿ, ‘ನಾರದ! ನೀನೆಲ್ಲಿಂದ ಬಂದೆ? ಏತಕ್ಕೆ ಬಂದೆ? ನೀನು ಇಲ್ಲಿಗೆ ದಯಮಾಡಿಸಿದುದರಿಂದ ನಾನು ಪವಿತ್ರನಾದೆ’ ಎಂದು ನುಡಿದ. ವಿಷ್ಣುವಿನ ಈ ಮಾತನ್ನು ಕೇಳಿ ಮತ್ತಷ್ಟು ಗರ್ವಿತನಾದ ನಾರದಮಹರ್ಷಿಯು ಮೈಮರೆತು, ತಾನು ತನ್ನ ತಪಃಶಕ್ತಿಯಿಂದ ಮನ್ಮಥನನ್ನು ಸೋಲಿಸಿದ ವೃತ್ತಾಂತವನ್ನೂ ಹೇಳಿದ.

ಅಹಂಕಾರದಿಂದ ಕೂಡಿದ ನಾರದನ ಮಾತನ್ನು ಕೇಳಿದ ಹರಿಯು ಪರಮಾತ್ಮನಾದ ಶಿವನನ್ನು ಸ್ತೋತ್ರಮಾಡಿ, ನಾರದನ ಜಂಭದ ಮಾತಿಗೆ ಉತ್ತರಿಸದೆ ಸುಮ್ಮನಾದ. ಪ್ರಪಂಚವನ್ನು ಪಾಲಿಸುವ ಹರಿಯು, ಶಿವನ ಕಾರ್ಯವೇನೆಂಬುದನ್ನು ಚೆನ್ನಾಗಿ ಅರಿತಿದ್ದ. ಶಿವನ ಅಪ್ಪಣೆಯಂತೆ ಮಮತೆಯಿಂದ ಆ ನಾರದನನ್ನು ಕುರಿತು, ಹೀಗೆ ಹೇಳಿದ ‘ಓ ಮುನಿಸತ್ತಮ! ನೀನು ಬಹು ಬುದ್ಧಿಶಾಲಿ, ಮಹಾ ಧನ್ಯ. ಯಾರಿಗೆ ಭಕ್ತಿ, ಜ್ಞಾನ, ವೈರಾಗ್ಯಗಳು ಇಲ್ಲವೋ, ಆ ಮನುಷ್ಯನನ್ನು ಎಲ್ಲ ದುಃಖಗಳನ್ನೂ ಉಂಟುಮಾಡುವ ಕಾಮಮೋಹಾದಿ ವಿಕಾರಗಳು ಪೀಡಿಸುತ್ತವೆ. ಹುಟ್ಟಿದಾಗಿನಿಂದಲೂ ವಿಕಾರಹಿತನಾದ, ನೈಷ್ಠಿಕ ಬ್ರಹ್ಮಚಾರಿಯಾದ ನೀನು, ಯಾವಾಗಲೂ ಜ್ಞಾನವೈರಾಗ್ಯಗಳನ್ನು ಹೊಂದಿರುವೆ. ಇಂಥ ನಿನಗೆ ಕಾಮವಿಕಾರವೆಲ್ಲಿಯದು?’ ಎಂದು ವಿಷ್ಣು ತನ್ನ ಬಳಿ ಬಂದ ನಾರದನನ್ನು ಹೊಗಳಿದ.

ವಿಷ್ಣು ಮಾತಿನಿಂದ ಮತ್ತಷ್ಟು ಹುಬ್ಬಿದ ನಾರದ, ವಿಷ್ಣು ಹೇಳಿದ ಅನೇಕ ಹಿತನುಡಿಗಳನ್ನು ಕಡೆಗಣಿಸಿದ. ಕೇವಲ ತನ್ನ ಹೊಗಳಿದ ಮಾತುಗಳನ್ನಷ್ಟೆ ತಲೆಯೊಳಗೆ ತುಂಬಿಕೊಂಡ. ಇದರಿಂದ ನಾರದಮಹರ್ಷಿ ಮತ್ತಷ್ಟು ದುರಹಂಕಾರಿಯಾದ. ‘ನನ್ನ ಮೇಲೆ ನಿನಗೆ ಅನುಗ್ರಹವಿದ್ದರೆ ಆ ಮನ್ಮಥನು ಎಂತಹ ಪ್ರಭಾವಿ ಕಾಮೋತ್ತೇಜಕವುಳ್ಳವನು? ನಾನು ಹೇಗೆ ಅಂಥ ಪ್ರಭಾವಿಯನ್ನು ಮಣಿಸಿದೆ ಎಂಬುದನ್ನು ಎಲ್ಲರಿಗೂ ತಿಳಿಸು. ಅಂಥ ಕಾಮಪ್ರಭಾವಿಯನ್ನು ಮಣಿಸಿದ ನಾನು ಎಂಥ ಶ್ರೇಷ್ಠ – ಎಂಬುದನ್ನು ಸಹ ಎಲ್ಲರಿಗೂ ಹೇಳು’ ಅಂತ ಗರ್ವದಿಂದ ನುಡಿದ ಸ್ವೇಚ್ಛಾಸಂಚಾರಿಯಾದ ನಾರದಮುನಿ, ಅಲ್ಲಿಂದ ಹೊರಟುಹೋದ ಎಂಬಲ್ಲಿಗೆ ಶ್ರೀ ಶಿವಮಹಾಪುರಾಣದ ಎರಡನೆಯ ಸಂಹಿತೆಯಾದ ರುದ್ರಸಂಹಿತೆಯ ಮೊದಲನೆ ಖಂಡವಾದ ಸೃಷ್ಟಿಖಂಡದಲ್ಲಿ ಮುನಿಪ್ರಶ್ನ ವರ್ಣನ ಎಂಬ ಎರಡನೆ ಅಧ್ಯಾಯ ಮುಗಿಯುತ್ತದೆ. ●

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

☒ **ಹುಡುಗನೊಬ್ಬನಿಗೆ** ಇಬ್ಬರು ಪೊಲೀಸರು ಮನಬಂದಂತೆ ಥಳಿಸುತ್ತಿರುವ ವಿಡಿಯೊ ವೈರಲ್ ಆಗಿದೆ. ಉತ್ತರ ಪ್ರದೇಶದಲ್ಲಿ ನಡೆದ ಘಟನೆಯ ವಿಡಿಯೊ ಇದು ಎಂದು ಹೇಳಲಾಗಿದೆ. ಹುಡುಗ ಪಾಕಿಸ್ತಾನ ಪರ ಘೋಷಣೆಗಳನ್ನು ಕೂಗುತ್ತಿದ್ದ ಕಾರಣಕ್ಕೆ ಥಳಿಸಲಾಗಿದೆ ಎಂದು ವಿಡಿಯೊದಲ್ಲಿ ಬಿಂಬಿಸುವ ಪ್ರಯತ್ನ ನಡೆದಿದೆ. ‘ನಿಮ್ಮ ಮತದ ಮೌಲ್ಯವನ್ನು ನೀವೇ ನೋಡಿ. ಪಾಕಿಸ್ತಾನ ಜಿಂದಾಬಾದ್ ಎಂದು ಘೋಷಣೆ ಕೂಗುತ್ತಿದ್ದ ಹುಡುಗನಿಗೆ ಉತ್ತರ ಪ್ರದೇಶ ಪೊಲೀಸರು ಸರಿಯಾದ ಪಾಠ ಕಲಿಸುತ್ತಿದ್ದಾರೆ. ಇಡೀ ಪ್ರಪಂಚದಲ್ಲಿ ಯೋಗಿ ಸರ್ಕಾರದ ರೀತಿಯ ಸರ್ಕಾರ ಇರಬೇಕು’ ಎಂದು ಅಡಿಬರಹ ನೀಡಲಾಗಿದೆ.

☑ **ವೈರಲ್ ಆಗಿರುವ** ಈ ವಿಡಿಯೊ ಜೊತೆ ಹಂಚುತ್ತಿರುವ ಮಾಹಿತಿ ಸುಳ್ಳು ಎಂದು ದಿ ಲಾಜಿಕಲ್ ಇಂಡಿಯನ್ ವೇದಿಕೆ ವರದಿ ಮಾಡಿದೆ. ಈ ವಿಡಿಯೊವನ್ನು 2021ರಲ್ಲಿ ಸೆರೆಹಿಡಿಯಲಾಗಿದೆ. ಉತ್ತರ ಪ್ರದೇಶದ ಚಾಂದೌಲಿಯಲ್ಲಿ ಈ ಘಟನೆ ನಡೆದಿತ್ತು. ಮೂವರು ಬಾಲಕರನ್ನು ಕಳ್ಳತನದ ಶಂಕೆಯ ಮೇಲೆ ಇಬ್ಬರು ಪೊಲೀಸರು ಮನಬಂದಂತೆ ಥಳಿಸಿದ್ದರು. ಈ ಘಟನೆಯ ವಿಡಿಯೊ ಹೊರಬಿದ್ದ ಬಳಿಕ ಇಬ್ಬರು ಪೊಲೀಸರನ್ನು ಅಲ್ಲಿಯ ಎಸ್‌ಪಿ ಅಮಾನತುಗೊಳಿಸಿದ್ದರು. ಈ ಕುರಿತು ಉತ್ತರ ಪ್ರದೇಶದ ಸ್ಥಳೀಯ ಪತ್ರಿಕೆಗಳು 2021ರ ಮೇ 6ರಂದೇ ವರದಿ ಮಾಡಿದ್ದವು.

ಗುಂಡಣ್ಣ



ಬಾಸ್, ನನಗೆ ನಿಮ್ಮ ಎರಡು ನಿಮಿಷ ಸಮಯ ಕೊಡುತ್ತೀರಾ? ಪ್ಲೀಸ್
ನಾನು ಬ್ಯುಸಿ ಇದ್ದೇನೆ ಬಮ್‌ಸ್ಟೆಡ್, ನಿನಗೆ ಎರಡು ಸೆಕೆಂಡ್ ಮಾತ್ರ ಕೊಡುತ್ತೇನೆ.
© 2022 by King Features Syndicate, Inc. World Rights reserved
3-16
ನನಗೆ ರಜೆ.
ಸಿಗುವುದಿಲ್ಲ
www.Blondie.com
ಅಬ್ಬಾ, ನಾನು ಎರಡು ಸೆಕೆಂಡ್‌ಗಿಂತ ಜಾಸ್ತಿ ಸಮಯ ತೆಗೆದುಕೊಂಡಿಲ್ಲ.
YOUNG & MARSHALL

ಬೆರಗಿನ ಬೆಳಕು

ಗುರುರಾಜ ಕರಜಗಿ

ಪರೀಕ್ಷೆ - ಸಫಲತೆಯ ದಾರಿ

ಪರಿಪರಿ ಪರೀಕ್ಷೆಗಳು, ಪರಿಭವದ ಶಿಕ್ಷೆಗಳು |
ಗರಡಿಯ ವ್ಯಾಯಾಮ ಮನಬುದ್ಧಿಗಳಿಗೆ ||
ಪುರುಷತೆಗೆ ಪೆಟ್ಟುಗಳಿನಾದ ಗಂತಿಯೆ ವಿಜಯ |
ಬಿರಿದ ನನೆ ಫಲಕೆ ಮನೆ – ಮಂಕುತಿಮ್ಮ || 589 ||

ಪದ-ಅರ್ಥ: ಪರಿಭವದ = ಪರಾಭವದ, ಸೋಲಿನ, ಪೆಟ್ಟುಗಳಿನಾದ = ಪೆಟ್ಟುಗಳಿಂದಾದ, ಗಂತಿ = ಗಂಟು, ಬಿರುಸಾದದ್ದು, ನನೆ = ಮೊಗ್ಗು.

ವಾಚ್ಯಾರ್ಥ: ಜೀವನದಲ್ಲಿ ಬರುವ ಅನೇಕ ಪರೀಕ್ಷೆಗಳು, ಸೋಲುಗಳು, ಶಿಕ್ಷೆಗಳು ಮನಸ್ಸು - ಬುದ್ಧಿಗಳಿಗೆ ಗರಡಿಯ ವ್ಯಾಯಾಮವಿದ್ದಂತೆ. ಈ ಪೆಟ್ಟುಗಳಿಂದ ಪೌರುಷಕ್ಕಾದ ಗಂಟುಗಳು, ಬಿರುಸುಗಳೇ ವಿಜಯದ ಲಕ್ಷಣಗಳು. ಮೊಗ್ಗು ಬಿರಿದಾಗಲೇ ಮುಂದೆ ಹಣ್ಣಿಗೆ ಮನೆ.

ವಿವರಣೆ: ಇತ್ತೀಚಿಗೆ ಯಾರೋ ಕಳುಹಿಸಿದ ಹಾಡೊಂದನ್ನು ಕೇಳುತ್ತಿದ್ದೆ. ಗಾಯಕಿ ತುಂಬ ಸೊಗಸಾಗಿ ಆರ್ತವಾಗಿ ಹಾಡುತ್ತಿದ್ದರು. ಆ ಹಾಡಿನ ಪ್ರಾರಂಭ ಹೀಗಿದೆ.

‘ಇನ್ನಷ್ಟು ಬೇಕೆನ್ನ ಹೃದಯಕ್ಕೆ ರಾಮ, ನಿನ್ನಷ್ಟು ನೆಮ್ಮದಿಯು ಎಲ್ಲಿಹುದು ರಾಮ’, ಹಾಡಿನ ನಡುವಿನ ಒಂದೆರಡು ಸಾಲುಗಳು ಮನದಲ್ಲಿ ಸ್ಥಿರವಾಗಿ ನಿಂತು ಕಾಡಿವೆ.

‘ಕಷ್ಟಗಳ ಕೊಡಬೇಡ ಎನಲಾರೆ ರಾಮ,
ಕಷ್ಟ ಸಹಿಸುವ ಸಹನೆ ಕೊಡು ನನಗೆ ರಾಮ.
ಕಷ್ಟ ಸಹಿಸುವ ಸಹನೆ ಇನ್ನಷ್ಟು ರಾಮ, ನಿನ್ನಷ್ಟು ರಾಮ’

ಮನಸ್ಸಿಗೆ ನೆಮ್ಮದಿಯನ್ನು ಕೊಡು ಎಂದು ಕೇಳುವ ಕವಿ ಕಷ್ಟಗಳನ್ನು ಬೇಡೆನ್ನುವುದಿಲ್ಲ. ಕಷ್ಟಗಳನ್ನು ಸಹಿಸುವ ಸಹನೆಯನ್ನು ನೀಡು ಎನ್ನುತ್ತಾನೆ. ಅಷ್ಟೇ ಅಲ್ಲ ಆ ಸಹನೆಯನ್ನು ಇನ್ನಷ್ಟು ನೀಡುವುದರೊಂದಿಗೆ ನಿನ್ನಷ್ಟು ಸಹನೆಯನ್ನು ಕೊಡು ಎಂದು ಬೇಡುತ್ತಾನೆ. ನಾವು ನೆಮ್ಮದಿಯನ್ನು ಕೊಡು ಎಂದು ಕೇಳುವ ರಾಮ ತೋರಿದ ಸಹನೆ ಕಲ್ಪನಾತೀತವಾದದ್ದು. ಅಷ್ಟು ಪರೀಕ್ಷೆಗಳಿಗೆ, ಶಿಕ್ಷೆಗಳಿಗೆ ತನ್ನನ್ನು ಒಡ್ಡಿಕೊಂಡ ರಾಮ. ಅವನು ಪಟ್ಟ ಕಷ್ಟಗಳು, ಪರೀಕ್ಷೆಗಳು ಕಡಿಮೆಯೇ? ಯಾವ ತಪ್ಪೂ ಮಾಡದೆ ಹದಿನಾಲ್ಕು ವರ್ಷ ಕಾಡಿಗೆ ಹೋದ. ತಾನು ಆತ್ಯಾಂತಿಕವಾಗಿ ಪ್ರೀತಿಸುವ ಸೀತೆ ಕಾಡಿನಲ್ಲಿ ನಡೆಯುವಾಗ ಬೆಂದು ಹೋದ. ಸತತವಾಗಿ ರಾಕ್ಷಸರೊಡನೆ ಹೋರಾಟ, ಪತ್ನಿಯ ಅಪಹರಣ, ವಾನರರ ಜೊತೆಗೆ ಸಂಧಾನ, ಸೀತೆಗೆ ಹುಡುಕಾಟ, ವಿರಹ ತಾಪ, ಸಮುದ್ರ ದಾಟುವ ಪರಿಪಾಟಲು, ರಾವಣನೊಡನೆ ಯುದ್ಧ, ತನ್ನ ಪ್ರೀತಿಯ ಮಡದಿಯ ಚಾರಿತ್ರ್ಯ ಸ್ಥಾಪನೆಗೆ ಅಗ್ನಿಪರೀಕ್ಷೆ. ಒಂದಾದ ಮೇಲೊಂದು ಪರೀಕ್ಷೆಗಳು ರಾಮನಿಗೆ. ಕೊನೆಗಾದರೂ ಸುಖ ದೊರಕಿತೇ? ಪತ್ನಿ, ಮಕ್ಕಳು ದೊರಕಿ ಸಂತೋಷದ ಜೀವನದ ಬೆಳಕು ಮೂಡುವಷ್ಟರಲ್ಲಿ ಸೀತೆಯೇ ಭೂಮಾತೆಯ ಮಡಿಲು ಸೇರುತ್ತಾಳೆ. ಹೀಗೆ ಅನೇಕ ಸಮಸ್ಯೆಗಳನ್ನು ಎದುರಿಸಿದವನು ರಾಮ. ಆದರೆ ಆ ಪರೀಕ್ಷೆಗಳು ಅವನ ವ್ಯಕ್ತಿತ್ವವನ್ನು ಕುಗ್ಗಿಸಿದವೆ? ಬದಲಾಗಿ ಪ್ರತಿಯೊಂದು ಪರೀಕ್ಷೆಯ ನಂತರ ರಾಮ ಪುಟಕಿಟ್ಟ ಚಿನ್ನದಂತೆ ಪರಿಶುದ್ಧನಾಗಿ ಬಂದ.

ಕಗ್ಗ ಈ ಮಾತನ್ನು ಚೆನ್ನಾಗಿ ತಿಳಿಸುತ್ತದೆ. ನಾವು ಎದುರಿಸುವ ಪರೀಕ್ಷೆಗಳು, ಸೋಲುಗಳು ಮತ್ತು ಶಿಕ್ಷೆಗಳು ನಮ್ಮನ್ನು ಕುಗ್ಗಿಸಿ, ಆತ್ಮವಿಶ್ವಾಸ ಕಳೆದುಕೊಳ್ಳುವಂತೆ ಮಾಡಬಾರದು. ಬದಲಾಗಿ ಗರಡಿಯ ವ್ಯಾಯಾಮ ಹೇಗೆ ದೇಹವನ್ನು ಗಟ್ಟಿ ಮಾಡುತ್ತದೋ, ಹಾಗೆ ಈ ಪರೀಕ್ಷೆಗಳು ನಮ್ಮ ಮನಸ್ಸು, ಬುದ್ಧಿಗಳನ್ನು ಹುರಿಗೊಳಿಸಿ ಬಲಗೊಳಿಸುತ್ತವೆ. ಈ ಸಂದರ್ಭದಲ್ಲಿ ಬಿದ್ದ ಪೆಟ್ಟುಗಳು ಮುಂಬರುವ ವಿಜಯದ ಕುರುಹುಗಳು. ಇಂದು ಮೊಗ್ಗು ಬಿರಿದಾಗಲೇ ಮುಂದೆ ಅಲ್ಲಿ ಹಣ್ಣು ಬರುವುದು. ಅಂತೆಯೇ ಇಂದಿನ ಪರೀಕ್ಷೆ, ಸೋಲುಗಳು ಬರಲಿರುವ ವಿಜಯಗಳ ಹೆಬ್ಬಾಗಿಲುಗಳು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಮಾರ್ಚ್ 22, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ – ಶಿಶಿರ ಋತು ಮೀನ ಮಾಸದ 08 ನೇ ದಿನ
ತಿಥಿ: (ಫಾಲ್ಗುಣ ಕೃಷ್ಣ) ಚತುರ್ಥಿ ಗಂ. 06-25, ಪಂಚಮಿ ಗಂ. 28-22 ನಕ್ಷತ್ರ: ವಿಶಾಖ ಗಂ. 20-14 ಯೋಗ: ಹರ್ಷಣ ಗಂ. 13-09, ಕರಣ: ಬಾಲವ ಗಂ. 06-25. ರಾಹುಕಾಲ: ಮಧ್ಯಾಹ್ನ 03:00 – 04:30 ಸೂರ್ಯೋದಯ : 06-37 ಸೂರ್ಯಾಸ್ತ : 06-38
ಮುಸ್ಲಿಂ ದಿನಾಂಕ : 18 ಶಬನ್ ದಿನ ವಿಶೇಷ : ರಂಗ ಪಂಚಮಿ, ಬಿಜೋಯ್ ಗೋವಿಂದಾಜಿ ಹೋಲೆಂಕರ್ (ಮಣಿಪುರ)
ಅದೃಷ್ಟ ಸಂಖ್ಯೆ: 7, 1

ಮೇಷ: ಈ ದಿನ ಕುಟುಂಬದಲ್ಲಿ ಸೌಹಾರ್ದ ವಾತಾವರಣ ಇರುವುದು. ಆರ್ಥಿಕವಾಗಿ ಸಾಲ ತೀರಿದ ನೆಮ್ಮದಿಯು ನಿಮ್ಮ ಶ್ರಮದಿಂದ ಹೊಂದಬಹುದು. ಕೋರ್ಟು–ಕಚೇರಿ ವ್ಯವಹಾರದಲ್ಲಿ ಜಯ ಸಿಗುವ ಬಗ್ಗೆ ಪ್ರಯತ್ನವಿರಲಿ.

ವೃಷಭ: ಮನೆಯಲ್ಲಿ ಸುಖ-ಶಾಂತಿ ಸಮೃದ್ಧಿಯಾಗಿದ್ದರೂ ಮನದಲ್ಲಿ ಮಕ್ಕಳ ವಿಚಾರವಾಗಿ ಭಯದ ಭೀತಿ ತೋರಿಬಂದೀತು. ಗೃಹೋಪಕರಣಗಳ ಖರೀದಿ ನಡೆಸುವಿರಿ. ಮನೆಯಲ್ಲಿ ದೇವತಾಕಾರ್ಯ ಮಾಡುವ ತೀರ್ಮಾನ ಮಾಡಿರಿ.

ಮಿಥುನ: ಈ ದಿನ ದೈಹಿಕಶ್ರಮ ಕಡಿಮೆ ಇದ್ದರೂ, ಹೆಚ್ಚಿನ ಆದಾಯವಿರುವುದರಿಂದ ಮನಸ್ಸಿಗೆ ಸ್ವಲ ನೆಮ್ಮದಿ. ಕ್ರಯ ವಿಕ್ರಯಗಳಿಗೆ ಇದು ಉತ್ತಮ ಕಾಲ. ವಿದ್ಯಾಭ್ಯಾಸದಲ್ಲಿ ಮಕ್ಕಳ ಅಸಡ್ಡೆಯು ವಿದ್ಯಾಪ್ರಗತಿಗೆ ಮಾರಕವಾಗಲಿದೆ.

ಕರ್ಕಾಟಕ: ವೈದ್ಯರ ಸಲಹೆಯಂತೆ ವ್ಯಾಯಾಮ ಮತ್ತು ಯೋಗಾಭ್ಯಾಸವನ್ನು ದೈನಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಿ. ಈಶ್ವರನಿಗೆ ರುದ್ರಾಭಿಷೇಕ ಮಾಡಿಸುವುದರಿಂದ ಕಷ್ಟಗಳು ದೂರವಾಗುತ್ತದೆ.

ಸಿಂಹ: ಇಂದು ನಿಮ್ಮೊಳಗಿನ ಹಲವಾರು ವರ್ಷಗಳ ದುಃಖ ಪ್ರಕಾಶಿಸಲಿದೆ. ಅದು ನಿಮಗೆ ಅಚ್ಚರಿಯನ್ನು ಉಂಟು ಮಾಡಬಹುದು. ಮತ್ತೊಬ್ಬರನ್ನು ಗೌರವಿಸುವುದರಿಂದ ನಿಮ್ಮ ಗೌರವ ಹೆಚ್ಚುವುದು. ಬಿಳಿ ಬಣ್ಣ ನಿಮಗೆ ಅದೃಷ್ಟ ತರುವುದು.

ಕನ್ಯಾ: ಷೇರು ವ್ಯಾಪಾರವು ಇಂದು ಅದೃಷ್ಟದಾಯಕವಾಗಿರುತ್ತದೆ. ಸದಾಕಾಲ ನಿಮ್ಮ ಹಿತವನ್ನು ಬಯಸುವ ಕುಟುಂಬ ಸದಸ್ಯರನ್ನು ಹೊಂದಿರುವುದರಿಂದ ನಿಮ್ಮ ಮಾನಸಿಕ ಸ್ಥೈರ್ಯ ಸದೃಢವಾಗುವುದು. ರಾಮ ನಾಮ ಸ್ಮರಣೆ ಮಾಡಿ.

ತುಲಾ: ಇಂದು ಹಲವಾರು ಕಾರಣಗಳಿಗೆ ಸ್ನೇಹಿತರು ನಿಮ್ಮ ಮಾರ್ಗದರ್ಶನ, ಬೆಂಬಲ ಹಾಗೂ ಸಹಕಾರವನ್ನು ಅಪೇಕ್ಷಿಸಬಹುದು. ಎಲ್ಲರೊಂದಿಗೆ ಬೆರೆಯುವ ಹಾಗೂ ಸಮಾಜಿಕ ಚಟುವಟಿಕೆಗಳಲ್ಲಿ ಭಾಗಿಯಾಗುವ ಸಂದರ್ಭ ಬರಲಿದೆ.

ವೃಶ್ಚಿಕ: ವಿನಾಕಾರಣ ಬೇರೆಯವರ ಮನಸ್ಸನ್ನು ನೋಯಿಸುವುದು ಸರಿಯಲ್ಲವೆಂದು ಗೊತ್ತಿದ್ದೂ ಆ ತಪ್ಪುಗಳು ನಿಮ್ಮಿಂದ ನಡೆಯಬಹುದು ಜಾಗ್ರತರಾಗಿರಿ. ಹಿರಿಯರ ಆರೋಗ್ಯದ ವಿಷಯದಲ್ಲಿ ಕಾಳಜಿವಹಿಸಿ.

ಧನು: ನಡೆದು ಹೋದ ದುರ್ಘಟನೆಗಳನ್ನು ಪದೇ ಪದೇ ನೆನಪಿಸಿಕೊಂಡು ದುಃಖ ಪಡುವುದು ಸರಿಯಲ್ಲ. ಮುಂದಿನ ನಡೆಯ ಬಗ್ಗೆ ಗಮನಹರಿಸಿ. ಗೃಹ ಉತ್ಪಾದಕ ವಸ್ತುಗಳ ಮಾರಾಟದಲ್ಲಿ ಉತ್ತಮ ಲಾಭವಾಗುವ ಸಾಧ್ಯತೆ.

ಮಕರ: ಸಂಗೀತ ಮತ್ತು ಕಲೆಯಲ್ಲಿ ಅಭಿರುಚಿ ಹೆಚ್ಚಲಿದೆ. ಸಣ್ಣ ಉದ್ಯಮಿಗಳಿಗೆ ಹೆಚ್ಚು ವ್ಯಾಪಾರ ನಡೆಯುವುದು. ಮಕ್ಕಳ ಓದಿಗೆ ಅಡ್ಡಿಯಾಗಿರುವ ಸಮಸ್ಯೆಗೆ ಪರಿಹಾರ ಸಿಕ್ಕಿ ನೆಮ್ಮದಿ ಮೂಡುತ್ತದೆ. ದೇವರ ಅನುಗ್ರಹಕ್ಕೆ ಪ್ರಾರ್ಥನೆ ಇರಲಿ.

ಕುಂಭ: ಬಂಧುಗಳ ಮೂಲಕ ಹೆಚ್ಚಿನ ಸಹಕಾರ ದೊರೆತು ವ್ಯಾಪಾರದಲ್ಲಿ ಅಧಿಕ ಧನಲಾಭವಾಗಿ ಸಂತಸ. ಹೊರ ಊರಿನಲ್ಲಿನ ಗುತ್ತಿಗೆ ಪಡೆಯುವಲ್ಲಿ ಯಶಸ್ವಿಯಾಗುವಿರಿ. ನಿಮ್ಮ ಪ್ರೀತಿ ಪಾತ್ರರಾದವರೊಂದಿಗೆ ದೂರದ ಪ್ರಯಾಣ ಯೋಗ.

ಮೀನ: ಪ್ರತಿಯೊಂದು ಕಾರ್ಯಕ್ಕೂ ಹಲವು ಬಾರಿ ಪ್ರಯತ್ನ ಪಡಬೇಕಾದೀತು. ನ್ಯಾಯಾಲಯದಲ್ಲಿರುವ ಪ್ರಕರಣಗಳು ನಿಮ್ಮ ಪರವಾಗಿ ಗೆಲುವನ್ನು ತರುತ್ತವೆ. ನಿರುದ್ಯೋಗಿಗಳ ಮನೋಕಾಮನೆ ಈಡೇರಿಕೆಯಿಂದ ಸಂತಸವಿರುವುದು.

ಪದಬಂಧ 4905

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3.ಕೊನೆಗೆ ಜನರಿದ್ದಾಗ ಹುರಿದುಂಬಿಸುವುದು (4)
5.ರಾಯರಿಂದ ಬಂದಿರುವ ನಿರೂಪ (3)
6.ಗಾಳಿಗಾಗಿ ಮಾಡಿರುವ ಗವಾಕ್ಷ (4)
8.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
12.ಮಂದಿಯ ಒಳಿತು (4)
14.ಇದು ಬೇರೆಯವರ ದುಡ್ಡು (4)
15.ಎಲ್ಲಾ ಬಲ್ಲವನೀ ಪಂಡಿತ (3)
16.ಹಣ್ಣಿನಿಂದ ಮಾಡಿದ ಖಾದ್ಯ (4)

ಮೇಲಿಂದ ಕೆಳಕ್ಕೆ

1.ಬೇರೆಯವರನ್ನು ಆಶ್ರಯಿಸಿರುವವನು (5)
2.ಕರದಲ್ಲಿರುವ ಚಿನ್ನ ಕಾಣುತ್ತಿದೆಯೇ? (4)
3.ಊಟ ಮಾಡದಿರುವುದು (4)
4.ನಯವಾಗಿ ಹೊಳೆವ ಅಕ್ಷಿ (3)
7.ಶ್ರಮನಿರ್ವಹಿಸುವುದು (2)
9.ಜನ ಕೊನೆಗಿದ್ದಾಗ ಅರ್ಹ ಕಾಣಸಿಗುತ್ತಾನೆ! (3)
10.ಇಂಪಿಲ್ಲದ ಕಂಠ (5)
11.ತೀರಾ ಹತ್ತಿರವಿರುವ ದಡ! (2)
12.ಮಂದಿಯ ಮನಸ್ಸು (4)
13.ನ್ಯಾಯ ಸಮ್ಮತವಾಗಿರುವುದು (4)
14.ಉತ್ತರದವರ ವೇತನ (3)

1	■	2	■	■	3			4
5			■	■		■	■	
	■		■	■	6		7	
	■	8		9		■		■
	■	■	■		■	■	■	10
■	11	■	12			13	■	
14				■	■		■	
	■	■		■	■	15		
16				■	■		■	

4904ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ದುಶ್ಶಕುನ 3.ಪರಿಚ್ಛೇದ 4.ಮರ 5.ಹಣವಂತ 7.ತಭೂ 8.ಲೋಪ 9.ಮಿತವ್ಯಯ 11.ನಾರಿ 13.ಪರಾಜಯ 14.ಮಕರಂದ

ಮೇಲಿಂದ ಕೆಳಕ್ಕೆ: 1.ದುರ್ಗ 2.ಕುಟೀರ 3.ಪರಿಮಾಣ 4.ಮರುಭೂಮಿ 5.ಹರೆಯ 6.ತಲೋದರಿ 10.ವ್ಯವಸಾಯ 11.ನಾಸಿಕ 12.ಮುದ

ಸುಡೊಕು 5291

		6					5	
		7	5		6	3		2
3	8						6	
	2					9		4
			2	4	7			
	7					5		8
		9			8		4	
4		2					8	1
	6		4		2	7		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5290 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,287
ಇಂದಿನ ಅಂತ್ಯ	17,117
▼	169
ದಿನದ ಗರಿಷ್ಠ	17,353

ವಿನಿಮಯ ದರ

$ ಡಾಲರ್	76.18
£ ಪೌಂಡ್	100.05
€ ಯುರೊ	83.97
¥ ಯೆನ್ (100ಕ್ಕೆ)	63.98

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹410
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹415

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1495 (1510)
ಸೂರ್ಯಕಾಂತಿ (ರಿಫೈನ್ಡ್)	₹1820 (-)
ಪಾಮೋಲಿನ್	₹1484 (1487)

ಕೊಬ್ಬರಿ ಧಾರಣೆ

ಪುತ್ತೂರು	₹4000-10500
ತುರುವೇಕೆರೆ	₹16950-17000

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ
₹18000-20000
2ನೇ ದರ್ಜೆ
₹10000-16000

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದೊಡ್ಡ	₹1400-1800
ಮಧ್ಯಮ	₹800-1400
ಸಣ್ಣ	₹400-800

ಇಂದಿನ ವಾಸ್ತವ ಆಧರಿಸಿ ಪಿಎಫ್ ಬಡ್ಡಿ: ನಿರ್ಮಲಾ

ನವದೆಹಲಿ (ಪಿಟಿಐ): ನೌಕರರ ಭವಿಷ್ಯನಿಧಿಗೆ ನೀಡಲು ಉದ್ದೇಶಿಸಿರುವ ಶೇಕಡ 8.1ರಷ್ಟು ಬಡ್ಡಿಯು ಇತರ ಸಣ್ಣ ಉಳಿತಾಯ ಯೋಜನೆಗಳು ನೀಡುತ್ತಿರುವ ಬಡ್ಡಿ ಪ್ರಮಾಣಕ್ಕಿಂತ ಹೆಚ್ಚಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಅಲ್ಲದೆ, ಇಂದಿನ ವಾಸ್ತವವನ್ನು ಆಧರಿಸಿ ಬಡ್ಡಿ ದರ ಪರಿಷ್ಕರಿಸಲಾಗಿದೆ ಎಂದೂ ಅವರು ಸಂಸತ್ತಿಗೆ ತಿಳಿಸಿದ್ದಾರೆ.

ನೌಕರರ ಭವಿಷ್ಯ ನಿಧಿ ಸಂಘಟನೆಯ (ಇಪಿಎಫ್‌ಒ) ಧರ್ಮದರ್ಶಿಗಳ ಮಂಡಳಿಯು ಬಡ್ಡಿ ದರವನ್ನು ಶೇ 8.1ಕ್ಕೆ ನಿಗದಿಪಡಿಸುವ ತೀರ್ಮಾನ ಕೈಗೊಂಡಿದೆ. ಸುಕನ್ಯಾ ಸಮೃದ್ಧಿ ಯೋಜನೆ (ಶೇ 7.6ರಷ್ಟು), ಹಿರಿಯ ನಾಗರಿಕರ ಉಳಿತಾಯ ಯೋಜನೆ (ಶೇ 7.4), ಪಿಪಿಎಫ್ (ಶೇ 7.1) ಅಡಿ ನೀಡುವ ಬಡ್ಡಿ ಪ್ರಮಾಣ ಪಿಎಫ್‌ಗಿಂತ ಕಡಿಮೆ ಇದೆ ಎಂದು ಅವರು ಹೇಳಿದ್ದಾರೆ.

ಯುಪಿಎಸ್‌ಸಿ ಪರೀಕ್ಷೆ: ವಿಚಾರಣೆ ಮುಂದೂಡಿಕೆ

ನವದೆಹಲಿ (ಪಿಟಿಐ): ಕೇಂದ್ರ ಲೋಕ ಸೇವಾ ಆಯೋಗದ (ಯುಪಿಎಸ್‌ಸಿ) ಪರೀಕ್ಷೆಗೆ ಹಾಜರಾಗಲು ಮತ್ತೊಂದು ಅವಕಾಶ ನೀಡುವ ತೀರ್ಮಾನವನ್ನು ಕೇಂದ್ರ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯು ತೆಗೆದುಕೊಳ್ಳಬೇಕಾಗಿದೆ ಎಂದು ಸುಪ್ರೀಂ ಕೋರ್ಟ್‌ಗೆ ಸರ್ಕಾರ ತಿಳಿಸಿದೆ. ವಿಚಾರಣೆಯನ್ನು ಕೋರ್ಟ್ ಮಾರ್ಚ್ 25ಕ್ಕೆ ಮುಂದೂಡಿದೆ.

ವರ್ಚುವಲ್ ಡಿಜಿಟಲ್ ಆಸ್ತಿಗೆ ಸ್ಪಷ್ಟ ವ್ಯಾಖ್ಯಾನ ನೀಡಲಿದೆ ಕೇಂದ್ರ

ಕ್ರಿಪ್ಟೊ ಮೈನಿಂಗ್ ವೆಚ್ಚಕ್ಕೆ ಇಲ್ಲ ತೆರಿಗೆ ವಿನಾಯಿತಿ

ನವದೆಹಲಿ (ಪಿಟಿಐ): ಕ್ರಿಪ್ಟೊಕರೆನ್ಸಿ ಮೈನಿಂಗ್ ಚಟುವಟಿಕೆಗೆ ಮಾಡಿದ ವೆಚ್ಚಗಳ ಲೆಕ್ಕ ನೀಡಿ, ಆದಾಯ ತೆರಿಗೆ ವಿನಾಯಿತಿ ಪಡೆಯಲು ಅವಕಾಶ ಇಲ್ಲ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಸೋಮವಾರ ಹೇಳಿದ್ದಾರೆ.

ಕ್ರಿಪ್ಟೊ ಕರೆನ್ಸಿ ಮಾತ್ರವೇ ಅಲ್ಲದೆ, ಇತರ ಯಾವುದೇ ವರ್ಚುವಲ್ ಡಿಜಿಟಲ್ ಆಸ್ತಿಗಳ (ವಿಡಿಎ) ಸೃಷ್ಟಿಗೆ ಅಗತ್ಯವಿರುವ ಮೂಲಸೌಕರ್ಯಕ್ಕೆ ಮಾಡಿದ ವೆಚ್ಚವನ್ನು ಕೂಡ ತೆರಿಗೆ ವಿನಾಯಿತಿ ಪಡೆಯಲು ಬಳಸಿಕೊಳ್ಳುವಂತಿಲ್ಲ ಎಂದು ಅವರು ಹೇಳಿದ್ದಾರೆ.

ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ಸಚಿವರು, ‘ಕೇಂದ್ರ ಸರ್ಕಾರವು ವರ್ಚುವಲ್ ಡಿಜಿಟಲ್ ಆಸ್ತಿ (ವಿಡಿಎ) ಅಂದರೆ ಏನು ಎಂಬ ಬಗ್ಗೆ ವ್ಯಾಖ್ಯಾನ ನೀಡಲಿದೆ. ಇಂತಹ ಆಸ್ತಿಗಳ ವರ್ಗಾವಣೆ ಮೂಲಕ ಪಡೆಯುವ ಆದಾಯಕ್ಕೆ ಶೇಕಡ 30ರಷ್ಟು ತೆರಿಗೆ ವಿಧಿಸುವ ಉದ್ದೇಶದೊಂದಿಗೆ ಈ ವ್ಯಾಖ್ಯಾನ ರೂಪಿಸಲಾಗುತ್ತದೆ’ ಎಂದು ಹೇಳಿದ್ದಾರೆ. ಸದ್ಯದ ಸಂದರ್ಭದಲ್ಲಿ ದೇಶದಲ್ಲಿ ಕ್ರಿಪ್ಟೊ ಕರೆನ್ಸಿಗಳ ವಿಚಾರವಾಗಿ ಪ್ರತ್ಯೇಕ ಕಾನೂನು ಇಲ್ಲ, ನಿಯಂತ್ರಣವೂ ಇಲ್ಲ.

ಕ್ರಿಪ್ಟೊ ಆಸ್ತಿಗಳ ಮೇಲಿನ ತೆರಿಗೆಗೆ ಸಂಬಂಧಿಸಿದಂತೆ 2022–23ನೇ ಸಾಲಿನ ಬಜೆಟ್‌ನಲ್ಲಿ ಕೆಲವು ಸ್ಪಷ್ಟನೆಗಳನ್ನು ಒದಗಿಸಲಾಗಿದೆ. ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ಕ್ರಿಪ್ಟೊ ಕರೆನ್ಸಿಗಳ ಮೇಲಿನ ಹೂಡಿಕೆಯಿಂದ ಬಂದ ಲಾಭಕ್ಕೆ ಶೇ 30ರಷ್ಟು ಆದಾಯ ತೆರಿಗೆ ಮತ್ತು ಸರ್ಚಾರ್ಜ್ ವಿಧಿಸಲಾಗುತ್ತದೆ ಎಂದು ಬಜೆಟ್‌ನಲ್ಲಿ ಹೇಳಲಾಗಿದೆ.

ವಿಡಿಎ ವರ್ಗಾವಣೆ ಮೂಲಕ ಬರುವ ಆದಾಯವನ್ನು ಲೆಕ್ಕ ಹಾಕುವಾಗ, ವಿಡಿಎ ಖರೀದಿಗೆ ಮಾಡಿದ ವೆಚ್ಚವನ್ನು ಹೊರತುಪಡಿಸಿ, ಇತರ ಯಾವುದೇ ವೆಚ್ಚಗಳನ್ನು ವಿನಾಯಿತಿಗೆ ಪರಿಗಣಿಸಲು ಆಗದು ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ.

ವಿಡಿಎ ಮೈನಿಂಗ್‌ಗೆ ಅಗತ್ಯವಿರುವ ಸಲಕರಣೆಗಳಿಗೆ ಮಾಡಿದ ವೆಚ್ಚವನ್ನು ‘ಖರೀದಿ ವೆಚ್ಚ’ ಎಂದು ಪರಿಗಣಿಸಲಾಗದು. ಅಂತಹ ವೆಚ್ಚಗಳನ್ನು ‘ಬಂಡವಾಳ ವೆಚ್ಚ’ ಎಂದು ಪರಿಗಣಿಸಲಾಗುತ್ತದೆ ಎಂದು ಸಚಿವರು ಹೇಳಿದ್ದಾರೆ. ಒಂದು ವಿಡಿಎಯಲ್ಲಿ ಆದ ನಷ್ಟವನ್ನು ಇನ್ನೊಂದು ವಿಡಿಎ ವರ್ಗಾವಣೆಯಲ್ಲಿ ಬಂದಿರುವ ಲಾಭದ ಜೊತೆ ಸರಿಹೊಂದಿಸಿಕೊಳ್ಳಲಿಕ್ಕೆ ಸಹ ಅವಕಾಶ ಇಲ್ಲ.

ಮುಂಬೈ ಧಾರಣೆ

ಶೇಂಗಾ

21-3-2022

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	1477 (1480)
ಪಾಮ್ ವಾರದ ಡೆಲಿವರಿ	1482 (1585)
ಸೂರ್ಯಕಾಂತಿ ಎಣ್ಣೆ ಕಚ್ಚಾ	–

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	51,200 (51,100)
ಬೆಳ್ಳಿ ಕೆ.ಜಿ	67,650 (67,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 430- 450
ನಡುಗೋಲು 500-550
ರಾಶಿ 600-650
ರಾಶಿ ಉತ್ತಮ 650-700
ಜರಡಿ 750 - 800
ಹೆರಕಿದ್ದು 1,100-1,150
ಹಸಿರು ಸಾಧಾರಣ 600-700
ಹಸಿರು ಉತ್ತಮ 900-950
ಹಸಿರು ಅತಿ ಉತ್ತಮ 1,200-1,250
ಕಾಳು ಮೆಣಸು - 490
ಅಡಿಕೆ
ಬಂಟ್ವಾಳ
ಕೋಕ 12500-25000
ಹೊಸತು 27500-45000
ಹಳತು 46000-53000
ಚಿತ್ರದುರ್ಗ
ಆಪಿ 46000-46400
ಬೆಟ್ಟೆ 36629-37089
ಕೆಂಪುಗೋಟು 30619-31099
ರಾಶಿ 45539-45969
ಗುಬ್ಬಿ
ಇತರ 35000-36000
ಕಾರ್ಕಳ
ಹೊಸತು 40000-45000
ಹಳತು 46000-53000
ಕುಮಟಾ
ಚಿಪ್ಪು 24589-29089
ಕೋಕ 17019-26899
ಫ್ಯಾಕ್ಟರಿ 11081-19511
ಹಳೆಚಾಲಿ 42019-48549
ಹೊಸಚಾಲಿ 35609-40100
ಮಂಗಳೂರು
ಕೋಕ 25000-30600
ಪುತ್ತೂರು
ಕೋಕ 11000-26000
ಹೊಸತು 27500-45000
ಸಾಗರ
ಬಿಳಿಗೋಟು 20890-29169
ಚಾಲಿ 22899-38289
ಕೋಕ 21199-30009
ಕೆಂಪುಗೋಟು 21919-37599
ರಾಶಿ 33899-47399
ಸಿಪ್ಪೆಗೋಟು 8169-21099
ಶಿವಮೊಗ್ಗ
ಬೆಟ್ಟೆ 47190-50900
ಗೊರಬಲು 17209-34269
ರಾಶಿ 43369-46998
ಸರಕು 50009-74996
ಸಿದ್ದಾಪುರ
ಬಿಳಿಗೋಟು 24019-33270
ಚಾಲಿ 42539-47299
ಕೋಕ 21699-30112
ಹೊಸಚಾಲಿ 35600-39599
ಕೆಂಪುಗೋಟು 28019-31399
ರಾಶಿ 45699-46639
ತಟ್ಟೆಬೆಟ್ಟೆ 30289-45099
ಶಿರಸಿ
ಬೆಟ್ಟೆ 24899-46919
ಬಿಳಿಗೋಟು 21669-33888
ಚಾಲಿ 33199-40419
ರಾಶಿ 21119-47039
ಯಲ್ಲಾಪುರ
ಬಿಳಿಗೋಟು 26899-32969
ಚಾಲಿ 35660-40599
ಕೋಕ 18690-29412
ಕೆಂಪುಗೋಟು 28642-35600
ರಾಶಿ 46799-52311
ತಟ್ಟೆಬೆಟ್ಟೆ 37499-45899
ರಾಮನಗರ ರೇಷ್ಮೆ
ಮಿಶ್ರತಳಿ 400-766
ದ್ವಿತಳಿ 366-968

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ		ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,650	15,500	15,550	220.05ಸೆಂಟ್ಸ್
ಎಸಿ	7,560	7,800	8,100	
ಆರ್‌ಪಿ	8,500	8,500	8,700	ಲಂಡನ್
ಆರ್‌ಸಿ	4200	3,900	4,000	2167 ಡಾಲರ್ಸ್

ಮಾರ್ಚ್ 24ರಿಂದ ರುಚಿ ಸೋಯಾ ಎಫ್‌ಪಿಒ

ಮುಂಬೈ (ಪಿಟಿಐ): ಪತಂಜಲಿ ಆಯುರ್ವೇದ ಸಮೂಹದ ಒಡೆತನದಲ್ಲಿ ಇರುವ ರುಚಿ ಸೋಯಾ ಇಂಡಸ್ಟ್ರೀಸ್‌ನ ಹೆಚ್ಚುವರಿ ಷೇರು ವಿತರಿಸುವ (ಎಫ್‌ಪಿಒ) ಪ್ರಕ್ರಿಯೆಯು ಮಾರ್ಚ್ 24ರಿಂದ ಶುರುವಾಗಲಿದೆ. ಇದರಿಂದಾಗಿ, ದೇಶದ ಅತಿದೊಡ್ಡ ಅಡುಗೆ ಎಣ್ಣೆ ಕಂಪನಿಯಾದ ರುಚಿ ಸೋಯಾ, ದಿವಾಳಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ ನಂತರದಲ್ಲಿ ಮತ್ತೆ ಷೇರು ಮಾರುಕಟ್ಟೆ ಪ್ರವೇಶಿಸುವ ಮೊದಲ ಕಂಪನಿ ಆಗಲಿದೆ.

ರುಚಿ ಸೋಯಾ ಅಧ್ಯಕ್ಷ ಆಚಾರ್ಯ ಬಾಲಕೃಷ್ಣ ಹಾಗೂ ಕಾರ್ಯನಿರ್ವಾಹಕೇತರ ಅಧ್ಯಕ್ಷ ಬಾಬಾ ರಾಮದೇವ್ ಅವರು ಎಫ್‌ಪಿಒ ವೇಳೆ ಕಂಪನಿಯ ಷೇರುಗಳ ಬೆಲೆ ₹ 615–650 ಆಗಿರುತ್ತದೆ ಎಂದು ಸೋಮವಾರ ಪ್ರಕಟಿಸಿದ್ದಾರೆ.

ಸೆನ್ಸೆಕ್ಸ್ ಏರಿಕೆಗೆ ಅಡ್ಡಿಯಾದ ಕಚ್ಚಾ ತೈಲ ಬೆಲೆ

ತೈಲ ಬೆಲೆ ಮತ್ತೆ ಏರಿಕೆ

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 3.55ರಷ್ಟು ಹೆಚ್ಚಾಗಿ ಪ್ರತಿ ಬ್ಯಾರೆಲ್‌ಗೆ 111.5 ಡಾಲರ್‌ಗೆ ತಲುಪಿದೆ. ಯುರೋಪಿನ ದೇಶಗಳು ರಷ್ಯಾದ ತೈಲ ಆಮದು ಮೇಲೆ ನಿರ್ಬಂಧ ಹೇರಬಹುದು ಎಂಬ ವರದಿಯ ಕಾರಣದಿಂದಾಗಿ ಬೆಲೆ ಹೆಚ್ಚಳ ಆಗಿದೆ.

ಸೌದಿ ಅರೇಬಿಯಾದಲ್ಲಿ ತೈಲ ಘಟಕವೊಂದರ ಮೇಲೆ ಹೂತಿ ಬಂಡುಕೋರರು ಕಳೆದ ವಾರ ದಾಳಿ ನಡೆಸಿದ ನಂತರದಲ್ಲಿ ತೈಲ ಉತ್ಪಾದನೆ ತಾತ್ಕಾಲಿಕವಾಗಿ ಕಡಿಮೆ ಆಗಿದೆ.

ಮುಂಬೈ (ಪಿಟಿಐ): ಬ್ಯಾಂಕಿಂಗ್, ತೈಲ, ತ್ವರಿತವಾಗಿ ಬಿಕರಿಯಾಗುವ ಗ್ರಾಹಕ ಬಳಕೆ ವಸ್ತುಗಳು (ಎಫ್‌ಎಂಸಿಜಿ) ಹಾಗೂ ಐ.ಟಿ. ವಲಯದ ಷೇರುಗಳ ಮೌಲ್ಯದಲ್ಲಿನ ಕುಸಿತದ ಕಾರಣದಿಂದಾಗಿ ದೇಶದ ಷೇರುಪೇಟೆ ಸೂಚ್ಯಂಕಗಳು ಸೋಮವಾರ ಇಳಿಕೆ ಕಂಡವು. ಉಕ್ರೇನ್–ರಷ್ಯಾ ಯುದ್ಧದ ಪರಿಣಾಮವಾಗಿ ಕಚ್ಚಾ ತೈಲ ಬೆಲೆ ಹೆಚ್ಚಾಗಿದ್ದು ಕೂಡ ಕುಸಿತಕ್ಕೆ ಒಂದು ಕಾರಣವಾಯಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ದಿನದ ಆರಂಭದಲ್ಲಿ 260ಕ್ಕಿಂತ ಹೆಚ್ಚು ಅಂಶ ಏರಿಕೆ ಕಂಡಿತ್ತು. ಆದರೆ, ನಂತರದಲ್ಲಿ ಕುಸಿತ ಕಂಡಿತು. ದಿನದ ಕೊನೆಯಲ್ಲಿ 571 ಅಂಶ ಇಳಿಕೆಯೊಂದಿಗೆ ವಹಿವಾಟು ಕೊನೆಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 169 ಅಂಶ ಇಳಿಕೆ ದಾಖಲಿಸಿತು.

‘ಉಕ್ರೇನ್ ಮತ್ತು ರಷ್ಯಾ ನಡುವಿನ ಬಿಕ್ಕಟ್ಟಿನಲ್ಲಿ ಯಾವುದೇ ಗಮನಾರ್ಹ ಸುಧಾರಣೆ ಕಂಡುಬಂದಿಲ್ಲ. ಕೊಲ್ಲಿ ಪ್ರದೇಶದಲ್ಲಿ ತುಸು ಅನಿಶ್ಚಿತ ವಾತಾವರಣ ಇದೆ. ಹೀಗಾಗಿ, ಕಚ್ಚಾ ತೈಲ ಬೆಲೆಯಲ್ಲಿ ಹೆಚ್ಚಳ ಆಗಿದೆ. ಇದರಿಂದಾಗಿ ದೇಶಿ ಷೇರು ಮಾರುಕಟ್ಟೆಗಳಲ್ಲಿ ಹೂಡಿಕೆದಾರರು ಷೇರು ಮಾರಾಟಕ್ಕೆ ಹೆಚ್ಚಿನ ಗಮನ ನೀಡಿದರು. ಈ ನಡುವೆ, ವಿದೇಶಿ ಸಾಂಸ್ಥಿಕ ಹೂಡಿಕೆದಾರರು ದೇಶದ ಷೇರು ಮಾರುಕಟ್ಟೆಗಳಲ್ಲಿ ಹೂಡಿಕೆ ಆರಂಭಿಸಿರುವುದು ಉತ್ತಮ ಬೆಳವಣಿಗೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಸಗಟು ಲೆಕ್ಕದಲ್ಲಿ ಡೀಸೆಲ್ ಖರೀದಿಸುವವರಿಗೆ ದರವನ್ನು ಲೀಟರಿಗೆ ₹ 25ರಷ್ಟು ಹೆಚ್ಚಿಸಿರುವುದು ಷೇರು ಮಾರುಕಟ್ಟೆಗಳ ಏರಿಕೆಗೆ ಅಡ್ಡಿಯಾಗಬಹುದು ಎಂದೂ ಅವರು ಹೇಳಿದ್ದಾರೆ. ಗುರುವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 2,800 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಪರಿಷ್ಕೃತ ವಿವರ ಸಲ್ಲಿಸಿದ ಎಲ್‌ಐಸಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಐಪಿಒ ಪ್ರಕ್ರಿಯೆಗೆ ಸಂಬಂಧಿಸಿದಂತೆ ಪರಿಷ್ಕೃತ ಕರಡು ದಾಖಲೆಗಳನ್ನು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಸಲ್ಲಿಸಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ. ಇದರಲ್ಲಿ ಎಲ್‌ಐಸಿಯ ಡಿಸೆಂಬರ್ ತ್ರೈಮಾಸಿಕದ ಹಣಕಾಸಿನ ವಿವರಗಳನ್ನೂ ನೀಡಲಾಗಿದೆ.

ಫೆಬ್ರುವರಿ 13ರಂದು ಸೆಬಿಗೆ ಕರಡು ದಾಖಲೆ ಸಲ್ಲಿಸಿದ್ದ ಎಲ್‌ಐಸಿ, ನವೆಂಬರ್ ತ್ರೈಮಾಸಿಕದವರೆಗಿನ ಹಣಕಾಸಿನ ವಿವರವನ್ನು ನೀಡಿತ್ತು. ಪರಿಷ್ಕೃತ ದಾಖಲೆ ಅನ್ವಯ ಎಲ್‌ಐಸಿ, ಡಿಸೆಂಬರ್ ತ್ರೈಮಾಸಿಕದಲ್ಲಿ ₹ 235 ಕೋಟಿ ಲಾಭ ಗಳಿಸಿದೆ. ಇದರಿಂದಾಗಿ ಏಪ್ರಿಲ್‌ನಿಂದ ಡಿಸೆಂಬರ್‌ವರೆಗಿನ ಅವಧಿಯಲ್ಲಿ ನಿವ್ವಳ ಲಾಭವು ₹ 1,671 ಕೋಟಿಗೆ ಏರಿಕೆ ಆಗಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಶ್ರೀ ಎಲ್.ಚಂದ್ರಶೇಖರ್‌ರವರು
(ಸಿವಿಲ್ ಇಂಜಿನಿಯರ್)
ನಂ.6, 6ನೇ ಕ್ರಾಸ್, ಪಟೇಲ್ ನಂಜುಂಡಪ್ಪ ರಸ್ತೆ, ರಾಮಸ್ವಾಮಿ ಪಾಳ್ಯ, ಮಾರುತಿ ಸೇವಾನಗರ್, ಬೆಂಗಳೂರು–560033
ಇವರು ದಿನಾಂಕ: 12.3.2022ರಂದು ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾದ ವೈಕುಂಠ ಸಮಾರಾಧನೆಯನ್ನು ದಿನಾಂಕ 22.3.2022 ರಂದು ಮಂಗಳವಾರ ಬೆಳಗ್ಗೆ 9 ಗಂಟೆಗೆ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು
ಪತ್ನಿ: ಶ್ರೀಮತಿ ಪಿ.ಕೆ.ಕಮಲ ಮತ್ತು ಮಕ್ಕಳು, ಕುಟುಂಬವರ್ಗದವರು ಹಾಗೂ ಬಂಧುಮಿತ್ರರು.

54 ಗಣ್ಯರಿಗೆ ಪದ್ಮ ಪುರಸ್ಕಾರ ಪ್ರದಾನ

ನವದೆಹಲಿ(ಪಿಟಿಐ): ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಕರ್ನಾಟಕದ ಐವರು ಗಣ್ಯರು ಸೇರಿದಂತೆ 2022ನೇ ಸಾಲಿನಲ್ಲಿ ಪದ್ಮ ಪುರಸ್ಕಾರಗಳಿಗೆ ಭಾಜನರಾದ 54 ಗಣ್ಯರಿಗೆ ಸೋಮವಾರ ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಕಳೆದ ವರ್ಷದ ಡಿಸೆಂಬರ್‌ನಲ್ಲಿ ಸಂಭವಿಸಿದ ಸೇನಾ ಹೆಲಿಕಾಪ್ಟರ್ ದುರಂತದಲ್ಲಿ ಸಾವನ್ನಪ್ಪಿದ ಭಾರತದ ಸಶಸ್ತ್ರಪಡೆಗಳ ಮೊದಲ ಮುಖ್ಯಸ್ಥ ಜನರಲ್ ಬಿಪಿನ್ ರಾವತ್, ಹಿಂದೂ ಧಾರ್ಮಿಕ ಪುಸ್ತಕಗಳನ್ನು ಪ್ರಕಟಿಸುತ್ತಿದ್ದ ಗೀತಾ ಪ್ರೆಸ್ ಮಾಜಿ ಮುಖ್ಯಸ್ಥ ರಾಧೆಶ್ಯಾಮ್ ಖೆಮ್ಕಾ ಅವರಿಗೆ ಮರಣೋತ್ತರವಾಗಿ ದೇಶದ 2ನೇ ನಾಗರಿಕ ಪುರಸ್ಕಾರವಾದ ಪದ್ಮವಿಭೂಷಣ ನೀಡಲಾಗಿದೆ. ಇನ್ನು ಕಾಂಗ್ರೆಸ್ ನಾಯಕ ಗುಲಾಂ ಆಜಾದ್, ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್, ಮಾಜಿ ಸಿಎಜಿ ಮೆಹ್ರಿಷಿ, ಭಾರತದಲ್ಲಿ ಕೋವಿಶೀಲ್ಡ್ ಲಸಿಕೆ ಉತ್ಪಾದನೆ ಮಾಡಿದ ಸೀರಂ ಸಂಸ್ಥೆಯ ಸಂಸ್ಥಾಪಕ ಸೈರಸ್ ಪೂನಾವಾಲ ಅವರು ಸೇರಿದಂತೆ 8 ಗಣ್ಯರಿಗೆ ದೇಶದ 3ನೇ ಅತ್ಯುನ್ನತ ನಾಗರಿಕ ಪುರಸ್ಕಾರವಾದ ಪದ್ಮಭೂಷಣ ಪ್ರದಾನ ಮಾಡಲಾಗಿದೆ.

ವಿವಿಧ ಕ್ಷೇತ್ರಗಳ ಸಾಧಕರಿಗೆ ಸೋಮವಾರ ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ‘ಪದ್ಮ’ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ಕಾಂಗ್ರೆಸ್ ಹಿರಿಯ ನಾಯಕ ಗುಲಾಂ ನಬಿ ಆಜಾದ್ ಅವರಿಗೆ ಪದ್ಮಭೂಷಣ, (ಎಡಚಿತ್ರ), ಭಾರತದ ಸಶಸ್ತ್ರಪಡೆಗಳ ಮೊದಲ ಮುಖ್ಯಸ್ಥ ಜನರಲ್ ಬಿಪಿನ್ ರಾವತ್ ಅವರಿಗೆ ಮರಣೋತ್ತರವಾಗಿ ಪದ್ಮ ವಿಭೂಷಣ (ಅವರ ಪುತ್ರಿಯರು ಸ್ವೀಕರಿಸಿದರು), ವಿಜ್ಞಾನ ಮತ್ತು ಎಂಜಿನಿಯರಿಂಗ್ ಕ್ಷೇತ್ರದ ಸಾಧನೆಗಾಗಿ ಕರ್ನಾಟಕದ ಡಾ ಸುಬ್ಬಣ್ಣ ಅಯ್ಯಪ್ಪನ್ ಮತ್ತು ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ ಡಾ.ಸಿದ್ದಲಿಂಗಯ್ಯ ಅವರಿಗೆ ಮರಣೋತ್ತರವಾಗಿ ‘ಪದ್ಮಶ್ರೀ’ ಪ್ರಶಸ್ತಿ (ಅವರ ಪುತ್ರಿ ಮಾನಸ ಸ್ವೀಕರಿಸಿದರು) ಪ್ರದಾನ ಮಾಡಲಾಯಿತು

ಇದರಲ್ಲಿ ಕರ್ನಾಟಕದ ಸುಬ್ಬಣ್ಣ ಅಯ್ಯಪ್ಪನ್, ಎಚ್. ಆರ್. ಕೇಶವಮೂರ್ತಿ, ಅಬ್ದುಲ್ ಖಾದರ್ ನಾಡಕಟ್ಟಿನ್, ಸಿದ್ದಲಿಂಗಯ್ಯ (ಮರಣೋತ್ತರವಾಗಿ) ಹಾಗೂ ಅಮ್ಮೆ ಮಹಾಲಿಂಗ ನಾಯಕ್ ಅವರಿಗೆ ಪದ್ಮಶ್ರೀ ಪುರಸ್ಕಾರ ಪ್ರದಾನ ಮಾಡಲಾಗಿದೆ.

ಭಾರತ ರತ್ನವನ್ನು ಈ ವರ್ಷ ಯಾರಿಗೂ ಘೋಷಣೆ ಮಾಡಿಲ್ಲ.

ವೇತನ, ಬಡ್ತಿ ವ್ಯಾಜ್ಯ: ಮೇಲ್ಮನವಿಗೆ ಸೇನೆ ಸಿಬ್ಬಂದಿಗೆ ಅವಕಾಶ

ನವದೆಹಲಿ: ವೇತನ, ಪಿಂಚಣಿ ಮತ್ತು ಬಡ್ತಿಗೆ ಸಂಬಂಧಿಸಿದಂತೆ ಸೇನಾ ಪಡೆಗಳ ನ್ಯಾಯಮಂಡಳಿಯ (ಎಎಫ್‌ಟಿ) ಅಂತಿಮ ತೀರ್ಮಾನವನ್ನು ಪ್ರಶ್ನಿಸಿ ಸೇನಾ ಪಡೆಗಳ ಸದಸ್ಯರು ಹೈಕೋರ್ಟ್‌ಗಳಿಗೆ ಮೇಲ್ಮನವಿ ಸಲ್ಲಿಸಬಹುದು ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಮನಮೋಹನ್ ಮತ್ತು ನವೀನ್ ಚಾವ್ಲಾ ಅವರಿದ್ದ ಪೀಠವು ಈ ಆದೇಶ ನೀಡಿದೆ. ಈಗ ಸೇನಾಪಡೆಗಳ ಸದಸ್ಯರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಷ್ಟೇ ಅವಕಾಶವಿದೆ. ಈಗಿನ ಪರಿಹಾರ ಕ್ರಮವು ದೇಶದ ವಿವಿಧೆಡೆ ನಿಯೋಜಿತರಾಗಿರುವ ಸಿಬ್ಬಂದಿಗೆ ವೆಚ್ಚದಾಯಕವಾಗಲಿದೆ. ಅರ್ಜಿ ಸಲ್ಲಿಸುವುದೂ ಕಷ್ಟವಾಗಲಿದೆ ಎಂದು ಅಭಿಪ್ರಾಯಪಟ್ಟಿದೆ.

ಹೈಕೋರ್ಟ್‌ನ ತೀರ್ಮಾನ ಸೇನೆಯ ಅಸಂಖ್ಯಾತ ಸಿಬ್ಬಂದಿಗೆ ನಿರಾಳ ಭಾವವನ್ನು ಮೂಡಿಸಿದೆ. ಇದುವರೆಗೂ ಎಎಫ್‌ಟಿಯ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮಾತ್ರ ಮೇಲ್ಮನವಿ ಸಲ್ಲಿಸಲು ಅವಕಾಶವಿತ್ತು.

ಸೇನೆ ಸೇರಲು ಯುವಕನ ಓಟ: ಬದ್ಧತೆಗೆ ವ್ಯಾಪಕ ಶ್ಲಾಘನೆ

ನೋಯ್ಡಾ (ಪಿಟಿಐ): ಸೇನೆಗೆ ಸೇರುವ ಗುರಿ ಸಾಧನೆಗಾಗಿ ದೇಹವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಲು ತಾನು ಕೆಲಸ ಮಾಡುತ್ತಿದ್ದ ಸ್ಥಳದಿಂದ 10 ಕಿ.ಮೀ ದೂರದ ಮನೆಗೆ ನಿತ್ಯ ಓಡುತ್ತಿದ್ದ 19 ವರ್ಷದ ಯುವಕನೊಬ್ಬನ ವಿಡಿಯೊ ಈಗ ಜಾಲತಾಣದಲ್ಲಿ ವೈರಲ್ ಆಗಿದೆ.

ಉತ್ತರಾಖಂಡದ ಅಲ್ಮೋರಾ ಪಟ್ಟಣದ 19 ವರ್ಷದ ಪ್ರದೀಪ್ ಮೆಹ್ರಾ ಈ ಮೂಲಕ ರಾತ್ರೋರಾತ್ರಿ ಹೀರೊ ಆಗಿಬಿಟ್ಟಿದ್ದಾರೆ. ಯುವಕನ ಬದ್ಧತೆಗೆ ಟ್ವಿಟರ್‌ನಲ್ಲಿ 2.5 ಲಕ್ಷಕ್ಕೂ ಹೆಚ್ಚು ಜನ ಮೆಚ್ಚುಗೆ ವ್ಯಕ್ತಪಡಿಸಿದ್ದು, 75 ಸಾವಿರ ಜನರು ಮರು ಟ್ವೀಟ್ ಮಾಡಿದ್ದಾರೆ.

ರಾಷ್ಟ್ರಪ್ರಶಸ್ತಿ ಪುರಸ್ಕೃತ ಸಿನಿಮಾ ನಿರ್ದೇಶಕ ವಿನೋದ್ ಕಪ್ರಿ ಅವರು ಯುವಕನ ಓಟವನ್ನು ಗಮನಿಸಿ ಟ್ವಿಟರ್‌ನಲ್ಲಿ ವಿಡಿಯೊ ಹಂಚಿಕೊಂಡಿದ್ದರು. ನೋಯ್ಡಾದ ಸೆಕ್ಟರ್ 16ರಲ್ಲಿರುವ ಮೆಕ್‌ಡೊನಾಲ್ಡ್‌ನಲ್ಲಿ ಕೆಲಸ ಮಾಡುವ ಮೆಹ್ರಾ ಅಲ್ಲಿಂದ, ಬರೋಲಾದಲ್ಲಿ ಇರುವ ತನ್ನ ಮನೆಗೆ ಪ್ರತಿದಿನ ರಾತ್ರಿ ಓಡುತ್ತಲೇ ತೆರಳುತ್ತಾರೆ. ಮಧ್ಯರಾತ್ರಿ ಓಡುತ್ತಿದ್ದ ಆ ಯುವಕನ ಜತೆಗಿನ ಸಂಭಾಷಣೆ ವಿಡಿಯೊವನ್ನು ಹಂಚಿಕೊಂಡಿದ್ದಾರೆ.

ಸೇನೆಯ ನಿವೃತ್ತ ಲೆಫ್ಟಿನಂಟ್ ಜನರಲ್ ಸತೀಶ್ ದುವಾ ಅವರು, ‘ಹುಡುಗನ ಉತ್ಸಾಹ ಶ್ಲಾಘನೀಯ. ಆತ ಸೇನೆಗೆ ಸೇರಲು ತರಬೇತಿ ಸೇರಿದಂತೆ ಅಗತ್ಯ ನೆರವು ನೀಡುತ್ತೇನೆ’ ಎಂದು ಟ್ವೀಟ್ ಮಾಡಿದ್ದಾರೆ.

‘ಮಣ್ಣು ಉಳಿಸಿ’ ಅಭಿಯಾನ: ಲಂಡನ್‌ನಿಂದ ಆರಂಭ

ಸದ್ಗುರು ಜಗ್ಗಿ ವಾಸುದೇವ್

ಲಂಡನ್: ‘ಮಣ್ಣು ಉಳಿಸಿ’ ಕುರಿತಂತೆ ಜನರಲ್ಲಿ ಅರಿವು ಮೂಡಿಸುವ ಗುರಿಯೊಂದಿಗೆ ಈಶ ಫೌಂಡೇಷನ್‌ನ ಸದ್ಗುರು ಜಗ್ಗಿ ವಾಸುದೇವ್ ಅವರು ಸೋಮವಾರ ಲಂಡನ್‌ನ ಟ್ರಾಫಲ್ಗರ್ ಸ್ಕ್ವೇರ್‌ನಿಂದ ಏಕಾಂಗಿಯಾಗಿ ಮೋಟರ್‌ಸೈಕಲ್‌ನಲ್ಲಿ ಜಾಗೃತಿ ಅಭಿಯಾನ ಆರಂಭಿಸಿದರು.

ಬೆಂಬಲಿಗರು ಮತ್ತು ಅಭಿಮಾನಿಗಳ ಕರತಾಡನದ ನಡುವೆ ಆರಂಭವಾದ ಈ ಅಭಿಯಾನವು 100 ದಿನ ಸುಮಾರು 27 ರಾಷ್ಟ್ರಗಳ ಮೂಲಕ ಹಾದುಹೋಗಲಿದೆ. ಈ ಅವಧಿಯಲ್ಲಿ 30 ಸಾವಿರ ಕಿ.ಮೀ ಕ್ರಮಿಸಲಿದ್ದು, ಅಂತಿಮವಾಗಿ ಕಾವೇರಿ ಕೊಳ್ಳದ ಪ್ರದೇಶದಲ್ಲಿ ಕೊನೆಗೊಳ್ಳಲಿದೆ.

ಅಭಿಯಾನದ ಅವಧಿಯಲ್ಲಿ ಸದ್ಗುರು ಅವರು ‘ಮಣ್ಣು ಉಳಿಸಲು ಸಂಘಟಿತ ಕ್ರಮದ ತುರ್ತು ಅಗತ್ಯವನ್ನು ಮನವರಿಕೆ ಮಾಡಿ ಕೊಡಲು ವಿವಿಧ ರಾಷ್ಟ್ರಗಳ ಪ್ರಮುಖ ನಾಯಕರು, ಮಾಧ್ಯಮಗಳು ಮತ್ತು ತಜ್ಞರೊಂದಿಗೆ ಚರ್ಚಿಸಲಿದ್ದಾರೆ.

ಟ್ರಾಫಲ್ಗರ್ ಸ್ಕ್ವೇರ್‌ನಲ್ಲಿ ಮಹಾತ್ಮಗಾಂಧಿ ಪ್ರತಿಮೆಗೆ ನಮಿಸಿದ ಸದ್ಗುರು, ‘ಸ್ವಾತಂತ್ರ್ಯಪೂರ್ವದಲ್ಲಿ ಗಾಂಧೀಜಿ ಅವರು ಇಲ್ಲಿಗೆ ಬಂದಿದ್ದರು. ಅವರ ಹೋರಾಟದಿಂದ ಭಾರತ ಸ್ವತಂತ್ರವಾಯಿತು. ಇಂಗ್ಲೆಂಡ್‌ನ ಜೊತೆಗ ಈಗ ಭಾರತ ಸಹಭಾಗಿತ್ವವನ್ನು ಹೊಂದಿದೆ’ ಎಂದು ಹೇಳಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

✓ TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ಕಾರಿನಲ್ಲಿ ತೆರಳಿ ಪ್ರಮೋಟ್ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೊಂದಿಗೆ ದಿನಕ್ಕೆ 900- 1200 ಸಂಪಾದಿಸಲು ಸಂಪರ್ಕಿಸಿ: 8904379634/ 9513670249

Part-Time Jobs

✓ ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೆ ಅಣಬೆ ಬೇಸಾಯ, ಕಡಿಮೆ ಜಾಗ ಹಾಗೂ ಕಡಿಮೆ ಖರ್ಚಿನಲ್ಲಿಯೇ ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ. 8431781442/ 8095555516

ವ್ಯಾಪಾರ
Business to Business
Business

★ಮೇಣದಬತ್ತಿ ತಯಾರಿಸಲು★ ತರಬೇತಿ ನೀಡುತ್ತೇವೆ. ಹಾಗೂ ತಯಾರಿಸಿದ ಮೇಣದಬತ್ತಿ ಕೊಂಡುಕೊಳ್ಳುತ್ತೇವೆ. ತರಬೇತಿ, ಸದಸ್ಯತ್ವಕ್ಕಾಗಿ ಬೆಂಗಳೂರು: 9060476868/ 8792252077, ಶಿವಮೊಗ್ಗ:9008013895

ಭವಿಷ್ಯ
Astrology

★★ಅಂಭಾಭವಾನಿ★★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 ‘ವಶೀಕರಣ ಸ್ಪೆಷಲಿಸ್ಟ್’ ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2 ದಿನದಲ್ಲಿ ಪರಿಹಾರ.9886755306

||ಉಚಿತ ಭವಿಷ್ಯ||: *ವಶೀಕರಣ ಸ್ಪೆಷಲಿಸ್ಟ್* ಯಾವುದೇ ಕಠಿಣ ಸಮಸ್ಯೆಗಳಿಗೆ 20 ನಿಮಿಷಗಳಲ್ಲಿ 100% ಪರಿಹಾರ. ಪಂಡಿತ್. ಪವನ್‌ಭಟ್. 8095569819

ಪಂಡಿತ್ ಕಾಳಿ ಪ್ರಸಾದ್ ಕೊಳ್ಳೇಗಾಲದ ಪ್ರಖ್ಯಾತ ಜ್ಯೋತಿಷ್ಯರು ಕೊಳ್ಳೇಗಾಲಕ್ಕೆ ಬಂದು ನೇರ ಭೇಟಿಗೆ ಸದಾ ಅವಕಾಶ ನಿಮ್ಮ ಸರ್ವ ಸಮಸ್ಯೆಗೆ ಪರಿಹಾರ ಮಾಟ ಮಂತ್ರ ಸ್ತ್ರೀ ಪುರುಷ ಗುಪ್ತ ಸಮಸ್ಯೆ ಶತ್ರು ಕಾಟ ವಿವಾಹ ವಿಳಂಬಕ್ಕೆ ಕಚಿತ ಪರಿಹಾರ ಸರ್ವ ವಶೀಕರಣ ಸ್ಪೆಷಲಿಸ್ಟ್. 7338244377

ಪ್ರವಾಸ
Travel

ಸುಸಜ್ಜಿತ ವ್ಯವಸ್ಥೆಗಳೊದಿಗೆ 09.05.2022, 22.05.2022 ರಿಂದ 11ದಿನಗಳು ಕಾಶಿ,ನೇಪಾಳ. 01.05.2022, 21.05.2022 ರಿಂದ 12ದಿನಗಳು ಶಿಮ್ಲಾ, ಮನಾಲಿ, ವೈಷ್ಣೋದೇವಿ. 26.05.2022, 11.06.2022 ರಿಂದ 15ದಿನಗಳು ಚಾರ್‌ಧಾಮ್ ಯಾತ್ರೆ. ಗ್ರೂಪ್ ಪ್ರವಾಸಗಳು ಹಾಗು ಫ್ಯಾಮಿಲಿ ಪ್ರವಾಸಗಳಿಗೆ ಸಂಪರ್ಕಿಸಿ: ‘ಆನಂದ್ ವಿಹಾರಿ’ ಬೆಂಗಳೂರು-23. 8088887677, 080-23385837

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION SPECIAL
We are coming out with special offer for Admission Notice, Education Success Congratulation Ads
DH Classifieds More value, more impact
For details contact: Jerry: 9731810277 Vishal: 9845114560 Tanveer: 9886213331
E-mail: dhclassifieds@deccanherald.co.in

ಸಂಕ್ಷಿಪ್ತ ಸುದ್ದಿ

ಇಂಗ್ಲೆಂಡ್: ಭಾರತೀಯ ಮೂಲದ ಯುವತಿ ಹತ್ಯೆ: ಟ್ಯುನಿಶಿಯಾ ಪ್ರಜೆ ಬಂಧನ

ಲಂಡನ್ (ಪಿಟಿಐ): ಲಂಡನ್‌ನಲ್ಲಿಯ ವಿದ್ಯಾರ್ಥಿ ನಿಲಯದಲ್ಲಿ ಭಾರತೀಯ ಮೂಲದ ಬ್ರಿಟಿಷ್ ಯುವತಿಯೊಬ್ಬರನ್ನು ಹಲ್ಲೆ ನಡೆಸಿ ಹತ್ಯೆ ಮಾಡಿದ ಆರೋಪದ ಮೇಲೆ ಟ್ಯುನಿಶಿಯಾ ಪ್ರಜೆಯೊಬ್ಬರನ್ನು ಸ್ಕಾಟ್ಲೆಂಡ್‌ಯಾರ್ಡ್ ಪೊಲೀಸರು ಬಂಧಿಸಿದ್ದಾರೆ.

19 ವರ್ಷದ ಸಬಿತಾ ತನ್ವಾನಿ ಮೃತ ಯುವತಿ. ಲಂಡನ್‌ನ ಕ್ಲರ್ಕೆನ್‌ವೆಲ್ ಪ್ರದೇಶದಲ್ಲಿನ ಆರ್ಬರ್ ಹೌಸ್ ವಿದ್ಯಾರ್ಥಿನಿಲಯದಲ್ಲಿ ಕುತ್ತಿಗೆಗೆ ಗಂಭೀರವಾದ ಗಾಯಗಳ ಸ್ಥಿತಿಯಲ್ಲಿ ಯುವತಿಯ ಮೃತದೇಹ ಶನಿವಾರ ಪತ್ತೆಯಾಗಿತ್ತು.

ಹತ್ಯೆಯ ಶಂಕೆಯ ಮೇರೆಗೆ ತನ್ವಾನಿ ಜತೆಗೆ ಸಂಬಂಧ ಹೊಂದಿದ್ದ ಟ್ಯುನಿಶಿಯಾ ಪ್ರಜೆ ಮಹರ್ ಮಾರೂಫ್ ಎಂಬಾತನನ್ನು ಭಾನುವಾರ ಕ್ಲರ್ಕೆನ್‌ವೆಲ್ ಪ್ರದೇಶದಲ್ಲಿ ಮೆಟ್ರೊಪಾಲಿಟನ್ ಪೊಲೀಸರು ಬಂಧಿಸಿದ್ದಾರೆ. ಆತ ವಿದ್ಯಾರ್ಥಿಯಲ್ಲ, ಆತನಿಗೆ ಸರಿಯಾದ ವಿಳಾಸವೂ ಇಲ್ಲ ಎಂದು ಅವರು ತಿಳಿಸಿದ್ದಾಖುಎ.

‘ನಮ್ಮ ಮನವಿಯ ಮೇರೆಗೆ ಆರೋಪಿ ಮಾರೂಫ್ ಪತ್ತೆಗೆ ಸಹಕರಿಸಿದ ಎಲ್ಲರಿಗೂ ಧನ್ಯವಾದ ಸಲ್ಲಿಸುತ್ತೇನೆ’ ಎಂದು ತನಿಖೆಯ ನೇತೃತ್ವ ವಹಿಸಿದ ಮೆಟ್ ಪೊಲೀಸ್‌ನ ವಿಶೇಷ ಅಪರಾಧ ಘಟಕದ ಡಿಟೆಕ್ಟಿವ್ ಚೀಫ್ ಇನ್‌ಸ್ಪೆಕ್ಟರ್ ಲಿಂಡಾ ಬ್ರ್ಯಾಡಲೀ ಹೇಳಿದರು.

ಪುಣೆ: ಮರ್ಸಿಡಿಸ್ ಘಟಕಕ್ಕೆ ನುಗ್ಗಿದ ಚಿರತೆ ಸೆರೆ

ಪುಣೆ: ಮಹಾರಾಷ್ಟ್ರದ ಪುಣೆ ಜಿಲ್ಲೆಯ ಚಕನ್‌ನ ಮರ್ಸಿಡಿಸ್ ಬೆಂಜ್ ಐಷಾರಾಮಿ ಕಾರು ತಯಾರಿಕಾ ಘಟಕಕ್ಕೆ ಚಿರತೆ ನುಗ್ಗಿದ್ದು, ನಾಲ್ಕು ಗಂಟೆಗಳ ಕಾರ್ಯಾಚರಣೆಯ ಬಳಿಕ ಅದನ್ನು ಸೆರೆಹಿಡಿಯಲಾಗಿದೆ.

ಸೋಮವಾರ ಮುಂಜಾನೆ 5ರ ವೇಳೆಗೆ ಚಿರತೆ ಪತ್ತೆಯಾಗಿತ್ತು. ಬಳಿಕ ಸ್ಥಳಕ್ಕೆ ತಲುಪಿದ ಅರಣ್ಯಾಧಿಕಾರಿಗಳು ಹಾಗೂ ರಕ್ಷಣಾ ತಂಡದವರು ಅದನ್ನು ಸೆರೆ ಹಿಡಿದಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಚೀನಾ: 132 ಜನರಿದ್ದ ವಿಮಾನ ಪತನ

ಒಂದನೇ ಪುಟದಿಂದ

ವಿಮಾನವು ಆರು ವರ್ಷ ಹಳೆಯದಾಗಿತ್ತು. ಪತನಕ್ಕೆ ಮೊದಲು ಇದು 29,100 ಅಡಿ ಎತ್ತರದಲ್ಲಿ ಹಾರಾಡುತ್ತಿತ್ತು. ಎರಡು ನಿಮಿಷದಲ್ಲಿ ಅದು 9,075 ಅಡಿಗೆ ಕುಸಿಯಿತು. ಮತ್ತೆ 20 ಸೆಕೆಂಡ್‌ಗಳಲ್ಲಿ 3,225 ಅಡಿಗೆ ಇಳಿಯಿತು. ವಿಮಾನವು ಲಂಬವಾಗಿ ನೆಲಕ್ಕೆ ಅಪ್ಪಳಿಸಿತು ಎಂದು ಹೇಳಲಾಗಿದೆ.

ವಿಮಾನ ಪತನದ ಸಂದರ್ಭದಲ್ಲಿ ವುಝೌನಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇತ್ತು. ಆದರೆ, ಕಾಣಿಸುವಿಕೆ ಸಮಸ್ಯೆ ಏನೂ ಇರಲಿಲ್ಲ.

ವಿಮಾನ ಬಿದ್ದ ಸ್ಥಳದಲ್ಲಿ ಭಾರಿ ಬೆಂಕಿ ಮತ್ತು ಹೊಗೆ ಕಾಣಿಸಿಕೊಂಡಿದೆ ಎಂದು ಸ್ಥಳೀಯ ನಿವಾಸಿಗಳು ಹೇಳಿದ್ದಾರೆ.

ರಕ್ಷಣಾ ಕಾರ್ಯಕ್ಕಾಗಿ 1,000 ಮಂದಿ ಅಗ್ನಿಶಾಮಕ ಸಿಬ್ಬಂದಿ ಮತ್ತು ನೂರು ಮಂದಿ ಸ್ಥಳೀಯರನ್ನು ನಿಯೋಜಿಸಲಾಗಿದೆ. 117 ಮಂದಿ ತುರ್ತು ಸೇವಾ ಸಿಬ್ಬಂದಿ ಮತ್ತು ಎರಡು ಡಜನ್‌ಗೂ ಹೆಚ್ಚು ಅಗ್ನಿಶಾಮಕ ಟ್ರಕ್‌ಗಳನ್ನು ಸ್ಥಳಕ್ಕೆ ಕಳುಹಿಸಲಾಗಿದೆ.

ವಿಮಾನ ಅಪಘಾತಕ್ಕೆ ಕಾರಣವೇನು ಎಂಬುದರ ಬಗ್ಗೆ ತನಿಖೆ ನಡೆಸುವಂತೆ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಆದೇಶಿಸಿದ್ದಾರೆ.

ವಿಮಾನ ಪತನದ ಬಳಿಕ, ಬೋಯಿಂಗ್ ಕಂಪನಿಯ ಷೇರುಗಳ ಮೌಲ್ಯವು ಶೇ 6.4ರಷ್ಟು ಕುಸಿತ ಕಂಡಿದೆ. ಚೀನಾ ಈಸ್ಟರ್ನ್ ಏರ್‌ಲೈನ್ಸ್, ಸರ್ಕಾರಿ ಸ್ವಾಮ್ಯದ ಸಂಸ್ಥೆ. ಇದು ಜಗತ್ತಿನ ಆರನೇ ಅತ್ಯಂತ ದೊಡ್ಡ ಮತ್ತು ಚೀನಾದ ಅತ್ಯಂತ ದೊಡ್ಡ ವಿಮಾನ ಯಾನ ಸಂಸ್ಥೆ.

ಈ ಹಿಂದೆ, ಚೀನಾದಲ್ಲಿ ವಿಮಾನ ಅಪಘಾತವಾಗಿದ್ದು 2010ರಲ್ಲಿ. ಹಿನಾನ್ ಏರ್‌ಲೈನ್ಸ್‌ನ ಎಂಬ್ರೇರರ್ ಇ–190 ವಿಮಾನವು ಪತನವಾಗಿತ್ತು. ವಿಮಾನದಲ್ಲಿದ್ದ 96 ಜನರ ಪೈಕಿ 44 ಮಂದಿ ಮೃತಪಟ್ಟಿದ್ದರು.

ಶಸ್ತ್ರಾಸ್ತ್ರ ತ್ಯಜಿಸಿ, ಮರಿಯುಪೋಲ್ ತೊರೆಯಲು ನಿರಾಕರಿಸಿದ ಉಕ್ರೇನ್ ಸೇನೆ

ಫಲಿಸದ 5ನೇ ಸುತ್ತಿನ ಮಾತುಕತೆ

ಲುವಿವ್, ಮರಿಯುಪೋಲ್ (ಎಪಿ): ಕಾರ್ಯತಂತ್ರದ ಬಂದರು ನಗರ ಮರಿಯುಪೋಲ್‌ನಿಂದ ಉಕ್ರೇನ್ ಸೈನಿಕರು ಶಸ್ತ್ರಾಸ್ತ್ರ ತ್ಯಜಿಸಿ, ಶ್ವೇತ ಧ್ವಜ ತೋರಿಸಿ ಮಾನವೀಯ ಕಾರಿಡಾರ್ ಮೂಲಕ ನಿರ್ಗಮಿಸಬೇಕೆಂದು ರಷ್ಯಾ ಪಡೆಗಳು ಇಟ್ಟಿದ್ದ ಬೇಡಿಕೆಯನ್ನು ಉಕ್ರೇನ್ ಸೋಮವಾರ ತಿರಸ್ಕರಿಸಿದೆ.

ಈ ನಡುವೆ ಯುದ್ಧಗೊನೆಗಾಣಿಸಿ, ಶಮನಗೊಳಿಸಲು ಎರಡೂ ರಾಷ್ಟ್ರಗಳ ನಡುವೆ ಸೋಮವಾರ ನಡೆದ 5ನೇ ಸುತ್ತಿನ ನಿರ್ಣಾಯಕ ಶಾಂತಿಮಾತುಕತೆಯೂ ಫಲಿಸಿಲ್ಲ. ಯಾವುದೇ ಗಮನಾರ್ಹ ಪ್ರಗತಿಯೂ ಆಗಿಲ್ಲ. 'ಸ್ವೀಕಾರಾರ್ಹವಲ್ಲದ ಪ್ರಸ್ತಾವಗಳನ್ನು ಮುಂದಿಡುವ ಮೂಲಕ ಉಕ್ರೇನ್ ಶಾಂತಿ ಮಾತುಕತೆಗಳನ್ನು ಮುರಿದಿದೆ' ಎಂದು ರಷ್ಯಾ ಆರೋಪಿಸಿದೆ.

'ಉಕ್ರೇನ್ ಮಾತುಕತೆಗೆ ಸಿದ್ಧ ಎನ್ನುತ್ತದೆ. ಆದರೆ, ಕೊನೆಯಲ್ಲಿ ಶರಣಾಗುವುದಿಲ್ಲ ಎನ್ನುತ್ತದೆ. ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮತ್ತು ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ನಡುವಿನ ಸಂಭವನೀಯ ನೇರ ಮಾತುಕತೆಗೆ ಪೂರಕವಾಗಿ ಗಮನಾರ್ಹ ಪ್ರಗತಿಯನ್ನು ಇನ್ನೂ ಸಾಧಿಸಬೇಕಾಗಿದೆ' ಎಂದು ರಷ್ಯಾ ವಕ್ತಾರ ಡಿಮಿಟ್ರಿ ಪೆಸ್ಕೋವ್ ಹೇಳಿರುವುದಾಗಿ ಎನ್‌ಡಿಟಿವಿ ವರದಿ ಮಾಡಿದೆ.

'ಉಕ್ರೇನ್‌ಸ್ಕ ಪ್ರಾವ್ಡಾ' ಸುದ್ದಿ ವಾಹಿನಿಯ ವರದಿಯನ್ನು ಅಲ್ಲಗಳೆದಿರುವ ಉಕ್ರೇನ್‌ನ ಉಪಪ್ರಧಾನಿ ಇರೆನಾ ವೆರೆಸ್‌ಚುಕ್, 'ಶರಣಾಗತಿ ಮತ್ತು ಶಸ್ತ್ರಾಸ್ತ್ರಗಳನ್ನು ತ್ಯಜಿಸುವ ಮಾತೇ ಇಲ್ಲ. ರಷ್ಯಾದ ಹೇಳಿಕೆಯು ತಿರುಚಿರುವುದಾಗಿದೆ' ಎಂದು ಕಿಡಿಕಾರಿದರು.

'ನಮ್ಮ ನಿಲುವನ್ನು ರಷ್ಯಾಕ್ಕೂ ಸ್ಪಷ್ಟಪಡಿಸಲಾಗಿದೆ. ಸಮಯ ವ್ಯರ್ಥ ಮಾಡುವ ಬದಲು, ಕಾರಿಡಾರ್ ತೆರೆಯಲು 8 ಪುಟಗಳ ಪತ್ರ ಬರೆದಿರುವೆ' ಎಂದು ಅವರು 'ಉಕ್ರೇನ್‌ಸ್ಕ ಪ್ರಾವ್ಡಾ' ಸುದ್ದಿವಾಹಿನಿಗೆ ತಿಳಿಸಿದ್ದಾರೆ. 'ಉಕ್ರೇನ್ ಸೈನಿಕರು ಅಜೋವ್ ಸಮುದ್ರದ ಬಂದರನ್ನು ಸುರಕ್ಷಿತ ಮಾರ್ಗವಾಗಿ ಬಳಸಿಕೊಂಡು ಉಕ್ರೇನ್ ನಿಯಂತ್ರಣದ ಪ್ರದೇಶಗಳಿಗೆ ಹೋಗಬಹುದು. ಶಸ್ತ್ರಾಸ್ತ್ರಗಳನ್ನು ತ್ಯಜಿಸುವ ಎಲ್ಲರಿಗೂ ಮರಿಯುಪೋಲ್‌ನಿಂದ ಸುರಕ್ಷಿತ ನಿರ್ಗಮನದ ಖಾತ್ರಿ ನೀಡಲಾಗುವುದು. ಉಕ್ರೇನಿನ ಲಿಖಿತ ಉತ್ತರಕ್ಕೆ ರಷ್ಯಾ ಸೋಮವಾರ ಬೆಳಿಗ್ಗೆ 5 ಗಂಟೆಯವರೆಗೆ ಕಾಯಲಿದೆ' ಎಂದು ಕರ್ನಲ್ ಜನರಲ್ ಮಿಖಾಯಿಲ್ ಮಿಜಿಂತ್ಸೆವ್ ಭಾನುವಾರ ಗಡುವು ನೀಡಿದ್ದರು.

ಉಕ್ರೇನ್ ಪಡೆಗಳು ನಗರ ತೊರೆಯಲು ಒಪ್ಪಿದರೆ ನಗರಕ್ಕೆ ಮಾನವೀಯ ಸರಬರಾಜುಗಳ ವಿತರಣೆ ತಕ್ಷಣವೇ ಆರಂಭವಾಗಲಿದೆ. ಮರಿಯುಪೋಲ್ ತೊರೆಯಬೇಕೆ ಅಥವಾ ನಗರದಲ್ಲೇ ಉಳಿಯಬೇಕೆ ಎಂಬುದರ ಆಯ್ಕೆಗೆ ನಾಗರಿಕರು ಸ್ವತಂತ್ರರು ಎಂದು ಮಿಜಿಂತ್ಸೆವ್ ಹೇಳಿದ್ದರು.

ರಷ್ಯಾ ಪಡೆಗಳ ಆಕ್ರಮಣಕ್ಕೆ ತುತ್ತಾಗಿರುವ ಈ ನಗರ ಕಳೆದ 20 ದಿನಗಳಿಂದಲೂ ನೀರು, ವಿದ್ಯುತ್, ಸಾರಿಗೆ ಇತ್ಯಾದಿ ಮೂಲಸೌಲಭ್ಯಗಳನ್ನು ಕಳೆದುಕೊಂಡಿದೆ. ಈ ನಗರವೊಂದರಲ್ಲೇ ಈವರೆಗೆ 2,300 ನಾಗರಿಕರು ಹತರಾಗಿದ್ದಾರೆ ಎಂದು ಉಕ್ರೇನ್ ಅಧಿಕಾರಿಗಳು ಹೇಳಿದ್ದಾರೆ.

ಉಕ್ರೇನ್ ಸೇನೆ ಶರಣಾಗತಿ ತಿರಸ್ಕರಿಸಿದ ಬೆನ್ನಲ್ಲೇ ರಷ್ಯಾ ಪಡೆಗಳು ಮರಿಯುಪೋಲ್ ಮೇಲೆ ನಿರಂತರ ಬಾಂಬ್ ದಾಳಿ ಮುಂದುವರಿಸಿವೆ. ರಾಜಧಾನಿ ಕೀವ್ ನಗರ ಕೇಂದ್ರ ಭಾಗದ ವಾಣಿಜ್ಯ ಸಂಕೀರ್ಣ ಗುರಿಯಾಗಿಸಿ ಭಾನುವಾರ ತಡರಾತ್ರಿ ರಷ್ಯಾ ಪಡೆಗಳು ನಡೆಸಿದ ಶೆಲ್ ದಾಳಿಗೆ 8 ಜನರು ಮೃತಪಟ್ಟಿದ್ದಾರೆ.

'400 ನಾಗರಿಕರು ಆಶ್ರಯ ಪಡೆದಿದ್ದ ಮರಿಯುಪೋಲ್‌ನ ಕಲಾಶಾಲೆಯ ಮೇಲೆ ರಷ್ಯಾದ ನಡೆಸಿದ ವೈಮಾನಿಕ ದಾಳಿಯಲ್ಲಿ ಎಷ್ಟು ಮಂದಿ ಬದುಕುಳಿದಿದ್ದಾರೆ ಎನ್ನುವುದು ಗೊತ್ತಾಗಿಲ್ಲ' ಎಂದು ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಸೋಮವಾರ ನಸುಕಿನಲ್ಲಿ ದೇಶದ ಜನರನ್ನು ಉದ್ದೇಶಿಸಿ ಮಾಡಿರುವ ವಿಡಿಯೊ ಭಾಷಣದಲ್ಲಿ ತಿಳಿಸಿದ್ದಾರೆ.

'ವಿಮಾನದಿಂದ ಬಾಂಬ್ ಹಾಕಿ ನೂರಾರು ನಾಗರಿಕರ ಸಾಮೂಹಿಕ ಹತ್ಯೆಗೆ ಕಾರಣನಾದ ರಷ್ಯಾದ ಆ ಪೈಲಟ್‌ನ್ನು ನಾವು ಕೊಂದೇ ಕೊಲ್ಲುತ್ತೇವೆ' ಎಂದು ಝೆಲೆನ್‌ಸ್ಕಿ ಗುಡುಗಿದ್ದಾರೆ.

'ಭಾರತದ ನಿಲುವು ಆಸ್ಟ್ರೇಲಿಯಾಕ್ಕೆ ಮನವರಿಕೆ'

ನವದೆಹಲಿ: ಉಕ್ರೇನ್ ಬಿಕ್ಕಟ್ಟಿನ ಕುರಿತು ಭಾರತದ ನಿಲುವಿನ ಬಗ್ಗೆ ನಮಗೆ ಮನವರಿಕೆಯಾಗಿದೆ ಎಂದು ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್ ಅವರು ತಿಳಿಸಿರುವುದಾಗಿ ವಿದೇಶಾಂಗ ಕಾರ್ಯದರ್ಶಿ ಹರ್ಷವರ್ಧನ್ ಶ್ರಿಂಗ್ಲಾ ಸೋಮವಾರ ಹೇಳಿದ್ದಾರೆ. ಈ ಬಿಕ್ಕಟ್ಟು ಇಂಡೊ–ಪೆಸಿಫಿಕ್‌ನಿಂದ ಗಮನವನ್ನು ಬೇರೆಡೆಗೆ ಸೆಳೆಯಲು ಕಾರಣವಾಗಬಾರದೆಂಬ ಆಶಯವನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಮಾರಿಸನ್ ಅವರು ವ್ಯಕ್ತಪಡಿಸಿದ್ದಾರೆ ಎಂದೂ ಅವರು ತಿಳಿಸಿದ್ದಾರೆ.

ಕೀವ್ ನಗರದಲ್ಲಿನ ಶಾಪಿಂಗ್ ಮಾಲ್ ಮೇಲೆ ರಷ್ಯಾ ಸೇನಾಪಡೆ ಶೆಲ್ ದಾಳಿ ನಡೆಸಿ ಅದನ್ನು ಧ್ವಂಸಗೊಳಿಸಿದೆ.– ಎಎಫ್‌ಪಿ ಚಿತ್ರ

60 ಸ್ಫೋಟಕ ಪತ್ತೆ ಹಚ್ಚಿದ ಶ್ವಾನ

ಉಕ್ರೇನ್‌ನ ನಗರ, ಹಳ್ಳಿ ಎನ್ನುವ ವ್ಯತ್ಯಾಸವಿಲ್ಲದೇ ಎಲ್ಲೆಂದರಲ್ಲಿ ಬಾಂಬುಗಳು, ಶೆಲ್‌ಗಳು, ಮದ್ದುಗುಂಡುಗಳು ಬಿದ್ದಿವೆ. ರಷ್ಯಾ ಪಡೆಗಳು ನಗರಗಳನ್ನು ಗುರಿಯಾಗಿಸಿ ನಡೆಸಿದ ಸೇನಾ ದಾಳಿ ವೇಳೆ ಸ್ಫೋಟಿಸದೆ ಬಿದ್ದಿರುವ ಜೀವಂತ ಸ್ಫೋಟಕಗಳನ್ನು ಪತ್ತೆ ಹಚ್ಚಿ, ಭವಿಷ್ಯದಲ್ಲಿ ಘಟಿಸಲಿದ್ದ ಸಂಭವನೀಯ ಅನಾಹುತಗಳನ್ನು ತಡೆಯಲು ಅಳಿಲು ಸೇವೆ ಸಲ್ಲಿಸುತ್ತಿದೆ ಉಕ್ರೇನ್ ಸೇನೆಯ ಪುಟ್ಟ ಶ್ವಾನ.

ಯುದ್ಧ ಆರಂಭವಾದಾಗಿನಿಂದ ಮಾರ್ಚ್ 19ರವರೆಗೆ ಚೆರ್ನಿವ್ ನಗರವೊಂದರಲ್ಲೇ ಸುಮಾರು 90 ಜೀವಂತ ಸ್ಫೋಟಕಗಳನ್ನು ಪತ್ತೆ ಹಚ್ಚಿ ನಿಷ್ಕ್ರಿಯಗೊಳಿಸಲು ನೆರವಾಗಿದೆಯಂತೆ ಈ ಪುಟ್ಟ ಶ್ವಾನ. ರಾಜ್ಯ ತುರ್ತು ಸೇವೆ ರಕ್ಷಣಾ ಸಿಬ್ಬಂದಿಯ ತಂಡದಲ್ಲಿ ಈ ಶ್ವಾನ ಪ್ರಮುಖ ಪಾತ್ರ ವಹಿಸುತ್ತಿದೆ ಎನ್ನುವ ಮಾಹಿತಿಯನ್ನು ಬೆಂಜಮಿನ್ ಲಿಮ್ ಎಂಬುವವರು ಟ್ವಿಟರ್‌ನಲ್ಲಿ ವಿಡಿಯೊ ಸಮೇತ ಹಂಚಿಕೊಂಡಿದ್ದಾರೆ.

26ನೇ ದಿನದ ಬೆಳವಣಿಗೆಗಳು

- ವಾಯವ್ಯ ಪೊಡೊಲ್‌ಸ್ಕಿ ಜಿಲ್ಲೆಯಲ್ಲಿ ಉಕ್ರೇನ್ ಪಡೆಗಳು ರಷ್ಯಾದ ಕ್ಷಿಪಣಿ ಹೊಡೆದುರುಳಿಸಿವೆ- ಕೀವ್ ಮೇಯರ್ ವಿಟಾಲಿ ಕ್ಲಿಟ್‌ಶ್ಕೊ
- ಉಕ್ರೇನ್ ಸಂಘರ್ಷದ ಬಗ್ಗೆ ನ್ಯಾಟೊ ಮತ್ತು ಯುರೋಪ್ ರಾಷ್ಟ್ರಗಳೊಂದಿಗೆ ಚರ್ಚಿಸಲು ಅಮೆರಿಕ ಅಧ್ಯಕ್ಷ ಜೋ ಬೈಡನ್ ಶುಕ್ರವಾರ ಪೋಲೆಂಡ್‌ಗೆ ಪ್ರಯಾಣಿಸಲಿದ್ದಾರೆ
- 1986ರಲ್ಲಿ ವಿಶ್ವದ ಭಾರೀ ದುರಂತಕ್ಕೆ ಸಾಕ್ಷಿಯಾದ ಚೆರ್ನೊಬಿಲ್ ಅಣು ವಿದ್ಯುತ್ ಸ್ಥಾವರದ ಸುತ್ತಲಿನ ವಿಕಿರಣ ಮಾನಿಟರ್‌ಗಳು ಸ್ಥಗಿತಗೊಂಡಿವೆ. ವಿಕಿರಣ ಹರಡುವಿಕೆ ನಿಯಂತ್ರಿಸುವ ಸಾಮರ್ಥ್ಯ ಗಮನಾರ್ಹವಾಗಿ ಕ್ಷೀಣಿಸುತ್ತಿದ್ದು, ಮುಂಬರುವ ವಾರಗಳು ಅಥವಾ ತಿಂಗಳುಗಳಲ್ಲಿ ಉಕ್ರೇನ್ ಗಡಿ ಮೀರಬಹುದು- ಉಕ್ರೇನಿನ ಅಣು ನಿಯಂತ್ರಕ ಏಜೆನ್ಸಿ ಎಚ್ಚರಿಸಿದೆ
- ರಷ್ಯಾದ ಸಶಸ್ತ್ರ ಪಡೆಗಳು ಉಕ್ರೇನ್‌ನಲ್ಲಿ ತೀವ್ರತರದ ಯುದ್ಧ ಅಪರಾಧಗಳನ್ನು ಎಸಗಿವೆ ಎಂದು ಯುರೋಪ್ ಒಕ್ಕೂಟದ ದೇಶಗಳು ಆರೋಪಿಸಿವೆ
- ರಷ್ಯಾ ಮತ್ತು ಉಕ್ರೇನ್ ನಡುವಿನ ಕದನ ವಿರಾಮ ಮಾತುಕತೆಗಳಲ್ಲಿ ಒಂದಿಷ್ಟು ಪ್ರಗತಿ ಕಂಡುಬಂದಿದ್ದರೂ, ಎರಡೂ ಕಡೆಯಲ್ಲೂ ತುಂಬಾ ಅಂತರಗಳು ಉಳಿದಿವೆ- ಇಸ್ರೇಲ್ ಪ್ರಧಾನಿ ನಫ್ತಾಲಿ ಬೆನೆಟ್ ಹೇಳಿಕೆ
- ರಷ್ಯಾದ ತೈಲ, ಅನಿಲ, ಕಲ್ಲಿದ್ದಲಿಗೆ ಅವಲಂಬಿಸಿದ್ದ ದೇಶಗಳು ಪರ್ಯಾಯ ವ್ಯವಸ್ಥೆಗೆ ಪರದಾಡುತ್ತಿವೆ. ಇದರಿಂದ ಹವಾಮಾನ ಬದಲಾವಣೆಗಾಗಿ ಪರಸ್ಪರರಲ್ಲಿ ಇದ್ದ ಸಹಕಾರಕ್ಕೆ ಪೆಟ್ಟು ಬೀಳಲಿದೆ- ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟರೆಸ್ ಎಚ್ಚರಿಕೆ
- ಉಕ್ರೇನ್ ಯುದ್ಧದಲ್ಲಿ ಜೀವಹಾನಿಯ ದುರಂತಕ್ಕೆ ರಷ್ಯಾವೇ ನೇರ ಹೊಣೆ. ಇಂಡೋ-ಪೆಸಿಫಿಕ್ ಪ್ರದೇಶದಲ್ಲಿ ಇಂತಹದ್ದು ಘಟಿಸದಿರಲಿ- ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್
- ಸುಮಿ ನಗರದ ಹೊರವಲಯದ ರಾಸಾಯನಿಕ ಘಟಕದ ಮೇಲೆ ರಷ್ಯಾ ಶೆಲ್ ದಾಳಿ ನಡೆಸಿದೆ. ಇದರಿಂದ 50 ಟನ್ ಅಮೋನಿಯಾ ಸೋರಿಕೆಯಾಗಿದೆ–ಉಕ್ರೇನ್ ಆರೋಪ
- ರಾಸಾಯನಿಕ ಘಟಕದ ಮೇಲೆ ರಷ್ಯಾ ಪಡೆಗಳು ದಾಳಿ ನಡೆಸಿಲ್ಲ. ಸುಳ್ಳು ಆರೋಪ ಮಾಡುತ್ತಿರುವ ಉಕ್ರೇನ್ ಪಡೆಗಳು, ಉದ್ದೇಶಪೂರ್ವಕ ಪ್ರಚೋದನೆ ನೀಡುತ್ತಿವೆ– ರಷ್ಯಾ ಸೇನೆ ವಕ್ತಾರ ಇಗೋರ್ ಕೊನಶೆಂಕವ್
- ಉಕ್ರೇನಿನ ರಿವ್‌ನೆ ಪ್ರದೇಶದಲ್ಲಿರುವ ಸೇನಾ ತರಬೇತಿ ಕೇಂದ್ರ ಮೇಲೆ ಭಾನುವಾರ ತಡರಾತ್ರಿ ಕ್ರೂಸ್ ಕ್ಷಿಪಣಿಗಳ ದಾಳಿ ನಡೆಸಲಾಗಿದೆ. 80 ಮಂದಿ ವಿದೇಶಿಗರು ಮತ್ತು ಉಕ್ರೇನಿನ ಹಲವು ಯೋಧರು ಹತರಾಗಿದ್ದಾರೆ– ರಷ್ಯಾ
- ಉಕ್ರೇನ್ ಮೇಲಿನ ರಷ್ಯಾದ ಆಕ್ರಮಣ ಖಂಡಿಸಲು ನಿರಾಕರಿಸಿರುವ ಚೀನಾದ ನಡೆಯನ್ನು ಅಮೆರಿಕದಲ್ಲಿನ ಚೀನಾ ರಾಯಭಾರಿ ಸಮರ್ಥಿಸಿಕೊಂಡಿದ್ದಾರೆ

ಲುವಿವ್ ನಗರದ ರೈಲು ನಿಲ್ದಾಣದಲ್ಲಿರುವ ನಿರಾಶ್ರಿತರ ಶಿಬಿರದಲ್ಲಿ ಕಂಡುಬಂದ ಮಕ್ಕಳು – ಎಎಫ್‌ಪಿ ಚಿತ್ರ

ರಷ್ಯಾದ 8 ಯೋಧರನ್ನು ಕೊಂದ ಉಕ್ರೇನ್ ಅಜ್ಜಿ!

ಕೀವ್: ಉಕ್ರೇನ್ ಮೇಲೆ ದಂಡೆತ್ತಿ ಹೋಗಿರುವ ರಷ್ಯಾದ ಪಡೆಗಳ 8 ಯೋಧರನ್ನು ಉಕ್ರೇನಿನ ದೇಶಪ್ರೇಮಿ ಅಜ್ಜಿಯೊಬ್ಬಳು ಕೊಂದುಬಿಟ್ಟಿದ್ದಾಳೆ!

ಇದು ನಿಜನಾ? ಅಜ್ಜಿಯಿಂದ ಅಷ್ಟು ಯೋಧರನ್ನು ಕೊಲ್ಲಲು ಸಾಧ್ಯವಾಗಿದೆಯಾ? ಎನ್ನುವ ಪ್ರಶ್ನೆಗಳು ಮತ್ತು ಅಚ್ಚರಿ ಮೂಡುವುದು ಸಹಜ. ಆದರೆ, ಉಕ್ರೇನಿನ ಭ್ರಷ್ಟಾಚಾರ ವಿರೋಧಿ ಕ್ರಿಯಾ ಕೇಂದ್ರದ (ಆ್ಯಂಟಿ ಕರಪ್ಶನ್ ಆ್ಯಕ್ಷನ್ ಸೆಂಟರ್) ಕಾರ್ಯನಿರ್ವಾಹಕ ನಿರ್ದೇಶಕಿ ದರಿಯಾ ಕಲೆನ್ಯೂಕ್ ಟ್ವೀಟ್‌ನಲ್ಲಿ ಹಂಚಿಕೊಂಡಿರುವ ಮಾಹಿತಿ ನೋಡಿದರೆ ಇದು ನಿಜ ಎನಿಸುತ್ತದೆ. ಉಕ್ರೇನ್ ಆಕ್ರಮಣಕ್ಕೆ ದಂಡೆತ್ತಿ ಹೋಗಿರುವ ರಷ್ಯಾ ಪಡೆಗಳಿಗೆ ಈಗಾಗಲೇ ಇಂಧನ ಮತ್ತು ಆಹಾರದ ಕೊರತೆ ಎದುರಾಗಿದೆ. ಯೋಧರು ಉಕ್ರೇನ್ ನೆಲದಲ್ಲಿ ಹನಿ ನೀರು ಮತ್ತು ಆಹಾರಕ್ಕಾಗಿ ಪರದಾಡುತ್ತಿದ್ದಾರೆ. ಉಕ್ರೇನ್ ಸೈನಿಕರ ತೀವ್ರ ಪ್ರತಿರೋಧ, ಗೆರಿಲ್ಲಾ ಮಾದರಿ ದಾಳಿಗೆ ಜೀವ ಕಳೆದುಕೊಳ್ಳುತ್ತಿದ್ದಾರೆ ಎನ್ನುವ ಮಾಹಿತಿಯೂ ಇದೆ.

'ರಷ್ಯಾದ ಆಕ್ರಮಣಕಾರರು ಉಕ್ರೇನ್‌ಗೆ ನುಗ್ಗಿದರೆ ಉಕ್ರೇನಿಗರು ಬ್ರೆಡ್ ಮತ್ತು ಉಪ್ಪು ನೀಡಿ ಸ್ವಾಗತಿಸುತ್ತಾರೆ ಎಂದು ಭಾವಿಸಿದ್ದರು ಎನಿಸುತ್ತದೆ. ಆದರೆ, ಉಕ್ರೇನಿನ ಅಜ್ಜಿಯೊಬ್ಬರು ಮನೆಯಲ್ಲಿ ತಯಾರಿಸಿದ ಕೇಕ್ ನೀಡಿ ರಷ್ಯಾದ ಆಕ್ರಮಣಕಾರರನ್ನು ಸ್ವಾಗತಿಸಿದ್ದಾರೆ. ಅದೂ ಅಂತಿಂತ ಕೇಕ್ ಅಲ್ಲ, ವಿಷ ಮಿಶ್ರಿತ ಕೇಕ್. ಪಾಪ, ಹಸಿದ ಆಕ್ರಮಣಕಾರರಲ್ಲಿ ಈ ಕೇಕ್ ತಿಂದ 8 ಮಂದಿ ಜೀವ ಬಿಟ್ಟಿದ್ದಾರೆ' ಎಂದು ದರಿಯಾ ಕಲೆನ್ಯೂಕ್ ಟ್ವೀಟ್ ಮಾಡಿದ್ದಾರೆ. ಈ ಟ್ವೀಟ್ ಅನ್ನು 5 ಸಾವಿರ ಮಂದಿ ರಿಟ್ವೀಟ್ ಮಾಡಿದ್ದರೆ, 25 ಸಾವಿರ ಜನರು ಲೈಕ್ ಮಾಡಿದ್ದಾರೆ.

ರಾಜಕೀಯ ಪಕ್ಷಗಳ ಮುಖಂಡರ ಜತೆ ಸರ್ಕಾರ ಚರ್ಚೆ

ಕೇಂದ್ರೀಯ ಶಾಲೆ: ಸಂಸದರ ಕೋಟಾ ಕೊನೆಗೊಳ್ಳಲಿದೆಯೇ?

ನವದೆಹಲಿ (ಪಿಟಿಐ): ಕೇಂದ್ರೀಯ ಶಾಲೆಗಳಿಗೆ ಪ್ರತಿ ಶೈಕ್ಷಣಿಕ ವರ್ಷದಲ್ಲಿ 10 ವಿದ್ಯಾರ್ಥಿಗಳ ಪ್ರವೇಶಕ್ಕೆ ಶಿಫಾರಸು ಮಾಡುವ ಸಂಸದರ ಸವಲತ್ತನ್ನು ಕೊನೆಗೊಳಿಸಬೇಕೇ ಎಂಬುದರ ಕುರಿತು ರಾಜಕೀಯ ಪಕ್ಷಗಳ ಮುಖಂಡರ ಜೊತೆಗೆ ಸರ್ಕಾರ ಚರ್ಚೆ ನಡೆಸಲಿದೆ.

ಲೋಕಸಭೆಯಲ್ಲಿ ಸೋಮವಾರ ಈ ವಿಷಯ ಚರ್ಚೆಗೆ ಬಂದಿತು. 'ಈ ತಾರತಮ್ಯದ ಕೋಟ ನಮಗೇಕೆ' ಎಂದು ಪ್ರಶ್ನಿಸಿದ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು, ಈ ಕುರಿತು ಸದನದ ರಾಜಕೀಯ ಪಕ್ಷಗಳ ನಾಯಕರ ಜತೆ ಸಭೆ ನಡೆಸುವಂತೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರಿಗೆ ಸೂಚಿಸಿದರು.

ಕಾಂಗ್ರೆಸ್ ಸಂಸದ ಮನೀಶ್ ತಿವಾರಿ ಈ ವಿಷಯವನ್ನು ಮೊದಲು ಸಭೆಯಲ್ಲಿ ಪ್ರಸ್ತಾಪಿಸಿದರು. 'ಕೇಂದ್ರೀಯ ಶಾಲೆಗಳಲ್ಲಿನ 10 ಸೀಟುಗಳಿಗೆ ಶಿಫಾರಸು ಮಾಡುವುದಕ್ಕೆ ನಮಗೆ ಸಾರ್ವಜನಿಕರಿಗೆ ಹೆಚ್ಚಿನ ಮನವಿಗಳು ಬರುತ್ತಿವೆ. ಹಾಗಾಗಿ ಈ ಕೋಟಾವನ್ನು ಹೆಚ್ಚಿಸಿ ಇಲ್ಲವೇ, ಕೋಟಾವನ್ನೇ ಕೊನೆಗೊಳಿಸಿ' ಎಂದು ತಿವಾರಿ ಹೇಳಿದರು.

ಆಗ ಪ್ರತಿಕ್ರಿಯಿಸಿದ ಸಚಿವ ಧರ್ಮೇಂದ್ರ ಪ್ರಧಾನ್, 'ಈ ಕುರಿತು ಸದನವು ಸರ್ವಾನುಮತದಿಂದ ಒಪ್ಪಿಗೆ ನೀಡಿದರೆ, ಸರ್ಕಾರ ಈ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತದೆ' ಎಂದರು.

'ನಾವು ಜನರ ಪ್ರತಿನಿಧಿಗಳೇ ಹೊರತು ಕೆಲವರ ಪ್ರತಿನಿಧಿಗಳಲ್ಲ' ಎಂದು ಅವರು ಇದೇ ವೇಳೆ ಹೇಳಿದರು.

ಸಂಸದರ ಈ ಕೋಟಾ ಮೊದಲು ಪ್ರತಿ ಶೈಕ್ಷಣಿಕ ವರ್ಷಕ್ಕೆ 2 ಸೀಟುಗಳಿಗೆ ಸೀಮಿತವಾಗಿತ್ತು. ನಂತರ ಅದು ಐದು ಸೀಟುಗಳಿಗೆ ಏರಿಕೆಯಾಗಿತ್ತು. ಅದೀಗ 10 ಸೀಟುಗಳಿಗೆ ಏರಿದೆ ಎಂದು ಸಚಿವರು ಮಾಹಿತಿ ನೀಡಿದರು.

ಕವಿ ವರವರ ರಾವ್‌ಗೆ ಜಾಮೀನು ಬೇಡ: ಎನ್‌ಐಎ

ಮುಂಬೈ(ಪಿಟಿಐ): ಎಲ್ಗಾರ್ ಪರಿಷತ್–ಮಾವೊವಾದಿ ಸಂಪರ್ಕ ಪ್ರಕರಣದ ಆರೋಪಿಯಾದ ತೆಲುಗು ಕವಿ ವರವರ ರಾವ್ ಅವರು ಸಲ್ಲಿಸಿದ ವೈದ್ಯಕೀಯ ಶಾಶ್ವತ ಜಾಮೀನು ಅರ್ಜಿಯನ್ನು ತಿರಸ್ಕರಿಸಬೇಕು ಎಂದು ರಾಷ್ಟ್ರೀಯ ತನಿಖಾ ದಳ(ಎನ್‌ಐಎ) ಬಾಂಬೆ ಹೈಕೋರ್ಟ್‌ಗೆ ಒತ್ತಾಯಿಸಿದೆ.

ಅವರ ವಿರುದ್ಧ ಗಂಭೀರ ಸ್ವರೂಪದ ಆರೋಪಗಳಿವೆ. ಅವುಗಳು ಸಾಬೀತಾದರೆ, ಅವರಿಗೆ ಮರಣ ದಂಡನೆ ಶಿಕ್ಷೆಯೂ ಆಗಬಹುದು ಎಂದು ಎನ್‌ಐಎ ಹೇಳಿದೆ. ಈ ವೇಳೆ ಎಲ್ಲಾ ವಾದ-ಪ್ರತಿವಾದಗಳನ್ನು ಆಲಿಸಿದ ಬಾಂಬೆ ಹೈಕೋರ್ಟ್, ಈ ಕುರಿತಾದ ತೀರ್ಪು ನೀಡುವವರೆಗೆ ವರವರ ರಾವ್ ಅವರು ತಲೋಜಾ ಜೈಲಿನ ಅಧಿಕಾರಿಗಳ ಬಳಿ ಶರಣಾಗತರಾಗುವ ಅಗತ್ಯವಿಲ್ಲ ಎಂದು ಹೇಳಿದೆ.

ಬಾಂಬೆ ಹೈಕೋರ್ಟ್‌ನಲ್ಲಿ ಸೋಮವಾರ ಎನ್‌ಐಎ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಅನಿಲ್ ಸಿಂಗ್ ಅವರು, 'ವರವರ ರಾವ್ ಅವರು ವಯೋ ಸಹಜ ಕಾಯಿಲೆಗಳಿಂದ ಬಳಲುತ್ತಿರಬಹುದು. ಅವರಿಗೆ ಅಗತ್ಯವಿರುವ ವೈದ್ಯಕೀಯ ನೆರವು ನೀಡಲಾಗುತ್ತದೆ.

ಸಿಪಿಎಂ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳದಂತೆ ತರೂರ್‌ಗೆ ಸೂಚನೆ

ನವದೆಹಲಿ: ಕಾಂಗ್ರೆಸ್‌ನ 'ಜಿ 23' ಗುಂಪಿನಲ್ಲಿ ಗುರುತಿಸಿಕೊಂಡಿರುವ ಸಂಸದ ಶಶಿ ತರೂರ್ ಅವರಿಗೆ ಕೇರಳದಲ್ಲಿ ಸಿಪಿಎಂ ಪಕ್ಷವು ಆಯೋಜಿಸಿರುವ ವಿಚಾರ ಸಂಕಿರಣದಲ್ಲಿ ಭಾಗವಹಿಸದಂತೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಸೋಮವಾರ ಸೂಚನೆ ನೀಡಿದ್ದು, ಕೇರಳ ಕಾಂಗ್ರೆಸ್ ಅಧ್ಯಕ್ಷರ ಸೂಚನೆಗಳನ್ನು ಪಾಲಿಸಬೇಕು ಎಂದೂ ನಿರ್ದೇಶನ ನೀಡಿದ್ದಾರೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಶಶಿ ತರೂರ್, 'ಸೋನಿಯಾ ಅವರ ನಿರ್ಧಾರವನ್ನು ಗೌರವಿಸುತ್ತೇನೆ. ಕೇಂದ್ರ ಮತ್ತು ರಾಜ್ಯ ಸಂಬಂಧಗಳ ಸಿಪಿಎಂನ ವಿಚಾರಗೋಷ್ಠಿಯಲ್ಲಿ ಭಾಗವಹಿಸುವುದಿಲ್ಲವೆಂದು ಸಂಘಟಕರಿಗೆ ತಿಳಿಸಿದ್ದೇನೆ' ಎಂದು ಹೇಳಿದ್ದಾರೆ.

'ಯಾವುದೇ ವಿವಾದಗಳಿಲ್ಲದೆ ಸೂಕ್ತ ನಿರ್ಧಾರ ಕೈಗೊಳ್ಳಲಾಗಿದೆ' ಎಂದೂ ಅವರು ತಿಳಿಸಿದ್ದಾರೆ.

ಏಪ್ರಿಲ್ 6ರಿಂದ 10ರವರೆಗೆ ನಡೆಯಲಿರುವ ತನ್ನ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಳ್ಳುವಂತೆ ಕಾಂಗ್ರೆಸ್ ನಾಯಕರಾದ ಶಶಿ ತರೂರ್, ಕೆ.ವಿ. ಥಾಮಸ್ ಹಾಗೂ ಮಣಿಶಂಕರ್ ಅಯ್ಯರ್ ಅವರಿಗೆ ಸಿಪಿಎಂ ಆಹ್ವಾನ ನೀಡಿತ್ತು. ಆದರೆ, ವಿಚಾರ ಸಂಕಿರಣದಲ್ಲಿ ಕಾಂಗ್ರೆಸ್ ನಾಯಕರು ಭಾಗವಹಿಸುವ ಕುರಿತು ಕೇರಳದ ಕಾಂಗ್ರೆಸ್ ಅಧ್ಯಕ್ಷ ಕೆ. ಸುಧಾಕರನ್ ಸೇರಿದಂತೆ ಇತರ ನಾಯಕರು ಆಕ್ಷೇಪ ವ್ಯಕ್ತಪಡಿಸಿದ್ದರು.

ಪಕ್ಷದ ಅಧ್ಯಕ್ಷೆ ಸೋನಿಯಾ ಅವರನ್ನು ಭೇಟಿ ಮಾಡಿದ್ದ ಕೇರಳದ ಮುಖಂಡರು, ಪಿಣರಾಯಿ ವಿಜಯನ್ ನೇತೃತ್ವದ ಸರ್ಕಾರದ ಮಹತ್ವಾಕಾಂಕ್ಷೆಯ ಕೆ–ರೈಲ್ ಯೋಜನೆ ವಿರುದ್ಧ ಕಾಂಗ್ರೆಸ್ ಹೋರಾಟ ಮಾಡುತ್ತಿದ್ದು, ಇದೀಗ ಅದೇ ಪಕ್ಷದ (ಸಿಪಿಎಂ) ವೇದಿಕೆಯಲ್ಲಿ ತರೂರ್ ಅವರ ಉಪಸ್ಥಿತಿಯು ಮುಜುಗರವನ್ನುಂಟು ಮಾಡುತ್ತದೆ. ಅಲ್ಲದೇ, ಸಿಪಿಎಂನ ಕಾರ್ಯಕ್ರಮಗಳಲ್ಲಿ ಕಾಂಗ್ರೆಸ್‌ನ ಹಿರಿಯ ನಾಯಕರು ಪಾಲ್ಗೊಂಡರೆ ಪಕ್ಷದ ಕಾರ್ಯಕರ್ತರ ಮನೋಸ್ಥೈರ್ಯ ಕುಗ್ಗಲಿದೆ' ಎಂದರು.

ಸೋನಿಯಾ ಕೇರಳ ರಾಜ್ಯ ಕಾಂಗ್ರೆಸ್‌ನ ನಾಯಕತ್ವದ ನಿರ್ಧಾರದಂತೆ ನಡೆದುಕೊಳ್ಳುವಂತೆ ತರೂರ್ ಅವರಿಗೆ ಸೂಚಿಸಿದ್ದಾರೆ.

ಮುಖ್ಯಮಂತ್ರಿ ಸ್ಥಾನ: ಸಾವಂತ್, ಧಾಮಿಗೆ ಮತ್ತೆ ಅವಕಾಶ

ಒಂದನೇ ಪುಟದಿಂದ

ವಿಧಾನಸಭಾ ಚುನಾವಣೆಯಲ್ಲಿ ಸೋತಿದ್ದರೂ, ರಾಜ್ಯದಲ್ಲಿ ಸ್ಥಿರತೆ ತರುವ ಉದ್ದೇಶದಿಂದ ಧಾಮಿ ಅವರನ್ನೇ ಮುಖ್ಯಮಂತ್ರಿಯಾಗಿ ಪುನರಾಯ್ಕೆ ಮಾಡಲಾಗಿದೆ.

ಧಾಮಿ ಅವರ ಸೋಲು ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕಿಸಿತ್ತು. ಸಾಕಷ್ಟು ಸಮಾಲೋಚನೆಯ ಬಳಿಕ ಬಿಜೆಪಿ ಉನ್ನತ ನಾಯಕರು ಧಾಮಿ ಅವರಿಗೇ ಮಣೆ ಹಾಕಲು ಅಂತಿಮವಾಗಿ ನಿರ್ಧಾರ ಕೈಗೊಂಡರು. ರಾಜ್ಯವನ್ನು ಮುನ್ನಡೆಸಲು ಯುವ ಜನಾಂಗದ ಮೇಲೆ ಪಕ್ಷ ನಂಬಿಕೆ ಇರಿಸಿದ್ದು, ಉತ್ತರಾಖಂಡದ ಬಗ್ಗೆ ಪ್ರಧಾನಿ ಮೋದಿ ಅವರು ಹೊಂದಿರುವ ದೃಷ್ಟಿಕೋನವನ್ನು ಅನುಷ್ಠಾನಕ್ಕೆ ತರಲು ಧಾಮಿ ಅವರೇ ಸೂಕ್ತ ಎಂಬ ಅಭಿಪ್ರಾಯವನ್ನು ಪಕ್ಷದ ಮುಖಂಡ ರಮೇಶ್ ಪೋಖ್ರಿಯಾಲ್ ನಿಶಾಂಕ್ ವ್ಯಕ್ತಪಡಿಸಿದರು. 2024ರ ಸಾರ್ವತ್ರಿಕ ಚುನಾವಣೆ ಎದುರಿಸಲು ಧಾಮಿ ನೇತೃತ್ವದ ಸ್ಥಿರ ಸರ್ಕಾರದ ಅಗತ್ಯವಿದೆ ಎಂಬ ಸಂದೇಶವನ್ನು ಶಾಸಕಾಂಗ ಪಕ್ಷದ ಸಭೆಯು ರವಾನಿಸಿದೆ.

ಇಡಬ್ಲ್ಯುಎಸ್ ಆದಾಯ ಮಿತಿ: ಏಪ್ರಿಲ್‌ನಲ್ಲಿ ವಿಚಾರಣೆ

ನವದೆಹಲಿ (ಪಿಟಿಐ): ನೀಟ್ ಪಿಜಿ ಕೋರ್ಸ್‌ನಲ್ಲಿ 2022–23ನೇ ಸಾಲಿನಲ್ಲಿ ಸೀಟು ಹಂಚಿಕೆಗೆ ಆರ್ಥಿಕವಾಗಿ ದುರ್ಬಲ ವರ್ಗಕ್ಕೆ (ಇಡಬ್ಲ್ಯುಎಸ್) ₹ 8 ಲಕ್ಷದ ಆದಾಯ ಮಿತಿ ನಿಗದಿಯನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಗಳ ಅಂತಿಮ ವಿಚಾರಣೆ ಏಪ್ರಿಲ್‌ನಲ್ಲಿ ನಡೆಯಲಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಸೂರ್ಯಕಾಂತ್ ಅವರಿದ್ದ ಸುಪ್ರೀಂ ಕೋರ್ಟ್‌ನ ನ್ಯಾಯಪೀಠವು, 'ಅಂತಿಮ ವಿಚಾರಣೆಯನ್ನು ಏಪ್ರಿಲ್‌ನಲ್ಲಿ ನಡೆಸಲಾಗುವುದು. ಈ ವಿಷಯ ಮತ್ತು ಕಾನೂನಿನ ಎಲ್ಲ ಅಂಶಗಳನ್ನು ಆಲಿಸಲಿದ್ದೇವೆ' ಎಂದು ತಿಳಿಸಿದೆ.

ಅರ್ಜಿದಾರರನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಅರವಿಂದ ದಾತಾರ್ ಅವರು, ಮೇ ತಿಂಗಳಿನಲ್ಲಿ ಪರೀಕ್ಷೆ ನಡೆಯಲಿದ್ದು, ತದನಂತರ ಫಲಿತಾಂಶ ಪ್ರಕಟವಾಗಲಿದೆ ಎಂದು ಪೀಠದ ಗಮನಕ್ಕೆ ತಂದರು.

ಪಂಜಾಬ್ ಸಂಪುಟದಲ್ಲಿ 9 ಕೋಟ್ಯಧಿಪತಿ ಸಚಿವರು: ಎಡಿಆರ್ ವಿಶ್ಲೇಷಣೆ

ಮಾನ್, 6 ಸಚಿವರ ವಿರುದ್ಧ ಪ್ರಕರಣ

ಭಗವಂತ ಮಾನ್

ನವದೆಹಲಿ (ಪಿಟಿಐ): ಪಂಜಾಬ್ ಸಚಿವ ಸಂಪುಟದಲ್ಲಿರುವ 11 ಸಚಿವರ ಪೈಕಿ (ಮುಖ್ಯಮಂತ್ರಿ ಸೇರಿ) ಏಳು ಜನರ ವಿರುದ್ಧ ಅಪರಾಧ ಪ್ರಕರಣಗಳು ಇವೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ವರದಿ ತಿಳಿಸಿದೆ. ಸಚಿವರಲ್ಲಿ ಒಂಬತ್ತು ಮಂದಿ ಕೋಟ್ಯಧಿಪತಿಗಳಿದ್ದಾರೆ

ಮುಖ್ಯಮಂತ್ರಿ ಮತ್ತು ಸಚಿವರು ಶಾಸಕ ಸ್ಥಾನಕ್ಕೆ ಸ್ಪರ್ಧಿಸಿದಾಗ ನೀಡಿದ್ದ ಪ್ರಮಾಣಪತ್ರಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. 10 ಸಚಿವರು ಶನಿವಾರ ಪ್ರಮಾಣವಚನ ಸ್ವೀಕರಿಸಿದ್ದರು.

ಶೇ 64ರಷ್ಟು ಸಚಿವರು ತಮ್ಮ ವಿರುದ್ಧ ಅಪರಾಧ ಪ್ರಕರಣಗಳಿವೆ ಎಂದು ಘೋಷಿಸಿಕೊಂಡಿದ್ದಾರೆ. ಈ ಪೈಕಿ ಶೇ 36ರಷ್ಟು ಸಚಿವರ ಮೇಲೆ ಗಂಭೀರ ಅಪರಾಧ ಪ್ರಕರಣ ದಾಖಲಾಗಿವೆ. ಐದು ವರ್ಷ ಹಾಗೂ ಅದಕ್ಕೂ ಹೆಚ್ಚು ವರ್ಷ ಶಿಕ್ಷೆ ನೀಡಬಹುದಾದ ಅಪರಾಧಗಳನ್ನು ಗಂಭೀರ ಪ್ರಕರಣಗಳು ಎಂದು ಪರಿಗಣಿಸಲಾಗುತ್ತದೆ.

ಮಾನ್ ಸೇರಿದಂತೆ ನಾಲ್ವರು ಸಚಿವರ ಮೇಲೆ ಗಂಭೀರ ಸ್ವರೂಪದ ಅಪರಾಧ ಪ್ರಕರಣಗಳು ದಾಖಲಾಗಿವೆ. ಗುರ್ಮೀತ್ ಸಿಂಗ್ ಮೀತ್ ಹಾಯರ್, ಕುಲದೀಪ್ ಸಿಂಗ್ ಧಲಿವಾಲಾ ಹಾಗೂ ಹರ್ಪಾಲ್ ಸಿಂಗ್ ಚೀಮಾ ಅವರು ಈ ಪಟ್ಟಿಯಲ್ಲಿದ್ದಾರೆ. ಧಲಿವಾಲಾ ಅವರು ಕೊಲೆ ಪ್ರಕರಣ ಎದುರಿಸುತ್ತಿದ್ದು, ಉಳಿದ ಮೂವರ ವಿರುದ್ಧ ಸರ್ಕಾರಿ ಅಧಿಕಾರಿಯ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪವಿದೆ.

9 ಸಚಿವರು ಕೋಟಿ ಒಡೆಯರು!: ಪಂಜಾಬ್ ಸಚಿವ ಸಂಪುಟದಲ್ಲಿರುವ 9 ಸಚಿವರು ತಮ್ಮ ಬಳಿ ಕೋಟಿ ರೂಪಾಯಿಗಿಂತ ಹೆಚ್ಚು ಮೌಲ್ಯದ ಆಸ್ತಿಯಿದೆ ಎಂದು ಘೋಷಿಸಿಕೊಂಡಿದ್ದಾರೆ. ಸಚಿವರ ಸರಾಸರಿ ಆಸ್ತಿ ಮೌಲ್ಯ ₹2.87 ಕೋಟಿ.

ಹೋಶಿಯಾರ್‌ಪುರದಿಂದ ಗೆದ್ದಿರುವ ಬ್ರಹ್ಮಶಂಕರ್ (ಜಂಪಾ) ಅವರ ಬಳಿ ಹೆಚ್ಚು ಮೌಲ್ಯದ (₹8.56 ಕೋಟಿ) ಆಸ್ತಿಯಿದೆ. ಲಾಲ್‌ಚಂದ್ ಅವರ ಆಸ್ತಿ ಮೌಲ್ಯ ಎಲ್ಲರಿಗಿಂತ (₹6.19 ಲಕ್ಷ) ಕಡಿಮೆಯಿದೆ. 9 ಸಚಿವರು ತಮಗೆ ಸಾಲ ಇದೆ ಎಂದು ಪ್ರಕಟಿಸಿದ್ದಾರೆ. ಬ್ರಹ್ಮಶಂಕರ್ ಅವರು ₹1.08 ಕೋಟಿ ಸಾಲ ಪಡೆದಿದ್ದಾರೆ.

ಮಾನ್‌ಗೆ ಗೃಹ, ಚೀಮಾಗೆ ಹಣಕಾಸು

ಮುಖ್ಯಮಂತ್ರಿ ಭಗವಂತ ಮಾನ್ ಅವರು ನೂತನ ಸಚಿವರಿಗೆ ಖಾತೆಗಳನ್ನು ಸೋಮವಾರ ಹಂಚಿಕೆ ಮಾಡಿದ್ದಾರೆ. ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಹರ್ಪಾಲ್ ಸಿಂಗ್ ಚೀಮಾ ಅವರಿಗೆ ಹಣಕಾಸು ಖಾತೆ ವಹಿಸಿದ್ದಾರೆ. ಕಂದಾಯ ಖಾತೆಯನ್ನೂ ಅವರಿಗೆ ನೀಡಲಾಗಿದೆ. ಗೃಹಖಾತೆಯನ್ನು ಮಾನ್ ಅವರು ತಮ್ಮ ಬಳಿ ಇರಿಸಿಕೊಂಡಿದ್ದಾರೆ.

ಗುರ್ಮೀತ್ ಸಿಂಗ್ ಮೀತ್ ಹಾಯರ್ ಅವರು ಶಿಕ್ಷಣ ಸಚಿವರಾಗಲಿದ್ದಾರೆ. ಸಂಪುಟದ ಏಕೈಕ ಮಹಿಳೆ ಡಾ. ಬಲ್ಜೀತ್ ಕೌರ್ ಅವರಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಸಾಮಾಜಿಕ ಭದ್ರತೆ ಖಾತೆ ನೀಡಲಾಗಿದೆ. ಡಾ. ವಿಜಯ ಸಿಂಗ್ಲಾ ಅವರು ಆರೋಗ್ಯ ಖಾತೆ ನಿಭಾಯಿಸಲಿದ್ದಾರೆ.

ಪಂಜಾಬ್: ರಾಜ್ಯಸಭೆ ಚುನಾವಣೆಗೆ 5 ಅಭ್ಯರ್ಥಿಗಳು

ಎಎಪಿಯಿಂದ ಹರಭಜನ್, ಛಡ್ಡಾ ಕಣಕ್ಕೆ

ಚಂಡೀಗಡ (ಪಿಟಿಐ): ಇದೇ 31ರಂದು ನಡೆಯಲಿರುವ ರಾಜ್ಯಸಭೆ ಚುನಾವಣೆಗೆ ಆಮ್ ಆದ್ಮಿ ಪಕ್ಷದಿಂದ (ಎಎಪಿ) ಐವರು ಅಭ್ಯರ್ಥಿಗಳು ಕಣಕ್ಕಿಳಿದಿದ್ದಾರೆ. ಮಾಜಿ ಕ್ರಿಕೆಟಿಗ ಹರಭಜನ್ ಸಿಂಗ್, ದೆಹಲಿಯ ಎಎಪಿ ಶಾಸಕ ರಾಘವ ಛಡ್ಡಾ, ಲವ್ಲಿ ಪ್ರೊಫೆಷನಲ್ ಯೂನಿವರ್ಸಿಟಿ ಸಂಸ್ಥಾಪಕ ಅಶೋಕ್ ಮಿತ್ತಲ್, ಐಐಟಿ ದೆಹಲಿಯ ಸಹಾಯಕ ಪ್ರಾಧ್ಯಾಪಕ ಸಂದೀಪ್ ಪಾಠಕ್ ಹಾಗೂ ಉದ್ಯಮಿ ಸಂಜೀವ್ ಅರೋರಾ ಅವರನ್ನು ಪಕ್ಷ ಹೆಸರಿಸಿದೆ.

ಈ ಐವರು ಅಭ್ಯರ್ಥಿಗಳು ಪಂಜಾಬ್ ವಿಧಾನಸಭಾ ಸಂಕೀರ್ಣದಲ್ಲಿ ಸೋಮವಾರ ನಾಮಪತ್ರಗಳನ್ನು ಸಲ್ಲಿಸಿದರು.

ಛಡ್ಡಾ ಅವರು ದೆಹಲಿಯ ರಾಜಿಂದರ್ ನಗರದ ಶಾಸಕ. ಅರೋರಾ ಅವರು ಲೂಧಿಯಾನದ ಜವಳಿ ಉದ್ಯಮಿ.

ನಾಲ್ವರು ಹಿಂದೂಗಳು ಹಾಗೂ ಒಬ್ಬ ಸಿಖ್ ಸಮುದಾಯದ ಅಭ್ಯರ್ಥಿಯನ್ನು ರಾಜ್ಯಸಭೆಗೆ ಕಳಿಸಲು ಮುಂದಾಗಿರುವ ಎಎಪಿ ನಿರ್ಧಾರವನ್ನು ಕಾಂಗ್ರೆಸ್ ಮುಖಂಡ ಹಾಗೂ ಶಾಸಕ ಸುಖಪಾಲ್ ಖೈರಾ ಟೀಕಿಸಿದ್ದಾರೆ. 'ಇದು ಪಂಜಾಬ್‌ನ ಪಾಲಿಗೆ ಬೇಸರದ ಸುದ್ದಿ. ಇದು ರಾಜ್ಯದ ಬಗ್ಗೆ ಎಎಪಿ ತಳೆದಿರುವ ಮೊದಲ ತಾರತಮ್ಯ ನೀತಿ' ಎಂದಿದ್ದಾರೆ. ಪಂಜಾಬಿಗಳಲ್ಲದವರನ್ನು ನಾಮನಿರ್ದೇಶನ ಮಾಡಿದ್ದಕ್ಕೆ ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಎಎಪಿ ನಾಮನಿರ್ದೇಶನವನ್ನು ಶಿರೋಮಣಿ ಅಕಾಲಿದಳದ ಮುಖಂಡ ಹರ್‌ಚರಣ್ ಬಿಯಾನ್ಸ್ ಸಹ ಟೀಕಿಸಿದ್ದಾರೆ. 'ಪಂಜಾಬ್ ಸಂಪುಟ ರಚನೆಯಲ್ಲಿ ಜಾತಿ ಹಾಗೂ ಧರ್ಮ ಪ್ರಾತಿನಿಧ್ಯ ಚರ್ಚಾಸ್ಪದವಾಗಿದೆ. ಹಾಗೆಯೇ ರಾಜ್ಯಸಭೆಗೆ ಕಳುಹಿಸುತ್ತಿರುವ ನಾಲ್ವರ ಪೈಕಿ ಇಬ್ಬರು ಪಂಜಾಬಿಗಳಲ್ಲ. ಜಾಟರು, ದಲಿತರು, ಮುಸ್ಲಿಮರು, ಕ್ರಿಶ್ಚಿಯನ್ನರಿಗೆ ಆದ್ಯತೆ ನೀಡಿಲ್ಲ' ಎಂದಿದ್ದಾರೆ.

ಹರಭಜನ್ ಸಿಂಗ್ ಅವರು ಸೋಮವಾರ ನಾಮಪತ್ರ ಸಲ್ಲಿಸಿದರು–ಪಿಟಿಐ ಚಿತ್ರ

ಪಾಠಕ್‌ಗೆ ಗುಜರಾತ್ ಉಸ್ತುವಾರಿ

ಗುಜರಾತ್ ಉಸ್ತುವಾರಿಯಾಗಿ ಸಂದೀಪ್ ಪಾಠಕ್ ಅವರನ್ನು ಎಎಪಿ ನೇಮಿಸಿದೆ. ಪಂಜಾಬ್ ವಿಧಾನಸಭಾ ಚುನಾವಣೆಯ ಕಾರ್ಯತಂತ್ರವನ್ನು ಪಾಠಕ್ ಅವರೇ ಹೆಣೆದಿದ್ದರು ಎಂದು ಹೇಳಲಾಗುತ್ತಿದೆ. ಪಂಜಾಬ್‌ನಲ್ಲಿ ಎಎಪಿಗೆ ಭಾರಿ ಗೆಲುವು ಲಭಿಸಿದೆ. ಗುಜರಾತ್‌ನಲ್ಲಿ ಈ ವರ್ಷದ ಕೊನೆಗೆ ಚುನಾವಣೆ ನಡೆಯಲಿದೆ. ಹಾಗಾಗಿ, ಪಾಠಕ್ ಅವರಿಗೆ ರಾಜ್ಯದ ಉಸ್ತುವಾರಿ ವಹಿಸಲಾಗಿದೆ. ದೆಹಲಿ ಐಐಟಿಯ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ರಾಜೀನಾಮೆ ನೀಡಿ ಅವರು ಪಕ್ಷಕ್ಕೆ ಸೇರಿದ್ದಾರೆ ಎಂದು ಎಎಪಿ ಹೇಳಿದೆ. 2020ರಲ್ಲಿ ದೆಹಲಿ ವಿಧಾನಸಭಾ ಚುನಾವಣೆ ಮತ್ತು ಇತ್ತೀಚೆಗೆ ನಡೆದ ಪಂಜಾಬ್ ವಿಧಾನಸಭಾ ಚುನಾವಣೆಯ ಕಾರ್ಯತಂತ್ರ ರೂಪಿಸಲು ಅವರು ನೆರವಾಗಿದ್ದಾರೆ ಎಂದೂ ಎಎಪಿ ಹೇಳಿದೆ.

ದೇವಸ್ಥಾನದಲ್ಲಿ ಪೂಜೆ, ವಾಹನಗಳ ಮೇಲೆ ಧ್ವಜ ಕಡ್ಡಾಯ

ಯೋಗಿ

ಲಖನೌ: ಉತ್ತರ ಪ್ರದೇಶ ಮುಖ್ಯಮಂತ್ರಿಯಾಗಿ ಯೋಗಿ ಆದಿತ್ಯನಾಥ ಅವರ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಬರುವ ಪಕ್ಷದ ಕಾರ್ಯಕರ್ತರು, ಇಲ್ಲಿನ ಇಕಾನಾ ಮೈದಾನ ಪ್ರವೇಶಿಸುವ ಮುನ್ನ ದೇವಸ್ಥಾನಗಳಲ್ಲಿ ಪೂಜೆ ಸಲ್ಲಿಸಬೇಕು. ತಾವು ಬರುವ ವಾಹನದ ಮೇಲೆ ಪಕ್ಷದ ಧ್ವಜವನ್ನು ಹಾಕುವುದು ಕಡ್ಡಾಯ ಎಂದು ಜಿಲ್ಲಾ ಘಟಕಗಳಿಗೆ ಬಿಜೆಪಿ ರವಾನಿಸಿರುವ ಸಂದೇಶದಲ್ಲಿ ಸೂಚನೆ ನೀಡಲಾಗಿದೆ.

ಸಾಹಿತಿಗಳು, ವೃತ್ತಿಪರರು, ವೈದ್ಯರು, ಎಂಜಿನಿಯರ್‌ಗಳು, ಸ್ವಾಮೀಜಿಗಳು ಹಾಗೂ ಧಾರ್ಮಿಕ ಮುಖಂಡರನ್ನು ಭೇಟಿಯಾಗಿ ಕಾರ್ಯಕ್ರಮಕ್ಕೆ ಆಹ್ವಾನಿಸಬೇಕು ಎಂದು ಕಾರ್ಯಕರ್ತರಿಗೆ ಸೂಚಿಸಲಾಗಿದೆ.

ಪ್ರತಿ ವಿಧಾನಸಭಾ ಕ್ಷೇತ್ರದಿಂದ ತಲಾ ಇಬ್ಬರು ಕಾರ್ಯಕರ್ತರಿಗೆ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಪ್ರವೇಶವಿದೆ. ಪ್ರಧಾನಿ ನರೇಂದ್ರ ಮೋದಿ, ಗೃಹಸಚಿವ ಅಮಿತ್ ಶಾ, ಬಿಜೆಪಿ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು ಹಾಜರಾಗಲಿದ್ದಾರೆ. ಪಂಚಾಯಿತಿಗಳ ಮುಖ್ಯಸ್ಥರು ಮತ್ತು ಸ್ಥಳೀಯ ಸಂಸ್ಥೆಗಳ ಮೇಯರ್‌ಗಳೂ ಭಾಗಿಯಾಗಲಿದ್ದಾರೆ.

ಕೋವಿಡ್ 19ನಿಂದ ಮೃತಪಟ್ಟವರ ಕುಟುಂಬಕ್ಕೆ ಪರಿಹಾರ ಧನ

ಕೇಂದ್ರದ 4 ವಾರಗಳ ಗಡುವು ಸಾಲದು: 'ಸುಪ್ರೀಂ'

ನವದೆಹಲಿ (ಪಿಟಿಐ): ಕೋವಿಡ್ 19ನಿಂದ ಮೃತಪಟ್ಟವರ ಸಂಬಂಧಿಕರಿಗೆ ಪರಿಹಾರ ಧನದ ದಾವೆ ಮಂಡಿಸಲು ಕೇಂದ್ರ ಸರ್ಕಾರ ನೀಡಿರುವ ನಾಲ್ಕು ವಾರಗಳ ಗಡುವು ಸಾಕಾಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಬಿ.ವಿ. ನಾಗರತ್ನಾ ಅವರಿದ್ದ ಪೀಠವು, ಎಕ್ಸ್ ಗ್ರೇಷಿಯಾ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಲು ಅರ್ಹ ವ್ಯಕ್ತಿಗಳಿಗೆ ನಿರ್ದಿಷ್ಟ ದಿನಾಂಕದಿಂದ 60 ದಿನಗಳ ಅವಧಿ ನೀಡಲಾಗುತ್ತದೆ. ಸಂಬಂಧಿಸಿದವರ ವಾರಸುದಾರರಿಗೆ ಎಕ್ಸ್ ಗ್ರೇಷಿಯಾ ಪಡೆಯಲು 90 ದಿನಗಳನ್ನು ನೀಡಲಾಗುತ್ತದೆ. ಹೀಗಿರುವಾಗ ಮೊದಲೇ ಕುಟುಂಬ ಸದಸ್ಯರನ್ನು ಕಳೆದುಕೊಂಡು ದುಃಖಿತರಾದವರಿಗೆ ಇಷ್ಟು ಕಡಿಮೆ ಅವಧಿಯ ಗಡುವು ನೀಡುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟಿದೆ. ಎಕ್ಸ್-ಗ್ರೇಷಿಯಾ ಪಡೆಯಲು ಕೋವಿಡ್ 19ರ ಮರಣದ ನಕಲಿ ಪ್ರಮಾಣ ಪತ್ರ ಸಲ್ಲಿಸಿದ್ದರೆ, ಅದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರಕ್ಕೆ ವಿಪತ್ತು ನಿರ್ವಹಣಾ ಕಾಯಿದೆ 2005ರ ಅಡಿ ಅಧಿಕಾರವಿದೆ. ಅದನ್ನು ಚಲಾಯಿಸಿ ಎಂದು ಸುಪ್ರೀಂ ಕೋರ್ಟ್ ಅಧಿಕಾರಿಗಳಿಗೆ ಸೂಚಿಸಿತು.

ನಕಲಿ ಪ್ರಮಾಣ ಪತ್ರ ಸಲ್ಲಿಸಿ ಪರಿಹಾರ ಪಡೆದಿರುವ ಬಗ್ಗೆ ಮಾದರಿ ಸಮೀಕ್ಷೆ ನಡೆಸಲು ಕೋರಿ ಸಲ್ಲಿಸಿರುವ ಕೇಂದ್ರ ಸರ್ಕಾರದ ಅರ್ಜಿಯನ್ನು ಆಲಿಸಿದ ನ್ಯಾಯ ಪೀಠ, ನೋಂದಣಿಯಾದ ಸಾವಿನ ಸಂಖ್ಯೆ ಮತ್ತು ಪರಿಹಾರ ಪಡೆದುಕೊಂಡಿರುವ ಅಂಕಿಅಂಶದಲ್ಲಿ ವ್ಯತ್ಯಾಸವಿರುವ ಎರಡು ಅಥವಾ ಮೂರು ರಾಜ್ಯಗಳನ್ನು ಕೇಂದ್ರೀಕರಿಸಿ ಮಾದರಿ ಸಮೀಕ್ಷೆ ನಡೆಸಬಹುದು ಎಂದು ಹೇಳಿದೆ.

'ಬಿಎ.2 ತಳಿ: ಗಂಭೀರ ಪರಿಣಾಮ ಇಲ್ಲ'

ವಾಷಿಂಗ್ಟನ್ (ಪಿಟಿಐ/ಎಪಿ): ಓಮೈಕ್ರಾನ್‌ನ ರೂಪಾಂತರಿ ತಳಿ ಬಿಎ.2 ವೇಗವಾಗಿ ಪ್ರಸರಣಗೊಂಡರೂ, ಅದು ಗಂಭೀರ ಪರಿಣಾಮವನ್ನಂತೂ ಬೀರುವುದಿಲ್ಲ ಎಂದು ಶ್ವೇತಭವನದ ಮುಖ್ಯ ವೈದ್ಯಕೀಯ ಸಲಹೆಗಾರ ಡಾ.ಅಂಥೋನಿ ಫೌಸಿ ಹೇಳಿದ್ದಾರೆ. ಪ್ರಬಲ ರೂಪಾಂತರಿಯಾದ ಈ ಸೋಂಕಿನಿಂದ ಅಮೆರಿಕದಲ್ಲಿ ಶೇ 30ರಷ್ಟು ಹೊಸ ಪ್ರಕರಣಗಳು ವರದಿಯಾಗಲಿವೆ.

ಮಣಿಪುರ ಮುಖ್ಯಮಂತ್ರಿಯಾಗಿ ಬೀರೆನ್ ಸಿಂಗ್ ಪ್ರಮಾಣ

ಇಂಫಾಲ್ (ಪಿಟಿಐ): ಮಣಿಪುರ ಬಿಜೆಪಿ ಶಾಸಕಾಂಗ ಪಕ್ಷದ ನಾಯಕ ಎನ್. ಬೀರೆನ್ ಸಿಂಗ್ ಅವರು ಎರಡನೇ ಅವಧಿಗೆ ರಾಜ್ಯದ ಮುಖ್ಯಮಂತ್ರಿಯಾಗಿ ಇಲ್ಲಿಯ ರಾಜಭವನದಲ್ಲಿ ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು.

ಮುಖ್ಯಮಂತ್ರಿ ಸ್ಥಾನಕ್ಕೆ ಬೀರೆನ್ ಅವರಿಗೆ ಪೈಪೋಟಿ ನೀಡಿದ್ದ ಥೋಂಗಮ್ ಬಿಸ್ವಜಿತ್ ಸಿಂಗ್ ಸೇರಿ ಐವರು ಶಾಸಕರು ಸಂಪುಟ ಸಚಿವರಾಗಿ ಇದೇ ವೇಳೆ ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯದ ರಾಜ್ಯಪಾಲ ಲ ಗಣೇಶನ್ ಅವರು ಪ್ರಮಾಣ ವಚನ ಬೋಧಿಸಿದರು.

ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಐವರಲ್ಲಿ ನಾಲ್ವರು ಬಿಜೆಪಿ ಶಾಸಕರು ಮತ್ತು ಒಬ್ಬರು ನಾಗಾ ಪೀಪಲ್ಸ್ ಫ್ರಂಟ್ (ಎನ್‌ಪಿಎಫ್) ಶಾಸಕ ಇದ್ದಾರೆ. ಥೋಂಗಮ್ ಬಿಸ್ವಜಿತ್ ಸಿಂಗ್, ಯುಮ್ನಮ್ ಖೆಮ್ಚಂದ್ ಸಿಂಗ್, ಗೋವಿಂದ್‌ದಾಸ್ ಕೊಂಥೌಜಮ್, ನೆಂಚ ಕಿಂಪ್‌ಜೆನ್ ಅವರು ಬಿಜೆಪಿ ಶಾಸಕರು ಮತ್ತು ಔಂಗ್‌ಬೌ ನೆವ್‌ಮೈ ಅವರು ಎನ್‌ಪಿಎಫ್ ಶಾಸಕರು.

ಪ್ರಧಾನಿ ನರೇಂದ್ರ ಮೋದಿ ಅವರು ಟ್ವೀಟ್ ಮೂಲಕ ಬೀರೆನ್ ಸಿಂಗ್ ಅವರನ್ನು ಅಭಿನಂದಿಸಿದ್ದಾರೆ. 'ಬೀರೆನ್ ಸಿಂಗ್ ಅವರ ತಂಡವು ಮಣಿಪುರವನ್ನು ಅಭಿವೃದ್ಧಿಯ ಹೊಸ ಎತ್ತರಕ್ಕೆ ಕೊಂಡೊಯ್ಯಲಿದೆ ಎಂಬ ವಿಶ್ವಾಸ ನನಗೆ ಇದೆ' ಎಂದು ಅವರು ಟ್ವೀಟ್ ಮಾಡಿದ್ದಾರೆ.

ಮಹಿಳಾ ವಿಶ್ವಕಪ್ ಕ್ರಿಕೆಟ್ ಟೂರ್ನಿ: ಇಂದು ಬಾಂಗ್ಲಾದೇಶ ಎದುರಾಳಿ

ಸೆಮಿಯತ್ತ ಭಾರತದ ನೋಟ

ಬಾಂಗ್ಲಾದೇಶದ ನಾಯಕಿ ನಿಗರ್ ಸುಲ್ತಾನ –ಎಎಫ್‌ಪಿ ಚಿತ್ರ

ಭಾರತ ತಂಡದ ವಿಕೆಟ್ ಕೀಪರ್ ರಿಚಾ ಘೋಷ್ ಮತ್ತು ಬ್ಯಾಟರ್ ಶೆಫಾಲಿ ವರ್ಮಾ –ಎಎಫ್‌ಪಿ ಚಿತ್ರ

ಹ್ಯಾಮಿಲ್ಟನ್, ನ್ಯೂಜಿಲೆಂಡ್ (ಪಿಟಿಐ): ಸಿಹಿ ಕಹಿ ಅನುಭವಿಸುತ್ತ ಮುನ್ನುಗ್ಗುತ್ತಿರುವ ಭಾರತ ತಂಡ ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ನಿರ್ಣಾಯಕ ಪಂದ್ಯದಲ್ಲಿ ಮಂಗಳವಾರ ಕಣಕ್ಕೆ ಇಳಿಯಲಿದೆ. ಸೆಮಿಫೈನಲ್ ಹಂತಕ್ಕೇರುವ ಕನಸು ಜೀವಂತವಾಗಿರಬೇಕಾದರೆ ಗೆಲ್ಲಲೇಬೇಕಾದ ಪಂದ್ಯದಲ್ಲಿ ಭಾರತಕ್ಕೆ ಬಾಂಗ್ಲಾದೇಶ ಎದುರಾಳಿ.

ಪಾಕಿಸ್ತಾನವನ್ನು ಮಣಿಸಿ ಉತ್ತಮ ಆರಂಭ ಕಂಡಿದ್ದ ಭಾರತ ನಂತರ ಏಕೈಕ ಪಂದ್ಯವನ್ನು ಗೆಲ್ಲುವಲ್ಲಿ ಯಶಸ್ವಿಯಾಗಿದೆ. ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ಎದುರಿನ ಸತತ ಸೋಲು ಸೇರಿದಂತೆ ಮೂರು ಪಂದ್ಯಗಳಲ್ಲಿ ನಿರಾಸೆ ಕಂಡಿದೆ. ಹೀಗಾಗಿ ಮುಂದಿನ ಹಾದಿ ಕಠಿಣವಾಗಿದೆ.

ಭಾರತದ ಬ್ಯಾಟಿಂಗ್ ಬಳಗದ ವೈಫಲ್ಯ ಈಗಾಗಲೇ ಸಾಬೀತಾಗಿದೆ. ಆಗೊಮ್ಮೆ ಈಗೊಮ್ಮೆ ಕೆಲವರು ಮಿಂಚಿದ್ದು ಬಿಟ್ಟರೆ ಉಳಿದಂತೆ ವೈಫಲ್ಯ ಕಾಣುತ್ತ ಬಂದಿದೆ. ಆಸ್ಟ್ರೇಲಿಯಾ 278 ರನ್‌ಗಳ ಗುರಿಯನ್ನು ಯಶಸ್ವಿಯಾಗಿ ಬೆನ್ನತ್ತಿರುವುದರಿಂದ ಮಿಥಾಲಿ ರಾಜ್ ನೇತೃತ್ವದ ಬೌಲಿಂಗ್ ವಿಭಾಗದ ಸಾಮರ್ಥ್ಯದ ಮೇಲೂ ಸಂದೇಹ ಉಂಟಾಗಿದೆ.

ಹೀಗಾಗಿ ಮಾಡು–ಮಡಿ ಪಂದ್ಯದಲ್ಲಿ ಎರಡೂ ವಿಭಾಗಗಳು ಚೇತರಿಸಿಕೊಳ್ಳಬೇಕಾದ ಅಗತ್ಯವಿದೆ. ಆಸ್ಟ್ರೇಲಿಯಾ ಎದುರಿನ ಪಂದ್ಯದಲ್ಲಿ ಬೌಲರ್ ದೀಪ್ತಿ ಶರ್ಮಾ ಅವರನ್ನು ಹೊರಗಿರಿಸಿ ಬ್ಯಾಟರ್ ಶೆಫಾಲಿ ವರ್ಮಾ ಅವರಿಗೆ ಅವಕಾಶ ಕೊಟ್ಟದ್ದು ಫಲ ನೀಡಲಿಲ್ಲ. ಆದ್ದರಿಂದ ಬಾಂಗ್ಲಾ ಎದುರಿನ ಪಂದ್ಯದಲ್ಲಿ ಅಂತಿಮ 11ರ ಆಯ್ಕೆಯೂ ತಲೆನೋವಾಗಿ ಪರಿಣಮಿಸಿದೆ.

ಬಾಂಗ್ಲಾದೇಶ ಪ್ರತಿ ಪಂದ್ಯದಲ್ಲೂ ಹೋರಾಡಿ ಸೋತಿದೆ. ಆದ್ದರಿಂದ ಆ ತಂಡವನ್ನು ಲಘುವಾಗಿ ಪರಿಗಣಿಸುವಂತಿಲ್ಲ. ಪಾಕಿಸ್ತಾನದ ವಿರುದ್ಧ ಗೆದ್ದು ಟೂರ್ನಿಯನ್ನು ಸ್ಮರಣೀಯವಾಗಿಸಿದೆ. ಕೊನೆಯ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಪರಿಣಾಮಕಾರಿ ಬೌಲಿಂಗ್ ಪ್ರದರ್ಶಿಸಿರುವ ತಂಡ ಬ್ಯಾಟಿಂಗ್‌ನಲ್ಲಿ ಮುಗ್ಗರಿಸಿತ್ತು. 141 ರನ್‌ಗಳ ಗೆಲುವಿನ ಗುರಿ ಬೆನ್ನತ್ತಲು ಸಾಧ್ಯವಾಗಿರಲಿಲ್ಲ.

ಪಂದ್ಯ ಆರಂಭ: ಬೆಳಿಗ್ಗೆ 6.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಪಾಯಿಂಟ್ ಪಟ್ಟಿ					
ತಂಡ	ಪಂದ್ಯ	ಜಯ	ಸೋಲು	ಪಾಯಿಂಟ್ಸ್	ನೆಟ್ ರನ್‌ರೇಟ್
ಆಸ್ಟ್ರೇಲಿಯಾ	5	5	0	10	1.424
ದ.ಆಫ್ರಿಕಾ	4	4	0	8	0.226
ವೆಸ್ಟ್ ಇಂಡೀಸ್	6	3	3	6	-0.885
ಭಾರತ	5	2	3	4	0.456
ಇಂಗ್ಲೆಂಡ್	5	2	3	4	0.327
ನ್ಯೂಜಿಲೆಂಡ್	6	2	4	4	-0.229
ಬಾಂಗ್ಲಾದೇಶ	4	1	3	2	-0.342
ಪಾಕಿಸ್ತಾನ	5	1	4	2	-0.878

ಟೆನಿಸ್ ಟೂರ್ನಿ: ಎರಡನೇ ಸುತ್ತಿಗೆ ಚನ್ನಮಲ್ಲಿಕಾರ್ಜುನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಕರ್ಷಕ ಆಟವಾಡಿದ ಚೆನ್ನಮಲ್ಲಿಕಾರ್ಜುನ ಯಾಲೆ ಅವರು ಎರಡನೇ ಶ್ರೇಯಾಂಕದ ಲಿಖಿತ್ ಗೌಡ ಅವರಿಗೆ ಸೋಲುಣಿಸಿ ಎಐಟಿಎ ಸಿಎಸ್7 14 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಎರಡನೇ ಸುತ್ತು ತಲುಪಿದರು.

ಶ್ರೀನಾಥ್ ಅಕಾಡೆಮಿಯಲ್ಲಿ ಸೋಮವಾರ ಆರಂಭವಾದ ಟೂರ್ನಿಯ ಬಾಲಕರ ವಿಭಾಗದ ಮೊದಲ ಸುತ್ತಿನ ಹಣಾಹಣಿಯಲ್ಲಿ ಚೆನ್ನಮಲ್ಲಿಕಾರ್ಜುನ ಅವರಿಗೆ 7-5, 6-2ರಿಂದ ಗೆಲುವು ಒಲಿಯಿತು.

ಮೊದಲ ಸುತ್ತಿನ ಇನ್ನುಳಿದ ಪಂದ್ಯಗಳಲ್ಲಿ ಮೀರ್ ಫಜಲ್ ಅಲಿ 6-1, 6-0ರಿಂದ ಎಂ. ಪುನೀತ್ ವಿರುದ್ಧ, ಆರುಷ್ ಮಲ್ಲಣ್ಣವರ್ 6-1, 6-2ರಿಂದ ಋತ್ವಿಕ್ ರವಿ ವಿರುದ್ಧ, ಅನಿರುದ್ಧ ಪಳನಿಸ್ವಾಮಿ 6-1, 6-1ರಿಂದ ಸಿದ್ಧಾರ್ಥ್ ಸತ್ಯನಾರಾಯಣನ್ ವಿರುದ್ಧ ಗೆದ್ದರು.

ಅಹಿಲ್ ಆಯಾಜ್ 6-3, 6-1ರಿಂದ ಸೂರ್ಯಬಾಬು ರಾಜ್ ವಿರುದ್ಧ, ಎಂ. ದಿಗಂತ್ 6-0, 6-1ರಿಂದ ಕೀರ್ತನ್ ವಿಶ್ವಾಸ್ ಎದುರು, ಹೃದಯ್ ವಿವೇಕಾನಂದ 6–3, 6–4ರಿಂದ ಬಾಲಗಣೇಶ್ ಪಟೇಲ್ ಎದುರು ಗೆಲುವು ಸಾಧಿಸಿ ಪ್ರೀಕ್ವಾರ್ಟರ್‌ಫೈನಲ್ ತಲುಪಿದರು.

ಭಾರತ ಮಹಿಳಾ ಹಾಕಿ ತಂಡದ ಆಟಗಾರ್ತಿ ವಂದನಾ ಕಟಾರಿಯ ಮತ್ತು ಟೋಕಿಯೊ ಪ್ಯಾರಾಲಿಂಪಿಕ್ಸ್‌ನ ಶೂಟಿಂಗ್‌ನಲ್ಲಿ ಚಿನ್ನ ಗೆದ್ದ ಅವನಿ ಲೇಖರಾ ಅವರಿಗೆ ರಾಷ್ಟ್ರಪತಿ ಭವನದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಪದ್ಮಶ್ರೀ ಪ್ರಶಸ್ತಿ ಪ್ರದಾನ ಮಾಡಿದರು– ಪಿಟಿಐ ಚಿತ್ರಗಳು

ಶ್ರೇಷ್ಠತಾ ಕೇಂದ್ರಕ್ಕೆ ಪ್ರಕಾಶ್, ವಸಂತ, ಸುಂದರೇಶ್ ಕೋಚ್

ಪ್ರಕಾಶ್ ನಂಜಪ್ಪ

ವಸಂತ ಕುಮಾರ್

ಸುಂದರೇಶ್

ಬೆಂಗಳೂರು: ಒಲಿಂಪಿಯನ್ ಪ್ರಕಾಶ್ ನಂಜಪ್ಪ, ಮಂಗಳೂರಿನ ವಸಂತ ಕುಮಾರ್ ಮತ್ತು ಮೈಸೂರಿನ ಸುಂದರೇಶ್ ಅವರನ್ನು ಖೇಲೊ ಇಂಡಿಯಾ ಯೋಜನೆಯ ಕ್ರೀಡಾ ಶ್ರೇಷ್ಠತಾ ಕೇಂದ್ರದ ಕೋಚ್‌ಗಳನ್ನಾಗಿ ನೇಮಕ ಮಾಡಲಾಗಿದೆ.

ಬೆಂಗಳೂರಿನ ವಿದ್ಯಾನಗರ ಕ್ರೀಡಾ ಕೇಂದ್ರವನ್ನು ಶ್ರೇಷ್ಠತಾ ಕೇಂದ್ರವನ್ನಾಗಿ ಘೋಷಿಸಲಾಗಿದ್ದು ಅಥ್ಲೆಟಿಕ್ಸ್, ಈಜು ಮತ್ತು ಶೂಟಿಂಗ್ ವಿಭಾಗದಲ್ಲಿ ತರಬೇತಿ ನೀಡಲು ನಿರ್ಧರಿಸಲಾಗಿದೆ. ಶೂಟಿಂಗ್‌ನಲ್ಲಿ ಪ್ರಕಾಶ್ ನಂಜಪ್ಪ, ಅಥ್ಲೆಟಿಕ್ಸ್‌ನಲ್ಲಿ ವಸಂತ ಮತ್ತು ಈಜಿನಲ್ಲಿ ಸುಂದರೇಶ್ ತರಬೇತಿಯನ್ನು ನೀಡಲಿದ್ದಾರೆ.

ಶ್ರೇಷ್ಠತಾ ಕೇಂದ್ರದ ಹೈ ಪರ್ಫಾರ್ಮೆನ್ಸ್ ನಿರ್ದೇಶಕರಾಗಿ ಹಾಕಿ ಪಟು ಸುಬ್ಬಯ್ಯ ಅವರನ್ನು ನೇಮಕ ಮಾಡಲಾಗಿದೆ.

ಪಾಕಿಸ್ತಾನಕ್ಕೆ ಮೊದಲ ಜಯ

ಕಿಸಿಯಾ ನೈಟ್ ವಿಕೆಟ್ ಪಡೆದ ನಿದಾ ದಾರ್ ಸಂಭ್ರಮ –ಎಎಫ್‌ಪಿ ಚಿತ್ರ

ಹ್ಯಾಮಿಲ್ಟನ್ (ಎಎಫ್‌ಪಿ): ವೆಸ್ಟ್ ಇಂಡೀಸ್ ವಿರುದ್ಧ ಭರ್ಜರಿ ಜಯ ಗಳಿಸುವ ಮೂಲಕ ಪಾಕಿಸ್ತಾನ ತಂಡ ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಗೆಲುವಿನ ಬರವನ್ನು ನೀಗಿಸಿಕೊಂಡಿತು.

ಸೆಡಾನ್ ಪಾರ್ಕ್‌ನಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಪಾಕಿಸ್ತಾನ ಎಂಟು ವಿಕೆಟ್‌ಗಳಿಂದ ಗೆದ್ದಿತು. ವಿಶ್ವಕಪ್‌ನ 19 ಪಂದ್ಯಗಳಲ್ಲಿ ತಂಡಕ್ಕೆ ಇದು ಮೊದಲ ಜಯ.

ಮಳೆಯಿಂದಾಗಿ ತಡವಾಗಿ ಆರಂಭಗೊಂಡ ಪಂದ್ಯವನ್ನು 20 ಓವರ್‌ಗಳಿಗೆ ನಿಗದಿ ಮಾಡಲಾಗಿತ್ತು. ಟಾಸ್ ಗೆದ್ದ ಪಾಕಿಸ್ತಾನ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ವೆಸ್ಟ್ ಇಂಡೀಸ್‌ನ ಬಲಿಷ್ಠ ಬ್ಯಾಟಿಂಗ್ ಪಡೆಯನ್ನು ಸುಲಭವಾಗಿ ಕಟ್ಟಿಹಾಕುವಲ್ಲಿ ಪಾಕ್ ಬೌಲರ್‌ಗಳು ಯಶಸ್ವಿಯಾದರು. ತಂಡಕ್ಕೆ 7 ವಿಕೆಟ್‌ಗಳಿಗೆ 89 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ಗುರಿ ಬೆನ್ನತ್ತಿದ ಪಾಕಿಸ್ತಾನ ತಂಡ ಸಿದ್ರಾ ಅಮೀನ್ ಅವರ ವಿಕೆಟ್ ಬೇಗನೇ ಕಳೆದುಕೊಂಡಿತು. ಆದರೆ ಮುನೀಬಾ ಅಲಿ, ನಾಯಕಿ ಬಿಸ್ಮಾ ಮರೂಫ್ ಮತ್ತು ನಾಲ್ಕನೇ ಕ್ರಮಾಂಕದ ಒಮೈಮಾ ಸೊಹೇಲ್ ಅವರು ಅಮೋಘ ಬ್ಯಾಟಿಂಗ್ ಪ್ರದರ್ಶಿಸಿದರು.

ಮುನೀಬಾ ಮತ್ತು ಬಿಸ್ಮಾ ಜೋಡಿ ಎರಡನೇ ವಿಕೆಟ್‌ಗೆ 35 ರನ್ ಸೇರಿಸಿದರು. ಮುನೀಬಾ ಔಟಾದ ನಂತರ ಬಿಸ್ಮಾ ಮತ್ತು ಒಮೈಮಾ ಮುರಿಯದ ಮೂರನೇ ವಿಕೆಟ್‌ಗೆ 33 ರನ್ ಸೇರಿಸಿ ತಂಡವನ್ನು ಜಯದ ದಡ ಸೇರಿಸಿದರು. 2009ರ ವಿಶ್ವಕಪ್‌ನಲ್ಲಿ ಕೊನೆಯದಾಗಿ ಪಾಕಿಸ್ತಾನ ಜಯ ಗಳಿಸಿತ್ತು. ವಿಶೇಷವೆಂದರೆ ಆ ಪಂದ್ಯದಲ್ಲೂ ಪಾಕಿಸ್ತಾನದ ಎದುರಾಳಿ ವೆಸ್ಟ್ ಇಂಡೀಸ್ ಆಗಿತ್ತು.

ನಿದಾ ದಾರ್ ಜೀವನಶ್ರೇಷ್ಠ ಬೌಲಿಂಗ್: ಮೊದಲು ಬ್ಯಾಟಿಂಗ್ ಮಾಡಿದ ವೆಸ್ಟ್ ಇಂಡೀಸ್ ಪರ ಆರಂಭಿಕ ಬ್ಯಾಟರ್ ಡಿಯಾಂಡ್ರ ದೊತಿನ್, ನಾಯಕಿ ಸ್ಟೆಫಾನಿ ಟೇಲರ್ ಮತ್ತು 9ನೇ ಕ್ರಮಾಂಕದ ಅಲಿಯಾ ಅಲೀನ್ ಅವರನ್ನು ಹೊರತುಪಡಿಸಿದರೆ ಬೇರೆ ಯಾರಿಗೂ ಎರಡಂಕಿ ಮೊತ್ತ ದಾಟಲು ಆಗಲಿಲ್ಲ.

ಆಫ್ ಬ್ರೇಕ್ ಬೌಲರ್ ನಿದಾ ದಾರ್ 10ರನ್‌ಗಳಿಗೆ4ವಿಕೆಟ್‌ಉರುಳಿಸಿದರು.

ಜಯ ಗಳಿಸಿದರೂ ಪಾಕಿಸ್ತಾನಕ್ಕೆ ಸೆಮಿಫೈನಲ್‌ಗೆ ಪ್ರವೇಶಿಸಲು ಸಾಧ್ಯವಿಲ್ಲ. ಆದರೆ ವೆಸ್ಟ್ ಇಂಡೀಸ್ ತಂಡದ ಹಾದಿ ಕಠಿಣವಾಗಿದೆ. ಗುರುವಾರ ದಕ್ಷಿಣ ಆಫ್ರಿಕಾವನ್ನು ಮಣಿಸಿದರೆ ತಂಡದ ಆಸೆ ಜೀವಂತವಾಗಿರಲಿದೆ.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್ 20 ಓವರ್‌ಗಳಲ್ಲಿ 7ಕ್ಕೆ 89 (ಡಿಯಾಂಡ್ರ ದೊತಿನ್ 27, ಸ್ಟೆಫಾನಿ ಟೇಲರ್ 18; ಫಾತಿಮಾ ಸನಾ 14ಕ್ಕೆ 1, ನಿದಾ ದಾರ್ 10ಕ್ಕೆ4, ಒಮೈಮಾ ಸೊಹೇಲ್ 12ಕ್ಕೆ 1) ಪಾಕಿಸ್ತಾನ: 18.5 ಓವರ್‌ಗಳಲ್ಲಿ 2ಕ್ಕೆ 90 (ಮುನೀಬಾ ಅಲಿ 37, ಒಮೈಮಾ ಸೊಹೇಲ್ ಔಟಾಗದೆ 22; ಶಕೇರ ಸೆಲ್ಮನ್ 15ಕ್ಕೆ1, ಆಫಿ ಫ್ಲೆಚರ್ 23ಕ್ಕೆ1). ಫಲಿತಾಂಶ: ಪಾಕಿಸ್ತಾನ ತಂಡಕ್ಕೆ ಎಂಟು ವಿಕೆಟ್‌ಗಳ ಜಯ

ಶತಕ ತಪ್ಪಿಸಿಕೊಂಡ ಉಸ್ಮಾನ್ ಖ್ವಾಜಾ

ಲಾಹೋರ್ (ಎಎಫ್‌ಪಿ): ಆರಂಭದ ಆಟಗಾರ ಉಸ್ಮಾನ್ ಖ್ವಾಜಾ (91) ಕೇವಲ ಒಂಬತ್ತು ರನ್‌ಗಳಿಂದ ಶತಕ ತಪ್ಪಿಸಿಕೊಂಡರು. ಸ್ಟೀವ್ ಸ್ಮಿತ್ ಅವರ 8000 ರನ್ ಮೈಲುಗಲ್ಲು ತಲುಪಲು ಕೇವಲ ಏಳು ರನ್‌ಗಳು ಕಡಿಮೆಯಾದವು.

ಇವರಿಬ್ಬರ ಉತ್ತಮ ಬ್ಯಾಟಿಂಗ್ ನೆರವಿನಿಂದ ಆಸ್ಟ್ರೇಲಿಯಾ ತಂಡವು ಪಾಕಿಸ್ತಾನ ಎದುರಿನ ಮೂರನೇ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ ಐದು ವಿಕೆಟ್ ಕಳೆದುಕೊಂಡು 232 ರನ್ ಗಳಿಸಿತು. ಸೋಮವಾರ ಸ್ಮಿತ್ 59 ರನ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ ಮೊದಲ ಇನಿಂಗ್ಸ್: 88 ಓವರ್‌ಗಳಲ್ಲಿ 5 ವಿಕೆಟ್‌ಗೆ 232 (ಉಸ್ಮಾನ್ ಖ್ವಾಜಾ 91, ಸ್ಟೀವ್ ಸ್ಮಿತ್ 59, ಟ್ರಾವಿಡ್ ಹೆಡ್ 26; ಶಹೀನ್ ಶಾ ಅಫ್ರಿದಿ 40ಕ್ಕೆ 2, ನಸೀಮ್ ಶಾ 36ಕ್ಕೆ 2).

‘ಯಲಹಂಕದಲ್ಲಿ ಕ್ರೀಡಾ ವಿ.ವಿಗೆ 100 ಎಕರೆ ಭೂಮಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಲಹಂಕದಲ್ಲಿ ಕ್ರೀಡಾ ವಿಶ್ವವಿದ್ಯಾಲಯಕ್ಕೆ 100 ಎಕರೆ ಭೂಮಿ ಗುರುತಿಸಲಾಗಿದೆ. ರಾಜ್ಯದ 15 ಕಡೆ ಹೆಣ್ಣುಮಕ್ಕಳಿಗೆ ಪ್ರತ್ಯೇಕ ಕ್ರೀಡಾ ಹಾಸ್ಟೆಲ್ ನಿರ್ಮಿಸುತ್ತಿದ್ದು, ಟೆಂಡರ್ ಆಹ್ವಾನಿಸಲಾಗಿದೆ’ ಎಂದು ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಕೆ. ಗೋವಿಂದರಾಜು ಪ್ರಸ್ತಾಪಿಸಿದ ವಿಷಯದ ಮೇಲೆ ನಡೆದ ಚರ್ಚೆಗೆ ಉತ್ತರಿಸಿದ ಅವರು, ‘₹ 1,000 ಕೋಟಿ ಅನುದಾನ ನೀಡುವಂತೆ ಮುಖ್ಯಮಂತ್ರಿ ಬಳಿ ಬೇಡಿಕೆ ಇಟ್ಟಿದ್ದೇನೆ. ಇಷ್ಟು ಅನುದಾನ ಸಿಕ್ಕಿದರೆ ಕ್ರೀಡಾ ಕ್ಷೇತ್ರದ ಶೇ 70ರಷ್ಟು ಬೇಡಿಕೆ ಈಡೇರಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಇಲಾಖೆಗೆ ಅನುದಾನದ ಕೊರತೆ ಇದೆ. ಈ ಬಗ್ಗೆ ಮುಖ್ಯಮಂತ್ರಿ ಬಳಿ ಚರ್ಚಿಸುತ್ತಲೇ ಇದ್ದೇನೆ. ಕೆಲವೇ ತಿಂಗಳಲ್ಲಿ ವಿಜಯಪುರದ ಸೈಕ್ಲಿಂಗ್ ವೆಲೊಡ್ರೋಮ್ ಸಾರ್ವಜನಿಕರ ಬಳಕೆಗೆ ಲಭ್ಯವಾಗಲಿದೆ. ಕಂಠೀರವ ಕ್ರೀಡಾಂಗಣದಲ್ಲಿ ಕ್ರೀಡಾ ಮ್ಯೂಸಿಯಂ ಮಾಡುವ ಸಿದ್ಧತೆ ನಡೆದಿದೆ’ ಎಂದರು.

ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥ ನಾರಾಯಣ ಮಾತನಾಡಿ ‘ಪ್ರತಿ ಕಾಲೇಜಿನಲ್ಲಿ ಕ್ರೀಡಾ ತರಬೇತುದಾರರನ್ನು ನೇಮಿಸಲಾಗುವುದು’ ಎಂದರು.

ಅಥ್ಲೆಟಿಕ್ಸ್: ಯೋಗೇಂದ್ರ, ಬೋಪಣ್ಣ ಆಯ್ಕೆ

ಎಂ. ಯೋಗೇಂದ್ರ

ಜಿ.ಎನ್. ಬೋಪಣ್ಣ

ಬೆಂಗಳೂರು: ಕೇಂದ್ರ ಸರ್ಕಾರದ ತೆರಿಗೆ ಮತ್ತು ಸುಂಕ ವಿಭಾಗದ ಸುಪರಿಂಟೆಂಡೆಂಟ್ ಎಂ. ಯೋಗೇಂದ್ರ ಮತ್ತು ನಿರೀಕ್ಷಕ ಜಿ.ಎನ್. ಬೋಪಣ್ಣ ಅವರು ಅಖಿಲ ಭಾರತ ಕೇಂದ್ರ ನಾಗರಿಕ ಸೇವಾ ಅಥ್ಲೆಟಿಕ್ಸ್ ಟೂರ್ನಿಯಲ್ಲಿ ಕರ್ನಾಟಕ ಸಿಆರ್‌ಎಸ್‌ಬಿ ತಂಡವನ್ನು ಪ್ರತಿನಿಧಿಸಲಿದ್ದಾರೆ.

ಟೂರ್ನಿಯು ಇದೇ 28ರಿಂದ 30ರವರೆಗೆ ಗುರುಗ್ರಾಮದಲ್ಲಿ ನಡೆಯಲಿದೆ.

ಮ್ಯಾರಥಾನ್: ರೂಪನ್ ಚಾಂಪಿಯನ್

ಕೋಲ್ಕತ್ತ (ಪಿಟಿಐ): ರೂಪನ್ ದೇವನಾಥ್ ಹಾಗೂ ತಮಾಲಿ ಬಸು ಅವರು ಏಜೀಸ್ ಫೆಡರಲ್ ಲೈಫ್ ಇನ್ಶೂರೆನ್ಸ್ ಕೋಲ್ಕತ್ತ ಮ್ಯಾರಾಥಾನ್‌ನಲ್ಲಿ ಕ್ರಮವಾಗಿ ಮಹಿಳಾ ಮತ್ತು ಪುರುಷರ ವಿಭಾಗಗಳಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ದೇವನಾಥ್ 2 ತಾಸು 42 ನಿಮಿಷ 39 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ದುಲು ಸರ್ಕಾರ್ (2:46.31) ಹಾಗೂ ನಿಮೇಶ್ ಚೆಟ್ರಿ (3:5.48) ಕ್ರಮವಾಗಿ 2 ಹಾಗೂ 3ನೇ ಸ್ಥಾನ ಗಳಿಸಿದರು.

ಚೆಸ್: ಅರ್ಘ್ಯದೀಪ್, ಬಾಲಕಿಶನ್ ಪಾರಮ್ಯ

ಬೆಂಗಳೂರು: ಪಶ್ಚಿಮ ಬಂಗಾಳದ ಅರ್ಘ್ಯದೀಪ್ ಮತ್ತು ಕರ್ನಾಟಕದ ಬಾಲಕಿಶನ್ ಅವರು ಆರ್.ಹನುಮಂತ ಸ್ಮರಣಾರ್ಥ ಬೆಂಗಳೂರು ಗ್ರಾಮಾಂತರ ಜಿಲ್ಲಾ ಚೆಸ್ ಸಂಸ್ಥೆ ಆಯೋಜಿಸಿದ್ದ ಫಿಡೆ ರೇಟೆಡ್ ಮುಕ್ತ ರ್‍ಯಾಪಿಡ್ ಚೆಸ್ ಟೂರ್ನಿಯಲ್ಲಿ ಪಾರಮ್ಯ ಮೆರೆದರು. ಅರ್ಘ್ಯದೀಪ್ ಪ್ರಶಸ್ತಿ ಗೆದ್ದುಕೊಂಡರೆ ಬಾಲಕಿಶನ್ ಎರಡನೇ ಸ್ಥಾನ ಗಳಿಸಿದರು.

ಅರ್ಘ್ಯದೀಪ್ 8.5 ಪಾಯಿಂಟ್ ಗಳಿಸಿದರೆ ಬಾಲಕಿಶನ್ 8 ಪಾಯಿಂಟ್ ತಮ್ಮದಾಗಿಸಿಕೊಂಡರು. 8 ಪಾಯಿಂಟ್‌ಗಳನ್ನು ಗಳಿಸಿದ ತಮಿಳುನಾಡಿನ ಪ್ರಸನ್ನ ಎಸ್ ಮತ್ತು ಕರ್ನಾಟಕದ ಶರಣ್ ರಾವ್ ಕ್ರಮವಾಗಿ 3 ಮತ್ತು 4ನೇ ಸ್ಥಾನ ಗಳಿಸಿದರು. ತಲಾ 7.5 ಪಾಯಿಂಟ್ ಗಳಿಸಿದ ಸಮ್ಮೇದ್ ಜಯಕುಮಾರ್, ರವಿ ಷಣ್ಮುಖಂ, ಲೋಕೇಶ್ ಎನ್, ಚಕ್ರವರ್ತಿ ರೆಡ್ಡಿ ಹಾಗೂ ಭರತ್ ಕಲ್ಯಾಣ್ ಕ್ರಮವಾಗಿ 5ರಿಂದ 9ನೇ ಸ್ಥಾನ ಗಳಿಸಿದರು. 7 ಪಾಯಿಂಟ್‌ಗಳೊಂದಿಗೆ ರಾಜಾ ಋತ್ವಿಕ್ 10ನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು. ರಾಮ್ ವಿಶ್ವನಾಥನ್ 18 ವರ್ಷದೊಳಗಿನವರ ಮತ್ತು ನಿದೇಶ್ 16 ವರ್ಷದೊಳಗಿನವರ ವಿಭಾಗದ ಪ್ರಶಸ್ತಿ ಗೆದ್ದರು. ಸ್ವರಲಕ್ಷ್ಮಿ ಎಸ್ ಹಾಗೂ ಶ್ರೇಯಸ್ ಭೌಮಿಕ್ ಕ್ರಮವಾಗಿ 14 ಮತ್ತು 12 ವರ್ಷದೊಳಗಿನವರ ವಿಭಾಗದ ಚಾಂಪಿಯನ್ ಆದರು.

ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ ಇಂದಿನಿಂದ: ಹಿಂದೆ ಸರಿದ ಲಕ್ಷ್ಯ ಸೇನ್

ಸಿಂಧು, ಶ್ರೀಕಾಂತ್ ಮೇಲೆ ನಿರೀಕ್ಷೆ

ಬಾಸೆಲ್ (ಪಿಟಿಐ): ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ, ಭಾರತದ ಪಿ.ವಿ.ಸಿಂಧು ಮತ್ತು ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತ ಕಿದಂಬಿ ಶ್ರೀಕಾಂತ್ ಅವರು ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಗೆಲುವಿನ ಭರವಸೆ ಎನಿಸಿದ್ದಾರೆ.

ಮಂಗಳವಾರ ಟೂರ್ನಿ ಆರಂಭವಾಗಲಿದ್ದು, ಸತತ ಎರಡು ಚಾಂಪಿಯನ್‌ಷಿಪ್‌ಗಳಲ್ಲಿ ಆಡಿರುವ ಲಕ್ಷ ಸೇನ್ ದಣಿವಿನ ಕಾರಣ ಕಣಕ್ಕಿಳಿಯುತ್ತಿಲ್ಲ.

ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದ ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನಲ್ಲಿ ಲಕ್ಷ್ಯ ರನ್ನರ್‌ಅಪ್ ಆಗಿದ್ದರು. ಕ್ವಾರ್ಟರ್‌ಫೈನಲ್ ತಲುಪಲು ವಿಫಲರಾಗಿದ್ದ ಸಿಂಧು, ಶ್ರೀಕಾಂತ್ ಮತ್ತು ಸೈನಾ ನೆಹ್ವಾಲ್ ಇಲ್ಲಿ ಉತ್ತಮ ಸಾಧನೆ ತೋರುವ ನಿರೀಕ್ಷೆ ಇಟ್ಟುಕೊಂಡಿದ್ದಾರೆ.

2019ರ ವಿಶ್ವ ಚಾಂಪಿಯನ್ ಸಿಂಧು ಇಲ್ಲಿ ಎರಡನೇ ಶ್ರೇಯಾಂಕ ಪಡೆದಿದ್ದು, ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಪಂದ್ಯದಲ್ಲಿ ಡೆನ್ಮಾರ್ಕ್‌ನ ಹೊಜ್‌ಮಾರ್ಕ್ ಜಾರ್ಸ್‌ಫೆಲ್ಟ್ ಅವರನ್ನು ಎದುರಿಸುವರು. ಸೈನಾ ಅವರಿಗೆ ಚೀನಾದ ವಾಂಗ್ ಜಿ ಯಿ ಸವಾಲು ಎದುರಾಗಿದೆ.

ಹುವೆಲ್ವಾದಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದ ಬಳಿಕ ಉತ್ತಮ ಲಯದಲ್ಲಿರುವ ಶ್ರೀಕಾಂತ್, ಪುರುಷರ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಅರ್ಹತಾ ಸುತ್ತಿನಿಂದ ಗೆದ್ದುಬಂದ ಆಟಗಾರನನ್ನು ಎದುರಿಸುವರು. ಬಿ. ಸಾಯಿ ಪ್ರಣೀತ್ ಅವರು ಭಾರತದವರೇ ಆದ ಎಚ್.ಎಸ್.ಪ್ರಣಯ್ ವಿರುದ್ಧ ಆಡುವರು. ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ, ಇಂಡೊನೇಷ್ಯಾದ ಮುಹ ಮ್ಮದ್ ಶೋಹಿಬುಲ್ ಫಿಕ್ರಿ ಮತ್ತು ಬಾಗಸ್ ಮೌಲಾನ ಎದುರು ಕಣಕ್ಕಿಳಿಯುವರು. ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ ತಲುಪಿದ್ದ ತ್ರಿಶಾ ಜೋಲಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿಯು ಇಲ್ಲಿಯೂ ಉತ್ತಮ ಸಾಮರ್ಥ್ಯ ತೋರುವ ಉತ್ಸಾಹದಲ್ಲಿದ್ದಾರೆ. ಮೊದಲ ಸುತ್ತಿನಲ್ಲಿ ಅವರಿಗೆ ಥಾಯ್ಲೆಂಡ್‌ನ ಜಾಂಗ್‌ಕೊಲ್ಪನ್ ಕಿತಿತಾರಕುಲ್–ರವಿಂದಾ ಸವಾಲು ಎದುರಾಗಿದೆ.

ಪ್ರಶಸ್ತಿ ವಿಜೇತ ಭಾರತೀಯರು	
ಪುರುಷರ ಸಿಂಗಲ್ಸ್	
ಆಟಗಾರ	ವರ್ಷ
ಕಿದಂಬಿ ಶ್ರೀಕಾಂತ್	2015
ಎಚ್.ಎಸ್.ಪ್ರಣಯ್	2016
ಸಮೀರ್ ವರ್ಮಾ	2018
ಮಹಿಳಾ ಸಿಂಗಲ್ಸ್	
ಸೈನಾ ನೆಹ್ವಾಲ್	2011 ಮತ್ತು 2012

ಪಿ.ವಿ.ಸಿಂಧು

ಕಣದಲ್ಲಿರುವ ಭಾರತದ ಆಟಗಾರರು/ಆಟಗಾರ್ತಿಯರು	
ಪುರುಷರ ಸಿಂಗಲ್ಸ್	ಕಿದಂಬಿ ಶ್ರೀಕಾಂತ್, ಬಿ.ಸಾಯಿ ಪ್ರಣೀತ್, ಎಚ್.ಎಸ್.ಪ್ರಣಯ್, ಸಮೀರ್ ವರ್ಮಾ, ಪರುಪಳ್ಳಿ ಕಶ್ಯಪ್.
ಮಹಿಳಾ ಸಿಂಗಲ್ಸ್	ಪಿ.ವಿ.ಸಿಂಧು, ಸೈನಾ ನೆಹ್ವಾಲ್, ಆಕರ್ಷಿ ಕಶ್ಯಪ್.
ಪುರುಷರ ಡಬಲ್ಸ್	ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ–ಚಿರಾಗ್‌ಶೆಟ್ಟಿ, ಕೃಷ್ಣಪ್ರಸಾದ್ ಗರಗ–ವಿಷ್ಣುವರ್ಧನ ಗೌಡ್, ಧ್ರುವ ಕಪಿಲ– ಎಂ.ಆರ್.ಅರ್ಜುನ್.
ಮಹಿಳಾ ಡಬಲ್ಸ್	ಅಶ್ವಿನಿ ಪೊನ್ನಪ್ಪ–ಸಿಕ್ಕಿ ರೆಡ್ಡಿ, ತ್ರಿಶಾ ಜೋಲಿ–ಗಾಯತ್ರಿ ಗೋಪಿಚಂದ್.
ಮಿಶ್ರ ಡಬಲ್ಸ್	ವೆಂಕಟ ಗೌರವ್ ಪ್ರಸಾದ್–ಜೂಹಿ ದೇವಾಂಗನ್, ಇಶಾನ್ ಭಟ್ನಾಗರ್–ತನಿಶಾ ಕ್ರಾಸ್ಟೊ.

ಟೆನಿಸ್: ಫ್ರಿಟ್ಸ್‌ಗೆ ಮಣಿದ ನಡಾಲ್

ಇಂಡಿಯನ್ ವೆಲ್ಸ್, ಅಮೆರಿಕ (ಎಪಿ): ಪಿಎನ್‌ಬಿ ಪರಿಬಾಸ್ ಓಪನ್ ಟೆನಿಸ್ ಟೂರ್ನಿಯ ಫೈನಲ್ ಪಂದ್ಯಕ್ಕೆ ಕೆಲವೇ ತಾಸುಗಳು ಇರುವಾಗ ಅಮೆರಿಕದ ಟೇಲರ್ ಫ್ರಿಟ್ಸ್ ಸಂಕಟಕ್ಕೆ ಸಿಲುಕಿದ್ದರು. ಒಂದು ಹಂತದಲ್ಲಿ ಪಂದ್ಯದಿಂದ ಹಿಂದೆ ಸರಿಯುವ ನಿರ್ಧಾರಕ್ಕೂ ಬಂದಿದ್ದರು.

ಒಂದೆಡೆ ಹಿಮ್ಮಡಿಯಲ್ಲಿ ಕಾಣಿಸಿಕೊಂಡ ತೀವ್ರ ನೋವು, ಮತ್ತೊಂದು ಕಡೆ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ರಫೆಲ್ ನಡಾಲ್ ಎದುರಾಳಿ. ಇದು ಅವರ ನಿರ್ಧಾರಕ್ಕೆ ಪ್ರಮುಖ ಕಾರಣ. ಆಡದಿರುವುದೇ ಒಳಿತು ಎಂದು ಕೋಚ್ ಸಲಹೆ ನೀಡಿದರು. ಆದರೆ ಹೋರಾಡಿಯೇ ತೀರುವೆ ಎಂದೆನಿಸಿ ಫ್ರಿಟ್ಸ್ ಆಡಿದರು.

ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ನಡಾಲ್ ಅವರನ್ನು 6-3 7-6 (5)ರಲ್ಲಿ ಮಣಿಸಿ ಪ್ರಶಸ್ತಿ ಗೆದ್ದರು. ಈ ಮೂಲಕ ನಡಾಲ್ ಅವರ ಈ ವರ್ಷದ ಅಜೇಯ ಓಟಕ್ಕೆ ಬ್ರೇಕ್ ಹಾಕಿದರು. ಸತತ 20 ಪಂದ್ಯಗಳನ್ನು ಗೆದ್ದು ನಾಗಾಲೋಟದಲ್ಲಿದ್ದ ನಡಾಲ್ ನಿರಾಸೆ ಅನುಭವಿಸಿದರು.

ಇಗಾ ಸ್ವಾಟೆಕ್‌ಗೆ ಪ್ರಶಸ್ತಿ: ಮಹಿಳೆಯರ ವಿಭಾಗದಲ್ಲಿ ಪೋಲೆಂಡ್‌ನ ಇಗಾ ಸ್ವಾಟೆಕ್ 6-4, 6-1ರಲ್ಲಿ ಗ್ರೀಸ್‌ನ ಮರಿಯಾ ಸಕ್ಕರಿ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದುಕೊಂಡರು.

ಬೆಂಗಳೂರಿನ ಜೆ.ಪಿ ನಗರದಲ್ಲಿ ನಡೆದ ಜಿಲ್ಲಾ ಬಾಲ್ ಬ್ಯಾಡ್ಮಿಂಟನ್ ಸಂಸ್ಥೆ ಆಶ್ರಯದ ಜಿಲ್ಲಾ ಲೀಗ್ ಚಾಂಪಿಯನ್‌ಷಿನ ಪುರುಷರ ವಿಭಾಗದ ಪ್ರಶಸ್ತಿ ಗೆದ್ದ ಸ್ಕಲ್ವಿ ಅಸ್ತ್ರ ಬಿಬಿಸಿ ತಂಡ. ನಿಂತವರು (ಎಡದಿಂದ): ಸುಂದರೇಶ್, ವಿಜಯ ಕುಮಾರ್, ರಂಜಿತ್ ಕುಮಾರ್, ಹರೀಶ್, ಭರತ್ ಶರ್ಮಾ, ವರುಣ್; ಕುಳಿತವರು: ಶ್ರೀಧರಮೂರ್ತಿ (ಪೋಷಕ), ಸುಬ್ಬಣ್ಣ (ಮ್ಯಾನೇಜರ್), ಸುಂದರ್ ರಾಜ್ (ಕೋಚ್), ಸುರೇಶ್ (ಖಜಾಂಚಿ), ಅನಿಲ್, ರವಿ ಕುಮಾರ್, ಮೋಹನ್ ಕುಮಾರ್. ಫೈನಲ್ ಪಂದ್ಯದಲ್ಲಿ ಕಾಮಧೇನು ತಂಡವನ್ನು ಸ್ಕಲ್ವಿ ಅಸ್ತ್ರ 35–30, 35–27ರಲ್ಲಿ ಮಣಿಸಿತು. ಮಹಿಳಾ ವಿಭಾಗದ ಫೈನಲ್‌ನಲ್ಲಿ ಜಯ ಸ್ಪೋರ್ಟ್ಸ್ ಕ್ಲಬ್ 35–26, 35–27ರಲ್ಲಿ ಕಾಮಧೇನು ತಂಡದ ವಿರುದ್ಧ ಜಯ ಗಳಿಸಿತು.

ಪೋಲ್‌ವಾಲ್ಟ್: ತಮ್ಮದೇ ದಾಖಲೆ ಮೀರಿದ ಡುಪ್ಲಾಂಟಿಸ್



ಡುಪ್ಲಾಂಟಿಸ್

ಬೆಲ್‌ಗ್ರೇಡ್ (ಎಎಫ್‌ಪಿ): ಸ್ವೀಡನ್‌ನ ಆರ್ಮಾಂಡ್ ಡುಪ್ಲಾಂಟಿಸ್ ಅವರು ಪೋಲ್ ವಾಲ್ಟ್‌ನಲ್ಲಿ ತಮ್ಮದೇ ಹೆಸರಿನಲ್ಲಿದ್ದ ವಿಶ್ವ ದಾಖಲೆಯನ್ನು ಮೀರಿನಿಂತರು.

ಭಾನುವಾರ ನಡೆದ ವಿಶ್ವ ಒಳಾಂಗಣ ಚಾಂಪಿಯನ್‌ಷಿಪ್‌ನಲ್ಲಿ ಅವರು 6.20 ಮೀಟರ್ಸ್ ಸಾಧನೆ ಮಾಡಿದರು. ಇದೇ ತಾಣದಲ್ಲಿ ಎರಡು ವಾರಗಳ ಹಿಂದೆ ನಿರ್ಮಿಸಿದ್ದ ದಾಖಲೆಯನ್ನು 1 ಸೆಂಟಿಮೀಟರ್‌ನಷ್ಟು ಉತ್ತಮಪಡಿಸಿಕೊಂಡು ಚಿನ್ನದ ಪದಕಕ್ಕೆ ಮುತ್ತಿಟ್ಟರು. ಬ್ರೆಜಿಲ್‌ನ ಥಿಯಾಗೊ ಬ್ರಾಜ್ (6.05 ಮೀ.) ಬೆಳ್ಳಿ ಮತ್ತು ಅಮೆರಿಕದ ಕ್ರಿಸ್ ನಿಲ್ಸೆನ್ (5.95 ಮೀ.) ಕಂಚು ಗೆದ್ದರು.

ಲೈಂಗಿಕ ಸಮಸ್ಯೆ
ಪೌರುಷ ದೌರ್ಬಲ್ಯ ದೂರ ಮಾಡಿಕೊಳ್ಳಿ. ಇಂದ್ರಿಯದ ಆಕಾರ ಹೆಚ್ಚಿಸಿಕೊಳ್ಳಿ. ದಾಂಪತ್ಯ ಜೀವನದ ಅಸಲಿ ಆನಂದ ಪಡೆಯಿರಿ.
ನಿಮ್ಮ ಸಮಸ್ಯೆಗೆ ಸತ್ಯ ಹಾಗೂ ಆಯುರ್ವೇದಿಕ ಔಷಧಿ ಪಡೆಯಿರಿ ಮತ್ತು ಆನಂದಮಯ ಜೀವನ ನಿಮ್ಮದಾಗಿಸಿಕೊಳ್ಳಿ
02262676816

ಗಜಕರ್ಣ, ತುರಿಕೆ, ಇಸಬು
ಆಯುರ್ವೇದಿಕ ಮಲ್ಹಮ್‌ನಿಂದ ಮುಕ್ತರಾಗಿ
ಇಚ್ಕೂ®
ಆಯುರ್ವೇದಿಕ ಮಲ್ಹಮ್
● ಮೊದಲ ದಿನವೇ ಫಲಿತಾಂಶ ಕಾಣುವಿರಿ
● ಯಾವುದೇ ಜಿಗುಟುತನ, ಕಲೆಗಳಿಲ್ಲ
24x7 Helpline: 83058 53333

Dr. Juneja's ಪೇಟ್ ಸಫಾ®
Natural Laxative Granules & Tablets
ಈ 3 ಸಮಸ್ಯೆಗಳನ್ನು ನಿವಾರಿಸುವ ಆಯುರ್ವೇದಿಕ ಔಷಧಿ
ಮಲಬದ್ಧತೆ ಸಮಸ್ಯೆಗೆ ಮುಕ್ತಿ
ಆಮ್ಲೀಯತೆ ಸಮಸ್ಯೆಗೆ ಮುಕ್ತಿ
ಅಸಿಡಿಟಿ ಸಮಸ್ಯೆಗೆ ಮುಕ್ತಿ
No Side Effect
No added Sugar
Granules & Tablets
ನೀವು ಕೂಡ ಮಲಬದ್ಧತೆ, ಗ್ಯಾಸ್ ಅಥವಾ ಆಮ್ಲೀಯತೆ ಸಮಸ್ಯೆಗಳಿಂದ ಬಳಲುತ್ತಿದ್ದರೆ, ಇಂದೇ ಬಳಸಿರಿ ‘ಪೇಟ್ ಸಫಾ’ ಆಯುರ್ವೇದಿಕ ಹರಳುಗಳು/ಮಾತ್ರೆಗಳನ್ನು. ಪೇಟ್ ಸಫಾ ರುಚಿಕರವಾಗಿದೆ ಮತ್ತು ಬಾಯಿಯಲ್ಲಿ ಅಂಟಿಕೊಳ್ಳುವುದಿಲ್ಲ. ಇದು ವ್ಯಸನಕ್ಕೆ ಕೂಡ ಕಾರಣವಾಗುವುದಿಲ್ಲ ಮತ್ತು ಮೊದಲ ದಿನದಿಂದಲೇ ಫಲಿತಾಂಶ ನೀಡುತ್ತದೆ.
24x7 Helpline: 91197 88888